ಬುಧವಾರ, ಮೇ 7, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಯಾದವ್‌ಗೆ ಆರೇಂಜ್ ಕ್ಯಾಪ್

ಮುಂಬೈ ಇಂಡಿಯನ್ಸ್ ತಂಡದ ಬ್ಯಾಟರ್ ಸೂರ್ಯಕುಮಾರ್ ಯಾದವ್ ಅವರು ಹಾಲಿ ಐಪಿಎಲ್‌ನಲ್ಲಿ 510 ರನ್‌ಗಳೊಂದಿಗೆ ಆರೇಂಜ್ ಕ್ಯಾಪ್ ಪಡೆದರು. ಗುಜರಾತ್ ಟೈಟನ್ಸ್‌ನ ಸಾಯಿ ಸುದರ್ಶನ್ (509 ರನ್) ನಂತರದ ಸ್ಥಾನದಲ್ಲಿದ್ದಾರೆ.

12	510	68*	63.75
ಪಂದ್ಯ	ರನ್	ಶ್ರೇಷ್ಠ	ಸರಾಸರಿ

ಬಳ್ಳಾರಿ ಗಣಿಗಾರಿಕೆ ಪ್ರಕರಣ: ತೆರಿಗೆ ವಂಚನೆಯ ಪರಿ ತೆರೆದಿಟ್ಟಿದ್ದ ಲೋಕಾಯುಕ್ತ ತನಿಖೆ

ರೆಡ್ಡಿ, ಕುಟುಂಬ: ಸಾವಿರಾರು ಕೋಟಿ ಅಕ್ರಮ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಶಾಸಕ ಗಾಲಿ ಜನಾರ್ದನ ರೆಡ್ಡಿ ಒಡೆತನದ ಓಬುಳಾಪುರಂ ಮೈನಿಂಗ್ ಕಂಪನಿ ಪ್ರೈವೆಟ್ ಲಿಮಿಟೆಡ್ (ಒಎಂಸಿ) ಮತ್ತು ಇತರ ಕೆಲ ಕಂಪನಿಗಳು ಒಟ್ಟುಗೂಡಿ ₹1,850 ಕೋಟಿ ಮೌಲ್ಯದ (2008–2011ರ ರೂಪಾಯಿ ಡಾಲರ್ ವಿನಿಮಯದ ಮೌಲ್ಯ) ಕಬ್ಬಿಣದ ಅದಿರನ್ನು ಅಕ್ರಮವಾಗಿ ತೆಗೆದು, ದೇಶೀಯ ಮಾರಾಟ ಮತ್ತು ರಫ್ತು ಮಾಡಿವೆ ಎಂಬುದನ್ನು ಲೋಕಾಯುಕ್ತದ ತನಿಖಾ ವರದಿ ಹೇಳುತ್ತದೆ.

ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ರಚಿಸಲಾಗಿದ್ದ ಯು.ವಿ. ಸಿಂಗ್ ನೇತೃತ್ವದ ತನಿಖಾ ತಂಡದ ವರದಿಯನ್ನು ಆಧರಿಸಿ 2011ರಲ್ಲಿ ಅಂದಿನ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅವರು ಅಂತಿಮ ವರದಿ ಸಿದ್ಧಪಡಿಸಿದ್ದರು. ಒಎಂಸಿ ಮೂಲಕ ಗಾಲಿ ಜನಾರ್ದನ ರೆಡ್ಡಿ, ಅವರ ಕುಟುಂಬದವರು ಮತ್ತು ಆಪ್ತರು ಅಕ್ರಮವಾಗಿ ಗಣಿಗಾರಿಕೆ ನಡೆಸಿದ ಸ್ವರೂಪವನ್ನು ಈ ವರದಿಯಲ್ಲಿ ವಿವರಿಸಲಾಗಿದೆ.

ಓಬುಳಾಪುರಂ ಮೈನಿಂಗ್ ಕಂಪನಿಯ ಆಡಳಿತ ಮಂಡಳಿಯ ಸದಸ್ಯರು ಇನ್ನಷ್ಟು ಗಣಿಗಾರಿಕೆ ಕಂಪನಿಗಳನ್ನು ಆರಂಭಿಸಿದ್ದರು. ಜನಾರ್ದನ ರೆಡ್ಡಿ ಅವರ ಪತ್ನಿ ಲಕ್ಷ್ಮೀ ಅರುಣಾ ಅವರ ಹೆಸರಿನಲ್ಲಿ ಅರುಣಾ ಮೈನಿಂಗ್ ಕಂಪನಿ (ಎಎಂಸಿ), ಸಂಬಂಧಿ ಶ್ರೀನಿವಾಸ ರೆಡ್ಡಿ ವ್ಯವಸ್ಥಾಪಕ ನಿರ್ದೇಶಕ ಮತ್ತು ಆಡಳಿತ ಮಂಡಳಿ ಸದಸ್ಯರಾಗಿದ್ದ ಶ್ರೀ ಮಿನರಲ್ಸ್, ಬಸವೇಶ್ವರ ಮೈನಿಂಗ್ ಕಂಪನಿಗಳು ಒಎಂಸಿಯ ಗಣಿಗಾರಿಕೆ ಕಾರ್ಯಾಚರಣೆಗಳನ್ನೇ ನಡೆಸುತ್ತಿದ್ದವು.

ಈ ಕಂಪನಿಗಳು ಮಾತ್ರವಲ್ಲದೆ ದೇವಿ ಎಂಟರ್‌ಪ್ರೈಸಸ್, ಮಧುಶ್ರೀ ಎಂಟರ್‌ಪ್ರೈಸಸ್, ಲಕ್ಷ್ಮೀ ಅರುಣಾ ಮಿನರಲ್ಸ್ ಎಂಬ ಕಂಪನಿಗಳನ್ನೂ ಆರಂಭಿಸಿದ್ದರು ಎಂದು ಈ ವರದಿ ಹೇಳುತ್ತದೆ.

ಒಎಂಸಿಗೆ ಹಂಚಿಕೆಯಾಗಿದ್ದ ಗಣಿ ಮಾತ್ರವಲ್ಲದೇ, ಆ ಗಣಿಗೆ ಹೊಂದಿಕೊಂಡಿದ್ದ ಅರಣ್ಯ ಪ್ರದೇಶದಲ್ಲೂ ಗಣಿಗಾರಿಕೆ ನಡೆಸಲಾಗಿತ್ತು. ಅರಣ್ಯ ಪ್ರದೇಶದ ಗಡಿಯಲ್ಲಿ ಇದ್ದ ಬಾಂದುಗಳನ್ನು ನಾಶ ಮಾಡಿ, ಗಡಿಯನ್ನು ಬದಲಿಸಲಾಗಿತ್ತು. ಆಂಧ್ರ ಪ್ರದೇಶದ ಗಡಿಯಲ್ಲೂ ಬಾಂದುಗಳನ್ನು ನಾಶ ಮಾಡಿ, ಗಡಿಯನ್ನು ಬದಲಿಸಲಾಗಿತ್ತು ಎಂಬ ವಿವರ ವರದಿಯಲ್ಲಿದೆ. ಅಕ್ರಮ ನಡೆದ ವೇಳೆ ಜನಾರ್ದನ ರೆಡ್ಡಿಯವರೇ ಒಎಂಸಿಯ ವ್ಯವಸ್ಥಾಪಕ ನಿರ್ದೇಶಕ ರಾಗಿದ್ದರು. ತನಿಖೆ ಆರಂಭ ವಾಗುತ್ತಿದ್ದಂತೆಯೇ ಹುದ್ದೆಯನ್ನು ತ್ಯಜಿಸಿ, ನಿರ್ದೇಶಕರಾಗಿ ಮುಂದುವರಿದಿದ್ದರು.

ಒಎಂಸಿ ಕರ್ನಾಟಕ, ಗೋವಾ, ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಬಂದರುಗಳ ಮೂಲಕ ರಫ್ತು ಮಾಡಿದೆ. ಕರ್ನಾಟಕದ ಗಣಿಯಲ್ಲಿ ತೆಗೆದ ಅದಿರುಗಳಿಗೆ ಆಂಧ್ರ ಪ್ರದೇಶದಲ್ಲಿ ತೆಗೆದ ಅದಿರು ಎಂದು ನಕಲಿ ದಾಖಲೆಗಳನ್ನು ಸೃಷ್ಟಿಸಿ, ಕರ್ನಾಟಕ ಮತ್ತು ಗೋವಾದ ಬಂದರುಗಳಿಗೆ ಕಳುಹಿಸಲಾಗಿದೆ. ಇನ್ನು ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಬಂದರುಗಳಿಗೆ ಸಾಗಿಸಿದ ಅದಿರಿನ ಮೂಲ ಕರ್ನಾಟಕದ್ದು ಎಂದು ನಕಲಿ ದಾಖಲೆಗಳನ್ನು ಸೃಷ್ಟಿಸಲಾಗಿದೆ ಎನ್ನುತ್ತದೆ ವರದಿ.

ಜನಾರ್ದನ ರೆಡ್ಡಿ ಅವರ ಕುಟುಂಬದವರ ಕಂಪನಿಗಳು ನೇರವಾಗಿ ಅಲ್ಲದೆ, ಪರೋಕ್ಷವಾಗಿಯೂ ಅಕ್ರಮ ಗಣಿಗಾರಿಕೆ ನಡೆಸಿವೆ. ವಿವಿಧ ಕಾರಣಗಳಿಂದ ಸ್ಥಗಿತವಾಗಿರುವ ಗಣಿಗಳನ್ನು ಹುಡುಕಿ, ಅದರ ಗುತ್ತಿಗೆ ಪಡೆದಿರುವ ಕಂಪನಿಗಳ ಜತೆಗೆ ಒಪ್ಪಂದ ಮಾಡಿಕೊಳ್ಳುತ್ತಿದ್ದವು. ಅಲ್ಲಿ ಅಕ್ರಮವಾಗಿ ತೆಗೆಯಲಾದ ಅದಿರನ್ನು ಮಾರಾಟ ಮಾಡುತ್ತಿದ್ದವು. ಜತೆಗೆ ಜನಾರ್ದನ ರೆಡ್ಡಿ ಅವರು ಆದಾಯ ತೆರಿಗೆ ವಿನಾಯಿತಿ ಇರುವ ದೇಶಗಳಲ್ಲಿ ಕಂಪನಿಗಳನ್ನು ಸ್ಥಾಪಿಸಿ, ಕರ್ನಾಟಕದಿಂದ ತೆಗೆದ ಅದಿರನ್ನು ಅವುಗಳಿಗೆ ರಫ್ತು ಮಾಡುತ್ತಿದ್ದರು. ಆ ಕಂಪನಿಗಳ ಮೂಲಕ ಬೇರೆ ದೇಶಗಳಿಗೆ ರಫ್ತು ಮಾಡಿ ಅಪಾರ ಪ್ರಮಾಣದ ಲಾಭ ಗಳಿಸಿದ್ದಾರೆ ಎಂಬ ವಿವರ ವರದಿಯಲ್ಲಿದೆ.

ಹಂಚಿಕೆ ಆಗದ ಪ್ರದೇಶ ಮತ್ತು ಅರಣ್ಯ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ, ರಾಯಧನ ವಂಚನೆ, ಅಕ್ರಮ ಸಾಗಣೆ, ತೂಕ ಕಡಿಮೆ ತೋರಿಸಿ ಸಾಗಣೆ ಮತ್ತು ರಫ್ತು, ನಕಲಿ ಕಂಪನಿಗಳಿಗೆ ರಫ್ತು ಮಾಡಿ ಆದಾಯ ತೆರಿಗೆ ವಂಚನೆ ಮಾಡಿದ್ದಾರೆ. ಈ ಎಲ್ಲ ಅಕ್ರಮಗಳ ಮೂಲಕ ಕರ್ನಾಟಕ ಸರ್ಕಾರಕ್ಕೆ ಸಾವಿರ ಕೋಟಿ ರೂಪಾಯಿಗೂ ಹೆಚ್ಚು ರಾಯಧನ ಮತ್ತು ತೆರಿಗೆ ವಂಚನೆಯಾಗಿದೆ ಎಂದು ಅಂದಾಜಿಸಲಾಗಿದೆ.

'ಸರ್ಕಾರಿ ಅಧಿಕಾರಿಗಳೂ ಭಾಗಿ'

- ಜನಾರ್ದನ ರೆಡ್ಡಿ ಮತ್ತು ಅವರ ಕುಟುಂಬದರ ಕಂಪನಿಗಳನ್ನು ಹೊರತುಪಡಿಸಿ ಒಪ್ಪಂದಗಳ ಮೂಲಕ ಇನ್ನೂ 11 ಕಂಪನಿಗಳನ್ನು ಅದಿರಿನ ಅಕ್ರಮ ಗಣಿಗಾರಿಕೆ, ಸಾಗಣೆ ಮತ್ತು ರಫ್ತಿಗೆ ಬಳಸಿಕೊಳ್ಳಲಾಗಿದೆ. ಇಷ್ಟೂ ಕಂಪನಿಗಳು ಒಟ್ಟು 73.99 ಲಕ್ಷ ಟನ್‌ಗಳಷ್ಟು ಅದಿರನ್ನು ಸಾಗಿಸಿದ್ದವು
- ಹಂಚಿಕೆ ಆಗದ ಪ್ರದೇಶದಲ್ಲಿ ಗಣಿಗಾರಿಕೆ ನಡೆಸುವಲ್ಲಿ ಗಣಿ ಇಲಾಖೆಯ ಅಧಿಕಾರಿಗಳು ಭಾಗಿಯಾಗಿದ್ದಾರೆ. ಅರಣ್ಯ ಪ್ರದೇಶದ ಗಡಿ ನಾಶ ಮಾಡಿ, ಚೆಕ್‌ಪೋಸ್ಟ್ ಬದಲಿಸಿ ಅಕ್ರಮ ಎಸಗುವಲ್ಲಿ ಇಲಾಖೆಯ ಸಿಬ್ಬಂದಿ ಭಾಗಿಯಾಗಿದ್ದಾರೆ
- 10 ಟನ್‌ಗೆ ರಹದಾರಿ ಪಡೆದಿರುವ ಟಿಪ್ಪರ್‌ಗಳಲ್ಲಿ 30 ಟನ್‌ಗಳಿಂದ 35 ಟನ್‌ಗಳಷ್ಟು ಅದಿರು ತುಂಬಿ ಸಾಗಿಸಲಾಗಿದೆ. 20 ಟನ್‌ಗಳ ಸಾಮರ್ಥ್ಯದ ಟ್ರಕ್‌ಗಳಲ್ಲಿ 40 ಟನ್‌ಗಳಿಂದ 45 ಟನ್‌ಗಳಷ್ಟು ಅದಿರು ಸಾಗಿಸಲಾಗಿದೆ
- ಅದಿರು ಹೊತ್ತ ಟಿಪ್ಪರ್ ಮತ್ತು ಟ್ರಕ್‌ಗಳು ಸಾಗುವ ದಾರಿಯಲ್ಲಿದ್ದ, ಅರಣ್ಯ ಇಲಾಖೆಯ ಹಲವು ತಪಾಸಣಾ ಠಾಣೆಗಳನ್ನು ರದ್ದುಪಡಿಸಲಾಗಿತ್ತು. ಉಳಿದ ತಪಾಸಣಾ ಠಾಣೆಗಳ ಬಳಿ ವೇ ಬ್ರಿಡ್ಜ್‌ಗಳು ಇಲ್ಲದ ಕಾರಣ, ಸಾಗಣೆಯಾದ ಅದಿರಿನ ನೈಜ ಲೆಕ್ಕ ಸಿಗುತ್ತಿರಲಿಲ್ಲ

ತಮ್ಮದೇ ಎರಡು ಕಂಪನಿಗಳಿಗೆ ರಫ್ತು

ಜನಾರ್ದನ ರೆಡ್ಡಿ ಅವರ ಒಎಂಸಿ ಕಂಪನಿಯು ದುಬೈನ ಜಿಎಲ್‌ಎ ಟ್ರೇಡಿಂಗ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ಗೆ, ಕಬ್ಬಿಣದ ಅದಿರು ರಫ್ತು ಮಾಡಿದೆ. ವಾಸ್ತವದಲ್ಲಿ ಜಿಎಲ್‌ಎ ಎಂಬುದು ಗಾಲಿ ಲಕ್ಷ್ಮೀ ಅರುಣಾ ಎಂಬುದರ ಸಂಕ್ಷಿಪ್ತ ರೂಪ. ಈ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಜನಾರ್ದನ ರೆಡ್ಡಿ ಅವರೇ ಆಗಿದ್ದರು ಎಂಬುದು ಲೋಕಾಯುಕ್ತ ತನಿಖೆಯಲ್ಲಿ ಪತ್ತೆಯಾಗಿತ್ತು.

ಇನ್ನು ಜಿಜೆಆರ್ ಹೋಲ್ಡಿಂಗ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ಗೂ ಒಎಂಸಿಯು ಕಬ್ಬಿಣದ ಅದಿರು ರಫ್ತು ಮಾಡಿತ್ತು. ಗಾಲಿ ಜನಾರ್ದನ ರೆಡ್ಡಿ ಎಂಬುದರ ಸಂಕ್ಷಿಪ್ತ ರೂಪ ಜಿಜೆಆರ್. ಆದಾಯ ತೆರಿಗೆ ತಪ್ಪಿಸುವ ಮತ್ತು ಅಕ್ರಮವಾಗಿ ರಫ್ತು ಮಾಡಿದ ಅದಿರಿನಿಂದ ಹೆಚ್ಚಿನ ಲಾಭ ಮಾಡಿಕೊಳ್ಳುವ ಉದ್ದೇಶದಿಂದ ಈ ಕಂಪನಿಗಳನ್ನು ಜನಾರ್ದನ ರೆಡ್ಡಿ ಸ್ಥಾಪಿಸಿದ್ದರು ಎಂಬ ವಿವರ ಲೋಕಾಯುಕ್ತದ ವರದಿಯಲ್ಲಿದೆ.

ರೆಡ್ಡಿಯಿಂದ ನಷ್ಟ ವಸೂಲಿ ಮಾಡಿ: ಟಪಾಲ್ ಗಣೇಶ್

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ಶಾಸಕ ಜನಾರ್ದನ ರೆಡ್ಡಿ ಆಂಧ್ರಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಅನುಮತಿ ಪಡೆದು, ಕರ್ನಾಟಕದ ಸಂಪನ್ಮೂಲ ಲೂಟಿ ಮಾಡಿದ್ದಾರೆ. ರಾಜ್ಯ ಸರ್ಕಾರ ಈಗಲಾದರೂ ಇದರ ವಸೂಲಿಗೆ ಗಂಭೀರ ಚಿಂತನೆ ಮಾಡಬೇಕು' ಎಂದು ಗಣಿ ಉದ್ಯಮಿ ಟಪಾಲ್ ಗಣೇಶ್ ಆಗ್ರಹಿಸಿದರು.




'ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ರೆಡ್ಡಿ ವಿರುದ್ಧ ತೀರ್ಪು ಯಾವಾಗಲೋ ಬರಬೇಕಿತ್ತು. ಆದರೆ, ರಾಜಕೀಯ ಪ್ರಭಾವದಿಂದ ವಿಳಂಬವಾಯಿತು. ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ರೋಸಯ್ಯ ಅವರ ಆತ್ಮಕ್ಕೆ ಈಗ ಶಾಂತಿ ಸಿಕ್ಕಿದೆ. ನಮ್ಮ ಹೋರಾಟಕ್ಕೆ ಫಲ ಸಿಕ್ಕಿದೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಆಂಧ್ರದಿಂದ ಗಣಿಗಾರಿಕೆಗೆ ಅನುಮತಿ ಪಡೆದು, ಜನಾರ್ದನ ರೆಡ್ಡಿ ಕರ್ನಾಟಕ ಸರ್ಕಾರದ ಸಂಪತ್ತು ಲೂಟಿ ಮಾಡಿದ್ದರು. 29 ಲಕ್ಷ ಟನ್ ಅದಿರನ್ನು ಅಕ್ರಮವಾಗಿ ಸಾಗಣೆ ಮಾಡಿರುವ ಬಗ್ಗೆ ಸಿಬಿಐ ತನ್ನ ಚಾರ್ಜ್‌ಶೀಟ್‌ನಲ್ಲೇ ಉಲ್ಲೇಖಿಸಿದೆ. ರಾಜ್ಯದ ಇತರ ಗಣಿ, ಅಕ್ಕಪಕ್ಕದ ಪ್ರದೇಶಗಳು ಮತ್ತು ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಿದ್ದಾರೆ' ಎಂದರು.

'ಬಳ್ಳಾರಿ ಮೀಸಲು ಅರಣ್ಯದಲ್ಲಿ ಅಂತರರಾಜ್ಯ ಗಡಿ ಹಾದು ಹೋಗಿದೆ. ರೆಡ್ಡಿ ಗಣಿ ಅಂತರರಾಜ್ಯ ಗಡಿಗೆ ಹೊಂದಾಣಿಕೆಯೇ ಆಗುತ್ತಿಲ್ಲ. ಆದರೆ, ನಮ್ಮ ಅಧಿಕಾರಿಗಳೇ ರೆಡ್ಡಿಗೆ ನಕ್ಷೆ ಹೊಂದಾಣಿಕೆ ಮಾಡಿಕೊಟ್ಟರು. ಆದ್ದರಿಂದಲೇ ಇಷ್ಟು ಅಕ್ರಮ ಮಾಡಲು ರೆಡ್ಡಿಗೆ ಸಾಧ್ಯವಾಯಿತು. 2008ರಿಂದ 2011ರವರೆಗೆ ಬಳ್ಳಾರಿ ಜಿಲ್ಲೆಯಲ್ಲಿದ್ದ ಅಧಿಕಾರಿಗಳ ಸಹಕಾರದಿಂದ ರೆಡ್ಡಿ ಇಷ್ಟು ಲೂಟಿ ಮಾಡಲು ಸಾಧ್ಯವಾಯಿತು' ಎಂದರು. 'ಇವತ್ತಾದರೂ ರಾಜ್ಯ ಸರ್ಕಾರ ಅಂತರರಾಜ್ಯ ನಕ್ಷೆಯಲ್ಲಿನ ದೋಷ ಪರಿಶೀಲಿಸಬೇಕು. ಅದಿರು ಕಳ್ಳಸಾಗಣೆ ಮೂಲಕ ರಾಜ್ಯಕ್ಕೆ ಆಗಿರುವ ನಷ್ಟವನ್ನು ಜನಾರ್ದನ ರೆಡ್ಡಿಯಿಂದ ವಸೂಲಿ ಮಾಡಬೇಕು' ಎಂದರು.

ಹೋರಾಟಕ್ಕೆ ಸಿಕ್ಕ ಜಯ: ಹಿರೇಮಠ



'ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ರಾಯದುರ್ಗ ತಾಲ್ಲೂಕಿನಲ್ಲಿನ ಕರ್ನಾಟಕ ಗಡಿಗೆ ಹೊಂದಿಕೊಂಡಂತೆ ಓಬುಳಾಪುರಂ ಮೈನಿಂಗ್ ಕಂಪನಿ ಪ್ರೈವೆಟ್ ಲಿಮಿಟೆಡ್ (ಒಎಂಸಿಪಿಎಲ್) ಮೂರು ಗಣಿಗಳನ್ನು ಹೊಂದಿದೆ. ಅದರಲ್ಲಿ ಅಂತರಗಂಗಮ್ಮ ಕೊಂಡದಲ್ಲಿರುವ ಗಣಿಯಲ್ಲಿ ನಡೆದಿರುವ ಅಕ್ರಮಕ್ಕೆ ಸಂಬಂಧಿಸಿದ ತೀರ್ಪು ಇದು. ಇನ್ನೂ ಎರಡು ಗಣಿಗಳಲ್ಲಿನ ಅಕ್ರಮದ ವಿಚಾರಣೆ ಬಾಕಿ ಇದೆ. ಸದ್ಯ ಸಿಬಿಐ ತೀರ್ಪು ಮಹತ್ವದ್ದು. ಮೈನಿಂಗ್ ಮಾಫಿಯಾಕ್ಕೆ ಹೊಡೆತ ಬಿದ್ದಿದೆ. ನಮ್ಮ ಹೋರಾಟಕ್ಕೆ ಬೆಲೆ ಸಿಕ್ಕಿದೆ' ಎಂದು ಸಮಾಜ ಪರಿವರ್ತನ ಸಮುದಾಯದ ಮುಖ್ಯಸ್ಥ ಎಸ್.ಆರ್.ಹಿರೇಮಠ ತಿಳಿಸಿದರು.

ಕಿಡಿ ಹೊತ್ತಿದ್ದು ಎಲ್ಲಿಂದ?

• ಹರಿಶಂಕರ ಆರ್.

ಬಳ್ಳಾರಿ: ಆಂಧ್ರ ಪ್ರದೇಶದಲ್ಲಿ ಒಎಂಸಿಯು ಮೂರು ಗಣಿಗಳನ್ನು ಹೊಂದಿರುತ್ತದೆ. ಅದರಲ್ಲಿ ಮಲಪನಗುಡಿಯ ಅಂತರಗಂಗಮ್ಮ ಕೊಂಡ ಎಂಬಲ್ಲಿದ್ದ 68 ಹೆಕ್ಟೇರ್ ಪ್ರದೇಶದ ಗಣಿಯೂ ಒಂದು. ಈ ಗಣಿಯೂ ಮೂಲತಃ ಟಪಾಲ್ ಗಣೇಶ್ ಕುಟುಂಬದ್ದಾಗಿದ್ದು, ಒಎಂಸಿಗೆ ಮರು ಮಂಜೂರಾಗಿರುತ್ತದೆ.

2008ರಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ಜನಾರ್ದನ ರೆಡ್ಡಿ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರು ಆಗುತ್ತಾರೆ. ತಮ್ಮ ಪ್ರಭಾವ ಬಳಸಿಕೊಂಡು, ಮಲಪನಗುಡಿಯಲ್ಲಿರುವ ತಮ್ಮ ಗಣಿ ಸುತ್ತಮುತ್ತಲ ಗಣಿ ಕಂಪನಿಗಳಾದ ಹಿಂದ್ ಟ್ರೇಡರ್ಸ್, ಮೆಹಬೂಬ್ ಟ್ರಾನ್ಸ್‌ಪೋರ್ಟ್ ಕಂಪನಿ, ಎನ್ ರತ್ನಯ್ಯ ಇವರೊಂದಿಗೆ ಅಕ್ರಮವಾಗಿ ಒಪ್ಪಂದ ಮಾಡಿಕೊಳ್ಳುತ್ತಾರೆ. ಈ ಮಧ್ಯೆ, ಕೆಲ ಗಣಿ ಗುತ್ತಿಗೆಗಳ ಜಿಪಿಎಸ್ ರೀಡಿಂಗ್‌ಗಳನ್ನು, ಎಲ್ಲೆಗಳನ್ನು ಅಧಿಕಾರಿಗಳ ಸಹಕಾರದೊಂದಿಗೆ ಬದಲಾವಣೆ ಮಾಡಿದ ಆರೋಪ ವ್ಯಕ್ತವಾಗುತ್ತದೆ.

ಕರ್ನಾಟಕದ ಭಾಗದಲ್ಲಿದ್ದ ಟಪಾಲ್ ಗಣೇಶ್ ಅವರ ಕುಟುಂಬದ ಒಡೆತನದ ಟಿಎನ್‌ಆರ್ ಗಣಿಯ ಎಲ್ಲೆಗಳು ಬದಲಾಗುತ್ತವೆ. ಇದರ ವಿರುದ್ಧ ಟಪಾಲ್ ಕುಟುಂಬ ಹೈಕೋರ್ಟ್ ಮೆಟ್ಟಿಲೇರುತ್ತದೆ. ಅಲ್ಲಿ ಸರ್ವೆಗೆ ಆದೇಶವಾದರೂ, ಜನಾರ್ದನ ರೆಡ್ಡಿ ಅಲ್ಲಿಯೂ ಪ್ರಭಾವ ಬೀರಿದ ಆರೋಪವಿದೆ.

ಕೊನೆಗೆ, ಮಲಪನಗುಡಿಯ ಅಂತರಗಂಗಮ್ಮ ಕೊಂಡ ಎಂಬಲ್ಲಿದ್ದ ಗಣಿಯ ಮೂಲ ದಾಖಲೆ, ನಕ್ಷೆಗಳ ಮಾಹಿತಿ ಸಂಗ್ರಹಿಸುವ ಟಪಾಲ್ ಕುಟುಂಬ ಅದರಲ್ಲಿ ಕಂಡು ಬರುವ ವ್ಯತ್ಯಾಸಗಳ ಆಧಾರದಲ್ಲಿ ಸುಪ್ರೀಂ ಕೋರ್ಟ್ ಮತ್ತು ಕೇಂದ್ರದ ಉನ್ನತಾಧಿಕಾರ ಸಮಿತಿಯ ಮೊರೆ ಹೋಗುತ್ತದೆ.

ಈ ವಿಚಾರ ಆಂಧ್ರಪ್ರದೇಶದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗುತ್ತದೆ. ಆಗ ವಿರೋಧ ಪಕ್ಷದ ನಾಯಕರಾಗಿದ್ದ ಚಂದ್ರಬಾಬು ನಾಯ್ಡು ವಿಧಾನಸಭೆಯಲ್ಲಿ ತೀವ್ರವಾಗಿ ಖಂಡಿಸುತ್ತಾರೆ. ತನಿಖೆಗೆ ಆಗ್ರಹಿಸುತ್ತಾರೆ. ವಿರೋಧ ಪಕ್ಷಗಳ ಒತ್ತಾಯಕ್ಕೆ ಮಣಿದ ಸರ್ಕಾರ ತನಿಖೆಗೆ ತ್ರಿಸದಸ್ಯರ ಸಮಿತಿಯೊಂದನ್ನು ರಚಿಸುತ್ತದೆ.

ತನಿಖೆ ನಡೆಸುವ ಸಮಿತಿಯು, ಜನಾರ್ದನ ರೆಡ್ಡಿ ಅವರ ಒಎಂಸಿ ಆಂಧ್ರಪ್ರದೇಶದಲ್ಲಿ ವ್ಯಾಪಕ ಅಕ್ರಮ ನಡೆಸುತ್ತಿರುವುದಾಗಿ ಸರ್ಕಾರಕ್ಕೆ ವರದಿ ನೀಡುತ್ತದೆ. ವರದಿ ಆಧರಿಸಿದ ಮುಖ್ಯಮಂತ್ರಿ ರೋಸಯ್ಯ 2009ರ ಸೆ. 11ರಂದು ಸಿಬಿಐ ತನಿಖೆಗೆ ಆದೇಶಿಸುತ್ತಾರೆ. ಇದೇ ಪ್ರಕರಣದಲ್ಲಿ ಸದ್ಯ ತೀರ್ಪು ಪ್ರಕಟವಾಗಿದೆ.

ರೆಡ್ಡಿ ವಿರುದ್ಧ 20 ಪ್ರಕರಣಗಳು

ಶಾಸಕ ಜನಾರ್ದನ ರೆಡ್ಡಿ ಅವರು ಓಬಳಾಪುರಂ ಮೈನಿಂಗ್ ಕಂಪನಿಯ ಅಕ್ರಮ ಗಣಿಗಾರಿಕೆಯ ಒಂದು ಪ್ರಕರಣದಲ್ಲಿ ಜೈಲು ಸೇರಿದ್ದಾರೆ. ಆದರೆ, ಅವರ ವಿರುದ್ಧ 20 ಪ್ರಕರಣಗಳಿವೆ ಎಂಬುದು ಅವರ ಚುನಾವಣಾ ಅಫಿಡವಿಟ್‌ನಿಂದ ಗೊತ್ತಾಗಿದೆ.

20ರಲ್ಲಿ 14 ಪ್ರಕರಣಗಳು ಅಕ್ರಮ ಗಣಿಗಾರಿಕೆಗೆ ಸಂಬಂಧಪಟ್ಟಿದೆ. ಭ್ರಷ್ಟಾಚಾರಕ್ಕೆ ಸಂಬಂಧಿಸಿದ 2, ಅಕ್ರಮ ಆಸ್ತಿ ಗಳಿಕೆ, ಹೂಡಿಕೆದಾರರು ಮತ್ತು ಠೇವಣಿದಾರರ ಹಿತಾಸಕ್ತಿ ರಕ್ಷಣೆಗೆ ಸಂಬಂಧಿಸಿದ ಅಪರಾಧ, ಆದಾಯ ತೆರಿಗೆ ವಂಚನೆ, ಮತ್ತು ಕನಕಗಿರಿಯ ಠಾಣೆಯಲ್ಲಿ ತಲಾ ಒಂದೊಂದು ಪ್ರಕರಣಗಳಿವೆ.

ಲೋಕಾಯುಕ್ತವೊಂದರಲ್ಲೇ ಅವರ ವಿರುದ್ಧ 8 ಪ್ರಕರಣಗಳು ದಾಖಲಾಗಿವೆ. ಇದಲ್ಲದೇ, ಹೈದರಾಬಾದ್‌ನ ಸಿಬಿಐ ವಿಶೇಷ ನ್ಯಾಯಾಲಯದಲ್ಲಿ ಮೂರು, ಎಸಿಬಿಯಲ್ಲಿ ಒಂದು, ಬೆಂಗಳೂರಿನ ಸಿಬಿಐ/ಎಸಿಬಿಯಲ್ಲಿ ನಾಲ್ಕು, ಚೆನ್ನೈ ಸಿಬಿಐ ಮತ್ತು ಬೆಂಗಳೂರಿನ ಸಿಐಡಿಯಲ್ಲಿ ತಲಾ ಒಂದೊಂದು ಪ್ರಕರಣಗಳಿವೆ.

ಅಂತರರಾಜ್ಯ ಗಡಿ ಗುರುತನ್ನೇ ಸ್ಫೋಟಿಸಿದ್ದ ರೆಡ್ಡಿ

ನವದೆಹಲಿ: ಆಂಧ್ರಪ್ರದೇಶದಲ್ಲಿರುವ ಓಬುಳಾಪುರಂ ಗಣಿ ಕಂಪನಿಯ ಗಣಿ ಗುತ್ತಿಗೆ ಪ್ರದೇಶಗಳನ್ನು ಖರೀದಿಸಿದ್ದ ಜನಾರ್ದನ ರೆಡ್ಡಿ ಕುಟುಂಬ, ಅಂತರ ರಾಜ್ಯ ಗಡಿ ಗುರುತುಗಳನ್ನೇ ಸ್ಫೋಟಿಸಿ, ರಾಜ್ಯದ ಭೂಪ್ರದೇಶವನ್ನು ಅತಿಕ್ರಮಿಸಿ ಅಕ್ರಮ ಗಣಿಗಾರಿಕೆ ನಡೆಸಿದ ಆರೋಪ ಕೇಳಿಬಂದಿತ್ತು.

ಆಗಿನ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು ಬಳ್ಳಾರಿ ಜಿಲ್ಲೆಯ ಗಣಿ ಮಾಲೀಕರಿಂದ ₹150 ಕೋಟಿ ಲಂಚ ಪಡೆದಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯರಾಗಿದ್ದ ಜನಾರ್ದನ ರೆಡ್ಡಿ 2006ರಲ್ಲಿ ಆರೋಪಿಸಿದ್ದರು. ಇದು ರಾಜ್ಯ ರಾಜಕಾರಣದಲ್ಲಿ ಕೋಲಾಹಲ ಸೃಷ್ಟಿಸಿತ್ತು.

ಈ ಘಟನೆಯ ಬಳಿಕ 2000ನೇ ವರ್ಷದಿಂದ 2006ರವರೆಗೆ ಬಳ್ಳಾರಿಯಲ್ಲಿ ನಡೆದಿದ್ದ ಅಕ್ರಮ ಗಣಿಗಾರಿಕೆ ಹಾಗೂ ₹ 150 ಕೋಟಿ ಲಂಚದ ಆರೋಪ ಕುರಿತು ತನಿಖೆ ನಡೆಸಲು ನಿವೃತ್ತ ನ್ಯಾಯಮೂರ್ತಿ ಯು.ಎಲ್. ಭಟ್ ಆಯೋಗವನ್ನು ರಾಜ್ಯ ಸರ್ಕಾರ ನೇಮಿಸಿತ್ತು. ಆದರೆ, ವರ್ಷ ಕಳೆಯುವುದರೊಳಗೆ ಆಯೋಗವನ್ನು ರದ್ದು ಮಾಡಲಾಯಿತು.

2000–2006ರ ನಡುವಿನ ಅವಧಿಯಲ್ಲಿ ನಡೆದ ಅಕ್ರಮ ಗಣಿಗಾರಿಕೆ ಕುರಿತು ತನಿಖೆ ನಡೆಸುವ ಜವಾಬ್ದಾರಿಯನ್ನು ಲೋಕಾಯುಕ್ತಕ್ಕೆ ವಹಿಸಿ 2007ರಲ್ಲಿ ಆದೇಶ ಹೊರಡಿಸಲಾಗಿತ್ತು. 2008ರಲ್ಲಿ ಲೋಕಾಯುಕ್ತರು ತಮ್ಮ ಮೊದಲ (ಮಧ್ಯಂತರ) ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು.

ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರದ ಅವಧಿಯಲ್ಲಿ ಅಕ್ರಮ ಗಣಿಗಾರಿಕೆ ಮತ್ತಷ್ಟು ಹೆಚ್ಚಿದೆ ಎಂಬ ಆರೋಪಗಳು ಕೇಳಿಬಂದಿತ್ತು. ಆಗ ಸಚಿವರಾಗಿದ್ದ ಜಿ. ಜನಾರ್ದನ ರೆಡ್ಡಿ ಅವರು ವಿಧಾನಸಭೆಯಲ್ಲೇ ಕಾಂಗ್ರೆಸ್ ಸದಸ್ಯರ ವಿರುದ್ಧ ತೋಳೇರಿಸಿದ್ದು ವಿವಾದದ ಕಿಡಿ ಹೊತ್ತಿಸಿತ್ತು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಬೆಂಗಳೂರಿನಿಂದ ಬಳ್ಳಾರಿಗೆ ಪಾದಯಾತ್ರೆ ಹಮ್ಮಿಕೊಂಡಿತ್ತು. ಈ ಬೆಳವಣಿಗೆಗಳಿಂದ ಒತ್ತಡಕ್ಕೆ ಸಿಲುಕಿದ್ದ ಯಡಿಯೂರಪ್ಪ ಅವರು ಅಕ್ರಮ ಗಣಿಗಾರಿಕೆ ಕುರಿತ ಲೋಕಾಯುಕ್ತ ತನಿಖೆಯ ಅವಧಿಯನ್ನು 2010ರ ಜುಲೈವರೆಗೂ ವಿಸ್ತರಿಸಿ ಆದೇಶ ಹೊರಡಿಸಿದ್ದರು.

ಹತ್ತಾರು ಸಾವಿರ ಪುಟಗಳ ದಾಖಲೆಗಳೊಂದಿಗೆ ಸಂತೋಷ್ ಹೆಗ್ಡೆ 2011ರ ಜುಲೈ 27ರಂದು ತಮ್ಮ ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು. ವರದಿಯ ಪರಿಣಾಮವಾಗಿ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಗಾದಿ ಕಳೆದುಕೊಂಡಿದ್ದರು. ಲೋಕಾಯುಕ್ತ ವರದಿಯ ಶಿಫಾರಸುಗಳ ಜಾರಿಗೆ ಒತ್ತಾಯಿಸಿ ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ ಎಸ್.ಆರ್. ಹಿರೇಮಠ ಅವರು ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು.

ಸುಪ್ರೀಂಕೋರ್ಟ್‌ನಲ್ಲಿ ಸುದೀರ್ಘ ವಿಚಾರಣೆ ನಡೆದು, ಕೇಂದ್ರ ಉನ್ನತಾಧಿಕಾರ ಸಮಿತಿಯ (ಸಿಇಸಿ) ವಿಚಾರಣೆಗೆ ಆದೇಶ ಹೊರಬಿದ್ದಿತ್ತು. ಜನಾರ್ದನ ರೆಡ್ಡಿ, ಆನಂದ್ ಸಿಂಗ್, ನಾಗೇಂದ್ರ, ಸುರೇಶ್ ಬಾಬು ಸೇರಿದಂತೆ ಹಲವರು ಜೈಲು ಸೇರಿದ್ದರು.

ಗಡಿ ಗುರುತು ನಾಶ ಎಲ್ಲಿ: ಬಳ್ಳಾರಿ ಮೀಸಲು ಅರಣ್ಯ ವಲಯದಲ್ಲಿ ಹಾದು ಹೋಗಿರುವ ಅಂತರರಾಜ್ಯ ಗಡಿಯ ಗುರುತುಗಳು ನಾಪತ್ತೆಯಾಗಿವೆ. ತುಮಟಿ, ವಿಠಲಾಪುರ, ಮಲಪ್ಪನಗುಡಿ ಮತ್ತು ಸಿದ್ದಾಪುರ ಗ್ರಾಮಗಳು ಸಂಧಿಸುವ ಸ್ಥಳಗಳಲ್ಲಿದ್ದ ಹಲವು ಗಡಿ ಗುರುತುಗಳು ನಾಶವಾಗಿವೆ. ಓಬುಳಾಪುರಂ ಮೈನಿಂಗ್ ಕಂಪನಿಯು 2007–08ರಲ್ಲಿ ಮಲಪ್ಪನಗುಡಿಯಲ್ಲಿ ಸ್ಫೋಟ ನಡೆಸಿ ಅಂತರರಾಜ್ಯ ಗಡಿ ಗುರುತು ನಾಶಪಡಿಸಿದೆ ಎಂದು ಸಂತೋಷ್ ಹೆಗ್ಡೆ ವರದಿಯಲ್ಲಿ ಉಲ್ಲೇಖಿಸಲಾಗಿತ್ತು.

'ಅಂತರ ರಾಜ್ಯ ಗಡಿ ಗುರುತು ನಾಶದ ಕುರಿತು ಉಭಯ ರಾಜ್ಯಗಳ ಸಹಭಾಗಿತ್ವದಲ್ಲಿ ತನಿಖೆ ನಡೆಸುವ ಅಗತ್ಯವಿದೆ' ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿತ್ತು. ಅಕ್ರಮ ಗಣಿಗಾರಿಕೆಯಿಂದ ಅಂತರ ರಾಜ್ಯ ಗಡಿ ಗುರುತುಗಳು ನಾಶವಾಗಿರುವುದನ್ನು ಸಿಇಸಿ ದೃಢಪಡಿಸಿತ್ತು.

ಸುದ್ದಿ 2 ನಿಮಿಷ

ಛಲವಾದಿ ರಾಜೀನಾಮೆಗೆ ಆಗ್ರಹ

ಬೆಂಗಳೂರು: ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಛಲವಾದಿ ನಾರಾಯಣಸ್ವಾಮಿ ಅವರು ರಾಜೀನಾಮೆ ನೀಡಿ, ರಾಜಕೀಯ ನಿವೃತ್ತಿ ಘೋಷಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಮಂಗಳವಾರ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಸೋಲಿಸಿದ್ದು ಕಾಂಗ್ರೆಸ್ ಎಂಬ ಛಲವಾದಿ ನಾರಾಯಣಸ್ವಾಮಿ ಆರೋಪ ನಿರಾಧಾರ. 'ನನ್ನ ಸೋಲಿಗೆ ಕಮ್ಯುನಿಸ್ಟ್ ಪಕ್ಷದ ನಾಯಕ ಡಾಂಗೆ ಮತ್ತು ಆರ್‌ಎಸ್‌ಎಸ್‌ನ ಸಾವರ್ಕರ್ ಕಾರಣ' ಎಂದು ಅಂಬೇಡ್ಕರ್ ಅವರೇ ಪತ್ರದಲ್ಲಿ ಉಲ್ಲೇಖಿಸಿದ್ದಾರೆ' ಎಂದರು.



'ಚುನಾವಣೆಯಲ್ಲಿ ಅಂಬೇಡ್ಕರರನ್ನು ಕಾಂಗ್ರೆಸ್ ಸೋಲಿಸಿಲ್ಲ ಎಂದು ಕಾಂಗ್ರೆಸ್ ನಾಯಕರು ಸಾಬೀತು ಮಾಡಿದರೆ ರಾಜೀನಾಮೆ ನೀಡುವ ಜತೆಗೆ, ತಲಾ ₹1,00,001 ನೀಡುತ್ತೇನೆ' ಎಂದು ನಾರಾಯಣಸ್ವಾಮಿ ಹೇಳಿದ್ದರು. ಆ ಹಣವನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯ ಅರಿವು ಕೇಂದ್ರಕ್ಕೆ ನೀಡಿದರೆ ಪುಸ್ತಕ ಖರೀದಿಗೆ ವಿನಿಯೋಗಿಸಲಾಗುವುದು ಎಂದರು.

ಈ ಕುರಿತು ಪ್ರತಿಕ್ರಿಯಿಸಿದ ಛಲವಾದಿ ನಾರಾಯಣಸ್ವಾಮಿ, 'ಅಂಬೇಡ್ಕರ್ ತಮ್ಮ ಪತ್ರದಲ್ಲಿ ಬೇರೊಬ್ಬರ ಮಾತು ಉಲ್ಲೇಖಿಸಿದ್ದಾರೆ ಅಷ್ಟೆ, ಸ್ವತಃ ಆರೋಪ ಮಾಡಿಲ್ಲ' ಎಂದರು.

'ರಾಜೀನಾಮೆ ನೀಡಲು ಬದ್ಧ'

ವಿಜಯಪುರ: 'ಶಾಸಕ ಸ್ಥಾನಕ್ಕೆ ಈಗಲೂ ನಾನು ರಾಜೀನಾಮೆ ನೀಡಲು ಸಿದ್ಧ. ಖಾಲಿ ಪತ್ರದಲ್ಲಿ ಸಹಿ ಮಾಡಿಕೊಡುವೆ. ಸವಾಲು ಹಾಕಿರುವ ಬಸನಗೌಡ ಪಾಟೀಲ ಯತ್ನಾಳ ರಾಜೀನಾಮೆ ನೀಡುವರೇ' ಎಂದು ಜವಳಿ ಸಚಿವ ಶಿವಾನಂದ ಪಾಟೀಲ ಪ್ರಶ್ನಿಸಿದರು.

'ಲೆಟರ್ ಹೆಡ್‌ನಲ್ಲಿ ನಾನು ಕೇವಲ ಸಹಿ ಮಾಡಿಕೊಡುವೆ. ಅದರಲ್ಲಿ ಯತ್ನಾಳ ಅವರೇ, ನನ್ನ ರಾಜೀನಾಮೆ ವಿಷಯ ಬರೆಯಲಿ. ಅವರು ಕೂಡ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲಿ. ವಿಧಾಸಭಾಧ್ಯಕ್ಷರು ಮೊದಲು ನನ್ನ ರಾಜೀನಾಮೆ ಅಂಗೀಕರಿಸಿ, ನಂತರ ಯತ್ನಾಳ ರಾಜೀನಾಮೆ ಅಂಗೀಕರಿಸಲಿ' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು. 'ಸಾರ್ವಜನಿಕವಾಗಿ ಬಳಸಲು ಸಾಧ್ಯವಿಲ್ಲದ ಪದ ಬಳಸಿ, ಸವಾಲು ಹಾಕಿದ್ದು ಯತ್ನಾಳ ಅವರೇ ಹೊರತು ನಾನಲ್ಲ. ಈಗಲೂ ನಾನು ರಾಜೀನಾಮೆ ನೀಡಲು ಬದ್ಧ. ಹಾಗೆಯೇ, ಯತ್ನಾಳ ಸಹ ರಾಜೀನಾಮೆ ನೀಡಬೇಕು' ಎಂದರು.

'ಬಸವನಬಾಗೇವಾಡಿ, ವಿಜಯಪುರ, ಇಂಡಿ ಇವು ಯಾವುದೂ ಪಾಕಿಸ್ತಾನ ಅಲ್ಲ. ಹತಾಶರಾದ ಯತ್ನಾಳ ತಾಳ್ಮೆ ಕಳೆದುಕೊಂಡು ಮಾತನಾಡುವುದು ಸರಿಯಲ್ಲ. ಸಾರ್ವಜನಿಕ ಜೀವನದಲ್ಲಿ ಇಂಥ ಸವಾಲು ಹಾಕಿದ ಮೇಲೆ ಸ್ವೀಕರಿಸಿ ಮುನ್ನಡೆಯಬೇಕು. ಇಲ್ಲವೇ ಸುಮ್ಮನೇ ಇರಬೇಕು' ಎಂದು ಎಚ್ಚರಿಕೆ ನೀಡಿದರು.

ಕೃಷ್ಣಾ: ನಾಲ್ಕು ರಾಜ್ಯಗಳ ಸಭೆ ಮುಂದೂಡಿಕೆ

ನವದೆಹಲಿ: ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ನೇತೃತ್ವದಲ್ಲಿ ಇದೇ 7ರಂದು ನಿಗದಿಯಾಗಿದ್ದ ಕೃಷ್ಣಾ ಕಣಿವೆ ವ್ಯಾಪ್ತಿಯ ರಾಜ್ಯಗಳ ಜಲಸಂಪನ್ಮೂಲ ಸಚಿವರ ಸಭೆ ಕೊನೆಯ ಕ್ಷಣದಲ್ಲಿ ಮುಂದೂಡಿಕೆಯಾಗಿದೆ.

ಕೃಷ್ಣಾ ಜಲವಿವಾದ ನ್ಯಾಯಮಂಡಳಿ 2010ರಲ್ಲಿ ತೀರ್ಪು ನೀಡಿತ್ತು. ರಾಜ್ಯಕ್ಕೆ 173 ಟಿಎಂಸಿ ಅಡಿ ನೀರು ಬಳಸಿಕೊಳ್ಳಲು ಅನುಮತಿ ನೀಡಲಾಗಿತ್ತು. ಅಂತಿಮ ತೀರ್ಪು ನೀಡಿ 15 ವರ್ಷಗಳಾಗಿವೆ. ಆದರೆ, ಇಲ್ಲಿಯವರೆಗೂ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿಲ್ಲ. ಈ ನಡುವೆ, ಸುಪ್ರೀಂ ಕೋರ್ಟ್‌ನಲ್ಲಿ ತೆಲಂಗಾಣ ಮತ್ತು ಆಂಧ್ರ ಪ್ರದೇಶ ಸರ್ಕಾರಗಳು ಸಹ ಅರ್ಜಿ ಸಲ್ಲಿಸಿವೆ.

ಈ ಸಭೆಗೆ ಹಾಜರಾಗುವ ಉದ್ದೇಶದಿಂದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಂಗಳವಾರ ರಾತ್ರಿ ನವದೆಹಲಿಗೆ ಬಂದರು. ಸಭೆ ಮುಂದೂಡಿಕೆಯಾಗಿರುವುದರಿಂದ ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ಬುಧವಾರ ಭೇಟಿ ಮಾಡಲಿದ್ದಾರೆ.



ಕೊಂಡೋತ್ಸವ ಮಂಡ್ಯ ತಾಲ್ಲೂಕಿನ ಆಲಕೆರೆ ಮತ್ತು ಕೀಲಾರ ಗ್ರಾಮದ ಆರಾಧ್ಯ ದೈವ ವೀರಭದ್ರೇಶ್ವರಸ್ವಾಮಿ ಕೊಂಡೋತ್ಸವಕ್ಕೆ ಅಗ್ನಿಸ್ಪರ್ಶ ಮಾಡುವ ದೃಶ್ಯವನ್ನು ಸಾವಿರಾರು ಭಕ್ತರು ಕಣ್ತುಂಬಿಕೊಂಡರು

ಕಾರುಣ್ಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ವಿಜೇತ ಪಟ್ಟ

ಬೋಯಿಂಗ್ ಬಿಲ್ಡ್ 4.0 ನಲ್ಲಿ 'ಕಾಸ್ಟ್ ಎಫೆಕ್ಟಿವ್ ಮೈಯೋಎಲೆಕ್ಟ್ರಿಕ್ ಪ್ರಾಸ್ಥೆಟಿಕ್ ಆರ್ಮ್' ಆವಿಷ್ಕರಿಸಿದ ವಿದ್ಯಾರ್ಥಿಗಳಿಗೆ ₹10 ಲಕ್ಷ ಬಹುಮಾನ

ಬೆಂಗಳೂರು: ಕೊಯಮತ್ತೂರಿನ ಕಾರುಣ್ಯ ಡೀಮ್ಡ್ ವಿಶ್ವವಿದ್ಯಾಲಯದ ಪ್ರತಿಭಾನ್ವಿತ ವಿದ್ಯಾರ್ಥಿಗಳ ತಂಡ 'ಕಾಸ್ಟ್ ಎಫೆಕ್ಟಿವ್ ಮೈಯೋಎಲೆಕ್ಟ್ರಿಕ್ ಪ್ರಾಸ್ಥೆಟಿಕ್ ಆರ್ಮ್' (ಕೃತಕ ತೋಳಿನ ನಾವೀನ್ಯತೆಗೆ) ಎಂಬ ಅದ್ಭುತ ಆವಿಷ್ಕಾರಕ್ಕಾಗಿ ₹10 ಲಕ್ಷ ಬಹುಮಾನ ಗಳಿಸಿ ವಿಜೇತರಾಗಿದ್ದಾರೆ.

ಬಯೋಮೆಡಿಕಲ್ ಎಂಜಿನಿಯರಿಂಗ್ ವಿಭಾಗದ ಮೂರನೇ ವರ್ಷದ ವಿದ್ಯಾರ್ಥಿಗಳಾದ ಆಶಿಶ್ ಸ್ಯಾಮ್ಯುಯೆಲ್, ಅರ್ಪಿತ್ ಚೌಹಾಣ್ ಮತ್ತು ವಿ. ಕಾರ್ತಿಕೇಯನ್ ಅವರು ರಾಷ್ಟ್ರೀಯ ಮಟ್ಟದ ಬೋಯಿಂಗ್ ಬಿಲ್ಡ್ 4.0 ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಗಳಿಸಿ ನಗದು ಬಹುಮಾನದ ಪ್ರಶಸ್ತಿ ತನ್ನದಾಗಿಸಿಕೊಂಡಿದ್ದಾರೆ.

ಸ್ನಾಯು ಸಂಕೇತಗಳ ಬಗ್ಗೆ ಹೆಚ್ಚಿನ ನಿಖರತೆ ಸೂಚಿಸಿ, ಅರ್ಥೈಸಿಕೊಳ್ಳುವ ಈ ಪ್ರಾಜೆಕ್ಟ್, ಸುಧಾರಿತ ಯಂತ್ರ ಕಲಿಕೆಯ ಅಲ್ಗಾರಿದಮ್ಸ್ ಸಂಯೋಜನೆಯಾಗಿದೆ. ಇದು ಅಂಗವಿಕಲರಿಗೆ ಬಹಳ ಅನುಕೂಲವಾಗಿದ್ದು, ಸರಳ ಹಾಗೂ ಹೆಚ್ಚು ಸ್ಪಂದಿಸುವ ತೋಳಿನ ಚಲನೆಗಳನ್ನು ಸಕ್ರಿಯಗೊಳಿಸಲಿದೆ. ಜತೆಯಲ್ಲಿ ಹಗುರ ಹಾಗೂ ಅದಕ್ಕೆ ಹೊಂದಿಕೊಳ್ಳುವ ವಸ್ತುಗಳ ಬಳಕೆಯಲ್ಲಿ ಪ್ರಾಸ್ಥೆಟಿಕ್‌ನ ಸೌಕರ್ಯ, ಸರಳತೆ ಮತ್ತು ಬಾಳಿಕೆಯನ್ನೂ ಹೆಚ್ಚಿಸುತ್ತದೆ. ಒಂದು ರೀತಿಯಲ್ಲಿ ಸುಲಭ, ಕೈಗೆಟುಕುವ ಪರಿಹಾರವಾಗಿದೆ.

ರಾಷ್ಟ್ರೀಯ ವಿಜೇತ ತಂಡ ಘೋಷಣೆ: ನಾಲ್ಕು ಸುತ್ತುಗಳಲ್ಲಿ ನಡೆದ ಬೋಯಿಂಗ್ ಬಿಲ್ಡ್ 4.0 ಸ್ಪರ್ಧೆಯಲ್ಲಿ ದೇಶಾದ್ಯಂತ 2,077ಕ್ಕೂ ಅಧಿಕ ತಂಡಗಳು ಭಾಗವಹಿಸಿದ್ದವು. 2ನೇ ಸುತ್ತಿನಲ್ಲಿ 2,077 ರಿಂದ 85ಕ್ಕೆ ಇಳಿದ ನಂತರ 3ನೇ ಸುತ್ತಿನಲ್ಲಿ 27 ಪ್ರಾದೇಶಿಕ ಫೈನಲಿಸ್ಟ್‌ಗಳಿದ್ದರು. ಅಂತಿಮವಾಗಿ 7 ಅಗ್ರ ತಂಡಗಳ ಗ್ರ್ಯಾಂಡ್ ಫಿನಾಲೆಯಲ್ಲಿ ಕಾರುಣ್ಯ ತಂಡವನ್ನು ರಾಷ್ಟ್ರೀಯ ವಿಜೇತರೆಂದು ಘೋಷಿಸಲಾಯಿತು.

ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದ ಭಾಗವಹಿಸಿದ್ದ ಬೋಯಿಂಗ್‌ನ ಮುಖ್ಯ ಮಾಹಿತಿ ಅಧಿಕಾರಿ ಮತ್ತು ಅಮೆರಿಕದ ರಕ್ಷಣಾ ಇಲಾಖೆಯ ಮಾಜಿ ಸಿಐಒ ಡಾನಾ ಡೀಸಿ ಹಾಗೂ ಬೋಯಿಂಗ್ ಇಂಡಿಯಾ ಮತ್ತು ದಕ್ಷಿಣ ಏಷ್ಯಾದ ಅಧ್ಯಕ್ಷ ಸಲೀಲ್ ಗುಪ್ತೆ ಅವರು ಪ್ರತಿಷ್ಠಿತ ಪ್ರಶಸ್ತಿಯನ್ನು ಪ್ರದಾನ ಮಾಡಿದರು.



ಬೋಯಿಂಗ್ ಭಾರತ ಮತ್ತು ದಕ್ಷಿಣ ಏಷ್ಯಾದ ಅಧ್ಯಕ್ಷ ಸಲೀಲ್ ಗುಪ್ತೆ ಹಾಗೂ ಬೋಯಿಂಗ್‌ನ ಸಿಐಒ ಮತ್ತು ಅಮೆರಿಕದ ರಕ್ಷಣಾ ಇಲಾಖೆಯ ಮಾಜಿ ಸಿಐಒ ಡಾನಾ ಡೀಸಿ ಅವರು ವಿದ್ಯಾರ್ಥಿಗಳಿಗೆ ₹10 ಲಕ್ಷ ಚೆಕ್ ನೀಡಿ ಸನ್ಮಾನಿಸಿದರು.

ನಂತರ ಕಾರುಣ್ಯ ವಿಶ್ವವಿದ್ಯಾಲಯದ ಕುಲಪತಿ ಡಾ. ಪಾಲ್ ದಿನಕರನ್ ಅವರು ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿದರು. "ಈ ಅಸಾಧಾರಣ ಸಾಧನೆ ಕಾರುಣ್ಯ ವಿಶ್ವವಿದ್ಯಾಲಯದ ಮೂಲ ಮೌಲ್ಯಗಳಾದ ಶೈಕ್ಷಣಿಕ ಶ್ರೇಷ್ಠತೆ, ನಾವೀನ್ಯತೆ ಮತ್ತು ಸಮಾಜಕ್ಕೆ ಸೇವೆ ಸಲ್ಲಿಸುವ ಮನೋಭಾವವನ್ನು ಪ್ರತಿಬಿಂಬಿಸುತ್ತದೆ. ಬಯೋಮೆಡಿಕಲ್ ಎಂಜಿನಿಯರಿಂಗ್‌ನ ಎಲ್ಲೆ ಮೀರಿ ಜೀವನವನ್ನು ಸಹ ಸ್ಪರ್ಶಿಸುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ್ದಕ್ಕಾಗಿ ನಾನು ನಮ್ಮ ವಿದ್ಯಾರ್ಥಿಗಳ ತಂಡವನ್ನು ಶ್ಲಾಘಿಸುತ್ತೇನೆ. ತಂತ್ರಜ್ಞಾನದ ಮೂಲಕ ನೈಜ ಜಗತ್ತಿನ ಸಮಸ್ಯೆಗಳನ್ನು ಪರಿಹರಿಸಲು ಯುವ ಮನಸ್ಸುಗಳನ್ನು ಪ್ರೋತ್ಸಾಹಿಸಿದ್ದಕ್ಕಾಗಿ ಬೋಯಿಂಗ್‌ಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ" ಎಂದು ಹೇಳಿದರು.

ರಾಜೀವ ಗಾಂಧಿ ಆರೋಗ್ಯ ವಿವಿ ಘಟಿಕೋತ್ಸವದಲ್ಲಿ ಅಜೀಮ್ ಪ್ರೇಮ್ ಜಿ ಕಿವಿಮಾತು

'ಕೊಳೆಗೇರಿಗೆ ಹೋಗಿ ಸೇವೆ ಒದಗಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರೋಗ್ಯವಂತ ಜನರಿಂದ ಬಲಿಷ್ಠ ರಾಷ್ಟ್ರ ನಿರ್ಮಾಣ ಸಾಧ್ಯ. ಆದ್ದರಿಂದ ಮಹಾನಗರ ಅಥವಾ ಕಾರ್ಪೊರೇಟ್ ಆಸ್ಪತ್ರೆಗಳಲ್ಲಿ ಕೆಲಸ ಮಾಡಿದರೂ ಬಿಡುವಿನ ಸಮಯದಲ್ಲಿ ಕೊಳೆಗೇರಿಗಳಿಗೆ ತೆರಳಿ, ವೈದ್ಯಕೀಯ ಸೇವೆ ಒದಗಿಸಿ' ಎಂದು ವಿಪ್ರೊ ಕಂಪನಿ ಸಂಸ್ಥಾಪನಾಧ್ಯಕ್ಷ ಅಜೀಂ ಪ್ರೇಮ್ ಜಿ ಅವರು ಯುವ ವೈದ್ಯರಿಗೆ ಕಿವಿಮಾತು ಹೇಳಿದರು.

ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 27ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಅವರು, ಘಟಿಕೋತ್ಸವ ಭಾಷಣ ಮಾಡಿದರು.

'ಆರೋಗ್ಯ ಮತ್ತು ಶಿಕ್ಷಣ ಉತ್ತಮ ಸಮಾಜ ಹಾಗೂ ದೇಶದ ಅಡಿಪಾಯಗಳಾಗಿವೆ. ಈ ಕ್ಷೇತ್ರಗಳಲ್ಲಿ ಸೇವೆಯೇ ಪ್ರಧಾನ. ದೇಶದ ಪ್ರತಿಯೊಬ್ಬ ವ್ಯಕ್ತಿಯೂ ಉತ್ತಮ ಆರೋಗ್ಯ ಮತ್ತು ಶಿಕ್ಷಣವನ್ನು ಪಡೆಯುವಂತಾಗಬೇಕು. ರೋಗಿಯೊಬ್ಬರು ಆಸ್ಪತ್ರೆಗೆ ಬಂದಾಗ ವೈದ್ಯರ ಮೇಲೆ ಸಂಪೂರ್ಣ ನಂಬಿಕೆ ಇಟ್ಟಿರುತ್ತಾರೆ. ಈ ಸಂದರ್ಭದಲ್ಲಿ ವೈದ್ಯರಾದವರು ಅವರ ನಂಬಿಕೆ ಉಳಿಸಿಕೊಳ್ಳುವುದು ಮುಖ್ಯವಾಗುತ್ತದೆ. ವೈದ್ಯಕೀಯ ವೃತ್ತಿಯನ್ನು ವ್ಯಾವಹಾರಿಕವಾಗಿ ನೋಡದೆ, ಸೇವಾ ಮನೋಭಾವದಿಂದ ಕಾರ್ಯ ನಿರ್ವಹಿಸಿದಾಗ ಮಾತ್ರ ಆ ನಂಬಿಕೆ ಉಳಿಸಿಕೊಳ್ಳಲು, ಉತ್ತಮ ವೈದ್ಯರಾಗಲು ಸಾಧ್ಯ' ಎಂದು ಹೇಳಿದರು.

'ನಮ್ಮ ದೇಶವನ್ನು ಆರೋಗ್ಯಕರ ಮತ್ತು ಚೈತನ್ಯಶೀಲವಾಗಿರಿಸುವಲ್ಲಿ ವೈದ್ಯರು ಮಹತ್ವದ ಪಾತ್ರ ವಹಿಸುತ್ತಾರೆ. ದುರ್ಬಲ ಜನರಿರುವ ಪ್ರದೇಶ, ಗ್ರಾಮೀಣ ಭಾಗಗಳಲ್ಲಿ ವೈದ್ಯರ ಸೇವೆ ಅತ್ಯಗತ್ಯ. ಇಡೀ ವೃತ್ತಿ ಜೀವನವನ್ನು ಅಂತಹ ಸೇವೆಗೆ ಮೀಸಲಿಡಲು ಸಾಧ್ಯವಾಗದಿದ್ದರೆ, ನಿಮ್ಮ ಸಮಯದ ಒಂದು ಭಾಗವನ್ನಾದರೂ ಆ ಪ್ರದೇಶಗಳ ಜನರಿಗೆ ಮೀಸಲಿಡುವ ಮಾರ್ಗಗಳನ್ನು ಕಂಡುಕೊಳ್ಳಬೇಕು' ಎಂದರು.

ವೇಗವಾಗಿ ಬೆಳವಣಿಗೆ: ಚಿನ್ನದ ಪದಕಗಳನ್ನು ಪ್ರದಾನ ಮಾಡಿದ ರಾಜ್ಯಪಾಲ ಥಾವರಚಂದ್ ಗೆಹಲೋತ್, 'ನಮ್ಮ ದೇಶದಲ್ಲಿ ವೈದ್ಯರನ್ನು ದೇವರಿಗೆ ಹೋಲಿಸಲಾಗುತ್ತದೆ. ವೈದ್ಯರಾದವರು ನೈತಿಕ ಮೌಲ್ಯಗಳ ಜತೆಗೆ ಸೇವೆಯಲ್ಲಿ ಅರ್ಪಣಾ ಮನೋಭಾವ, ವೃತ್ತಿಗೌರವ ಬೆಳೆಸಿಕೊಳ್ಳಬೇಕು. ವೈದ್ಯಕೀಯ ಕ್ಷೇತ್ರವು ವೇಗವಾಗಿ ಬೆಳವಣಿಗೆ ಹೊಂದುವ ಜತೆಗೆ ಹಲವು ಬದಲಾವಣೆಗಳಿಗೆ ತೆರೆದುಕೊಳ್ಳುತ್ತಿದೆ. ಕೃತಕ ಬುದ್ಧಿಮತ್ತೆ, ಟೆಲಿ ಮೆಡಿಸಿನ್, ರೊಬೊಟಿಕ್ ತಂತ್ರಜ್ಞಾನದಿಂದ ಹಲವು ಆವಿಷ್ಕಾರಗಳನ್ನು ಕಾಣಬಹುದಾಗಿದೆ. ಆದ್ದರಿಂದ ವೈದ್ಯರಾದವರಿಗೆ ನಿರಂತರ ಕಲಿಕೆ ಮುಖ್ಯವಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸಲು ಯುವ ವೈದ್ಯರು ಆಸಕ್ತಿ ತೋರಬೇಕಿದೆ. ಅಲ್ಲಿ ಕಾರ್ಯನಿರ್ವಹಿಸುವ ವೈದ್ಯರಿಗೆ ಸಮಾಜದಲ್ಲಿ ಹೆಚ್ಚಿನ ಗೌರವ ಸಿಗಲಿದೆ' ಎಂದು ಹೇಳಿದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ ಪಾಟೀಲ, 'ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಪದವಿ ಪಡೆಯುವ ಪ್ರತಿಯೊಬ್ಬರಿಗೂ ಸೇವೆಯೇ ಮುಖ್ಯ ಧ್ಯೇಯವಾಗಿರಬೇಕು. ರೋಗಿಗಳನ್ನು ಅತ್ಯಂತ ಶ್ರದ್ಧೆ ಹಾಗೂ ಹೆಚ್ಚು ಕಾಳಜಿ ವಹಿಸಿ ಆರೈಕೆ ಮಾಡಬೇಕು. ನಿಮ್ಮ ಸೇವೆಯಿಂದ ಸ್ವಸ್ಥ ಸಮಾಜ ನಿರ್ಮಾಣವಾಗಬೇಕು' ಎಂದರು.

ವಿಶ್ವವಿದ್ಯಾಲಯದ ಕುಲಪತಿ ಭಗವಾನ್ ಬಿ.ಸಿ., ಕುಲಸಚಿವ ಶಿವಪ್ರಸಾದ್ ಪಿ.ಆರ್. ಉಪಸ್ಥಿತರಿದ್ದರು.



ಡಾ. ಗಿರೀಶ್ ಬಿ.ಎಸ್., ಡಾ. ಗನ್ಯಾಶ್ರೀ, ಡಾ. ಪ್ರಕೃತಿ ಸಿ. ಪಾಟೀಲ ಹಾಗೂ ಆಲೀನಾ ಜೋಸ್ ಅವರು ಚಿನ್ನದ ಪದಕ, ಪ್ರಮಾಣ ಪತ್ರ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

93 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ

ಘಟಿಕೋತ್ಸವ ಸಮಾರಂಭದಲ್ಲಿ ವಿಜ್ಞಾನಿ, ಸೆಂಟರ್ ಫಾರ್ ಹ್ಯೂಮನ್ ಜೆನೆಟಿಕ್ಸ್ ಕೇಂದ್ರದ ಮುಖ್ಯಸ್ಥ ಹೊಂಬೇಗೌಡ ಶರತ್‌ಚಂದ್ರ, ಒಎಂಎಫ್ ಸರ್ಜನ್ ಡಾ. ಗಿರೀಶ್ ರಾವ್ ಮತ್ತು ನರರೋಗ ತಜ್ಞ ಡಾ.ಜಿ.ಟಿ. ಸುಭಾಷ್ ಅವರಿಗೆ 'ಡಾಕ್ಟರ್ ಆಫ್ ಸೈನ್ಸ್' ಗೌರವ ಪ್ರದಾನ ಮಾಡಲಾಯಿತು. ಒಟ್ಟು 93 ವಿದ್ಯಾರ್ಥಿಗಳಿಗೆ 109 ಚಿನ್ನದ ಪದಕ ವಿತರಿಸಲಾಯಿತು. ಪಿಇಎಸ್ ಫಾರ್ಮಸಿ ಕಾಲೇಜಿನ ಫಾರ್ಮಾ ಡಿ. ಕೋರ್ಸ್‌ನ ಡಾ. ಗಿರೀಶ್ ಬಿ.ಎಸ್., (6) ಉಜಿರೆಯ ಎಸ್.ಡಿ.ಎಂ. ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಕಾಲೇಜಿನ ಡಾ. ಗನ್ಯಾಶ್ರೀ (4), ಶಿವಮೊಗ್ಗ ಶರಾವತಿ ದಂತ ಕಾಲೇಜಿನ ಡಾ. ಪ್ರಕೃತಿ ಸಿ. ಪಾಟೀಲ (3) ಹಾಗೂ ನೈಟಿಂಗೇಲ್ ನರ್ಸಿಂಗ್ ಕಾಲೇಜಿನ ಅಲೀನಾ ಜೋಸ್ (3) ಅಧಿಕ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳಾಗಿದ್ದಾರೆ.

ಸದ್ಯ ಮುಂಬೈನ ಟಾಟಾ ಸ್ಮಾರಕ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ. ಮುಂದೆ ಪಿಎಚ್.ಡಿ ಮಾಡಬೇಕು ಅಂದುಕೊಂಡಿದ್ದೇನೆ
ಡಾ.ಬಿ.ಎಸ್. ಗಿರೀಶ್
6 ಚಿನ್ನದ ಪದಕ ವಿಜೇತ

ಪರೀಕ್ಷೆ ಸಮಯದಲ್ಲಿ ಹೆಚ್ಚಿನ ಅವಧಿ ಓದಿದ್ದರಿಂದ ಅಧಿಕ ಅಂಕ ಗಳಿಸಲು ಸಾಧ್ಯವಾಯಿತು. ಮುಂದೆ ಎಂ.ಡಿ. ಮಾಡಬೇಕು ಅಂದುಕೊಂಡಿದ್ದೇನೆ
ಡಾ. ಗನ್ಯಾಶ್ರೀ
4 ಚಿನ್ನದ ಪದಕ ವಿಜೇತೆ

ಬುಧವಾರ, ಮೇ 7, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 126 | ಪುಟ 18


● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಏಟು–ಎದುರೇಟು



ಉಗ್ರರ ದಾಳಿ ಸಾಧ್ಯತೆ ಕುರಿತು ಪಹಲ್ಗಾಮ್ ದುಷ್ಕೃತ್ಯದ ಮೂರು ದಿನಗಳ ಮುನ್ನವೇ ಗುಪ್ತದಳದ ವರದಿ ಬಂದಿತ್ತು. ಹೀಗಾಗಿಯೇ ಪ್ರಧಾನಿ ನರೇಂದ್ರ ಮೋದಿ ಕಾಶ್ಮೀರ ಪ್ರವಾಸ ರದ್ದುಪಡಿಸಿದ್ದರು.

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ



ಪ್ರಸ್ತುತ ಪರಿಸ್ಥಿತಿಯಲ್ಲಿ ಖರ್ಗೆ ಅವರು ಬೇಜವಾಬ್ದಾರಿ ಹೇಳಿಕೆ ನೀಡಬಾರದಿತ್ತು. ಈ ಹೇಳಿಕೆ ಮೂಲಕ ಅವರೂ ಸಹ ರಾಷ್ಟ್ರೀಯ ಭದ್ರತೆಯ ವಿಷಯದಲ್ಲಿ ವಿವಾದಿತ ಹೇಳಿಕೆ ನೀಡುವ ಅವರ ಪಕ್ಷದ 'ಬ್ರಿಗೇಡ್' ಸೇರಿಕೊಂಡಿದ್ದಾರೆ.

ರವಿಶಂಕರ್ ಪ್ರಸಾದ್, ಬಿಜೆಪಿ ನಾಯಕ

ಆಳ–ಅಗಲ: ಸ್ವರಕ್ಷಣೆ ತಾಲೀಮು ಭಾರತ ಯುದ್ಧ ಸನ್ನದ್ಧ?

ಬ್ರಿಟನ್ನಿನ ಸ್ಕಾಚ್ ವಿಸ್ಕಿ, ಕಾರು ಅಗ್ಗ 12

ಆಸ್ತಿ ವಿವರ ನೀಡಿದ ನ್ಯಾಯಮೂರ್ತಿಗಳು 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,641 ▼	24,379 ▼	₹1.01 ಲಕ್ಷ (ಬೆಂಗಳೂರು) ▲	₹1.01 ಲಕ್ಷ (ಬೆಂಗಳೂರು) ▲	84.35 ▼

ಅಣು ಸ್ಥಾವರ, ತೈಲ ಸಂಸ್ಕರಣಾ ಘಟಕಗಳಿಗೆ 'ಹೊದಿಕೆ' ● ನಾಗರಿಕರಿಗೆ ತರಬೇತಿ

ವಾಯುಪಡೆ ಸಮರಾಭ್ಯಾಸ

ನವದೆಹಲಿ(ಪಿಟಿಐ): ಪಾಕಿಸ್ತಾನಕ್ಕೆ ಹೊಂದಿಕೊಂಡ ಗಡಿ ಪ್ರದೇಶದಲ್ಲಿ ವಾಯುಪಡೆಯು ಬುಧವಾರದಿಂದ ಎರಡು ದಿನಗಳವರೆಗೆ ಬಹುದೊಡ್ಡ ಸಮರಾಭ್ಯಾಸ ನಡೆಸಲಿದೆ.

ಈ ಸಂಬಂಧ ನಾಗರಿಕ ವಿಮಾನ ಯಾನದ ಪ್ರಾಧಿಕಾರಗಳು 'ನೋಟಮ್' (ನೋಟಿಸ್ ಟು ಏರ್‌ಮೆನ್) ಹೊರಡಿಸಿವೆ.

ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಯಲ್ಲಿ 26 ಮಂದಿ ಮೃತಪಟ್ಟ ಬಳಿಕ ಭಾರತ-ಪಾಕ್ ಮಧ್ಯೆ ಉದ್ವಿಗ್ನ ವಾತಾವರಣ ನಿರ್ಮಾಣವಾಗಿರುವ ಹೊತ್ತಿನಲ್ಲೇ ವಾಯುಪಡೆ ಈ ತಾಲೀಮು ನಡೆಸುತ್ತಿದೆ. ನೆಲ ಮತ್ತು ವಾಯು ಪ್ರದೇಶದಲ್ಲಿನ ಶತ್ರು ಪಾಳಯದ ಗುರಿಗಳನ್ನು ಅತ್ಯಂತ ನಿಖರವಾಗಿ ನಾಶ ಮಾಡಲು ಈ ತಾಲೀಮು ನಡೆಯಲಿದೆ ಎಂದು ಮೂಲಗಳು ಹೇಳಿವೆ.

ವಾಯುಪಡೆ ಮುಖ್ಯಸ್ಥ ಎ.ಪಿ.ಸಿಂಗ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಾನುವಾರ ಭೇಟಿ ಮಾಡಿ, ಯುದ್ಧ ಸನ್ನದ್ಧತೆ ಕುರಿತು ವಿವರಿಸಿದ್ದರು. ನೌಕಾಪಡೆ ಮುಖ್ಯಸ್ಥ ದಿನೇಶ್ ಕೆ.ತ್ರಿಪಾಠಿ ಕೂಡ ಪ್ರಧಾನಿ ಮೋದಿ ಅವರನ್ನು ಶನಿವಾರ ಭೇಟಿ ಮಾಡಿ, ಕಡಲ ಗಡಿ ಪರಿಸ್ಥಿತಿ ಕುರಿತು ವಿವರಿಸಿದ್ದರು.



ಭಾರತ–ಪಾಕಿಸ್ತಾನ ಗಡಿಯ ದಕ್ಷಿಣ ಮತ್ತು ಪಶ್ಚಿಮ ಭಾಗದಲ್ಲಿ ಈ ಸಮರಾಭ್ಯಾಸ ನಡೆಯಲಿದೆ

ರಫೇಲ್, ಸುಖೋಯ್–30 ಎಂಕೆಐ, ಮಿಗ್–29, ಮಿರಾಜ್–2000, ತೇಜಸ್, ಜಾಗ್ವಾರ್ ಸೇರಿದಂತೆ ವಿವಿಧ ಯುದ್ಧ ವಿಮಾನಗಳು ಈ ಸಮರಾಭ್ಯಾಸದಲ್ಲಿ ಪಾಲ್ಗೊಳ್ಳಲಿವೆ



ನ್ಯಾಯಸಮ್ಮತವಾಗಿ ಭಾರತಕ್ಕೆ ಸೇರಿದ್ದ ನೀರು ದೇಶದಿಂದ ಹೊರಗೆ ಹರಿಯುತ್ತಿತ್ತು. ಈಗ ಆ ನೀರು ಭಾರತದ ಒಳಿತಿಗಾಗಿ ಹರಿಯಲಿದೆ. ದೇಶಕ್ಕಾಗಿ ಬಳಕೆಯಾಗಲಿದೆ

ನರೇಂದ್ರ ಮೋದಿ, ಪ್ರಧಾನಿ

ಸ್ವರಕ್ಷಣೆ ತಾಲೀಮಿಗೆ ದೇಶ ಸಜ್ಜು

300 'ನಾಗರಿಕ ರಕ್ಷಣಾ ಜಿಲ್ಲೆ'ಗಳಲ್ಲಿ ಬುಧವಾರ ಸ್ವರಕ್ಷಣೆ ತಾಲೀಮು ನಡೆಸಲು ಕೇಂದ್ರ ಗೃಹ ಸಚಿವಾಲಯ ಸಜ್ಜಾಗಿದೆ.

ಅಣು ಸ್ಥಾವರಗಳು, ಸೇನಾ ನೆಲೆಗಳು, ತೈಲ ಸಂಸ್ಕರಣಾ ಘಟಕಗಳು, ಜಲವಿದ್ಯುತ್ ಸ್ಥಾವರಗಳು ಸೇರಿದಂತೆ ಸೂಕ್ಷ್ಮ ತಾಣಗಳನ್ನು ಈ ಸಂದರ್ಭದಲ್ಲಿ ಮುಚ್ಚಲಾಗುತ್ತದೆ. ಶತ್ರು ರಾಷ್ಟ್ರದಿಂದ ದಾಳಿ ನಡೆದ ಸಂದರ್ಭದಲ್ಲಿ ಸುರಕ್ಷಿತವಾಗಿ ಪಾರಾಗುವ ಕುರಿತು ನಾಗರಿಕರಿಗೆ ತರಬೇತಿ ನೀಡುವುದು, ವೈಮಾನಿಕ ದಾಳಿ ಕುರಿತು ಎಚ್ಚರಿಕೆ ನೀಡಲು ಸೈರನ್‌ಗಳನ್ನು ಮೊಳಗಿಸುವುದು ಹಾಗೂ ಬಂಕರ್‌ಗಳನ್ನು ಸ್ವಚ್ಛಗೊಳಿಸುವ ಕಾರ್ಯಗಳನ್ನು ಈ ತಾಲೀಮು ಒಳಗೊಂಡಿದೆ.

10ನೇ ಪುಟ ನೋಡಿ

ಬೆಂಗಳೂರಿನಲ್ಲಿ ಇಂದು ಅಭ್ಯಾಸ

ಬೆಂಗಳೂರು: ವಾಯುದಾಳಿ ನಡೆದರೆ ನಾಗರಿಕರು ಸ್ವರಕ್ಷಣೆಗಾಗಿ ಅನುಸರಿಸಬೇಕಾದ ಕ್ರಮಗಳ ಕುರಿತು ತಾಲೀಮು ನಡೆಸಲು ರಾಜ್ಯದಲ್ಲೂ ಸಿದ್ಧತೆಗಳು ನಡೆದಿವೆ. ಕೇಂದ್ರ ಗೃಹ ಇಲಾಖೆ ಸೂಚನೆ ಮೇರೆಗೆ ಈ ತಾಲೀಮು ನಡೆಯುತ್ತಿದೆ

6

ಜನಾರ್ದನ ರೆಡ್ಡಿಗೆ 7 ವರ್ಷ ಜೈಲು

ಗಣಿ ಅಕ್ರಮ: 14 ವರ್ಷ ವಿಚಾರಣೆ ● ತೀರ್ಪು ಪ್ರಕಟಿಸಿದ ಸಿಬಿಐ ವಿಶೇಷ ಕೋರ್ಟ್

ಪ್ರಜಾವಾಣಿ ವಾರ್ತೆ



ಜನಾರ್ದನ ರೆಡ್ಡಿ

ನವದೆಹಲಿ: ಕರ್ನಾಟಕ–ಆಂಧ್ರಪ್ರದೇಶ ಅಂತರರಾಜ್ಯ ಗಡಿ ಭಾಗದಲ್ಲಿ ಅಕ್ರಮ ಗಣಿಗಾರಿಕೆ ನಡೆಸಿ ಸರ್ಕಾರದ ಬೊಕ್ಕಸಕ್ಕೆ ₹884 ಕೋಟಿ ನಷ್ಟ ಉಂಟು ಮಾಡಿರುವ ಪ್ರಕರಣದಲ್ಲಿ ಗಂಗಾವತಿ ಶಾಸಕ ಜಿ.ಜನಾರ್ದನ ರೆಡ್ಡಿ ಹಾಗೂ ಇತರ ಮೂವರನ್ನು ಹೈದರಾಬಾದ್‌ನ ಸಿಬಿಐ ವಿಶೇಷ ನ್ಯಾಯಾಲಯವು ದೋಷಿಗಳೆಂದು ಮಂಗಳವಾರ ತೀರ್ಪು ನೀಡಿದೆ.

ನ್ಯಾಯಾಲಯವು ಅಪರಾಧಿಗಳಿಗೆ ಏಳು ವರ್ಷಗಳ ಜೈಲು ಶಿಕ್ಷೆ ಮತ್ತು ತಲಾ ₹10,000 ದಂಡ ವಿಧಿಸಿದೆ. ರೆಡ್ಡಿ ಅವರು ಎರಡನೇ ಅಪರಾಧಿಯಾಗಿದ್ದಾರೆ. ನ್ಯಾಯಾಲಯವು ಜನಾರ್ದನ ರೆಡ್ಡಿ ಒಡೆತನದ ಓಬುಳಾಪುರಂ ಮೈನಿಂಗ್ ಕಂಪನಿಗೆ (ಒಎಂಸಿ) ₹1 ಲಕ್ಷ ದಂಡ ವಿಧಿಸಿದೆ. ತೀರ್ಪಿನ ನಂತರ ರೆಡ್ಡಿ ಮತ್ತು ಇತರರನ್ನು ಸಿಬಿಐ ವಶಕ್ಕೆ ಪಡೆಯಿತು. ಸುಮಾರು 14 ವರ್ಷಗಳ ಸುದೀರ್ಘ ವಿಚಾರಣೆಯ ಬಳಿಕ ಪ್ರಧಾನ ವಿಶೇಷ ನ್ಯಾಯಾಧೀಶ ಟಿ.ರಘುರಾಮ್ ತೀರ್ಪು ಪ್ರಕಟಿಸಿದರು.

ಕರ್ನಾಟಕ-ಆಂಧ್ರಪ್ರದೇಶದ ಗಡಿಯಲ್ಲಿರುವ ಬಳ್ಳಾರಿ ಮೀಸಲು ಅರಣ್ಯ ಪ್ರದೇಶದಲ್ಲಿ ಅಂತರ ರಾಜ್ಯ ಗಡಿ ಗುರುತುಗಳನ್ನು ನಾಶ ಮಾಡಿ ವ್ಯಾಪಕ ಪ್ರಮಾಣದಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಸಿದ್ದಾರೆ ಎಂದು ಆರೋಪಿಸಿ ರೆಡ್ಡಿ ಮತ್ತು ಇತರರ ವಿರುದ್ಧ ಸಿಬಿಐ 2011ರಲ್ಲಿ ಆರೋಪಪಟ್ಟಿ ಸಲ್ಲಿಸಿತ್ತು.

5ನೇ ಪುಟ ನೋಡಿ

ಅಪರಾಧಿಗಳು ಯಾರು?

- **ಒಎಂಸಿ ವ್ಯವಸ್ಥಾಪಕ ನಿರ್ದೇಶಕ ಬಿ.ವಿ. ಶ್ರೀನಿವಾಸ ರೆಡ್ಡಿ** (ಮೊದಲ ಅಪರಾಧಿ)
- **ಜನಾರ್ದನ ರೆಡ್ಡಿ** (ಎರಡನೇ ಅಪರಾಧಿ)
(ಮೇಲಿನ ಇಬ್ಬರೂ ಕರ್ನಾಟಕದವರು)
- **ವಿ.ಡಿ.ರಾಜಗೋಪಾಲ್** (ಮೂರನೇ ಅಪರಾಧಿ)
- **ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಆಗಿನ ನಿರ್ದೇಶಕ ಮೆಹಫುಜ್ ಅಲಿ ಖಾನ್** (ಏಳನೇ ಅಪರಾಧಿ) (ಮೇಲಿನ ಇಬ್ಬರೂ ಆಂಧ್ರಪ್ರದೇಶದವರು)

ಖುಲಾಸೆ

- **ಮಾಜಿ ಸಚಿವೆ ಸಬಿತಾ ಇಂದ್ರ ರೆಡ್ಡಿ**
- **ಮಾಜಿ ಅಧಿಕಾರಿ ಬಿ. ಕೃಪಾನಂದಂ**
(ಮೇಲಿನ ಇಬ್ಬರೂ ಆಂಧ್ರಪ್ರದೇಶದವರು)

ಕೆಆರ್‌ಪಿಪಿ ಸ್ಥಾಪಿಸಿ ಮತ್ತೆ ಬಿಜೆಪಿ ಸೇರಿದ್ದ ರೆಡ್ಡಿ

ಜನಾರ್ದನ ರೆಡ್ಡಿ ಅವರು 2023ರ ವಿಧಾನಸಭಾ ಚುನಾವಣೆಗೆ ಮುನ್ನ ಕಲ್ಯಾಣ ರಾಜ್ಯ ಪ್ರಗತಿ ಪಕ್ಷ (ಕೆಆರ್‌ಪಿಪಿ) ಸ್ಥಾಪಿಸಿದ್ದರು.

ಕೆಆರ್‌ಪಿಪಿ ಹಲವು ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ಆದರೆ, ಜನಾರ್ದನ ರೆಡ್ಡಿ ಮಾತ್ರ ಆ ಪಕ್ಷದಿಂದ ಜಯ ಗಳಿಸಿದ್ದರು.

ಆದಾಗ್ಯೂ, 2024ರ ಲೋಕಸಭಾ ಚುನಾವಣೆಗೆ ಮುನ್ನ ಅವರು ತಮ್ಮ ಪಕ್ಷವನ್ನು ಬಿಜೆಪಿಯೊಂದಿಗೆ ವಿಲೀನಗೊಳಿಸಿದ್ದರು.



ತಕ್ಷಣದಿಂದಲೇ ಸದಸ್ಯತ್ವ ಅನರ್ಹ

ಬೆಂಗಳೂರು: ಸುಪ್ರೀಂ ಕೋರ್ಟ್ 2013ರಲ್ಲಿ ಲಿಲ್ಲಿ ಥಾಮಸ್ (ಲೋಕ ಪ್ರಹರಿ) ಪ್ರಕರಣದಲ್ಲಿ ನೀಡಿರುವ ತೀರ್ಪಿನ ಅನುಸಾರ ಯಾವುದೇ ಶಾಸಕ ಅಥವಾ ಸಂಸದ ಕ್ರಿಮಿನಲ್ ಪ್ರಕರಣದಲ್ಲಿ 2 ವರ್ಷಗಳಿಗೂ ಹೆಚ್ಚಿನ ಶಿಕ್ಷೆಗೆ ಗುರಿಯಾದರೆ ಅಂಥವರ ಸದಸ್ಯತ್ವವು ಶಿಕ್ಷೆ ಪ್ರಕಟವಾದ ತಕ್ಷಣದಿಂದಲೇ ಅನರ್ಹವಾಗುತ್ತದೆ.

ಶಿಕ್ಷೆಗೆ ಸಕ್ಷಮ ನ್ಯಾಯಾಲಯ ಅಥವಾ ಮೇಲ್ಮನವಿ ವಿಚಾರಣೆಯ ನ್ಯಾಯಾಲಯ ತಡೆ ನೀಡದೆ ಹೋದರೆ ಅನರ್ಹತೆ ಕಾಯಂಗೊಳ್ಳುತ್ತದೆ ಮತ್ತು ಅವರು ಪ್ರತಿನಿಧಿಸುವ ಕ್ಷೇತ್ರವು ಖಾಲಿ ಎಂದು ಘೋಷಿತವಾಗುತ್ತದೆ.

ವಿಶ್ವಸಂಸ್ಥೆಯಲ್ಲಿ ಪಾಕಿಸ್ತಾನಕ್ಕೆ ತರಾಟೆ

ನ್ಯೂಯಾರ್ಕ್ (ಪಿಟಿಐ): ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ವಿಚಾರವು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಯಲ್ಲಿ ಪ್ರಸ್ತಾಪವಾಗಿದ್ದು, ಈ ಕುರಿತು ಮಂಡಳಿಯ ಸದಸ್ಯ ರಾಷ್ಟ್ರಗಳು ಕಠಿಣ ಪ್ರಶ್ನೆಗಳನ್ನು ಕೇಳುವ ಮೂಲಕ ಪಾಕಿಸ್ತಾನವನ್ನು ತರಾಟೆಗೆ ತೆಗೆದುಕೊಂಡಿವೆ.

ದಾಳಿಗೆ ಜಾಗತಿಕವಾಗಿ ಖಂಡನೆ ವ್ಯಕ್ತವಾಗಿರುವ ಜೊತೆಗೆ, ಈಗ ಭದ್ರತಾ ಮಂಡಳಿ ಕೂಡ ಪಾಕಿಸ್ತಾನ-ವನ್ನು ತರಾಟೆಗೆ ತೆಗೆದುಕೊಂಡಿರುವುದು ಗಮನಾರ್ಹ. ಮುಖ್ಯ ಸಭಾಂಗಣದ ಬದಲಾಗಿ ಸಮಾಲೋಚನೆಗೆ ಮೀಸಲಾದ ಕೊಠಡಿಯೊಂದರಲ್ಲಿ ಮಂಡಳಿಯ ಸಭೆ ನಡೆದಿದೆ. ಪಹಲ್ಗಾಮ್‌ನಲ್ಲಿ ನಡೆದ ದಾಳಿಗೆ ಸಂಬಂಧಿಸಿ ಮಂಡಳಿಯ ಸದಸ್ಯ ರಾಷ್ಟ್ರಗಳು ತನಗೆ ಅನುಕೂಲಕರವಾದ ನಿಲುವು ಪ್ರಕಟಿಸಬೇಕು ಎಂಬ ದೃಷ್ಟಿಯಿಂದ ಪಾಕಿಸ್ತಾನ ನಡೆಸಿದ ಪ್ರಯತ್ನವು ಫಲ ನೀಡಿಲ್ಲ.

ಸಭೆ ಬಳಿಕ ಭದ್ರತಾ ಮಂಡಳಿಯು ಈ ವಿಚಾರವಾಗಿ ಹೇಳಿಕೆ ಬಿಡುಗಡೆ ಮಾಡಲು ನಿರಾಕರಿಸಿತು. ಆದರೆ, ತನ್ನ ಉದ್ದೇಶ ಈಡೇರಿದಂತಾಗಿದೆ ಎಂದು ಪಾಕಿಸ್ತಾನ ಪ್ರತಿಕ್ರಿಯೆ ನೀಡಿದೆ.

ಪಾಕಿಸ್ತಾನವು ಮಂಡಳಿಯ ಕಾಯಂ ಅಲ್ಲದ ಸದಸ್ಯ ರಾಷ್ಟ್ರ. ಮೇ ತಿಂಗಳಿಗೆ ಸಂಬಂಧಿಸಿ ವಿಶ್ವಸಂಸ್ಥೆ ಭದ್ರತಾ ಮಂಡಳಿ ಅಧ್ಯಕ್ಷ ಸ್ಥಾನವನ್ನು ಗ್ರೀಸ್ ದೇಶ ವಹಿಸಿಕೊಂಡಿದೆ. ಪಾಕಿಸ್ತಾನದ ಮನವಿ ಮೇರೆಗೆ ಗ್ರೀಸ್ ಈ ಸಭೆ ಕರೆದಿತ್ತು.

ಮಾನವಸಹಿತ ಗಗನಯಾನ 2027ಕ್ಕೆ ನಿಗದಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಭಾರತದ ಚೊಚ್ಚಲ ಮಾನವಸಹಿತ ಗಗನಯಾನ ಬಾಹ್ಯಾಕಾಶ ಕಾರ್ಯಕ್ರಮವನ್ನು 2027ರ ಮೊದಲ ತ್ರೈಮಾಸಿಕದಲ್ಲಿ ಕಾರ್ಯಗತಗೊಳಿಸಲು ಇಸ್ರೊ ನಿರ್ಧರಿಸಿದೆ.

ಈ ಮೊದಲು ನಿಗದಿ ಮಾಡಲಾಗಿದ್ದ ಸಮಯಕ್ಕಿಂತ ಐದು ವರ್ಷ ತಡವಾಗಿ ಈ ಮಹತ್ವಾಕಾಂಕ್ಷಿ ಯೋಜನೆ ಅನುಷ್ಠಾನಗೊಳ್ಳಲಿದೆ.

ಮಂಗಳವಾರ ಸುದ್ದಿ-ಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಇಸ್ರೊ ಅಧ್ಯಕ್ಷ ವಿ.ನಾರಾಯಣನ್, 'ಮಾನವ ಸಹಿತ ಗಗನಯಾನ ಬಹಳ ಸಂಕೀರ್ಣವಾದ ಯೋಜನೆ. ಇದಕ್ಕೆ ಅಗತ್ಯವಿರುವ ತಂತ್ರಜ್ಞಾನಗಳನ್ನು ಸಂಸ್ಥೆ ಅಭಿವೃದ್ಧಿಪಡಿಸುತ್ತಿರುವ ಕಾರಣ ಯೋಜನೆಯನ್ನು ಮುಂದೂಡಲಾಗಿದೆ' ಎಂದರು.

10ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮ ಜಾರಿ: ಮೊದಲು ₹50 ಸಾವಿರ, ನಂತರ ₹1 ಲಕ್ಷ ದಂಡ

ಅನಧಿಕೃತ ಬಡಾವಣೆ: ಅಧಿಕಾರಿಗಳಿಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಧಿಕೃತ ಬಡಾವಣೆ ಹಾಗೂ ಅನುಮೋದಿತ ಬಡಾವಣೆಯಲ್ಲಿನ ನಕ್ಷೆ ಉಲ್ಲಂಘನೆಗೆ ಅನುವು ಮಾಡಿಕೊಡುವ ಅಧಿಕಾರಿಗಳಿಗೆ ₹50 ಸಾವಿರದಿಂದ ₹1 ಲಕ್ಷ ದಂಡ ವಿಧಿಸಲು ಸರ್ಕಾರ ನಿರ್ಧರಿಸಿದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ಕೆಟಿಸಿಪಿ) ಕಾಯ್ದೆ 1961ಕ್ಕೆ ತಿದ್ದುಪಡಿ ತರಲಾಗಿದ್ದು, 'ಕರ್ನಾಟಕ ಯೋಜನಾ ಪ್ರಾಧಿಕಾರ'ದ ಹೆಸರಿನಲ್ಲಿ ನಿಯಮಗಳನ್ನು ರೂಪಿಸಿದೆ. ಅನಧಿಕೃತ ಬಡಾವಣೆಗಳು ನಿರ್ಮಾಣವಾದರೆ ಯಾರ ಮೇಲೆ ಕ್ರಮ ಕೈಗೊಳ್ಳಬಹುದು ಎಂಬುದನ್ನು ಅವರ ವ್ಯಾಪ್ತಿಯನ್ನು ನಿರ್ಧರಿಸಿ ಅಧಿಸೂಚಿಸಲಾಗಿದೆ.

ಜವಾಬ್ದಾರಿ ನಿಗದಿಯಾಗಿರುವ ಅಧಿಕಾರಿಯ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆ ಹಾಗೂ ಬಡಾವಣೆ ನಿರ್ಮಾಣದಲ್ಲಿ ನಕ್ಷೆ ಉಲ್ಲಂಘಿಸಿದ ಪ್ರಕರಣಗಳಿದ್ದರೆ, ಅವರಿಗೆ ಮೊದಲ ಪ್ರಕರಣದಲ್ಲಿ ₹50 ಸಾವಿರ ದಂಡ ವಿಧಿಸಲಾಗುತ್ತದೆ. ನಂತರದ ಪ್ರಕರಣಕ್ಕೆ ₹1 ಲಕ್ಷ ದಂಡ ವಿಧಿಸಲಾಗುತ್ತದೆ. ಮೂರು ಹಾಗೂ ನಂತರ ಪ್ರಕರಣ ಕಂಡು ಬಂದರೆ, ಕರ್ನಾಟಕ ನಾಗರಿಕ ಸೇವಾ ನಿಯಮಗಳಂತೆ ಶಿಸ್ತುಕ್ರಮ ತೆಗೆದುಕೊಳ್ಳಲಾಗುತ್ತದೆ. ಯಾವ ಅಧಿಕಾರಿಗೆ ಯಾವ ಹೊಣೆ ಎಂಬುದನ್ನೂ ನಿಯಮದಲ್ಲಿ ವಿವರಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಗಳು ಇರದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಬಿಡಿಎ ಆಯುಕ್ತರು ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ವಹಿಸಲಾಗಿದೆ. ಬಿಬಿಎಂಪಿ ಹೊರಗಿನ ಪ್ರದೇಶಗಳಲ್ಲಿ ಬಿಡಿಎ ಆಯುಕ್ತರು ಮತ್ತು ಆಯಾ ಸ್ಥಳೀಯ ಸಂಸ್ಥೆಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ (ಪಿಡಿಒ) ಹೊಣೆ ಹೊರಿಸಲಾಗಿದೆ.

ಇವರ ಮೇಲೆ ಕ್ರಮಕೈಗೊಳ್ಳುವ, ದಂಡ ವಿಧಿಸುವ ಅಧಿಕಾರವನ್ನು ಬಿಎಂಆರ್‌ಡಿಎ ಮೆಟ್ರೊಪಾಲಿಟನ್ ಆಯುಕ್ತರು ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ನೀಡಲಾಗಿದೆ.

ನಗರಸ್ಥಳೀಯ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ಸಂಬಂಧಪಟ್ಟ ಆಯುಕ್ತರು, ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ಪ್ರಾಧಿಕಾರದ ಮುಖ್ಯ ಅಧಿಕಾರಿಗೆ ಅನಧಿಕೃತ ನಿರ್ಮಾಣ ತಡೆಯುವ ಜವಾಬ್ದಾರಿ ನೀಡಲಾಗಿದೆ. ಇವರ ಮೇಲೆ ಕ್ರಮ ಕೈಗೊಳ್ಳುವ, ದಂಡ ವಿಧಿಸುವ ಅಧಿಕಾರವನ್ನು ಬಿಎಂಆರ್‌ಡಿಎ ಮೆಟ್ರೊಪಾಲಿಟನ್ ಆಯುಕ್ತರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ವಹಿಸಲಾಗಿದೆ.

ಬೆಂಗಳೂರು ಮೆಟ್ರೊಪಾಲಿಟನ್ ವಲಯ (ಬಿಎಂಆರ್) ಹೊರತುಪಡಿಸಿ ಪ್ರದೇಶಗಳಲ್ಲಿ, ಆಯಾ ಸ್ಥಳೀಯ ಸಂಸ್ಥೆಗಳ ಆಯುಕ್ತರು, ಮುಖ್ಯ ಅಧಿಕಾರಿ, ಪಿಡಿಒ, ಸ್ಥಳೀಯ ನಗರ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅವರಿಗೆ ಅನಧಿಕೃತ ನಿರ್ಮಾಣ ತಡೆಯುವ ಅಧಿಕಾರ ನೀಡಲಾಗಿದೆ. ಇವರು ವಿಫಲರಾದರೆ, ಅವರ ಮೇಲೆ ಕ್ರಮ ಹಾಗೂ ದಂಡ ವಿಧಿಸುವ ಹೊಣೆಯನ್ನು ನಗರಾಭಿವೃದ್ಧಿ ಇಲಾಖೆ ಅಧಿಕಾರಿಗೆ ನೀಡಲಾಗಿದೆ.

ಜವಾಬ್ದಾರಿ ಹೊಂದಿರುವ ಅಧಿಕಾರಿ ತನ್ನ ಮೇಲಿನ ದಂಡ ಹಾಗೂ ಶಿಸ್ತುಕ್ರಮದ ಬಗ್ಗೆ 45 ದಿನಗಳಲ್ಲಿ ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸಬಹುದು. ಈ ಬಗ್ಗೆ ಕೂಲಂಕಷವಾದ ವಿಚಾರಣೆ ನಡೆಸಿ, ಮೇಲ್ಮನವಿ ಪ್ರಾಧಿಕಾರ ಅಧಿಕಾರಿ 90 ದಿನದಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಅಧಿಸೂಚನೆಯಲ್ಲಿ ಸ್ಪಷ್ಟಪಡಿಸಲಾಗಿದೆ.

ಮುಖ್ಯಾಂಶಗಳು

- ಬಿಬಿಎಂಪಿ ಮುಖ್ಯ ಆಯುಕ್ತ, ಬಿಡಿಎ ಆಯುಕ್ತರಿಗೆ ಜವಾಬ್ದಾರಿ
- ನಗರ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ಪಿಡಿಓಗಳಿಗೆ ಹೊಣೆ

ಒತ್ತುವರಿ ತೆರವು ನಿರ್ಲಕ್ಷ್ಯ: ಇಬ್ಬರ ಅಮಾನತು

ಸರ್ಕಾರಿ ಜಮೀನು ಒತ್ತುವರಿಯನ್ನು ತೆರವುಗೊಳಿಸಲು ವಿಫಲರಾದ ಇಬ್ಬರು ಅಧಿಕಾರಿಗಳನ್ನು ನಗರ ಜಿಲ್ಲಾಧಿಕಾರಿ ಜಿ. ಜಗದೀಶ ಅವರು ಅಮಾನತುಗೊಳಿಸಿದ್ದಾರೆ.

ಯಲಹಂಕ ತಾಲ್ಲೂಕಿನ ಜಾಲ ಹೋಬಳಿಯ ಬೆಟ್ಟಹಲಸೂರು ವೃತ್ತದ ಗ್ರಾಮ ಆಡಳಿತ ಅಧಿಕಾರಿ ರೂಪೇಶ್ ಹಾಗೂ ತರಬನಹಳ್ಳಿ, ಹುತ್ತನಹಳ್ಳಿ ವೃತ್ತದ ಗ್ರಾಮ ಆಡಳಿತ ಅಧಿಕಾರಿ ರಘುನಾಥ್ ಬಿ.ಎ ಅಮಾನತುಗೊಂಡಿದ್ದಾರೆ.

ಯಲಹಂಕ ತಾಲ್ಲೂಕಿನ ಜಾಲ -2 ಹೋಬಳಿಯ ಬೆಟ್ಟಹಲಸೂರು ಗ್ರಾಮದ ಸ.ನಂ 198, ಸೊಣ್ಣೇನ ಗ್ರಾಮದ ಸ.ನಂ 45ರಲ್ಲಿ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ ಸರ್ಕಾರಿ ಜಮೀನು ಹಾಗೂ ಚಿಕ್ಕಜಾಲ ಗ್ರಾಮದ ಸ.ನಂ.76ರಲ್ಲಿ ಸರ್ಕಾರಿ ಗೋಮಾಳದ ಒತ್ತುವರಿ ತೆರವು ಮಾಡಲು ಅಧಿಕಾರಿಗಳು ಬೇಜವಾಬ್ದಾರಿ ಮತ್ತು ನಿರ್ಲಕ್ಷ್ಯ ತೋರಿದ್ದರಿಂದ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ನೋಟಿಸ್: ಯಲಹಂಕ ತಾಲ್ಲೂಕಿನ ಜಾಲ-2 ಹೋಬಳಿಯ ಹುಣಸಮಾರನಹಳ್ಳಿ ವೃತ್ತದ ಗ್ರಾಮ ಆಡಳಿತ ಅಧಿಕಾರಿ ಹಾಗೂ ಬೆಟ್ಟಹಲಸೂರು ವೃತ್ತದಲ್ಲಿ ರಾಜಸ್ವ ನಿರೀಕ್ಷಕರಾಗಿ ಹೆಚ್ಚುವರಿ ಪ್ರಭಾರದಲ್ಲಿ ನಿಯೋಜನೆಗೊಂಡಿರುವ ರಂಗೇಗೌಡ ಹಾಗೂ ಯಲಹಂಕ ತಾಲ್ಲೂಕಿನ ದೊಡ್ಡಜಾಲ ವೃತ್ತದ ಆರ್.ಐ ಪುರುಷೋತ್ತಮ್ ಅವರು ಸರ್ಕಾರಿ ಸ್ವತ್ತು ಸಂರಕ್ಷಿಸುವಲ್ಲಿ ವಿಫಲರಾಗಿರುವ ಹಿನ್ನೆಲೆಯಲ್ಲಿ ಅವರಿಗೆ ಜಿಲ್ಲಾಧಿಕಾರಿ ನೋಟಿಸ್ ಜಾರಿ ಮಾಡಿದ್ದಾರೆ.

ಸುದ್ದಿ 2 ನಿಮಿಷ

ಡಾ. ವಿಜಯಲಕ್ಷ್ಮಿ ದೇಶಮಾನೆಗೆ 'ಯಶೋಧರಮ್ಮ ದಾಸಪ್ಪ ಪ್ರಶಸ್ತಿ'

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರ ನೀಡುವ 2025ನೇ ಸಾಲಿನ 'ಯಶೋಧರಮ್ಮ ದಾಸಪ್ಪ ಪ್ರಶಸ್ತಿ'ಗೆ ಕ್ಯಾನ್ಸರ್ ತಜ್ಞೆ ಡಾ. ವಿಜಯಲಕ್ಷ್ಮಿ ದೇಶಮಾನೆ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹15 ಸಾವಿರ ನಗದು, ಕಂಚಿನ ಫಲಕ ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ.

'ಡಾ. ವಿಜಯಲಕ್ಷ್ಮಿ ದೇಶಮಾನೆ ಅವರು ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಕ್ಯಾನ್ಸರ್ ವಿರುದ್ಧ ಹೋರಾಡುವ ಜನರಿಗೆ ಸಹಾಯ ಮಾಡಿದ್ದಾರೆ. ಆರ್ಥಿಕವಾಗಿ ಹಿಂದುಳಿದ ಕ್ಯಾನ್ಸರ್ ಪೀಡಿತರಿಗೆ ಉಚಿತ ಚಿಕಿತ್ಸೆಯನ್ನು ನೀಡಿದ್ದಾರೆ. ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ಸ್ತನ ಕ್ಯಾನ್ಸರ್ ಸಂಶೋಧನೆಯಲ್ಲಿ ಪ್ರವರ್ತಕರಾಗಿರುವ ವಿಜಯಲಕ್ಷ್ಮಿ ಅವರು ಗಂಥಿ ಕ್ಷೇತ್ರಕ್ಕೂ ಗಮನಾರ್ಹ ಕೊಡುಗೆ ನೀಡಿರುವ ಪರಿಣಾಮಕಾರಿ ಅಧ್ಯಯನಗಳನ್ನು ನಡೆಸಿದ್ದಾರೆ' ಎಂದು ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ತಿಳಿಸಿದ್ದಾರೆ.

ಮೇ 28ರಂದು ಬೆಂಗಳೂರಿನ ಜೆ.ಸಿ. ರಸ್ತೆಯಲ್ಲಿರುವ ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದು, ರೈತ ಹೋರಾಟಗಾರ್ತಿ ಸುನಂದಾ ಜಯರಾಂ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನಂದಿನಿ ಬಡಾವಣೆ: ಆಸ್ತಿ ವಶ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮಂಗಳವಾರ ಕಾರ್ಯಾಚರಣೆ ನಡೆಸಿ, ರಾಜೀವ್ ಗಾಂಧಿ ನಗರದ ನಂದಿನಿ ಬಡಾವಣೆಯಲ್ಲಿ ₹3.5 ಕೋಟಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿತು.

ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಜರಕಬಂಡೆ ಕಾವಲ್ ಗ್ರಾಮದ ಸರ್ವೆ ನಂ.01ರಲ್ಲಿನ ಸುಮಾರು 2.5 ಗುಂಟೆ ಜಮೀನ ನಿವೇಶನದಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡುತ್ತಿದ್ದ ಕಟ್ಟಡವನ್ನು ತೆರವುಗೊಳಿಸಿ, ಜಾಗವನ್ನು ತನ್ನ ವಶಕ್ಕೆ ಪಡೆದುಕೊಂಡಿತು.

'ಬಿಡಿಎಗೆ ಸೇರಿದ ಜಾಗವನ್ನು ಒತ್ತುವರಿ ಮಾಡಿ, ಕಟ್ಟಡ ನಿರ್ಮಾಣ ಮಾಡಲಾಗುತ್ತಿತ್ತು. ಈ ಬಗ್ಗೆ ಸಂಬಂಧಪಟ್ಟ ವ್ಯಕ್ತಿಗೆ ನೋಟಿಸ್ ನೀಡಿದ್ದರೂ ಕೆಲಸ ಮುಂದುವರಿಸಿದ್ದರು. ಹಾಗಾಗಿ ಜೆಸಿಬಿ ಬಳಸಿ ಕಟ್ಟಡವನ್ನು ನೆಲಸಮ ಮಾಡಿ, ಸ್ವಾಧೀನ ಪಡೆದು ಬೇಲಿ ಹಾಕಲಾಗಿದೆ' ಎಂದು ಕಾರ್ಯಪಾಲಕ ಎಂಜಿನಿಯರ್ ರವಿಕುಮಾರ್ ತಿಳಿಸಿದರು.

ಕಾರ್ಯಾಚರಣೆಯನ್ನು ಬಿಡಿಎ ಕಾರ್ಯನಿರತ ಪಡೆಯ ಡಿವೈಎಸ್‌ಪಿ, ಪಶ್ಚಿಮ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಒಳಗೊಂಡಂತೆ ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ನೆರವೇರಿಸಲಾಯಿತು.

ಭೂಮಿಕಾ ಓದಿರಿ...

2.5 ಕಿ.ಮೀ ಸಂಚರಿಸಿದ ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್

ಸುರಕ್ಷಿತ ಪಾದಚಾರಿ ಮಾರ್ಗ ನಿರ್ಮಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಾಗರಿಕರಿಗೆ ಸುರಕ್ಷಿತ ಮತ್ತು ನಡೆಯಲು ಯೋಗ್ಯವಾದ ಪಾದಚಾರಿ ಮಾರ್ಗಗಳನ್ನು ನಿರ್ಮಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಪಶ್ಚಿಮ ವಲಯ ವ್ಯಾಪ್ತಿಯಲ್ಲಿರುವ ಕೆಂಪೇಗೌಡ ಬಸ್ ನಿಲ್ದಾಣದ (ಮೆಜೆಸ್ಟಿಕ್) ಬಳಿಯ ಗುಬ್ಬಿ ತೋಟದಪ್ಪ ರಸ್ತೆ, ಧನ್ವಂತರಿ ರಸ್ತೆ, ಟ್ಯಾಂಕ್ ಬಂಡ್ ರಸ್ತೆ ಹಾಗೂ ಬಸ್ ಘಟಕ ಸಮೀಪದ ಪಾದಚಾರಿ ರಸ್ತೆಯನ್ನು ಮಂಗಳವಾರ ಮುಂಜಾನೆ 6.30ರಿಂದ 8.30ರವರೆಗೆ ಪರಿವೀಕ್ಷಣೆ ನಡೆಸಿದರು.

'ಬೆಂಗಳೂರಿನಲ್ಲಿ ಪಾದಚಾರಿಗಳಿಗೆ ಮೊದಲ ಸ್ಥಾನ ನೀಡಿ, ಅವರಿಗೆ ಸುಗಮವಾಗಿ ಸಂಚರಿಸುವಂತಹ ಮಾರ್ಗಗಳನ್ನು ನಿರ್ಮಿಸಬೇಕು. ಜೊತೆಗೆ ಪಾದಚಾರಿ ಮಾರ್ಗಗಳನ್ನು ಕಾಲ-ಕಾಲಕ್ಕೆ ಸರಿಯಾಗಿ ನಿರ್ವಹಣೆ ಮಾಡಬೇಕು' ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶಾಂತಲಾ ಸಿಲ್ಕ್ ಜಂಕ್ಷನ್ ಬಳಿ ಬಸ್ ನಿಲ್ದಾಣಕ್ಕೆ ಹೊಂದಿಕೊಂಡಂತಿರುವ ಪಾದಚಾರಿ ಮಾರ್ಗವನ್ನು ವಿಸ್ತರಣೆ ಮಾಡಲು ಆದೇಶಿಸಿದರು.

ಸಂಗೊಳ್ಳಿ ರಾಯಣ್ಣ ಪ್ರತಿಮೆಯಿಂದ ಧನ್ವಂತರಿ ರಸ್ತೆ ಕಡೆ ಹೋಗುವ ಪಾದಚಾರಿ ಮಾರ್ಗದಲ್ಲಿ ಸ್ವಚ್ಛತಾ ಕಾರ್ಯ ನಡೆಸಬೇಕು. ಪಾದಚಾರಿ ಮಾರ್ಗಗಳಲ್ಲಿ ಬಹುತೇಕ ಕಡೆ ಕರ್ಬ್ಸ್ ಹಾಳಾಗಿದ್ದು, ಅವುಗಳನ್ನು ಕೂಡಲೇ ದುರಸ್ತಿಪಡಿಸಬೇಕು. ಒಳಚರಂಡಿಗೆ ಅಳವಡಿಸಿರುವ ಡಕ್ಟ್‌ಗಳ ಮೂಲಕ ಕೊಳಚೆ ನೀರು ಹೊರಬರುತ್ತಿರುವುದನ್ನು ದುರಸ್ತಿ ಮಾಡಬೇಕು ಎಂದು ಸೂಚಿಸಿದರು.

ಬೀದಿಬದಿ ವ್ಯಾಪಾರಕ್ಕೆ ಕಡಿವಾಣ: ಮೆಜೆಸ್ಟಿಕ್ ಸುತ್ತಮುತ್ತಲಿನ ಪ್ರದೇಶದ ಪಾದಚಾರಿ ಮಾರ್ಗಗಳಲ್ಲಿ ವ್ಯಾಪಾರ ಮಾಡುತ್ತಿರುವ ಬೀದಿಬದಿ ವ್ಯಾಪಾರಿಗಳು ಪಾದಚಾರಿಗಳಿಗೆ ಯಾವುದೇ ಸಮಸ್ಯೆಯಾಗದಂತೆ ವ್ಯಾಪಾರ ಮಾಡಬೇಕು ಹಾಗೂ ಸ್ವಚ್ಛತೆ ಕಾಪಾಡಬೇಕು. ಬೀದಿ ಬದಿ ವ್ಯಾಪಾರ ಮಾಡಲು ಗುರುತಿನ ಚೀಟಿ ನೀಡಿದಂತಹ ವ್ಯಾಪಾರಿಗಳನ್ನು ಬಿಟ್ಟು ಉಳಿದವರಿಗೆ ಕಡಿವಾಣ ಹಾಕಲು ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ಒತ್ತುವರಿ ತೆರವು: ಉಪ್ಪಾರಪೇಟೆ ಪೊಲೀಸ್ ಠಾಣೆಯ ಬಳಿಯ ಶೌಚಾಲಯದ ಪಕ್ಕದಲ್ಲಿ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡು ಅನಧಿಕೃತವಾಗಿ ನಿರ್ಮಾಣ ಮಾಡಿಕೊಂಡಿದ್ದ ಗೋಡೆ ಭಾಗವನ್ನು ಕಂಡು ಕೂಡಲೇ ತೆರವುಗೊಳಿಸಲು ಮಹೇಶ್ವರ್ ರಾವ್ ಸೂಚಿಸಿದರು. ಅದರಂತೆ ಮಧ್ಯಾಹ್ನದ ವೇಳೆಗೆ ಒತ್ತುವರಿಯನ್ನು ಎಂಜಿನಿಯರ್ ತೆರವುಗೊಳಿಸಿದರು.

ವಾರ್ಡ್ ರಸ್ತೆಗಳ ದುರಸ್ತಿಗೆ ಆದೇಶ

ಬಿಬಿಎಂಪಿ ವ್ಯಾಪ್ತಿಯ ಎಲ್ಲ ವಾರ್ಡ್ ಎಂಜಿನಿಯರ್‌ಗಳು ಆಯಾ ವಾರ್ಡ್ ವ್ಯಾಪ್ತಿಯಲ್ಲಿರುವ ಎಲ್ಲಾ ರಸ್ತೆಗಳನ್ನು ಪರಿಶೀಲನೆ ಮಾಡಿ, ಪಾದಚಾರಿ ಮಾರ್ಗಗಳ ಒತ್ತುವರಿ, ಬ್ಲಾಕೇಜ್, ಸ್ಲ್ಯಾಬ್ಸ್ ದುರಸ್ತಿ, ಕರ್ಬ್ಸ್ ಹಾಳಾಗಿರುವುದನ್ನು ಪಟ್ಟಿ ಮಾಡಿ, ದುರಸ್ತಿ ಕಾರ್ಯ ಕೈಗೊಳ್ಳಬೇಕು. ವಲಯ ಜಂಟಿ ಆಯುಕ್ತರೂ ಯಾದೃಚ್ಛಿಕವಾಗಿ(ರ್‍ಯಾಂಡಮ್) ಸ್ಥಳಗಳಿಗೆ ಭೇಟಿ ದುರಸ್ತಿಪಡಿಸಿರುವ ಕುರಿತು ಖಾತರಿಪಡಿಸಿಕೊಳ್ಳಬೇಕು ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.



ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಮೆಜೆಸ್ಟಿಕ್‌ನಲ್ಲಿ ಪಾದಚಾರಿ ಮಾರ್ಗಗಳನ್ನು ಮಂಗಳವಾರ ಪರಿಶೀಲಿಸಿದರು

ಎಸ್‌ಡಿಪಿಐ ಕಾರ್ಯದರ್ಶಿ ವಿರುದ್ಧ ಎಫ್‌ಐಆರ್

ಕೊಪ್ಪಳ: ವಕ್ಫ್ ತಿದ್ದುಪಡಿ ಮಸೂದೆ ವಿರೋಧಿಸಿ ಎರಡು ದಿನದ ಹಿಂದೆ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಜಿಲ್ಲಾ ಸಮಿತಿ ನಗರದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆ ವೇಳೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ವಿರುದ್ಧ ಪ್ರಚೋದನಕಾರಿಯಾಗಿ ಘೋಷಣೆಗಳನ್ನು ಕೂಗಿದ ಆರೋಪದ ಮೇಲೆ ಎಸ್‌ಡಿಪಿಐ ಕಾರ್ಯದರ್ಶಿ ಹರ್ಷದ್ ವಿರುದ್ಧ ಇಲ್ಲಿನ ನಗರ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಪ್ರಕರಣ ದಾಖಲಾಗಿದೆ.

ನೆಲಮಂಗಲದಲ್ಲಿ 100 ಹಾಸಿಗೆಗಳ ಆಸ್ಪತ್ರೆ

ಬಜೆಟ್‌ನಲ್ಲೇ ₹42 ಕೋಟಿ ಅನುದಾನ ಮೀಸಲು: ದಿನೇಶ್ ಗುಂಡೂರಾವ್

ಪ್ರಜಾವಾಣಿ ವಾರ್ತೆ

ನೆಲಮಂಗಲ: ತಾಲ್ಲೂಕಿಗೆ ಸುಸಜ್ಜಿತ ನೂರು ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆ ಮಂಜೂರಾಗಿದ್ದು, ಕಳೆದ ಸಾಲಿನ ಬಜೆಟ್‌ನಲ್ಲೇ ₹42 ಕೋಟಿ ಹೆಚ್ಚುವರಿ ಅನುದಾನ ಮೀಸಲಿರಿಸಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ತಾಲ್ಲೂಕಿನ ಟಿ.ಬೇಗೂರು ಬಳಿ ಸಾರ್ವಜನಿಕ ಆಸ್ಪತ್ರೆ ನಿರ್ಮಾಣಕ್ಕೆ ಸ್ಥಳ ಪರಿಶೀಲನೆ ಮಾಡಿ ಮಾತನಾಡಿದ ಅವರು, ಅತ್ಯಾಧುನಿಕ ಸೌಲಭ್ಯವುಳ್ಳ ಸುಸಜ್ಜಿತ ಸಾರ್ವಜನಿಕ ಆಸ್ಪತ್ರೆಯನ್ನು ಶೀಘ್ರದಲ್ಲೇ ನಿರ್ಮಿಸಲಾಗುವುದು ಎಂದು ಭರವಸೆ ನೀಡಿದರು.

ಶಾಸಕ ಎನ್.ಶ್ರೀನಿವಾಸ್ ಮಾತನಾಡಿ, ಆಸ್ಪತ್ರೆ ನಿರ್ಮಾಣಕ್ಕೆ ಸ್ಥಳ ಗುರುತಿಸಿ, ತುರ್ತಾಗಿ ಕಾಮಗಾರಿ ಪ್ರಾರಂಭಿಸಲು ಹಾಗೂ ವೈದ್ಯರ ಕೊರತೆ ನೀಗಿಸಲು ಸಚಿವರಿಗೆ ಮನವಿ ಮಾಡಿದರು.


ಇದೇ ಸಂದರ್ಭದಲ್ಲಿ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಸಚಿವರು ಭೇಟಿ ನೀಡಿ ಪರಿಶೀಲಿಸಿದರು. 'ಚಿಕಿತ್ಸೆ ಸರಿಯಾಗಿ ದೊರೆಯುತ್ತಿದೆಯೆ' ಎಂದು ರೋಗಿಗಳ ಯೋಗಕ್ಷೇಮ ವಿಚಾರಿಸಿದರು.

ಆಡಳಿತ ವೈದ್ಯಾಧಿಕಾರಿ ಡಾ.ಸೋನಿಯಾ ಅವರು, ಮೂವರು ತುರ್ತು ಚಿಕಿತ್ಸಾ ವೈದ್ಯರ ಕೊರತೆ ಇದೆ. ಸ್ಥಳೀಯರಷ್ಟೆ ಅಲ್ಲದೆ ಮಾಗಡಿ ತಾಲ್ಲೂಕಿನ ಸೋಲೂರು, ಬೆಂಗಳೂರು ಉತ್ತರ ತಾಲ್ಲೂಕಿನ ಮಾಕಳಿಯಿಂದ ತುರ್ತು ಚಿಕಿತ್ಸೆಗಳಿಗಾಗಿ ರೋಗಿಗಳು ಬರುತ್ತಿದ್ದಾರೆ. ಅವರಿಗೆ ಶಸ್ತ್ರಚಿಕಿತ್ಸೆಗಳನ್ನು ಇಲ್ಲಿಯೇ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಸಮಸ್ಯೆಗಳ ಪಟ್ಟಿ ಮಾಡಿ ಶಾಸಕರ ಮುಖಾಂತರ ಪತ್ರ ಬರೆಯುವಂತೆ ತಿಳಿಸಿದ ಸಚಿವರು, ಶೀಘ್ರ ಪರಿಹಾರ ನೀಡಿ, ಅಗತ್ಯವಿರುವ ಆಧುನಿಕ ವೈದ್ಯಕೀಯ ಉಪಕರಣ ಒದಗಿಸಲಾಗುವುದು ಎಂದು ಭರವಸೆ ನೀಡಿದರು. ವೈದ್ಯರನ್ನು ನೇಮಿಸಲು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಅಧಿಕಾರ ನೀಡಿದ್ದು, ಕಾರ್ಯೋನ್ಮುಖರಾಗಲು ಡಿಎಚ್‌ಒ ಕೃಷ್ಣರೆಡ್ಡಿಗೆ ಸೂಚಿಸಿದರು.

108 ಆಂಬುಲೆನ್ಸ್ ದುರ್ಬಳಕೆ ಆಗುತ್ತಿದೆ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ತುರ್ತು ಚಿಕಿತ್ಸೆಗಳಿಗಾಗಿ ಹತ್ತಿರದ ಖಾಸಗಿ ಆಸ್ಪತ್ರೆಗಳಿಗೆ ರೋಗಿಗಳನ್ನು ರವಾನಿಸಿರಬಹುದು. ಉದ್ದೇಶಪೂರ್ವಕವಾಗಿಯೇ ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸಿದರೆ ಮಾಹಿತಿ ನೀಡಿ. ಸಂಬಂಧಿಸಿದವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದರು.

ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಂ.ನಾರಾಯಣಗೌಡ, ನಗರಸಭೆ ಅಧ್ಯಕ್ಷ ಎನ್.ಗಣೇಶ್, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಆರ್.ಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಜ್ರಘಟ್ಟ ನಾಗರಾಜು, ನಗರಸಭೆ ಸದಸ್ಯರಾದ ಪ್ರದೀಪ್, ಸುನೀಲ್ ಮೂಡ್, ಪೂರ್ಣಿಮಾ ಸುಗ್ಗರಾಜು ಉಪಸ್ಥಿತರಿದ್ದರು.



ನೆಲಮಂಗಲ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಿನೇಶ್ ಗುಂಡೂರಾವ್ ಭೇಟಿ ನೀಡಿ ರೋಗಿಗಳ ಯೋಗಕ್ಷೇಮ ವಿಚಾರಿಸಿದರು. ಎನ್.ಶ್ರೀನಿವಾಸ್, ಡಾ.ಸೋನಿಯಾ, ಪ್ರದೀಪ್, ಡಿ.ಎಚ್. ಬೈರೇಗೌಡ ಉಪಸ್ಥಿತರಿದ್ದರು

ಕನ್ನಡಿಗರ ಮೇಲೆ ದಬ್ಬಾಳಿಕೆ ತಡೆಗೆ ಕಾನೂನು: ಸಚಿವ ತಂಗಡಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡಿಗರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಬಾಲಿವುಡ್ ಗಾಯಕ ಸೋನು ನಿಗಮ್ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಲಿದೆ. ಕನ್ನಡ, ಕನ್ನಡಿಗರ ಮೇಲೆ ನಡೆಯುವ ದಬ್ಬಾಳಿಕೆ ವಿರುದ್ಧ ಕಾನೂನು ತರುವ ಕುರಿತು ಚರ್ಚೆ ಮಾಡುತ್ತಿದ್ದೇವೆ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಹೇಳಿದರು.



ತಂಗಡಗಿ

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕರ್ನಾಟಕಕ್ಕೆ ಬಂದು ಕನ್ನಡ ಹಾಡು ಹಾಡಿ ಹಣ ಮಾಡುವಂಥವರು ಹಗುರವಾಗಿ ಮಾತನಾಡುವುದನ್ನು ಸಹಿಸುವುದಿಲ್ಲ. ಸೋನು ನಿಗಮ್ ವಿರುದ್ಧ ಈಗಾಗಲೇ ಎಫ್‌ಐಆರ್ ಆಗಿದೆ. ಅವರನ್ನು ಬಂಧಿಸುವ ಕುರಿತು ಮುಖ್ಯಮಂತ್ರಿ, ಗೃಹ ಸಚಿವರ ಜೊತೆ ಚರ್ಚೆ ಮಾಡುತ್ತೇನೆ' ಎಂದರು.

ಸಮೀಕ್ಷೆಯಿಂದ ಗೊತ್ತಾಗಲಿದೆ: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಲು ಸಮೀಕ್ಷೆ ನಡೆಯುತ್ತಿರುವ ಕುರಿತು ಪ್ರತಿಕ್ರಿಯಿಸಿದ ತಂಗಡಗಿ, 'ಒಳ ಮೀಸಲಾತಿ ಸಮೀಕ್ಷೆಯ ವರದಿ ಬಂದ ನಂತರ ಪರಿಶಿಷ್ಟ ಜಾತಿಯ ಉಪ ಜಾತಿಗಳ ಜನಸಂಖ್ಯೆ, ಸ್ಥಿತಿಗತಿಯ ವಾಸ್ತವ ಗೊತ್ತಾಗಲಿದೆ. ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ ನಡೆಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನೂ ವೈಜ್ಞಾನಿಕವಾಗಿಯೇ ಮಾಡಲಾಗಿದೆ' ಎಂದರು.

ಸತ್ತವರ ಹೆಣದ ಮೇಲೆ ರಾಜಕೀಯ: 'ಮಂಗಳೂರಿನ ಬಜಪೆ ಬಳಿ ಕೊಲೆಯಾದ ಹಿಂದುತ್ವವಾದಿ ಸಂಘಟನೆಯ ಕಾರ್ಯಕರ್ತ ಸುಹಾಸ್ ಶೆಟ್ಟಿಯನ್ನು ರೌಡಿ ಶೀಟರ್ ಮಾಡಿದ್ದು ಬಿಜೆಪಿ ಅವಧಿಯಲ್ಲಿಯೇ ಅಲ್ಲವೇ? ಆದರೆ, ಈ ಕೊಲೆ ಘಟನೆಯನ್ನು ಬಿಜೆಪಿಯವರು ರಾಜಕೀಯಕ್ಕೆ ಬಳಸಿಕೊಳ್ಳುತ್ತಿದ್ದಾರೆ' ಎಂದು ತಂಗಡಗಿ ದೂರಿದರು.

'ಹಿಂದೂ ಯುವಕರನ್ನು ಬಿಜೆಪಿಯವರು ದುರ್ಬಳಕೆ ಮಾಡುತ್ತಿದ್ದಾರೆ. ಇವರಿಂದ ಯಾವ ಹಿಂದೂಗಳಿಗೆ ಒಳ್ಳೆಯದಾಗಿದೆ ಹೇಳಲಿ. ಇವರ ಪ್ರಚೋದನೆಯಿಂದ ತಪ್ಪು ದಾರಿಗೆ ಹೋಗುತ್ತಿದ್ದಾರೆ. ಸತ್ತವರ ಹೆಣದ ಮೇಲೆ ರಾಜಕೀಯ ಸರಿಯೇ' ಎಂದೂ ಪ್ರಶ್ನಿಸಿದರು.

'ಕಾಂಗ್ರೆಸ್‌ನ ರಾಷ್ಟ್ರಪ್ರೇಮ ಪತನ'

ಬೆಂಗಳೂರು: ಕಾಂಗ್ರೆಸ್ ನಾಯಕರಲ್ಲಿ ರಾಷ್ಟ್ರಪ್ರೇಮ ಕ್ಷೀಣಿಸಿದೆ. ಭಯೋತ್ಪಾದಕ ದಾಳಿಗಳು ನಡೆದಾಗ ಅವರ ಪ್ರತಿಕ್ರಿಯೆಗಳು ಸಂಶಯ ಮೂಡಿಸುತ್ತವೆ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ.

ಭಾರತ-ಪಾಕಿಸ್ತಾನದ ಮಧ್ಯೆ ಯುದ್ಧದ ಕಾರ್ಮೋಡ ದಟ್ಟವಾಗಿರುವಾಗ ಕಾಂಗ್ರೆಸ್ ಹಿರಿಯ ನಾಯಕರ ಹೇಳಿಕೆ ಗಮನಿಸಿದರೆ 55 ವರ್ಷ ಈ ದೇಶದಲ್ಲಿ ಆಡಳಿತ ನಡೆಸಿದ್ದು ಇವರಾ ಎನ್ನುವ ಸಂಶಯ ಮೂಡುತ್ತದೆ. ಕಾಂಗ್ರೆಸ್ ಪಕ್ಷದ ರಾಷ್ಟ್ರಪ್ರೇಮ ಪತನವಾಗಿರುವುದು ಸ್ಪಷ್ಟವಾಗಿದೆ ಎಂದು ದೂರಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಯುದ್ಧಕ್ಕೆ ಬೇಕಾದ ಸಿದ್ಧತೆ ಮಾಡಿಕೊಳ್ಳುವಂತೆ ಈಗಾಗಲೇ ಮೂರು ಸೇನಾಪಡೆಗಳಿಗೆ ಅಧಿಕಾರ ಕೊಟ್ಟಿದ್ದಾರೆ. ಇಂತಹ ಸಮಯದಲ್ಲಿ ರಾಜಕಾರಣ ಮಾಡುತ್ತಿರುವ ಕಾಂಗ್ರೆಸ್‌ಗೆ ಜನರು ತಕ್ಕ ಉತ್ತರ ನೀಡಲಿದ್ದಾರೆ ಎಂದಿದ್ದಾರೆ.

ಸ್ಪರ್ಶ್ ಆಸ್ಪತ್ರೆಯಲ್ಲಿ ಉತ್ತರ ಕರ್ನಾಟಕದ ಇಬ್ಬರು ರೋಗಿಗಳಿಗೆ ಅಳವಡಿಕೆ

ಕೃತಕ ಹೃದಯ ಕಸಿ ಚಿಕಿತ್ಸೆ ಯಶಸ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೃದಯ ವೈಫಲ್ಯಕ್ಕೆ ಒಳಗಾಗಿದ್ದ ಉತ್ತರ ಕರ್ನಾಟಕದ ಇಬ್ಬರಿಗೆ ರಾಜರಾಜೇಶ್ವರಿ ನಗರದ ಸ್ಪರ್ಶ್ ಆಸ್ಪತ್ರೆಯಲ್ಲಿ ಯಶಸ್ವಿಯಾಗಿ ಕೃತಕ ಹೃದಯ ಕಸಿ ನಡೆಸಲಾಗಿದೆ.

ಈ ಬಗ್ಗೆ ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಸ್ಪತ್ರೆಯ ಹೃದಯ ಶಸ್ತ್ರಚಿಕಿತ್ಸಕ ಡಾ.ಅಶ್ವಿನ್, 'ಗುರಪ್ಪ ಗೋಣಿ ಹಾಗೂ ಗುರುಲಿಂಗಪ್ಪ ಕಲ್ಯಾಣಶೆಟ್ಟಿ ಎಂಬುವರಿಗೆ ಕೃತಕ ಹೃದಯ ಕಸಿ ಮಾಡಲಾಗಿದೆ. 'ಮೆಗ್ಲೆವ್ ಫ್ಲೊ' ತಂತ್ರಜ್ಞಾನ ಬಳಸಿಕೊಳ್ಳುವ ಮೂಲಕ ಹೃದಯದ ಎಡ ಹೃತ್ಕರ್ಣಕ್ಕೆ 'ಹಾರ್ಟ್‌ಮೇಟ್ 3' ಉಪಕರಣ ಅಳವಡಿಸಲಾಗಿದೆ. ಇದು ಅತ್ಯಂತ ಸಂಕೀರ್ಣ ಹಾಗೂ ಅಪರೂಪದ ಹೃದಯ ಕಸಿ ಶಸ್ತ್ರಚಿಕಿತ್ಸೆಯಾಗಿದೆ' ಎಂದು ಹೇಳಿದರು.

'ಇಬ್ಬರು ರೋಗಿಗಳು ಗಂಭೀರ ಸ್ಥಿತಿಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದರು. ಅವರ ರಕ್ತದೊತ್ತಡ ನಿಯಂತ್ರಿಸಲು ಬಲೂನ್ ಪಂಪ್ ಅಳವಡಿಸಿದರೂ ಆರೋಗ್ಯದಲ್ಲಿ ಸುಧಾರಣೆ ಕಾಣಲಿಲ್ಲ. ಇಬ್ಬರಿಗೂ ಕೂಡಲೇ ಹೃದಯ ಕಸಿ ಮಾಡುವುದು ಅನಿವಾರ್ಯವಾಗಿತ್ತು. ಇವರಿಗೆ ಹೊಂದಾಣಿಕೆಯಾಗುವ ಹೃದಯ ಸಿಗಲಿಲ್ಲ. ಕೂಡಲೇ ಅವರಿಗೆ ಹೃದಯ ಕಸಿ ಮಾಡದೇ ಹೋದಲ್ಲಿ ಜೀವಕ್ಕೆ ಅಪಾಯವಿತ್ತು. ಈ ಇಬ್ಬರು ರೋಗಿಗಳ ಹೃದಯ ಸ್ನಾಯುಗಳು ಸಂಪೂರ್ಣ ನಿರ್ಜೀವವಾಗಿದ್ದವು. ಹೀಗಾಗಿ ಅವರಿಗೆ ಕೃತಕ ಹೃದಯ ಕಸಿಯನ್ನು ಯಶಸ್ವಿಯಾಗಿ ನಡೆಸಲಾಯಿತು' ಎಂದು ವಿವರಿಸಿದರು.

ಸ್ಪರ್ಶ್ ಆಸ್ಪತ್ರೆ ಆರ್.ಆರ್.ನಗರ ಶಾಖೆಯ ಮುಖ್ಯ ಕಾರ್ಯಾಚರಣೆ ಅಧಿಕಾರಿ ರಾಹುಲ್ ತಿವಾರಿ, 'ಇತ್ತೀಚೆಗೆ ಅಂಗಾಂಗ ದಾನಿಗಳ ಸಂಖ್ಯೆಗಿಂತಲೂ ಅಂಗಾಂಗ ಅಗತ್ಯತೆ ಇರುವವರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಅಂಗಾಂಗ ವೈಫಲ್ಯ ಎದುರಿಸುತ್ತಿರುವವರಿಗೆ ಕೃತಕ ಅಂಗಾಂಗ ಕಸಿ ಭರವಸೆಯ ಬೆಳಕಾಗಿದೆ. ಹೃದಯದ ಸ್ನಾಯು ಸಂಪೂರ್ಣ ನಿಷ್ಕ್ರಿಯವಾದ ಬಳಿಕವಷ್ಟೇ ಈ ಕೃತಕ ಹೃದಯ ಕಸಿ ಮಾಡಲಾಗುತ್ತದೆ' ಎಂದರು.



ಕೃತಕ ಹೃದಯ ಕಸಿಗೆ ಒಳಗಾದ ಗುರಪ್ಪ ಗೋಣಿ ಹಾಗೂ ಗುರುಲಿಂಗಪ್ಪ ಕಲ್ಯಾಣಶೆಟ್ಟಿ ಅವರೊಂದಿಗೆ ಡಾ.ಅಶ್ವಿನ್, ರಾಹುಲ್ ತಿವಾರಿ, ಹೃದಯ ಸಮಾಲೋಚಕ ಡಾ.ವಿಕ್ರಾಂತ್ ವೀರಣ್ಣ, ಶಸ್ತ್ರಚಿಕಿತ್ಸಕರಾದ ಡಾ.ಮಧುಸೂದನ್, ಡಾ.ಶಿವಪ್ರಕಾಶ್ ಹಾಗೂ ಡಾ.ಸುನಿಲ್ ಕ್ರಿಸ್ಟೋಫರ್ ಉಪಸ್ಥಿತರಿದ್ದರು

'ಬ್ಯಾಟರಿ ಜೋಡಣೆ'

'ಕೃತಕ ಹೃದಯವು ಸಾಮಾನ್ಯ ಹೃದಯದಂತೆಯೇ ಕಾರ್ಯ ನಿರ್ವಹಿಸಲಿದೆ. ನಿರ್ಜೀವ ಹೃದಯದ ಒಳಗಡೆ ಮಷಿನ್ ಅಳವಡಿಸಿ, ಪೈಪ್ ಮೂಲಕ ಹೊರಗಡೆಗೆ ಬ್ಯಾಟರಿ ಜೋಡಿಸಲಾಗುತ್ತದೆ. ಈ ಬ್ಯಾಟರಿ 18ರಿಂದ 24 ಗಂಟೆಗಳ ಕಾಲ ಕಾರ್ಯನಿರ್ವಹಿಸಲಿದ್ದು, ಬಳಿಕ ಬ್ಯಾಟರಿಯನ್ನು ಚಾರ್ಜ್ ಮಾಡಬೇಕಾಗುತ್ತದೆ. ಬ್ಯಾಟರಿ ಚಾರ್ಜ್ ತೀರಾ ಕಡಿಮೆಯಾದಾಗ ಎಚ್ಚರಿಕೆಯ ಗಂಟೆ ಬರಲಿದೆ. ಆಗ ಕೂಡಲೇ ಬ್ಯಾಟರಿ ಬದಲಿಸಬೇಕಾಗುತ್ತದೆ. ಎಂಟು ಬ್ಯಾಟರಿಗಳನ್ನು ರೋಗಿಗಳಿಗೆ ನೀಡಲಾಗಿರುತ್ತದೆ. ಈ ಬ್ಯಾಟರಿಗಳು ಜಲನಿರೋಧಕ ಆಗಿರಲಿವೆ. ರೋಗಿ ಎಲ್ಲಿಯೇ ತೆರಳಿದರೂ ಬ್ಯಾಟರಿ ಬ್ಯಾಗ್ ಜೊತೆಗಿರಬೇಕಾಗುತ್ತದೆ' ಎಂದು ಡಾ.ಅಶ್ವಿನ್ ವಿವರಿಸಿದರು.

ಆಯುರ್ವೇದ ಆಸ್ಪತ್ರೆಯಲ್ಲಿನ ಕೊಠಡಿಗಳ ನವೀಕರಣ • ಹೊರ ರಾಜ್ಯದಿಂದಲೂ ಬರುವ ರೋಗಿಗಳು

ಪಂಚಕರ್ಮ ಘಟಕಕ್ಕೆ ಹೈಟೆಕ್ ಸ್ಪರ್ಶ

• ವರುಣ ಹೆಗಡೆ

ಬೆಂಗಳೂರು: ನಗರದ ಜಯಚಾಮರಾಜೇಂದ್ರ ಸರ್ಕಾರಿ ಆಯುರ್ವೇದ ಆಸ್ಪತ್ರೆಯಲ್ಲಿರುವ ಪಂಚಕರ್ಮ ಘಟಕಕ್ಕೆ ಹೈಟೆಕ್ ಸ್ಪರ್ಶ ನೀಡಲಾಗಿದ್ದು, ಹೊರ ರಾಜ್ಯದವರೂ ಇಲ್ಲಿ ಚಿಕಿತ್ಸೆಗೆ ಹೆಚ್ಚಿನ ಸಂಖ್ಯೆಯಲ್ಲಿ ಬರಲಾರಂಭಿಸಿದ್ದಾರೆ.

ಅಲೋಪಥಿ ಚಿಕಿತ್ಸಾ ಪದ್ಧತಿಯಲ್ಲಿ ಆವಿಷ್ಕಾರಗಳು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ, ಆಯುರ್ವೇದ ಚಿಕಿತ್ಸಾ ಪದ್ಧತಿಗೂ ಬೇಡಿಕೆ ಬಂದಿದೆ. ಖಾಸಗಿ ವ್ಯವಸ್ಥೆಯಡಿ ವಿವಿಧ ಆಯುರ್ವೇದ ಚಿಕಿತ್ಸಾ ಕೇಂದ್ರಗಳು ತಲೆಯೆತ್ತುತ್ತಿದ್ದು, ಪಂಚಕರ್ಮದಂತಹ ಚಿಕಿತ್ಸೆಗಳು ದುಬಾರಿಯಾಗುತ್ತಿವೆ. ಆದ್ದರಿಂದ ಇಲ್ಲಿನ ಧನ್ವಂತರಿ ರಸ್ತೆಯಲ್ಲಿರುವ ಸರ್ಕಾರಿ ಆಯುರ್ವೇದ ಆಸ್ಪತ್ರೆಯಲ್ಲಿನ ಪಂಚಕರ್ಮ ಚಿಕಿತ್ಸಾ ಘಟಕವನ್ನು ನವೀಕರಿಸಲಾಗಿದೆ. ಆಸ್ಪತ್ರೆಯ ಹೊರ ರೋಗಿ ವಿಭಾಗ ಹಾಗೂ 'ಪುನರ್ನವ' ಪಂಚಕರ್ಮ ಒಳ ರೋಗಿ ವಿಭಾಗದ ಕಟ್ಟಡದ ಮೂರು ಮಹಡಿಗಳನ್ನು ಪಂಚಕರ್ಮ ಚಿಕಿತ್ಸೆಗೆ ಮೀಸಲಿಡಲಾಗಿದೆ. ಇಲ್ಲಿ 18 ಕೊಠಡಿಗಳಿದ್ದು, ಎಲ್ಲ ಕೊಠಡಿಗಳನ್ನು ನವೀಕರಣ ಮಾಡಲಾಗಿದೆ.

ಧನ್ವಂತರಿ ರಸ್ತೆಯಲ್ಲಿರುವ ಸರ್ಕಾರಿ ಆಯುರ್ವೇದ ವೈದ್ಯಕೀಯ ವಿದ್ಯಾಲಯದಡಿ 60 ವರ್ಷಗಳಿಂದ ಈ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದ್ದು, 300 ಹಾಸಿಗೆಗಳನ್ನು ಒಳಗೊಂಡಿದೆ. ಪ್ರತಿನಿತ್ಯ ಸರಾಸರಿ 600 ಹೊರ ರೋಗಿಗಳು ಭೇಟಿ ನೀಡುತ್ತಿದ್ದಾರೆ. 150ಕ್ಕೂ ಅಧಿಕ ಮಂದಿ ಒಳ ರೋಗಿಗಳಾಗಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಆಯುರ್ವೇದ ಚಿಕಿತ್ಸಾ ಪದ್ಧತಿಯಲ್ಲಿ ಒಂದಾದ ಪಂಚಕರ್ಮ ಚಿಕಿತ್ಸೆಗೆ ಇಲ್ಲಿ ಬೇಡಿಕೆ ಹೆಚ್ಚಿದ್ದು, ರಾಜ್ಯದ ವಿವಿಧ ಭಾಗಗಳಿಂದ ರೋಗಿಗಳು ಬರುತ್ತಾರೆ. ನೆರೆಯ ತಮಿಳುನಾಡು, ಆಂಧ್ರಪ್ರದೇಶ ಸೇರಿ ವಿವಿಧ ರಾಜ್ಯದವರು ದಾಖಲಾಗಿ, ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.



ಪಂಚಕರ್ಮ ಒಳರೋಗಿ ವಿಭಾಗದದಲ್ಲಿ ವ್ಯಕ್ತಿಯೊಬ್ಬರಿಗೆ ಪಂಚಕರ್ಮ ಚಿಕಿತ್ಸೆ ನೀಡುತ್ತಿರುವುದು

ಚಿತ್ರಗಳು: ಪ್ರಶಾಂತ್ ಎಚ್‌.ಜಿ.

ಈ ಆಸ್ಪತ್ರೆಯಲ್ಲಿ ಪಂಚಕರ್ಮದ ಜತೆಗೆ ಶಿರೋಧಾರಾ, ಬಸ್ತಿ, ನಸ್ಯ, ತರ್ಪಣ ಸೇರಿ ವಿವಿಧ ಆಯುರ್ವೇದ ಚಿಕಿತ್ಸಾ ಪದ್ಧತಿಯಡಿ ಚಿಕಿತ್ಸೆ ಒದಗಿಸಲಾಗುತ್ತಿದೆ. ಆಸ್ಪತ್ರೆಯ ಆವರಣದಲ್ಲಿ ಯುನಾನಿ ಮತ್ತು ಶಲ್ಯದ ಹೊರ ರೋಗಿ ವಿಭಾಗ, ಸಿದ್ಧ ಆಸ್ಪತ್ರೆ ಹಾಗೂ ಶಲ್ಯ ತಂತ್ರ ಚಿಕಿತ್ಸಾ ಘಟಕವೂ ಇದೆ.

'ಪಂಚಕರ್ಮವು ಐದು ಹಂತದ ಪ್ರಕ್ರಿಯೆಯಾಗಿದ್ದು, ಇದು ದೇಹದಲ್ಲಿನ ಎಲ್ಲ ತ್ಯಾಜ್ಯಗಳನ್ನು ಹೊರಹಾಕಲು ನೆರವಾಗುತ್ತದೆ. ಅದೇ ಸಮಯದಲ್ಲಿ ದೇಹವನ್ನು ಶುದ್ಧೀಕರಿಸಿ, ಒತ್ತಡವನ್ನು ಕಡಿಮೆ ಮಾಡುತ್ತದೆ. ಶರೀರದ ದೋಷಗಳಾದ ವಾತ, ಪಿತ್ತ, ಕಫಗಳನ್ನು ತೆಗೆದು, ದೇಹದ ಧಾತುಗಳನ್ನು ಬಲಪಡಿಸುವುದೇ ಪಂಚಕರ್ಮ ಚಿಕಿತ್ಸೆಯ ಉದ್ದೇಶ. ಪಾರ್ಶ್ವವಾಯು ಸೇರಿ ವಿವಿಧ ಸಮಸ್ಯೆ ಎದುರಿಸುತ್ತಿರುವವರ ಜತೆಗೆ ಆರೋಗ್ಯವಂತರೂ ಈ ಚಿಕಿತ್ಸೆ ಪಡೆಯುತ್ತಾರೆ. ತೂಕ ಇಳಿಕೆ, ಒತ್ತಡ ನಿವಾರಣೆ ಸೇರಿ ಹಲವು ಪ್ರಯೋಜನಗಳಿವೆ' ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದರು.


₹2.96 ಕೋಟಿಯಲ್ಲಿ ನವೀಕರಣ

ಆಸ್ಪತ್ರೆಯಲ್ಲಿನ ಪಂಚಕರ್ಮ ಚಿಕಿತ್ಸಾ ಘಟಕದ 18 ಕೊಠಡಿಗಳನ್ನು ₹2.96 ಕೋಟಿ ವೆಚ್ಚದಲ್ಲಿ ನವೀಕರಣ ಮಾಡಲಾಗಿದೆ. ರಾಷ್ಟ್ರೀಯ ಆಯುಷ್ ಮಿಷನ್ ಅಡಿ ಅನುದಾನ ಒದಗಿಸಲಾಗಿದೆ. ಪ್ರತಿ ಕೊಠಡಿಗೂ ಹೊಸದಾಗಿ ಪೀಠೋಪಕರಣ ಅಳವಡಿಸಿ, ಬೆಳಕಿನ ಅಲಂಕಾರ ಮಾಡಲಾಗಿದೆ.

ಪ್ರತಿ ಕೊಠಡಿಯ ಹೊರಾಂಗಣದಲ್ಲಿ ಸಹಾಯಕರಿಗೆ ವಿಶ್ರಾಂತಿ ಪಡೆಯಲು ಸೋಫಾಗಳನ್ನು ಇರಿಸಲಾಗಿದೆ. ಕೊಠಡಿ ಒಳಗಡೆಯೂ ಧ್ಯಾನಕ್ಕೆ ಸ್ಥಳಾವಕಾಶ ಒದಗಿಸಲಾಗಿದೆ. ಪ್ರತಿ ಕೊಠಡಿಗೂ ಹೊಂದಿಕೊಂಡು ಸ್ನಾನದ ಕೋಣೆಗಳಿವೆ. ವಿಶಾಲ ಕೊಠಡಿಗಳಲ್ಲಿ ಸಹಾಯಕರೊಬ್ಬರಿಗೆ ಇರಲು ಪ್ರತ್ಯೇಕ ಕೊಠಡಿಯಿದೆ. ಗೋಡೆಗಳಿಗೆ ಮರದ ಹೊದಿಕೆಯ ವಿನ್ಯಾಸ ಮಾಡಲಾಗಿದೆ. ಮರದ ಮಸಾಜ್ ಟೇಬಲ್, ಶಿರೋಧರ ಸ್ಟ್ಯಾಂಡ್, ಬೆಡ್ ಸೇರಿ ಚಿಕಿತ್ಸೆಗೆ ಅಗತ್ಯವಿರುವ ಸಲಕರಣೆಯನ್ನು ಘಟಕ ಒಳಗೊಂಡಿದೆ. ಹೊರಗಡೆ ನಡೆದಾಡಲು ವಿಶಾಲ ಸ್ಥಳಾವಕಾಶ ಒದಗಿಸಲಾಗಿದೆ.



ಪಂಚಕರ್ಮ ಒಳರೋಗಿ ವಿಭಾಗ ಕಟ್ಟಡದ ಹೊರನೋಟ



ಆಸ್ಪತ್ರೆಯಲ್ಲಿನ ಪಂಚಕರ್ಮ ಚಿಕಿತ್ಸಾ ಕೊಠಡಿ

ದಿನಕ್ಕೆ ₹375 ನಿಗದಿ

ಆಸ್ಪತ್ರೆಯ ಹಳೆಯ ಕಟ್ಟಡದಲ್ಲಿ ಉಚಿತವಾಗಿ ಪಂಚಕರ್ಮ ಚಿಕಿತ್ಸೆ ಒದಗಿಸಿದರೆ, ನವೀಕೃತ ಕೊಠಡಿಗಳಿಗೆ ದಿನವೊಂದಕ್ಕೆ ₹ 375 ನಿಗದಿಪಡಿಸಲಾಗಿದೆ. ಈ ಮೊದಲು ₹ 100 ನಿಗದಿಪಡಿಸಲಾಗಿತ್ತು. ನವೀಕರಣದ ಬಳಿಕ ದರ ಪರಿಷ್ಕರಣೆ ಮಾಡಲಾಗಿದೆ. ಇಲ್ಲಿ 80 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಚಿಕಿತ್ಸೆ ಪಡೆಯುತ್ತಿರುವವರಿಗೆ ಉಚಿತವಾಗಿ ಊಟವನ್ನೂ ಒದಗಿಸಲಾಗುತ್ತಿದೆ.

'ಆಯುರ್ವೇದ ಚಿಕಿತ್ಸೆಗೆ ಒಲವು'



'ಬದಲಾದ ಕಾಲಘಟ್ಟದಲ್ಲಿ ಆಯುರ್ವೇದ ಚಿಕಿತ್ಸೆಯತ್ತ ಜನರ ಒಲವು ಹೆಚ್ಚುತ್ತಿದೆ. ಮೂಳೆ ಮುರಿತದಂತಹ ಸಮಸ್ಯೆಗಳಿಗೆ ಶಸ್ತ್ರಚಿಕಿತ್ಸೆ ನಡೆಸದೆ ಈ ಚಿಕಿತ್ಸಾ ವಿಧಾನದಲ್ಲಿ ವಾಸಿ ಮಾಡಲು ಸಾಧ್ಯ. ರಾಜ್ಯದ ವಿವಿಧೆಡೆಯಿಂದ ಪಂಚಕರ್ಮ-ದಂತಹ ಚಿಕಿತ್ಸೆ ಪಡೆಯಲು ಬರುತ್ತಾರೆ. ಹೈಟೆಕ್ ಕೊಠಡಿಯಲ್ಲಿ ಚಿಕಿತ್ಸೆ ಪಡೆಯುವವರಿಗೂ ಉಚಿತವಾಗಿ ಊಟ ಒದಗಿಸಲಾಗುತ್ತಿದೆ' ಎಂದು ಆಸ್ಪತ್ರೆಯ ಸ್ಥಾನಿಕ ವೈದ್ಯಾಧಿಕಾರಿ (ಆರ್‌ಎಂಒ) ಡಾ. ವೆಂಕಟರಾಮಯ್ಯ ತಿಳಿಸಿದರು.

ಬಂದ್‌ಗೆ ಕರೆ: 9 ಮಂದಿ ವಿರುದ್ಧ ಪ್ರಕರಣ ದಾಖಲು

ಶೃಂಗೇರಿ (ಚಿಕ್ಕಮಗಳೂರು): ಕಾಶ್ಮೀರದ ಪೆಹಲ್ಗಾಮ್‌ನಲ್ಲಿ ನಡೆದ ಹಿಂದೂಗಳ ಹತ್ಯೆ ಮತ್ತು ಮಂಗಳೂರಿನ ಸುಹಾಸ್ ಶೆಟ್ಟಿ ಹತ್ಯೆ ಖಂಡಿಸಿ, ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದವರು ಶೃಂಗೇರಿ ಬಂದ್ ಹಾಗೂ ಪ್ರತಿಭಟನೆಗೆ ಕರೆ ನೀಡುವ ಪೂರ್ವದಲ್ಲಿ ಅನುಮತಿ ಪಡೆದಿಲ್ಲ ಎಂಬ ಕಾರಣಕ್ಕೆ ಒಂಬತ್ತು ಜನರ ವಿರುದ್ಧ ಶೃಂಗೇರಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ನಿಧನ ವಾರ್ತೆ

ಹೈಕೋರ್ಟ್ ವಕೀಲ ಬಿ.ಬಾಲಕೃಷ್ಣ

ಬೆಂಗಳೂರು: 'ಬೆಂಗಳೂರು ವಕೀಲರ ಸಂಘ'ದ (ಎಎಬಿ) ಹೈಕೋರ್ಟ್ ಘಟಕದ ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ 'ಬೆಂಗಳೂರು ವಕೀಲರ ಸಹಕಾರ ಸಂಘ'ದ ನಿರ್ದೇಶಕರೂ ಆಗಿದ್ದ ವಕೀಲ ಬಿ.ಬಾಲಕೃಷ್ಣ (61) ಅವರು ಬೆಂಗಳೂರಿನ ತಮ್ಮ ನಿವಾಸದಲ್ಲಿ ಮಂಗಳವಾರ ಸಂಜೆ 7.15ಕ್ಕೆ ಹೃದಯಾಘಾತದಿಂದ ನಿಧನರಾಗಿದ್ದಾರೆ.



ಬಿ.ಬಾಲಕೃಷ್ಣ

ಇವರಿಗೆ ನಗರದ ಜೈನ್ ಕಾಲೇಜಿನಲ್ಲಿ ರಸಾಯನ ವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕಿಯಾಗಿರುವ ಪತ್ನಿ ಗೀತಾ ಮತ್ತು ಅರ್ಥಶಾಸ್ತ್ರ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪಡೆದು ಲಂಡನ್‌ನಲ್ಲಿ ಉದ್ಯೋಗಿ ಆಗಿರುವ ಪುತ್ರಿ ಫಾಲ್ಗುಣಿ ಇದ್ದಾರೆ.

ಮೂಲತಃ ಕನಕಪುರದವರಾಗಿದ್ದ ಬಾಲಕೃಷ್ಣ, ವಿ.ವಿ ಪುರಂ ಕಾಲೇಜಿನಲ್ಲಿ ಕಾನೂನು ವಿದ್ಯಾಭ್ಯಾಸ ಪೂರೈಸಿದ್ದರು. 'ವಿಜಯನಗರದ ಸುಬ್ಬಣ್ಣ ಗಾರ್ಡನ್ ಬಳಿ ಇರುವ ನಿವಾಸದಲ್ಲಿ ಬುಧವಾರ (ಮೇ 7) ಮಧ್ಯಾಹ್ನ 3 ಗಂಟೆಯವರೆಗೂ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಸಂಜೆ 5ಕ್ಕೆ ಚಾಮರಾಜಪೇಟೆಯ ಟಿ.ಆರ್. ಮಿಲ್ ರಸ್ತೆಯ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ' ಎಂದು ಕುಟುಂಬದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಕುಟುಂಬದ ಸದಸ್ಯರ ಸಂಪರ್ಕ ಸಂಖ್ಯೆ: ಕುಶಾಲ್– 9611741716

'ಪ್ರಶ್ನೆ ಪತ್ರಿಕೆ ಸೋರಿಕೆ ಆಗಿಲ್ಲ ಗೌಪ್ಯತೆ ಕಾಪಾಡಲು ಬದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ವೃಂದದ 384 ಹುದ್ದೆಗಳ ನೇಮಕಾತಿಗಾಗಿ ನಡೆದ ಮುಖ್ಯ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂದು ಹರಿದಾಡುತ್ತಿರುವುದು ಸುಳ್ಳು ಸುದ್ದಿ. ಇಂತಹ ವದಂತಿಗಳಿಗೆ ಅಭ್ಯರ್ಥಿಗಳು ಕಿವಿಗೊಡಬಾರದು' ಎಂದು ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಮನವಿ ಮಾಡಿದೆ.

ಕೆಪಿಎಸ್‌ಸಿ

ಸೋಮವಾರ (ಮೇ 5) ನಡೆದ ಮುಖ್ಯ ಪರೀಕ್ಷೆಯ 'ಸಾಮಾನ್ಯ ಅಧ್ಯಯನ–1'ರ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಶಂಕೆ ವ್ಯಕ್ತಪಡಿಸಿ ಕೆಪಿಎಸ್‌ಸಿ ಕಾರ್ಯದರ್ಶಿಗೆ ಕೆಲವು ಅಭ್ಯರ್ಥಿಗಳು ದೂರು ಸಲ್ಲಿಸಿದ್ದರು. ಬೆಂಗಳೂರಿನ ಕಸ್ತೂರಬಾ ನಗರದ ಬಿಬಿಎಂಪಿ ಸಂಯೋಜಿತ ಪಿಯು ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಬಂದಿದ್ದ ಪ್ರಶ್ನೆಪತ್ರಿಕೆ ಸೋರಿಕೆ ಆಗಿದೆ ಎಂದು ಆರೋಪಿಸಿದ್ದರು.

'ಈ ಕೇಂದ್ರಕ್ಕೆ ಕಳುಹಿಸಿದ್ದ ಪ್ರಶ್ನೆಪತ್ರಿಕೆಯ ಬಂಡಲ್‌ನ ಮೇಲ್ಭಾಗ ಮಾತ್ರ ಮುಚ್ಚಿದ್ದು, ಒಳ ಭಾಗದಲ್ಲಿ (ಎರಡನೇ ಶೀಲ್ಡ್) ತೆರೆದಿತ್ತು. ಈ ಕುರಿತು ಪರೀಕ್ಷಾ ಮೇಲ್ವಿಚಾರಕರನ್ನು ಪ್ರಶ್ನಿಸಿದಾಗ, 'ಅದೇ ರೀತಿಯಲ್ಲಿ ಕಳಹಿಸಿರುವುದಾಗಿ ಕೆಪಿಎಸ್‌ಸಿ ಹೇಳಿದೆ' ಎಂದು ಉತ್ತರಿಸಿದ್ದರು. ಪರೀಕ್ಷೆಯ ನಂತರ ಕೇಂದ್ರಕ್ಕೆ ಬಂದ ಅಧಿಕಾರಿಗಳು, ಈ ಬಗ್ಗೆ ಪ್ರಶ್ನಿಸಿದ ಅಭ್ಯರ್ಥಿಯೊಬ್ಬರ ಮೇಲೆ ಹಲ್ಲೆ ನಡೆಸಿದ್ದಾರೆ. ಕೇಂದ್ರದ ಒಳಗೆ ಮೊಬೈಲ್ ನಿಷೇಧವಿದ್ದರೂ ಪ್ರಕರಣವನ್ನು ಚಿತ್ರೀಕರಿಸಲಾಗಿದೆ. ಮೊಬೈಲ್ ತರಲು ಅವಕಾಶ ಮಾಡಿಕೊಟ್ಟಿದ್ದಾರೆ. ಈ ಕುರಿತು ಸಮಗ್ರ ತನಿಖೆ ನಡೆಸಬೇಕು. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಅಭ್ಯರ್ಥಿಗಳು ಒತ್ತಾಯಿಸಿದ್ದರು.

ಈ ಕುರಿತು ಪ್ರಕಟಣೆ ಹೊರಡಿಸಿರುವ ಕೆಪಿಎಸ್‌ಸಿ, 'ಈ ವಿಷಯದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಪರೀಕ್ಷಾ ಉಪ ಕೇಂದ್ರದ ಮೇಲ್ವಿಚಾರಕರು ಮತ್ತು ಆಯೋಗದಿಂದ ನಿಯೋಜಿತರಾದ ಸ್ಥಳೀಯ ನಿರೀಕ್ಷಣಾಧಿಕಾರಿಗಳಿಂದ ವಿಸ್ತೃತವಾದ ವರದಿ ಪಡೆಯಲಾಗಿದೆ. ಗೆಜೆಟೆಡ್ ಪ್ರೊಬೇಷನರಿಯೂ ಸೇರಿದಂತೆ ವಿವಿಧ ಹುದ್ದೆಗಳ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವಾಗ ಪ್ರಶ್ನೆ ಪತ್ರಿಕೆಗಳು ಸೋರಿಕೆ ಆಗದಂತೆ, ಪರೀಕ್ಷಾ ಗೌಪ್ಯತೆ ಕಾಪಾಡಿ, ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸಲು ಹಾಗೂ ದುರಾಚಾರ ಪ್ರಕರಣಗಳು ನಡೆಯುವುದನ್ನು ತಡೆಯಲು ಹಲವು ಹಂತಗಳ ಸುರಕ್ಷಾ ಕ್ರಮಗಳನ್ನು ಅಳವಡಿಸಿಕೊಳ್ಳಲಾಗುತ್ತದೆ. ಅದರಂತೆಯೇ ಈ ಪರೀಕ್ಷೆಯಲ್ಲಿಯೂ ಪ್ರಶ್ನೆ ಪತ್ರಿಕೆಯ ಭದ್ರತೆಗಾಗಿ ಎಲ್ಲ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ' ಎಂದಿದೆ.

'ಪರೀಕ್ಷಾ ಸಾಮಗ್ರಿಗಳ ಗೌಪ್ಯತೆ, ಸುರಕ್ಷತೆ ಮತ್ತು ಭದ್ರತೆಯನ್ನು ಕಾಪಾಡುವಲ್ಲಿ ಆಯೋಗವು ಜವಾಬ್ದಾರಿಯುತವಾಗಿ, ಪಾರದರ್ಶಕವಾಗಿ ಕಾರ್ಯನಿರ್ವಹಿಸಲು ಯತ್ನಿಸುತ್ತಿದೆ. ಮಾಧ್ಯಮಗಳಲ್ಲಿ ಬಿತ್ತರಗೊಳ್ಳುತ್ತಿರುವ ವಿಷಯವು ಸತ್ಯಕ್ಕೆ ದೂರವಾದುದು. ಅಭ್ಯರ್ಥಿಗಳು ಇದರಿಂದ ಯಾವುದೇ ರೀತಿಯಲ್ಲಿಯೂ ಹತಾಶರಾಗಬೇಡಿ, ಇಂತಹ ಸುಳ್ಳು ವದಂತಿಗಳಿಗೆ ಕಿವಿಗೊಡಬೇಡಿ' ಎಂದೂ ಕೆಪಿಎಸ್‌ಸಿ ತಿಳಿಸಿದೆ.

'ಜಾತಿಗಳು, ಕುಲಕಸುಬು ಕೈಬಿಟ್ಟಿಲ್ಲ'

ಕೋಲಾರ: 'ಪರಿಶಿಷ್ಟ ಜಾತಿಯ 101 ಜಾತಿಗಳ ಒಟ್ಟು 80 ಕುಲಕಸುಬುಗಳು ಪಟ್ಟಿಯಲ್ಲಿವೆ. ಪ್ರಶ್ನಾವಳಿಯಲ್ಲಿ ಇತರೆ ಎಂಬ ಕಲಂ ಇದ್ದು, ಯಾವ ಜಾತಿಯವರ ಕಸುಬು ಬಿಟ್ಟು ಹೋಗಿದೆಯೋ ಅದನ್ನು ಅಲ್ಲಿ ಸೇರಿಸಬಹುದು. ನಾವು ಯಾವುದೇ ಸಮುದಾಯದ ಕುಲಕಸುಬು ಬಿಟ್ಟಿಲ್ಲ. ಭೋವಿ ಸಮುದಾಯ ಸೇರಿದಂತೆ ಯಾರೂ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ' ಎಂದು ಪರಿಶಿಷ್ಟ ಜಾತಿ ಸಮೀಕ್ಷೆಯ ಏಕ ಸದಸ್ಯ ವಿಚಾರಣಾ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎಚ್‌.ಎನ್‌.ನಾಗಮೋಹನದಾಸ್ ತಿಳಿಸಿದರು.

ಸಮೀಕ್ಷೆಯಲ್ಲಿ ಭೋವಿ ಸಮುದಾಯದ ಕೆಲ ಕುಲಕಸುಬು ಕೈಬಿಟ್ಟಿರುವ ದೂರಿನ ಬಗ್ಗೆ ನಗರದಲ್ಲಿ ಮಂಗಳವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿ, 'ನಾವು 2011ರ ಜನಗಣತಿಯಂತೆ ಕ್ರಮ ವಹಿಸಿದ್ದೇವೆ. 2015ರಲ್ಲಿ ಭೋವಿ ಜಾತಿಗೆ ಭೋವ (ಬೆಸ್ತರನ್ನು ಹೊರಡುಪಡಿಸಿ), ಕಲ್ಲು ವಡ್ಡರು, ಮಣ್ಣು ವಡ್ಡರು ಎಂಬ ಹೆಸರು ಸೇರಿಸಲಾಯಿತು. ಅದನ್ನು ಮತ್ತೊಮ್ಮೆ ಪರಿಶೀಲಿಸಿ ನಮ್ಮ ಆ್ಯಪ್‌ಗೆ ಸೇರಿಸಿದೆವು. ಮಣ್ಣು ವಡ್ಡರು, ಕಲ್ಲು ವಡ್ಡರು ಎಂಬುದರ ಜೊತೆಗೆ ಕಲ್ಲುಕುಟುಕರು, ಕಲ್ಲು ಕೆತ್ತನೆ ಮಾಡುವವರು ಎಂಬ ಕಸುಬನ್ನೂ ಸೇರಿಸಿದ್ದೇವೆ' ಎಂದರು. 'ಹೊಲೆಯ' ಎಂಬ ಪದ ಬಳಸುತ್ತಿರುವುದಕ್ಕೆ ಪ್ರತಿಕ್ರಿಯಿಸಿ, 'ಯಾವುದೇ ಜಾತಿಯವರು ತಮಗೆ ತಾವೇ ಹೆಸರು ಕೊಟ್ಟುಕೊಂಡಿಲ್ಲ. ಯಾವುದೋ ಕಾಲದಲ್ಲಿ ಸವರ್ಣೀಯರು ಪರಿಶಿಷ್ಟರಿಗೆ ಈ ರೀತಿ ಹೆಸರು ಇಟ್ಟಿದ್ದರು. ಜಾತಿ ಹೆಸರು ಹಿಡಿದುಕೊಂಡು ಬೈಯುವ ಪರಿಪಾಠ ಈಗಲೂ ಇದೆ. ಈ ಎಲ್ಲಾ ವಿಚಾರ ಅಧ್ಯಯನ ಮಾಡಿ ಸರ್ಕಾರಕ್ಕೆ ಸೂಕ್ತ ಸಲಹೆ ನೀಡಲಿದ್ದೇವೆ' ಎಂದರು.

ಕಸಾಪ: ಬೈ–ಲಾ ತಿದ್ದುಪಡಿ ಖಂಡಿಸಿ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಬೈ–ಲಾ ತಿದ್ದುಪಡಿ ಹಾಗೂ ರಾಜ್ಯ ಘಟಕದ ಅಧ್ಯಕ್ಷರ ನಡೆ ಖಂಡಿಸಿ, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಸ್ಥಾನಕ್ಕೆ ಹಂ.ಗು. ರಾಜೇಶ್ ರಾಜೀನಾಮೆ ನೀಡಿದ್ದಾರೆ.



ಹಂ.ಗು. ರಾಜೇಶ್

ರಾಜೀನಾಮೆ ಪತ್ರವನ್ನು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಸಲ್ಲಿಸಿರುವ ಅವರು, '1915ರಿಂದ 2021ರ ಅವಧಿಯಲ್ಲಿ 6 ಬಾರಿ ಮಾತ್ರ ಕಸಾಪ ಬೈ–ಲಾ ತಿದ್ದುಪಡಿ ಮಾಡಲಾಗಿದೆ. ರಾಜ್ಯ ಘಟಕದ ಹಾಲಿ ಅಧ್ಯಕ್ಷರು ಕೇವಲ ಮೂರೂವರೆ ವರ್ಷದಲ್ಲಿ ಮೂರನೇ ಬಾರಿ ಬೈ–ಲಾ ತಿದ್ದುಪಡಿ ಮಾಡಲು ಹೊರಟಿರುವುದು ಅವರ ಸರ್ವಾಧಿಕಾರಿ ಮತ್ತು ಗೊಂದಲಕಾರಿ ಮನಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ' ಎಂದಿದ್ದಾರೆ. '3ನೇ ಬಾರಿಗೆ ಬೈ–ಲಾ ತಿದ್ದುಪಡಿಗೆ ಬಳ್ಳಾರಿಯ ಸಂಡೂರಿನಲ್ಲಿ ಕರೆದಿದ್ದ ಸರ್ವಸದಸ್ಯರ ಸಭೆಗೆ ರಾಜ್ಯವ್ಯಾಪಿ ಪ್ರಜ್ಞಾವಂತ ಕಸಾಪ ಸದಸ್ಯರು, ಸಾಹಿತಿಗಳು ತೀವ್ರವಾಗಿ ಪ್ರತಿಭಟಿಸಿದ ಕಾರಣ ಬೇಸಿಗೆಯ ನೆಪ ಹೇಳಿ ಜೂನ್ ತಿಂಗಳಿಗೆ ಮುಂದೂಡಲಾಗಿದೆ. ಬೆಂಗಳೂರು ನಗರ ಜಿಲ್ಲಾ ಕಸಾಪ ವತಿಯಿಂದ ನಡೆಸುವ ಕಾರ್ಯಕ್ರಮಗಳಿಗೆ ಇನ್ನಿಲ್ಲದ ಅಡ್ಡಿ ಆತಂಕಗಳನ್ನು ಸೃಷ್ಟಿಸುವ ಮೂಲಕ ರಾಜ್ಯ ಘಟಕದ ಅಧ್ಯಕ್ಷರು ಕನ್ನಡಕ್ಕೆ ಕಂಠಕಪ್ರಾಯವಾಗಿದ್ದಾರೆ' ಎಂದು ದೂರಿದ್ದಾರೆ.

ಸರ್ವಾಧಿಕಾರಿ, ಅನಾರೋಗ್ಯ ಮನಸ್ಥಿತಿಯ ಅಧ್ಯಕ್ಷರ ಅನುಮೋದನೆಯಲ್ಲಿ ಬೆಂಗಳೂರು ನಗರ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿಯಾಗಿ ಮುಂದುವರೆಯುವುದು ವೈಯುಕ್ತಿಕವಾಗಿ ನನಗೆ ನಾಚಿಕೆಗೇಡಿನ ಮತ್ತು ಅವಮಾನಕಾರಿ ಸಂಗತಿಯೆನಿಸಿದೆ. ನೈತಿಕವಾಗಿ ನನ್ನ ಮನಸ್ಸು ಒಪ್ಪದ ಕಾರಣ ಕಸಾಪ ರಾಜ್ಯ ಘಟಕದ ಅಧ್ಯಕ್ಷರ ನಡೆ ಮತ್ತು ನಡವಳಿಕೆ ಎರಡನ್ನೂ ತೀವ್ರವಾಗಿ ಖಂಡಿಸಿ, ಸ್ವಾಭಿಮಾನದ ಮತ್ತು ಪ್ರತಿಭಟನೆಯ ಸೂಚಕವಾಗಿ ರಾಜೀನಾಮೆ ನೀಡುತ್ತಿದ್ದೇನೆ' ಎಂದಿದ್ದಾರೆ.

ಅಂಬೇಡ್ಕರ್, ಬಸವ ಜಯಂತಿ ಆಚರಣೆ

'ಅಸ್ಪೃಶ್ಯತೆ, ಕೋಮುವಾದ ಜೀವಂತ'

ಪ್ರಜಾವಾಣಿ ವಾರ್ತೆ

ಯಲಹಂಕ: 'ಮೀಸಲಾತಿಯನ್ನು ಪಡೆದವರು ಮಾತ್ರ ಬಾಬಾ ಸಾಹೇಬ್ ಅಂಬೇಡ್ಕರ್‌ರವರನ್ನು ನೆನಪು ಮಾಡಿಕೊಳ್ಳುತ್ತಿದ್ದಾರೆ. ಆದರೆ ಉಳಿದ ಸಿಂಹಪಾಲು ಸಮುದಾಯದ ಜನರು ಅವರನ್ನು ಅರಿತುಕೊಳ್ಳುವಲ್ಲಿ ವಿಫಲರಾಗಿದ್ದಾರೆ' ಎಂದು ಸಾಹಿತಿ ಸುಬ್ಬು ಹೊಲೆಯಾರ್ ಹೇಳಿದರು.

ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಪ್ರಜಾವಿಮೋಚನಾ ಚಳವಳಿ (ಸ್ವಾಭಿಮಾನ) ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಸಂಘದ ಆಶ್ರಯದಲ್ಲಿ ಬ್ಯಾಟರಾಯನ ಪುರ ಕ್ಷೇತ್ರದ ಥಣಿಸಂದ್ರದಲ್ಲಿ ಆಯೋಜಿಸಿದ್ದ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಬಸವಣ್ಣನವರ ಜಯಂತ್ಯುತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

'ಪರಿಶಿಷ್ಟ ಜಾತಿ-ಪಂಗಡದವರನ್ನು ಸಮಾಜ ಮತ್ತು ದೇಶ ಮನುಷ್ಯರನ್ನಾಗಿ ಕಾಣುವ ಹೃದಯವಂತಿಕೆ ತೋರುತ್ತಿಲ್ಲ. ಇಂದಿಗೂ ಈ ದೇಶದಲ್ಲಿ ಬಡತನ, ಅಸ್ಪೃಶ್ಯತೆ, ಮತೀಯ ಮತ್ತು ಕೋಮುವಾದ ಜೀವಂತವಾಗಿದೆ' ಎಂದರು

ಪ್ರಜಾವಿಮೋಚನಾ ಚಳವಳಿ (ಸ್ವಾಭಿಮಾನ) ರಾಜ್ಯ ಘಟಕದ ಅಧ್ಯಕ್ಷ ಮುನಿಆಂಜಿನಪ್ಪ ಮಾತನಾಡಿ, 'ದೇಶದಲ್ಲಿ ಆಚರಣೆಯಲ್ಲಿದ್ದ ಸಾಮಾಜಿಕ ಶೋಷಣೆ, ಅಸಮಾನತೆ, ಅಸ್ಪೃಶ್ಯತೆ, ಅನ್ಯಾಯ ಮತ್ತು ಅತ್ಯಾಚಾರದ ವಿರುದ್ಧ ಜೀವನದುದ್ದಕ್ಕೂ ನಿರಂತರವಾಗಿ ಹೋರಾಟದ ಮೂಲಕ ಪರಿವರ್ತನೆ ತಂದಂತಹ ಮಹಾನ್ ಮಾನವತಾವಾದಿ ಅಂಬೇಡ್ಕರ್ ಇಂದು ಜಗತ್ತಿನ 152 ದೇಶಗಳಿಗೆ ತಲುಪಿದ್ದಾರೆ' ಎಂದರು.

ಇದೇ ಸಂದರ್ಭದಲ್ಲಿ ಬಡಮಹಿಳೆಯರಿಗೆ ಸೀರೆ ವಿತರಿಸಲಾಯಿತು. ಅಂಬೇಡ್ಕರ್ ಮತ್ತು ಬಸವಣ್ಣನವರ ಮೂರ್ತಿಯನ್ನು ಹೂವಿನ ಪಲ್ಲಕ್ಕಿಯಲ್ಲಿಟ್ಟು ಥಣಿಸಂದ್ರ-ನಾಗವಾರ ಮುಖ್ಯರಸ್ತೆಯಲ್ಲಿ ಮೆರವಣಿಗೆ ನಡೆಸಲಾಯಿತು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಶಾರದಮ್ಮ, ದಲಿತ ಸಂಘರ್ಷ ಸಮಿತಿ (ಭೀಮಶಕ್ತಿ) ರಾಜ್ಯ ಘಟಕದ ಅಧ್ಯಕ್ಷ ಹೆಬ್ಬಾಳ ವೆಂಕಟೇಶ್, ಡಾ.ಬಿ. ಆರ್. ಅಂಬೇಡ್ಕರ್ ಯುವಕರ ಸಂಘದ ಅಧ್ಯಕ್ಷ ಚಂದ್ರಶೇಖರ್.ಸಿ, ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಕ್ಯಾಲಸನಹಳ್ಳಿ ಶ್ರೀನಿವಾಸ್, ಪಿವಿಸಿ (ಸ್ವಾಭಿಮಾನ) ಯುವ ಘಟಕದ ಉಪಾಧ್ಯಕ್ಷ ಸತೀಶ್ ಕುಮಾರ್ ಕೋಲಾರ ಉಪಸ್ಥಿತರಿದ್ದರು.



ಥಣಿಸಂದ್ರದಲ್ಲಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಬಸವಣ್ಣನವರ ಜಯಂತಿ ಆಚರಿಸಲಾಯಿತು

ಮುಖ್ಯಾಂಶಗಳು

- ಹೂವಿನ ಪಲ್ಲಕ್ಕಿಯಲ್ಲಿ ಅಂಬೇಡ್ಕರ್,ಬಸವಣ್ಣನವರ ಮೂರ್ತಿ ಮೆರವಣಿಗೆ
- ಬಡಮಹಿಳೆ ಯರಿಗೆ ಸೀರೆ ವಿತರಣೆ

ನಗರದಲ್ಲಿ ಇಂದು

ನಿಮಿಷಾಂಬಾದೇವಿ ಜಯಂತ್ಯುತ್ಸವ: ಬೆಳಿಗ್ಗೆ 7.30ಕ್ಕೆ ಗೋಪೂಜೆ, ನಿಮಿಷಾಂಬಾದೇವಿಗೆ ಫಲಪಂಚಾಮೃತ, ಬೆಳಿಗ್ಗೆ 8ಕ್ಕೆ ದುರ್ಗಾ ಹೋಮ, 9ಕ್ಕೆ ಪೂರ್ಣಾಹುತಿ, 9.30ಕ್ಕೆ ದೇವಿಗೆ 108 ಕಲಶಾಭಿಷೇಕ, 11ಕ್ಕೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, 11.45ಕ್ಕೆ ದೇವಸ್ಥಾನದಿಂದ ನಿಮಿಷಾಂಬಾದೇವಿ ಕಲ್ಯಾಣ ಮಂಟಪಕ್ಕೆ ನಿಮಿಷಾಂಬಾದೇವಿಯ ಮೆರವಣಿಗೆ, ಆಯೋಜನೆ ಮತ್ತು ಸ್ಥಳ: ನಿಮಿಷಾಂಬಾದೇವಿ ದೇವಸ್ಥಾನ, ಅಕ್ಕಿಪೇಟೆ ಹತ್ತಿರ, ಒಟಿಸಿ ರಸ್ತೆ

ಪಟಾಲಮ್ಮ ದೇವಿ ರಥೋತ್ಸವ: ಉದ್ಘಾಟನೆ: ಸಿದ್ದರಾಮಯ್ಯ, ಸಾಂಸ್ಕೃತಿಕ ಹಾಗೂ ಜಾನಪದ ತಂಡಗಳ ಪ್ರದರ್ಶನದ ಉದ್ಘಾಟನೆ: ಡಿ.ಕೆ. ಶಿವಕುಮಾರ್, ಉಪಸ್ಥಿತಿ: ರಾಮಲಿಂಗಾರೆಡ್ಡಿ, ಆರ್. ಅಶೋಕ, ಶಿವರಾಜ ತಂಗಡಗಿ, ಎಚ್‌.ಎಂ. ರೇವಣ್ಣ, ಅಶೋಕ್ ಎಂ. ಪಟ್ಟಣ್, ನಸೀರ್ ಅಹ್ಮದ್, ಉದಯ್ ಬಿ. ಗರುಡಾಚಾರ್, ಡಿ. ಹೇಮಚಂದ್ರ ಸಾಗರ್, ಡಿ. ಪ್ರೇಮಚಂದ್ರ ಸಾಗರ್, ಆಯೋಜನೆ: ಶ್ರೀ ಪಟಾಲಮ್ಮ ದೇವಸ್ಥಾನ ಟ್ರಸ್ಟ್, ಸ್ಥಳ: ಕನಕನಪಾಳ್ಯ ಗ್ರಾಮದ ದೇವಸ್ಥಾನಗಳ ಸಮುಚ್ಛಯ, ಸಾಗರ್ ವಜ್ರ ಕನ್ವೆನ್ಷನ್ ಹಾಲ್ ಹಿಂಭಾಗ, ನಟಭೈರವ ವಿ. ವಜ್ರಮುನಿ ರಸ್ತೆ, ಎರಡನೇ ಬ್ಲಾಕ್, ಜಯನಗರ, ಬೆಳಿಗ್ಗೆ 10ರಿಂದ

ಪ್ರೊ.ಕ.ವೆಂ. ರಾಘವಾಚಾರ್, ಡಿ.ವಿ.ಜಿ., ಪ್ರೊ.ಬಿ.ಎಸ್. ಸಣ್ಣಯ್ಯ, ಡಾ.ಎಂ.ಎಲ್. ಲಲಿತಮ್ಮ ದತ್ತಿ ಉಪನ್ಯಾಸ: 'ಡಿ.ವಿ. ಗುಂಡಪ್ಪ ಅವರ ಜ್ಞಾಪಕ ಚಿತ್ರಶಾಲೆ' ಉಪನ್ಯಾಸ: ಪಿ. ನಂಜುಂಡ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಶ್ರೀನಿವಾಸ ಕಲ್ಯಾಣ ಮಹೋತ್ಸವ: ಶ್ರೀನಿವಾಸ ದೇವರ ಶೋಭಾಯಾತ್ರೆ, ಶ್ರೀನಿವಾಸ ಕಲ್ಯಾಣೋತ್ಸವ: ವಾದಿರಾಜ ತಾಯಲೂರು, ಗಾಯನ: ಶುಭಾ ಸಂತೋಷ್, ರಾಯಚೂರು ಶೇಷಗಿರಿ ದಾಸ್, ಆಯೋಜನೆ ಮತ್ತು ಸ್ಥಳ: ಶ್ರೀನಿವಾಸ ಉತ್ಸವ ಬಳಗ, ಪದ್ಮನಾಭನಗರ, ಸಂಜೆ 5ರಿಂದ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಮನೋಜ್ಞಾ ಎ. ಸೋಮ್ಲುರ್, ಅತಿಥಿಗಳು: ಸವಿತಾ ಅರುಣ್, ಪಿ. ಪ್ರವೀಣ್ ಕುಮಾರ್, ಎಚ್. ಎನ್. ಸುರೇಶ್, ಎನ್.ಎಸ್. ಸತೀಶ್, ಡಾ.ಎಸ್. ವೆಂಕಟೇಶ್, ಸ್ಥಳ: ಜೆಎಸ್‌ಎಸ್ ಸಭಾಂಗಣ, ಎಂಟನೇ ಬ್ಲಾಕ್, ಜಯನಗರ, ಸಂಜೆ 6



ಮನೋಜ್ಞಾ ಎ. ಸೋಮ್ಲುರ್

'ವಚನಾಸ್ ಇನ್ ಫ್ರೆಂಚ್' ಪುಸ್ತಕ ಬಿಡುಗಡೆ: ಮಾರ್ಕ್ ಲಾಮಿ, ಉಪಸ್ಥಿತಿ: ಜಾನ್ ಮಾರ್ಕ್ ಡೆಪಿಯರ್, ಚಿನ್ಮಯ ಚಿಗಟೇರಿ, ಆಯೋಜನೆ ಮತ್ತು ಸ್ಥಳ: ಅಲೈಯನ್ಸ್ ಫ್ರಾನ್ಸೆ ಡೆ ಬೆಂಗಳೂರು, ಸಂಜೆ 6.30

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED LADY Teachers For Primary & High School Apply Immediately Little Flower High School No.47, 2nd Cross, Saibaba Nagar, Bangalore-21 Contact: 8867010188/ 080-23126330

NORTH BANGALORE EDUCATIONAL TRUST
Opp. Indian Oil Petrol Bunk, Abbigere Main Road, Kammagondanahalli, Bangalore-560015
WANTED STAFF
Post : PRINCIPAL
Quali : M.Sc., B.Ed. (PCM Physics / Maths Major) English Medium
Exp. : 5 Years
Post : ADMINISTRATOR
Quali : MBA
Exp. : Secondary School Management Experience preferred
Post : HIGH SCHOOL TEACHER
Quali : BA, B.Ed (English Major)
Exp. : 2 Yrs High School Exp.
Post : PHYSICAL EDUCATION TEACHER
Quali : M.P.Ed. or B.P.Ed
Exp. : 5 Yrs High School Exp.
Apply on or before 17.05.2025 : Mail ID- mntioffice@rediffmail.com

SILICON CITY COLLEGE
AUTONOMOUS (A Unit of MJ Education Trust)
Autonomous Re-Accredited By NAAC with 'A' Grade
Approved by AICTE, New Delhi
#26/2, K.R.Puram, Bengaluru-36 | Ph: 8147093467, 8147093466
WALK-IN INTERVIEW
Controller of Examinations
Director School of Commerce | Director School of Computer Science
Faculty Positions
Professor/ Associate Professor/Assistant Professor in Computer Science, Mathematics, English
Front Office Executives | Admission Counsellors
Minimum 3 years of teaching experience is mandatory
Candidates may attend walk-in-interview along with their testimonials, resume and recent photograph and present a demo on
Saturday, 10th May 2025 & Sunday, 11th May 2025 from 10 AM to 3 PM
Email: chairman@siliconcitycollege.ac.in
www.siliconcitycollege.ac.in

SRI KK EDUCATION CENTRE
(Affiliated to CBSE, Aff. No. 830256)
Kadabagere, Bangalore
STAFF REQUIRED
KINDERGARTEN TEACHERS
Degree / Diploma in Early Childhood care education / NTT.
PRIMARY & MIDDLE SCHOOL
English, Mathematics, Science, Social Science, Computer Science, Hindi
HIGH SCHOOL
English, Mathematics, Social Science & Computer Science
Remuneration will not be a constraint for experienced & competent candidates.
Call: 9886535292
Write us: srikkec@gmail.com

PREMIER HIGH School Looking for Primary Teachers (English, Social Studies, Maths, Science) HIgh School Teacher (English) and PT Teacher. Contact: 9060555588/ 9538836721.

COLUMBIA COLLEGE Wanted: 1. Lecturers for Kannada, Business Studies, Accountancy, Economics, History 2. Ample Public School H M, Kannada, EVS, English, Science Details: JP Nagar 8th Phase, Bangalore-560083 PH:9845457012/ 7899093631

GURUKULA INTERNATIONAL School Requires Nursery Teachers, Maths, Science Teachers for High School, 9th cross, Near Magadi Road, Metro Station, Bangalore-23. 7829338292 7795417999

WANTED TEACHERS B.E.T English Higher Primary School, Bismillahnagar, Bangalore-560029 is in need of BSc B-ed teachers to teach Maths and science for higher primary school students. BA/ PU DEd teachers to teach lower primary school students and Graduates with NTT to teach nursery school students. Apply immediately with resume and photograph: bismillah.wc@gmail.com.

SUNRISE SCHOOL Requires Experienced Lady Teachers for Nursery, Primary & High School for-all Subjects (PE-Male) Coffee-Board Layout Hebbal Contact:9008981637 svsres21@gmail.com

SESHADRIPURAM INSTITUTIONS
27, Nagappa Street, Seshadripuram, Bengaluru-560 020. Phone: 22955350.
Website: www.set.edu.in E-mail : info@set.edu.in
require
TEACHERS
for Seshadripuram Public School at Yelahanka New Town, Bengaluru–560 064. (Affiliated to ICSE)
- **Trained Graduate Teacher** (History - Civics) M.A. B.Ed. with two years experience
- **Trained Graduate Teacher** (Geography) M.A. B.Ed. with two years experience
- **Trained Graduate Teacher** (English) M.A. B.Ed. with two years experience
- **Primary Teacher** (English) B.A. B.Ed. with two years experience
- **Primary Teacher** (Science) B.Sc. B.Ed. with two years experience
- **Primary Teacher** (Art) B.FA. / B.V.A. with one year experience

Walk-in-Interview on Saturday, 10th May 2025 @ 9.00 a. m.
Venue: Seshadripuram Educational Trust Office, No. 27, Nagappa Street, Seshadripuram, Bengaluru – 560 020.
Eligible candidates should bring handwritten application along with resume, photos & copies of testimonials at the time of Interview.
N. R. Pandith Aradhya, President — Dr. Wooday P. Krishna, Honorary General Secretary

HOLY ANGEL'S High School, Hampinagar, Vijayanagar, Bengaluru-560104 Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2025-26 for Nursery, Primary, High-School, Computer Teacher & P.E.Teacher. STATE & ICSE. Qualification: B.A./B.Sc., B.Ed M.A./ M.Sc., M.Ed, CP.Ed. Only English Medium Candidates need to apply

ACHIEVE SCHOOL, 17th Main Road, Near SLV, BDA Complex, Siddanna Layout, Banashankari Stage II, Bengaluru 560070. Mob: 91642-22288 Urgently Requires 1.Pre school COORDINATOR 2.Pre school TEACHER 3.PHYSICS-Highschool 4. ENGLISH-Middle School 5. SOCIAL STUDIES 6.KANNADA-Primary 7.HINDI- Highschool

WANTED FRESHER/ Experience Teachers/ Academic Co-ordinators ENGLISH/ MATHS/ SOCIAL/ PHYSICS/ CHEMISTRY/ BIOLOGY/ HINDI/ KANNADA/ COMPUTER TEACHERS Salary Rs.20000 to 40000/- PM ESI, PF WALK-IN INTERVIEW ALL WORKING DAYS Between 10.30 AM TO 4.00 PM MATHA'S INTERNATIONAL SCHOOL ICSE AFFILIATION CODE KA470, MATHA'S ENGLISH HIGH SCHOOL, State Syllabus, English Medium, #55/2 B, 11th K.M.Hosur Main Road, Garuve Bhavipalya, Bommanahalli post, Bangalore- 560068 M: 9449814917, 8277258609

ADITYA GROUP OF INSTITUTIONS
Yelahanka
Invites applications for the post of
- ACCOUNTS EXECUTIVES
- ADMIN EXECUTIVES
- IT & NETWORKING
- CANTEEN MANAGER
- MAINTENANCE SUPERVISORS
- TELE-CALLERS
- HOSTEL WARDENS
- HR MANAGER
- RECEPTIONIST
- HOUSEKEEPING
- DRIVERS
- LAB ASST.
- ATTENDERS
- **SECURITY SERVICE** : from reputed agencies for providing efficient security service.

Interested candidates may send their resumes with photograph to hrdept.aditya@gmail.com Contact No.: 7090001946

NEW OXFORD ENGLISH SCHOOL 6TH CROSS, GANDHINAGAR, BANGALORE-9 REQUIRES EXPERIENCED TEACHERS FOR MATHS, SCIENCE, SOCIAL, ENGLISH FOR HIGH-SCHOOL, PRIMARY. QUALIFICATION: M.A./ M.Sc./ B.A/ B.Sc./ B.Ed. TEACHERS FOR P.E/ NURSERY/ DRAWING WITH C.P. Ed./ N. T. T/ D. Ed. APPLY/ CONTACT: 8884440204/ 8884440214. E-Mail: newoxfordenglishs@gmail.com

HERITAGE PUBLIC SCHOOL Konanakunte requires HIGH SCHOOL TEACHERS for Social Science PRIMARY TEACHERS for`Maths and English KG COORDINATOR and KG TEACHERS Fresh graduates can also apply:WhatsApp or`email resume`to Mob:9901733776 Email: heritagepublicschoolkk@gmail.com

GURUKULA VIDYA KENDRA SCHOOL, AFFILIATED TO ICSE, Near Padukone Dravid Centre for Sports Excellence, Bettahalasur, Bangalore North-562157 Requires Trained and experience teachers for Middle and High School (English, Social, Biology, Computer Science) Apply with full details to Secretary: prashy.r7779@gmail.com Phone: 9945107779

EXPERIENCED TGT English and PE Teacher for High school in Marathahalli Bangalore. Please respond to trinityassociationblr@gmail.com

Engg/ Production Technical

REQUIRED CIVIL/ BILLING ENGINEER with Experience in Water Supply Projects & STP Projects in Bengaluru. Send your resume on Whatsapp 9742501313 and maloocons@live.in

Graphic Designers

WE ARE HIRING Graphic Designer/ DTP'Operator with Proficient in CorelDRAW Typing skills in Kannada, English, Fresher's can also apply. Call: 9845597155. enquiry@spoorthiads.com

Marketing & Sales

REQUIRED SALES/ Marketing Executive For Energy Saving Products, 2 Wheeler & English Must Salary 20000+ Big Incentive. 8884504422 info@behlinnov.com

WANTED DELIVERY Boys, Sales Executives, Sales Managers and Telecallers for a reputed company. Contact: 8867627879

General

WINNERS ROYAL VARSHA CREDIT COOPERATIVE SOCIETY LTD.
REGISTERED UNDER THE MINISTRY OF COOPERATION, GOVT. OF INDIA REG.NO.MSCS/CR/692/2012
Multi State Credit Co-operative Society & Jewellery (A subsidiary of the society) Launching Finance & Jewellery products in Karnataka
URGENT HIRING
TEAM LEADERS / MANAGERS
PACKAGE Best in the Industry for Right Candidates
Send your CV on hr@winnersbizerve.com
9141902446
www.winnersroyal.com

BUSINESS

Business to Business

Business

KARNATAKA ANTIBIOTICS & PHARMACEUTICALS LTD.
(A Govt of India Enterprise)
Regd. & Corp. Office : Arka The Business Centre, Plot No. 37, NTTF Main Road, 2nd Phase, Peenya Industrial Area, Bengaluru.
REQUIRED MANPOWER CONTRACTOR
KAPL Looking for Manpower Contractor for **Deployment of Manpower on Contract Basis** to our manufacturing unit, at **No. 429/1, KOTUR VILLAGE, NH-4 PUNE-BANGALORE HIGHWAY DHARWAD-580011.** The contractor should have well established and legal, statutory complied with various labour Laws. For more details visit Company **Website : www.kaplindia.com.** The interested parties with requisite experience may participate in E-Tender through KAPL online E-Tender portal i.e., **www.tenderwizard.com / KAPL. The closing date and time of E-Tender will be 22.05.2025 at 23:59 Hrs.**

FOR BUSINESS Takeovers Solutions, Arranging Funds for Mega Projects in Bangalore. Contact: Dr. Swamy Naidu, MBA (U.S.A) Anika Project Consultants, Bangalore:- 9342247637.

BUSINESS INVESTMENT OPPORTUNITY Blue Collar Manpower Company with innovative, Visionary Team,Startup from Bengaluru, looking for Partners/ investors Rs.25L to 50L, high`growth potential local`& international Opportunity,can create Jobs to Rural`& Urban`youths. Call: 8310932594

REAL ESTATE SELLING

Flat

Kanakapura Road

NEW FLATS Kanakapura Road near Forum Mall, Konanakunte Metro. Swimming Pool, Club house. 2 BHK/ 3 BHK. Good Construction. Anika Maverick Projects:- Sowmya:- 9342247637.

BUILDERS ESSENTIAL

Interior/Exterior

FURNITURE FOR sale. Good Condition teak wood elegant custom made Household furniture for sale. Genuine buyers contact 9663301222

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Resedential/ Commercial

Babusapalya

LOOKING TO Purchase Residential Property in Bangalore. Location: Babusapalaya- Prakruti Township, Site Area prefered:- 40x30 ft or 50x30 ft, with or without a residential building. Owners can send full details via email: lavellecourt@gmail.com. Agents kindly excuse.

EDUCATION CORNER

RAMAN GROUP OF INSTITUTIONS
12, Magadi Main Road, Kamakshipalya, (Near Sumanahalli Bus Stop) Bengaluru-560079
Website: www.ramaneducation.org
RAMAN P.U. COLLEGE
In association with Deeksha Vedantu
Science + Integrated ♦ Commerce
Contact: 9686162639 / 9686162637
RAMAN DEGREE COLLEGE
BBA | BCom | BCA
Contact: 9686162639 / 9686162637
RAMAN POLYTECHNIC & ITI
♦ Civil ♦ Mechanical ♦ Electrical ♦ Electronics ♦ Computer Science ♦ Automobile ♦ Fitter ♦ Electronic Mechanic ♦ Electrician
Contact: 6360903500 / 8050066771
RAMAN SCHOOL OF NURSING - GNM
Contact: 8050488623 / 8880959499
CALIFORNIA PUBLIC SCHOOL
ICSE & State Syllabus. Nursery to X Standard
Contact: 9481305504 / 8197104255
RMN-25602

R.E.S. POLYTECHNIC
Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: ♦ Computer Science ♦ IS ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
EVENING / WEEKEND CLASSES
Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466
RES-25603

TOURS & TRAVEL

Travel


VISIT HIMALAYAN Kingdom Nepal with Expert Guide Manager. All Inclusive Best Arrangements. GANESH SHENOY 8970126393

PERSONAL


Change of Name

I, PRAVEEN Kumar S/O Chitrashekhar have changed my named to Praveen (First Name) Kumar (Last Name) vide affidavit dated 05-May-2025 sworn before notary Prabhu B Devarmani, Kalaburgi 585102.

EDUCATION SUCCESS ಕ್ಲಾಸಿಫೈಡ್ಸ್









ರಾಜಧಾನಿಯಲ್ಲಿ ಹಂತ ಹಂತವಾಗಿ ಮೊಳಗಲಿದೆ ಸೈರನ್

ವಿದ್ಯುತ್ ದೀಪ ಬಂದ್ ಮಾಡಿ ಸ್ವರಕ್ಷಣೆ ತಾಲೀಮು



ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಯುದಾಳಿಯಾದ ಸಂದರ್ಭಗಳಲ್ಲಿ ನಾಗರಿಕರು ಹೇಗೆ ಸ್ವರಕ್ಷಣೆ ಮಾಡಿಕೊಳ್ಳಬೇಕು ಎಂಬುದರ ಕುರಿತು ನಗರದ ಹಲವು ಕಡೆ ಹಂತ ಹಂತವಾಗಿ 'ಆಪರೇಷನ್ ಅಭ್ಯಾಸ್' ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ಬುಧವಾರ ಮಧ್ಯಾಹ್ನ ಹಲಸೂರಿನ ನಾಗರಿಕ ರಕ್ಷಣಾ ಕೇಂದ್ರದಲ್ಲಿ ಮಾತ್ರ ತಾಲೀಮು ನಡೆಸಲಾಗುತ್ತಿದೆ. ಉಳಿದ ಸ್ಥಳಗಳಲ್ಲಿ ಹಂತಹಂತವಾಗಿ ಸೈರನ್ ಮೊಳಗಿಸಲು ನಿರ್ಧರಿಸಲಾಗಿದೆ.

ವಾಯು ದಾಳಿಯಂತಹ ಸಂದರ್ಭಗಳಲ್ಲಿ ಶತ್ರುಗಳಿಗೆ ಜನಸಂಖ್ಯೆಯಿರುವ ಸ್ಥಳಗಳ ಗುರುತು ಸಿಗದಂತೆ ತಡೆಯಲು ನಗರ ಮತ್ತು ಹಳ್ಳಿಗಳಲ್ಲಿ ವಿದ್ಯುತ್ ದೀಪಗಳು ಸಂಪೂರ್ಣ ಬಂದ್ ಆಗಲಿವೆ. ಜತೆಗೆ, ರಾತ್ರಿ ವೇಳೆ ವಾಹನ ಸಂಚಾರ ಸ್ಥಗಿತವಾಗಲಿದೆ ಎಂದು ಅಗ್ನಿಶಾಮಕ ದಳ ಸಿಬ್ಬಂದಿ ಮಾಹಿತಿ ನೀಡಿದ್ದಾರೆ.

ಕಟ್ಟಡಗಳಲ್ಲಿ ಅಗ್ನಿ ಅವಘಡ ತಡೆಯುವುದು, ರಕ್ಷಣಾ ಕಾರ್ಯಾಚರಣೆ, ಹಾನಿಗೊಂಡ ಕಟ್ಟಡಗಳಿಂದ ಸಾರ್ವಜನಿಕರ ರಕ್ಷಣೆ, ತಾತ್ಕಾಲಿಕ ಆಸ್ಪತ್ರೆ ವ್ಯವಸ್ಥೆ, ಕೆಲವು ಬಂಕರ್‌ಗಳಲ್ಲಿ ಸಾರ್ವಜನಿಕರ ಅಡಗಿಸಿಡುವುದು ಮಾಡಲಾಗುತ್ತದೆ ಎಂದಿದ್ದಾರೆ.

ಈ ಕುರಿತು ತಾಲೀಮು ವೇಳೆ ನಾಗರಿಕರಿಗೆ ಮಾಹಿತಿ ನೀಡಲಾಗುವುದು ಎಂದು ವಿವರಿಸಿದರು.

ವಿದ್ಯುತ್ ಬಂದ್

ಹಲಸೂರು ವ್ಯಾಪ್ತಿಯಲ್ಲಿ ಬುಧವಾರ ರಾತ್ರಿ ವಿದ್ಯುತ್ ದೀಪಗಳನ್ನು ಬಂದ್ ಮಾಡಿ ಸ್ವರಕ್ಷಣೆ ತಾಲೀಮು ನಡೆಸುವ ಸಾಧ್ಯತೆಯಿದೆ.

ಸೈರನ್ ಇರುವ ಸ್ಥಳಗಳು

- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್
- ಸಿಕ್ಯುಎಲ್
- ಇಎಸ್‌ಐ ಆಸ್ಪತ್ರೆ, ರಾಜಾಜಿನಗರ
- ಎನ್‌ಎಎಲ್
- ಬೆಂಗಳೂರು ಡೇರಿ
- ಕೆನರಾ ಬ್ಯಾಂಕ್, ಪುರಭವನ ವೃತ್ತ
- ಎಸ್‌ಆರ್‌ಎಸ್, ಪೀಣ್ಯ
- ವಿ.ವಿ ಟವರ್, ಅಗ್ನಿಶಾಮಕ ಠಾಣೆ
- ಜ್ಞಾನಭಾರತಿ, ಅಗ್ನಿಶಾಮಕ ಠಾಣೆ (ನಾಗರಬಾವಿ)
- ಥಣಿಸಂದ್ರ ಅಗ್ನಿಶಾಮಕ ಠಾಣೆ, ಹೆಬ್ಬಾಳ
- ಬಾಣಸವಾಡಿ, ಅಗ್ನಿಶಾಮಕ ಠಾಣೆ
- ಯಶವಂತಪುರ ಅಗ್ನಿಶಾಮಕ ಠಾಣೆ
- ಬನಶಂಕರಿ ಅಗ್ನಿಶಾಮಕ ಠಾಣೆ
- ರಾಜಾಜಿನಗರ ಅಗ್ನಿಶಾಮಕ ಠಾಣೆ
- ಚಾಮರಾಜಪೇಟೆ ಅಗ್ನಿಶಾಮಕ ಠಾಣೆ
- ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆ
- ಹಲಸೂರು ಗೇಟ್ ಪೊಲೀಸ್ ಠಾಣೆ
- ಹಲಸೂರು ಪೊಲೀಸ್ ಠಾಣೆ
- ಉಪ್ಪಾರಪೇಟೆ ಪೊಲೀಸ್ ಠಾಣೆ
- ರಾಜರಾಜೇಶ್ವರಿ ಪೊಲೀಸ್ ಠಾಣೆ
- ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ
- ಕೆಆರ್ ಮಾರುಕಟ್ಟೆ ಪೊಲೀಸ್ ಠಾಣೆ
- ವಯ್ಯಾಲಿಕಾವಲ್ ಪೊಲೀಸ್ ಠಾಣೆ
- ಹಲಸೂರು ಗೃಹರಕ್ಷಕ ದಳ, ಕೇಂದ್ರ ಕಚೇರಿ
- ಬೆಂಗಳೂರು ಗ್ರಾಮಾಂತರ ಗೃಹರಕ್ಷಕ ದಳ ಕಚೇರಿ
- ಬಾಗಲೂರು ಅಗ್ನಿಶಾಮಕ ದಳ ಕಚೇರಿ(ಯಲಹಂಕ)
- ಪೀಣ್ಯ ಅಗ್ನಿಶಾಮಕ ಠಾಣೆ
- ಅಂಜನಾಪುರ ಠಾಣೆ
- ಐಟಿಪಿಎಲ್ ಅಗ್ನಿಶಾಮಕ ಠಾಣೆ (ವೈಟ್‌ಫೀಲ್ಡ್)
- ಸರ್ಜಾಪುರ ಅಗ್ನಿಶಾಮಕ ಠಾಣೆ
- ಎಲೆಕ್ಟ್ರಾನಿಕ್ ಅಗ್ನಿಶಾಮಕ ಠಾಣೆ
- ಡೇರಿ ಸರ್ಕಲ್ ಅಗ್ನಿಶಾಮಕ ಠಾಣೆ(ಜಯನಗರ)

ನಗರದಲ್ಲಿ ಹೆಚ್ಚುತ್ತಿರುವ ಪ್ರಕರಣಗಳು • ಹ್ಯಾಂಡಲ್ ಲಾಕ್ ಮುರಿದು ಕಳ್ಳತನ

ನಿತ್ಯ ಸರಾಸರಿ 13 ದ್ವಿಚಕ್ರ ವಾಹನ ಕಳವು

• ಕೆ.ಎಸ್.ಸುನಿಲ್

ಬೆಂಗಳೂರು: ನಗರದಲ್ಲಿ ವಿವಿಧ ಮಾದರಿಯ ವಾಹನಗಳ ಕಳವು ಪ್ರಕರಣಗಳು ಹೆಚ್ಚುತ್ತಿದ್ದು, ಕಳೆದ ಎರಡೂವರೆ ವರ್ಷಗಳಲ್ಲಿ ಬಸ್, ಸೈಕಲ್ ಸಹಿತ ಹನ್ನೆರಡು ಸಾವಿರಕ್ಕೂ ಅಧಿಕ ವಾಹನಗಳ ಕಳ್ಳತನವಾಗಿವೆ. ಈ ಪೈಕಿ ದ್ವಿಚಕ್ರ ವಾಹನಗಳ ಸಂಖ್ಯೆಯೇ ಶೇಕಡ 96ರಷ್ಟಿದೆ.

2023ರಲ್ಲಿ 5,828, 2024ರಲ್ಲಿ 5,241, 2025ರಲ್ಲಿ (ಏಪ್ರಿಲ್ 25ರ ವರೆಗೆ) 1,368 ವಾಹನಗಳು ಕಳ್ಳತನವಾಗಿವೆ. ಇದರಲ್ಲಿ ಸೈಕಲ್, ಲಾರಿ, ಟ್ರಕ್, ಬಸ್, ಕಾರು, ಜೀಪು, ದ್ವಿಚಕ್ರ ವಾಹನಗಳು ಒಳಗೊಂಡಿವೆ.

2023ರಿಂದ 2025ರ ಏಪ್ರಿಲ್ ವರೆಗೆ 12,437 ವಿವಿಧ ಮಾದರಿಯ ವಾಹನಗಳು ಕಳ್ಳತನವಾಗಿವೆ. ಈ ಪೈಕಿ 11,943 ದ್ವಿಚಕ್ರ ವಾಹನ ಕಳ್ಳತನವಾಗಿದ್ದು, ನಿತ್ಯ ಸರಾಸರಿ 13ರಿಂದ 15 ದ್ವಿಚಕ್ರ ವಾಹನಗಳ ಕಳ್ಳತನ ನಡೆದಿದೆ.

ಕದ್ದ ವಾಹನಗಳನ್ನು ಆರೋಪಿಗಳು ಅಪರಾಧ ಪ್ರಕರಣಗಳಿಗೆ ಬಳಕೆ ಮಾಡುತ್ತಿರುವುದು ಪೊಲೀಸರ ತನಿಖೆ ವೇಳೆ ಪತ್ತೆಯಾಗಿದೆ. ಮಹಿಳೆಯರ ಚಿನ್ನದ ಸರ ಕಳವು, ದರೋಡೆ, ಕೊಲೆ, ಕೊಲೆ ಯತ್ನ, ಗಂಧದ ತುಂಡು ಮತ್ತು ಮಾದಕ ವಸ್ತುಗಳ ಕಳ್ಳ ಸಾಗಣೆ, ಮನೆ ಕಳ್ಳತನ, ಅಪಹರಣ ಪ್ರಕರಣಗಳಿಗೆ ಬಳಸಲಾಗಿದೆ ಎಂಬುದು ಗೊತ್ತಾಗಿದೆ.

ಹೊರ ಜಿಲ್ಲೆ ಹಾಗೂ ರಾಜ್ಯಗಳಿಂದ ಬಂದು ನಗರದಲ್ಲಿ ವಾಹನಗಳನ್ನು ಕಳ್ಳತನ ಮಾಡಿ, ಅವುಗಳ ಬಿಡಿಭಾಗಗಳನ್ನು ಬೇರ್ಪಡಿಸಿ, ವಾಹನದ ಎಂಜಿನ್ ಮತ್ತು ಚಾಸ್ಸಿ ಸಂಖ್ಯೆಯನ್ನು ತಿದ್ದುಪಡಿ ಮಾಡಿ ಆನ್‌ಲೈನ್‌ನಲ್ಲಿ ಮಾರಾಟ ಮಾಡಲಾಗುತ್ತಿದೆ.

ಸಾಲ ತೀರಿಸಲು ಹಾಗೂ ವಿಲಾಸಿ ಜೀವನ ನಡೆಸಲು ಕಳವು, ಜಾಲಿ ರೈಡ್‌ಗಾಗಿ ಐಷಾರಾಮಿ ಬೈಕ್‌ಗಳ ಕಳ್ಳತನ, ಪ್ರೇಯಸಿಗೆ ಗಿಫ್ಟ್ ಕೊಡಲು ಕಳ್ಳತನ.. ಹೀಗೆ ಹತ್ತಾರು ನೆಪದಲ್ಲಿ ದ್ವಿಚಕ್ರ ವಾಹನಗಳ ಕಳ್ಳತನ ಆಗಿರುವುದು ತನಿಖೆ ವೇಳೆ ಗೊತ್ತಾಗಿದೆ.

'ಜನ ವಸತಿ ಪ್ರದೇಶಗಳಲ್ಲಿ ಶೇ 90ರಷ್ಟು ವಾಹನಗಳ ಕಳ್ಳತನವಾಗಿದೆ. ಮನೆಗಳ ಮುಂದೆ, ಪೇಯಿಂಗ್ ಗೆಸ್ಟ್‌ಗಳ ಮುಂಭಾಗ ನಿಲ್ಲಿಸಿದ್ದ ವಾಹನಗಳು ಹೆಚ್ಚು ಕಳ್ಳತನವಾಗಿದೆ. ಕದ್ದ ವಾಹನಗಳನ್ನು ಗಂಭೀರ ಅಪರಾಧ ಕೃತ್ಯಗಳಿಗೆ ಬಳಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ರಸ್ತೆಬದಿ, ಪಾರ್ಕಿಂಗ್ ಸ್ಥಳ, ಶಾಪಿಂಗ್ ಮಾಲ್, ಉದ್ಯಾನ, ಬಸ್– ರೈಲು ನಿಲ್ದಾಣ, ಮನೆ–ಕಚೇರಿ ಮುಂದೆ ನಿಲ್ಲಿಸುವ ದ್ವಿಚಕ್ರ ವಾಹನಗಳ ಹ್ಯಾಂಡಲ್ ಲಾಕ್‌ಗಳನ್ನು ಅನ್‌ಲಾಕ್ ಮಾಡಿ ಕದಿಯುವವರ ಜಾಲ ಜೋರಾಗಿದೆ. ಈ ವಾಹನಗಳ ನಂಬರ್ ಪ್ಲೇಟ್, ಎಂಜಿನ್ ನಂಬರ್ ಬದಲಿಸಿ, ನೆರೆಯ ಆಂಧ್ರಪ್ರದೇಶ, ಕೇರಳ ಹಾಗೂ ಇತರೆ ರಾಜ್ಯದಲ್ಲಿ ಮಾರಾಟ ಮಾಡಲಾಗುತ್ತಿದೆ. ದ್ವಿಚಕ್ರ ವಾಹನಗಳಿಗೆ ಜಿಪಿಎಸ್, ವ್ಹೀಲ್ ಲಾಕಿಂಗ್, ಗಟ್ಟಿಮುಟ್ಟಾದ ಹ್ಯಾಂಡಲ್ ಲಾಕಿಂಗ್ ಮತ್ತು ಕಳವು ತಡೆ ಸಾಧನ ಅಳವಡಿಸಬೇಕು. ಅಲ್ಲದೇ ಸಿ.ಸಿ. ಟಿ.ವಿ ಕ್ಯಾಮೆರಾ ಕಣ್ಗಾವಲು ಇರುವ ಸ್ಥಳಗಳಲ್ಲಿ ವಾಹನಗಳ ನಿಲುಗಡೆ ಮಾಡಬೇಕು' ಎಂದು ಪೊಲೀಸರು ಸಲಹೆ ನೀಡಿದ್ದಾರೆ.

ಕಳವು ವಾಹನ	2023	2024	2025 (ಏಪ್ರಿಲ್ 25ರ ವರೆಗೆ)
ಸೈಕಲ್	118	83	13
ಲಾರಿ/ಟ್ರಕ್	35	15	4
ಬಸ್‌ಗಳು	3	4	0
ಕಾರು/ಜೀಪ್	92	103	24
ದ್ವಿಚಕ್ರ ವಾಹನ	5,580	5,036	1,327
ಒಟ್ಟು	5,828	5,241	1,368

₹26 ಕೋಟಿ ಮೌಲ್ಯದ ವಾಹನ ಕಳವು

2024ರಲ್ಲಿ 5,351 ದ್ವಿಚಕ್ರ ವಾಹನ ಕಳ್ಳತನ ಪ್ರಕರಣಗಳು ವರದಿಯಾಗಿದ್ದು, ಇದರ ಮೌಲ್ಯ ₹26.53 ಕೋಟಿ. ಈ ಪೈಕಿ 2,040 ಪ್ರಕರಣಗಳು ಪತ್ತೆಯಾಗಿದ್ದು, ₹13.24 ಕೋಟಿ ಮೌಲ್ಯದ ಸ್ವತ್ತು ವಶಪಡಿಸಿಕೊಳ್ಳುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಉಳಿದ ವಾಹನಗಳ ಪತ್ತೆ ಕಾರ್ಯ ನಡೆಯುತ್ತಿದೆ.

> ಹೆಚ್ಚಿನ ಗಸ್ತು, ಜಾಗೃತಿ ಅಭಿಯಾನಗಳ ಮೂಲಕ ಕಳ್ಳತನ ತಡೆಗಟ್ಟುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ
> **ಬಿ.ದಯಾನಂದ,** ನಗರ ಪೊಲೀಸ್ ಕಮಿಷನರ್

ಕಾಳಸಂತೆಯಲ್ಲಿ ಐಪಿಎಲ್ ಟಿಕೆಟ್ ಮಾರಾಟ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಸಿಬಿ ಹಾಗೂ ಸಿಎಸ್‌ಕೆ ತಂಡಗಳ ಮಧ್ಯೆ ಮೇ 3ರಂದು ಇಲ್ಲಿ ನಡೆದ ಪಂದ್ಯದ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಅಧಿಕ ಮೊತ್ತಕ್ಕೆ ಮಾರಾಟ ಮಾಡುತ್ತಿದ್ದ ಮೂವರನ್ನು ಸಿಸಿಬಿಯ ವಿಶೇಷ ವಿಚಾರಣಾ ದಳದ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ 13 ಟಿಕೆಟ್‌ಗಳು, ಮೂರು ಮೊಬೈಲ್ ಹಾಗೂ ₹1 ಸಾವಿರ ನಗದು ಜಪ್ತಿ ಮಾಡಲಾಗಿದೆ.

ಆರೋಪಿಗಳು ತಮ್ಮ ಬ್ಯಾಂಕ್ ಖಾತೆಗೆ ಜಮೆ ಮಾಡಿಸಿಕೊಂಡಿದ್ದ ₹36 ಸಾವಿರವನ್ನು ಪತ್ತೆಹಚ್ಚಿ ವಹಿವಾಟು ಸ್ಥಗಿತ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಮಾಹಿತಿ ನೀಡಿದರು.

'ಮಧ್ಯವರ್ತಿಗಳ ಮೂಲಕ ಆರೋಪಿಗಳು ಟಿಕೆಟ್ ಪಡೆದು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು' ಎಂದರು.

ಐಪಿಎಲ್ ಪಂದ್ಯದ ವೀಕ್ಷಣೆ ವೇಳೆ ಸೀಟಿಗಾಗಿ ಗಲಾಟೆ

ಐಪಿಎಸ್, ಐ.ಟಿ ಅಧಿಕಾರಿ ಕುಟುಂಬದ ಮಧ್ಯೆ ಜಗಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮೇ 3ರಂದು (ಶನಿವಾರ) ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹಾಗೂ ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ನಡುವೆ ನಡೆದ ಪಂದ್ಯದ ವೀಕ್ಷಣೆ ವೇಳೆ ಹಿರಿಯ ಐಪಿಎಸ್ ಅಧಿಕಾರಿಯ ಮಕ್ಕಳು ಹಾಗೂ ಆದಾಯ ತೆರಿಗೆ ಇಲಾಖೆ ಅಧಿಕಾರಿ ಕುಟುಂಬದ ಮಧ್ಯೆ ಸೀಟಿಗಾಗಿ ಜಗಳ ನಡೆದಿದ್ದು, ಪ್ರಕರಣವು ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯ ಮೆಟ್ಟಿಲೇರಿದೆ.

ಘಟನೆಯು ವಿಐಪಿ (ಡೈಮಂಡ್ ಬಾಕ್ಸ್) ಗ್ಯಾಲರಿಯಲ್ಲಿ ಅಧಿಕಾರಿಗಳ ಸಮ್ಮುಖದಲ್ಲಿ ನಡೆದಿದೆ.

ನೀತು ಠಾಕೂರ್ ಎಂಬುವರು ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಎಫ್‌ಐಆರ್‌ನಲ್ಲಿ ಏನಿದೆ?: 'ನನ್ನ ಮಗಳಾದ ಅಕ್ಷತಾ ಕಾತ್ಯಾಯನ(26) ಹಾಗೂ ಆಯುಷ್ ಕಾತ್ಯಾಯನ(22) ಅವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ಹಾಗೂ ಸಿಎಸ್‌ಕೆ ತಂಡಗಳ ಮಧ್ಯೆ ನಡೆದ ಪಂದ್ಯ ವೀಕ್ಷಣೆಗೆ ತೆರಳಿದ್ದರು. ಡೈಮಂಡ್ ಬಾಕ್ಸ್ ಗ್ಯಾಲರಿಯಲ್ಲಿ ಅಂದು ರಾತ್ರಿ 9.40ರ ಸುಮಾರಿಗೆ ಅಪರಿಚಿತ ವ್ಯಕ್ತಿಯೊಬ್ಬರು ವಿನಾ ಕಾರಣ ಜೋರಾಗಿ ಕಿರುಚಾಡಿ, ಬೆದರಿಕೆ ಹಾಕಿ ನನ್ನ ಮಗಳಿಗೆ ತೊಂದರೆ ಕೊಟ್ಟಿದ್ದಾರೆ. ಅಲ್ಲದೇ ನನ್ನ ಮಗಳನ್ನು ಮುಟ್ಟಿ ಅಸಭ್ಯವಾಗಿ ನಿಂದಿಸಿದ್ದಾರೆ. ದಂಪತಿ ಅವಾಚ್ಯ ಪದಗಳಿಂದ ಬೈದು ನನ್ನ ಮಗಳನ್ನು ನಿಂದಿಸಿದ್ದಾರೆ. ಈ ಎಲ್ಲ ಘಟನೆಯನ್ನು ಪುತ್ರ ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿದ್ದಾನೆ. ನನ್ನ ಮಕ್ಕಳಿಗೆ ತೊಂದರೆ ಕೊಟ್ಟಿರುವ ಆರೋಪಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ನೀತು ಠಾಕೂರ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಯಾವೆಲ್ಲಾ ಸೆಕ್ಷನ್?: ದೂರಿನ ಆಧಾರದ ಮೇಲೆ, ಪೊಲೀಸರು ಇಬ್ಬರು ಅಪರಿಚಿತರ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 351 (ಕ್ರಿಮಿನಲ್ ಬೆದರಿಕೆ), 352 (ಶಾಂತಿ ಭಂಗ ಉಂಟುಮಾಡುವ ಉದ್ದೇಶದಿಂದ ಉದ್ದೇಶ ಪೂರ್ವಕವಾಗಿ ಅವಮಾನ), 75 (ಲೈಂಗಿಕ ಕಿರುಕುಳ, ಇದರಲ್ಲಿ ಅನಗತ್ಯ ಸ್ಪರ್ಶ ಸೇರಿದೆ) ಮತ್ತು 79 (ಮಹಿಳೆಯ ಘನತೆಗೆ ಧಕ್ಕೆ ತರುವುದು) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಯಾಕಾಗಿ ಗಲಾಟೆ?: 'ವಿಐಪಿ ಬಾಕ್ಸ್‌ನಲ್ಲಿ ಐಪಿಎಸ್ ಅಧಿಕಾರಿಯ ಪುತ್ರ ಮತ್ತು ಪುತ್ರಿ ಪಂದ್ಯ ವೀಕ್ಷಿಸಲು ಕುಳಿತಿದ್ದರು. ಪುತ್ರಿ ಶೌಚಾಲಯಕ್ಕೆ ತೆರಳಿದ್ದರು. ತನ್ನ ಪರ್ಸ್ ಅನ್ನು ಸೀಟಿನ ಮೇಲೆ ಇಟ್ಟು ಹೋಗಿದ್ದರು. ಆಗ ವ್ಯಕ್ತಿಯೊಬ್ಬರು ಬಂದು ಅದೇ ಸೀಟಿನಲ್ಲಿ ಕುಳಿತಿದ್ದಾರೆ. ಅಲ್ಲೇ ಇದ್ದ ಪುತ್ರ ಪ್ರಶ್ನೆ ಮಾಡಿದ್ದಾರೆ. ಶೌಚಾಲಯದಿಂದ ಬಂದ ಪುತ್ರಿ ಸಹ ಪ್ರಶ್ನೆ ಮಾಡಿದ್ದಾರೆ. ಅದಾದ ಮೇಲೆ ಐಪಿಎಸ್ ಅಧಿಕಾರಿಗಳ ಮಕ್ಕಳು ಹಾಗೂ ಐಟಿ ಅಧಿಕಾರಿ ದಂಪತಿ ಮಧ್ಯೆ ಗಲಾಟೆ ವಿಕೋಪಕ್ಕೆ ಹೋಗಿತ್ತು' ಎಂದು ಮೂಲಗಳು ತಿಳಿಸಿವೆ.

'ಗಲಾಟೆ ಜೋರಾದ ಮೇಲೆ ಮಕ್ಕಳಿಬ್ಬರು ತಾಯಿಗೆ ಕರೆ ಮಾಡಿ ಮಾಹಿತಿ ನೀಡಿದ್ದರು ಎನ್ನಲಾಗಿದೆ. ಆಗ ತಾಯಿ ಸ್ಥಳಕ್ಕೆ ಬಂದಿದ್ದರು. ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದಾರೆ' ಎಂದು ಗೊತ್ತಾಗಿದೆ.

ಗಣ್ಯರಿಗೆ ಪಾಸ್

'ಡೈಮಂಡ್ ಬಾಕ್ಸ್' ಗಣ್ಯರಿಗಾಗಿ ಇರುವ ಗ್ಯಾಲರಿ. ಸಮಾಜದ ಗಣ್ಯ ವ್ಯಕ್ತಿಗಳಿಗೆ ಉಚಿತ ಪಾಸ್‌ಗಳನ್ನು ನೀಡಲಾಗುತ್ತದೆ. ಈ ಗ್ಯಾಲರಿಯ ಟಿಕೆಟ್‌ಗಳು ಮಾರಾಟಕ್ಕೆ ಇರುವುದಿಲ್ಲ. ಐಪಿಎಲ್ ಪಂದ್ಯಗಳಿಗೆ ಈ ಗ್ಯಾಲರಿಯ ಕೆಲವು ಪಾಸ್‌ಗಳನ್ನು ಕೆಎಸ್‌ಸಿಎ ಮತ್ತು ಆರ್‌ಸಿಬಿ ಫ್ರ್ಯಾಂಚೈಸಿ ವಿತರಿಸುತ್ತವೆ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಉನ್ನತ ಮೂಲಗಳು ತಿಳಿಸಿವೆ.



109 ಕೆ.ಜಿ. ಗಾಂಜಾ ವಶ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆ, ಗೋವಿಂದರಾಜನಗರ ಪೊಲೀಸ್ ಠಾಣೆ ಮತ್ತು ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳ ಕಾರ್ಯಾಚರಣೆ ನಡೆಸಿ, ಗಾಂಜಾ ಮಾರಾಟದಲ್ಲಿ ತೊಡಗಿದ್ದ ರೌಡಿ ಸೇರಿ ನಾಲ್ವರನ್ನು ಬಂಧಿಸಿ, ₹90 ಲಕ್ಷ ಮೌಲ್ಯದ 109 ಕೆ.ಜಿ ಗಾಂಜಾ ಹಾಗೂ ವಾಹನಗಳನ್ನು ವಶಪಡಿಕೊಂಡಿವೆ.



ಎಚ್.ಎಸ್.ಆರ್. ಲೇಔಟ್ ಠಾಣೆ ಪೊಲೀಸರು, 4ನೇ ಸೆಕ್ಟರ್, ಫ್ರೀಡಂ ಇಂಟರ್ ನ್ಯಾಷನಲ್ ಶಾಲೆ ಹತ್ತಿರದ ರಸ್ತೆಯಲ್ಲಿ ಗೂಡ್ಸ್ ವಾಹನದಲ್ಲಿಟ್ಟುಕೊಂಡು ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಮಾಲು ಸಮೇತ ಬಂಧಿಸಿದ್ದಾರೆ.

ಆರೋಪಿಯನ್ನು ವಿಚಾರಣೆಗೆ ಒಳಪಡಿಸಿದಾಗ, 'ಒಡಿಶಾದಿಂದ ಕಡಿಮೆ ಬೆಲೆಗೆ ಗಾಂಜಾ ಖರೀದಿಸಿ ತಂದು ನಗರದ ಸಾಫ್ಟ್‌ವೇರ್ ಉದ್ಯೋಗಿಗಳು ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಮಾರಾಟ ಮಾಡಿ ಹೆಚ್ಚಿನ ಲಾಭ ಗಳಿಸುತ್ತಿರುವುದಾಗಿ ಹೇಳಿದ್ದಾನೆ. ಆರೋಪಿಯಿಂದ ₹60 ಲಕ್ಷ ಮೌಲ್ಯದ ಮೊಬೈಲ್ ಫೋನ್, ಗೂಡ್ಸ್ ವಾಹನ, 62 ಕೆ.ಜಿ. ಗಾಂಜಾ ವಶಪಡಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.

ರೌಡಿ ಬಂಧನ: ಗಾಂಜಾ ಮಾರಾಟ ಮಾಡುತ್ತಿದ್ದ ರೌಡಿ ಮುಬರಾಕ್‌ನನ್ನು ಗೋವಿಂದರಾಜ ನಗರ ಠಾಣೆ ಪೊಲೀಸರು ಬಂಧಿಸಿ, ₹25 ಲಕ್ಷ ಮೌಲ್ಯದ 43 ಕೆ.ಜಿ 80 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಪಟ್ಟೇಗಾರ್ ಪಾಳ್ಯದ ದೊಡ್ಡ ಮೋರಿಯ ಬಳಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಮೇರೆಗೆ ದಾಳಿ ಮಾಡಿ, ಮಾಲು ವಶಪಡಿಸಿಕೊಂಡರು. ಈತ ಬನಶಂಕರಿ ಪೊಲೀಸ್ ಠಾಣೆಯ ರೌಡಿಶೀಟರ್ ಆಗಿದ್ದು, ಈತನ ವಿರುದ್ಧ 29 ಪ್ರಕರಣಗಳು ದಾಖಲಾಗಿವೆ ಎಂಬುದು ಗೊತ್ತಾಗಿದೆ.

ಸಿಸಿಬಿ ಕಾರ್ಯಾಚರಣೆ: ಡ್ರಗ್ಸ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿ, ₹4.20 ಲಕ್ಷ ಮೌಲ್ಯದ 4 ಕೆ.ಜಿ 185 ಗ್ರಾಂ ಗಾಂಜಾ, ಎರಡು ಮೊಬೈಲ್, ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನ ವಶಪಡಿಸಿಕೊಂಡಿದ್ದಾರೆ.

'ಬೈಯ್ಯಪ್ಪನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಜಿ.ಎಂ.ಪಾಳ್ಯದ ವೀರಾಂಜನೇಯಸ್ವಾಮಿ ದೇವಸ್ಥಾನದ ಬಳಿ ಇಬ್ಬರು ವಾಹನದಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದರು. ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಆಂಧ್ರಪ್ರದೇಶದ ಅರಕ್ಕೂ ವ್ಯಾಲಿಯ ಪರಿಚಯಸ್ಥರಿಂದ ಕಡಿಮೆ ಬೆಲೆಗೆ ಖರೀದಿಸಿ, ನಗರದ ನಾಗರಿಕರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ, ಹಣ ಸಂಪಾದನೆ ಮಾಡುತ್ತಿರುವುದಾಗಿ ಹೇಳಿದ್ದಾನೆ' ಎಂದು ಪೊಲೀಸರು ಹೇಳಿದರು.

ಆರೋಪಿಗಳ ವಿರುದ್ಧ ಬೈಯ್ಯಪ್ಪನಹಳ್ಳಿ ಮತ್ತು ಎಚ್‌ಎಎಲ್ ಪೊಲೀಸ್ ಠಾಣೆಗಳಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿರುವುದು ಪ್ರಾಥಮಿಕ ವಿಚಾರಣೆಯಿಂದ ಗೊತ್ತಾಗಿದ್ದು, ತನಿಖೆ ಮುಂದುವರಿದಿದೆ ಎಂದು ಹೇಳಿದ್ದಾರೆ.

ಸಿ.ಸಿ.ಟಿ.ವಿ ಕ್ಯಾಮೆರಾಗಳಿಗೆ ಜಿಯೊ ಟ್ಯಾಗ್



ಬೆಂಗಳೂರು: ನಗರದಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳ ಸಂಖ್ಯೆ ಹೆಚ್ಚಳವಾಗಿದೆ. ಏಪ್ರಿಲ್ 30ರ ವೇಳೆಗೆ ಒಟ್ಟು 5,35,815 ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ.

ಹೆಚ್ಚಿನ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸುವ ಮೂಲಕ ಅಪರಾಧ ತಡೆಗಟ್ಟುವಿಕೆ, ಪತ್ತೆ ಹಾಗೂ ಸಾರ್ವಜನಿಕರ ಸುರಕ್ಷತೆಯನ್ನು ಬಲಪಡಿಸಲಾಗುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಮಾಹಿತಿ ನೀಡಿದರು.

ನಗರದಲ್ಲಿ ಸಾರ್ವಜನಿಕರ ಭದ್ರತೆ ಮತ್ತು ಅಪರಾಧ ನಿಯಂತ್ರಣವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಎಂಸಿಸಿಟಿಎನ್‌ಎಸ್ (ಮೊಬೈಲ್ ಕಂಪ್ಯಾನಿಯನ್ ಫಾರ್ ಕ್ರೈಂ ಆ್ಯಂಡ್ ಕ್ರಿಮಿನಲ್ ಟ್ರ್ಯಾಕಿಂಗ್ ನೆಟ್‌ವರ್ಕ್ ಸಿಸ್ಟಂ) ವ್ಯವಸ್ಥೆಯಡಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಜಿಯೊ ಟ್ಯಾಗಿಂಗ್ ಕಾರ್ಯ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

2024ರ ಜನವರಿ 1ರ ವೇಳೆಗೆ 2,32,711 ಸಿಸಿಟಿವಿ ಕ್ಯಾಮೆರಾಗಳಿದ್ದವು. ಕಳೆದ ಒಂದು ವರ್ಷದ ಅವಧಿಯಲ್ಲಿ ಅಂದಾಜು 3 ಲಕ್ಷಕ್ಕೂ ಹೆಚ್ಚು ಹೊಸ ಕ್ಯಾಮೆರಾಗಳನ್ನು ಜಿಯೊ ಟ್ಯಾಗ್ ಮಾಡಿರುವುದು ದಾಖಲೆಯಾಗಿದೆ ಎಂದು ಮಾಹಿತಿ ನೀಡಿದರು.

ಜಿಯೊ ಟ್ಯಾಗಿಂಗ್ ಡೇಟಾ ಪೊಲೀಸ್ ಇಲಾಖೆಗೆ ನಿಖರ ಸ್ಥಳಾನುಸಾರ ಮಾಹಿತಿ ನೀಡುವುದರ ಮೂಲಕ ಅಪರಾಧ ಪ್ರಕರಣಗಳ ತನಿಖೆ ಹಾಗೂ ಕಾರ್ಯಾಚರಣೆಯನ್ನು ನಡೆಸಲು ನೆರವಾಗುತ್ತಿದೆ ಎಂದರು.

ಪ್ರಕರಣದಿಂದ ಹೆಸರು ಕೈಬಿಡಲು ₹6 ಲಕ್ಷಕ್ಕೆ ಬೇಡಿಕೆ

ಲಂಚ: ಪಿಐ, ಪಿಎಸ್‌ಐ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಂಪೇಗೌಡನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವೊಂದರಲ್ಲಿ ಆರೋಪಿಗಳ ಪರವಾಗಿ ವರದಿ ಸಲ್ಲಿಸಲು ₹1 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ, ಠಾಣೆಯ ಪಿಐ ಮತ್ತು ಪಿಎಸ್‌ಐ ಇಬ್ಬರನ್ನೂ ಲೋಕಾಯುಕ್ತ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಉದ್ಯಮಿ ಉತ್ತಮ್ ಚಂದ್ ಎಂಬವರು ಕೆಂಪೇಗೌಡ ನಗರ ಪೊಲೀಸ್ ಠಾಣೆಯಲ್ಲಿ ಇದೇ ಫೆಬ್ರುವರಿ 25ರಂದು ದೂರು ನೀಡಿದ್ದರು. 'ಕೇಶವಮೂರ್ತಿ ಎಂಬ ವ್ಯಕ್ತಿ ತನ್ನನ್ನು ಅಬಕಾರಿ ಇಲಾಖೆಯಲ್ಲಿ ಚಾಲಕ ಎಂದು ಪರಿಚಯಿಸಿಕೊಂಡಿದ್ದ. ಸಿಎಲ್–6, ಸಿಎಲ್–7 ಮದ್ಯ ಮಾರಾಟ ಪರವಾನಗಿ ಕೊಡಿಸುತ್ತೇನೆ ಎಂದು ₹1.30 ಕೋಟಿ ಮತ್ತು 1,250 ಗ್ರಾಂ ಚಿನ್ನ ಪಡೆದುಕೊಂಡು ವಾಪಸ್ ಮಾಡಿಲ್ಲ. ಕೇಳಿದಾಗ ಕೊಲೆ ಬೆದರಿಕೆ ಹಾಕಿದ್ದ' ಎಂದು ದೂರಿನಲ್ಲಿ ವಿವರಿಸಿದ್ದರು.

ಈ ದೂರಿನ ವಿಚಾರಣೆ ನಡೆಸಿದ್ದ ಕೆಂಪೇಗೌಡ ನಗರ ಪೊಲೀಸ್ ಠಾಣೆಯ ಪಿಐ ಶಿವಾಜಿ ರಾವ್ ಮತ್ತು ಪಿಎಸ್‌ಐ ಶಿವಾನಂದ ಜಿ., ಪ್ರಕರಣದಲ್ಲಿ ಕೇಶವಮೂರ್ತಿ ಪರವಾಗಿ ವರದಿ ಸಲ್ಲಿಸಲು ₹6 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ಕೇಶವಮೂರ್ತಿ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಲೋಕಾಯುಕ್ತ ಡಿವೈಎಸ್‌ಪಿ ಗಿರೀಶ್ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ರೂಪಿಸಲಾಗಿತ್ತು. ಅದರಂತೆ ಕೇಶವಮೂರ್ತಿ ಅವರು ಲಂಚದ ಹಣದಲ್ಲಿ ₹1 ಲಕ್ಷ ಮುಂಗಡದೊಂದಿಗೆ ಶಿವಾಜಿ ರಾವ್ ಮತ್ತು ಶಿವಾನಂದ ಜಿ. ಅವರನ್ನು ಪೊಲೀಸ್ ಠಾಣೆಯ ಬಳಿಯೇ ಭೇಟಿ ಮಾಡಿದ್ದರು. ಪೊಲೀಸ್ ಅಧಿಕಾರಿಗಳು ಲಂಚದ ಹಣ ಪಡೆದುಕೊಂಡ ವೇಳೆಗೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ, ಅವರನ್ನು ಬಂಧಿಸಿದರು.

ಆರೋಪಿಗಳಿಂದ ₹1 ಲಕ್ಷ ವಶಕ್ಕೆ ಪಡೆದಿದ್ದು, ತನಿಖೆ ಮುಂದುವರಿಸಲಾಗಿದೆ ಎಂದು ಲೋಕಾಯುಕ್ತ ಪೊಲೀಸರು ಮಾಹಿತಿ ನೀಡಿದ್ದಾರೆ.

ಮುಖ್ಯಾಂಶಗಳು

- ಲೋಕಾಯುಕ್ತ ಪೊಲೀಸರ ಕಾರ್ಯಾಚರಣೆ
- ಲಂಚದ ಹಣ ಪಡೆದು ಕೊಳ್ಳುತ್ತಿದ್ದಂತೆಯೇ ಬಂಧನ
- ಠಾಣೆ ಬಳಿಯೇ ನಡೆದಿದ್ದ ವ್ಯವಹಾರ





ಭಾರತೀಯರ ಸೇವಾ ಸಮಿತಿಯ ರಾಷ್ಟ್ರೀಯ ಅಧ್ಯಕ್ಷ ಹೆಚ್.ಎಂ.ರಾಮಚಂದ್ರ ಅವರು ಗಿಡಕ್ಕೆ ನೀರು ಹಾಕುವ ಮೂಲಕ ಪೂರ್ವಭಾವಿ ಸಭೆಗೆ ಚಾಲನೆ ನೀಡಿದರು

ಸರ್ವ ಸಂಘಟನೆಗಳ ಸಮಾನತೆ ಒಕ್ಕೂಟ ಅಸ್ತಿತ್ವಕ್ಕೆ: ರಾಮಚಂದ್ರ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕನ್ನಡ, ನೆಲ, ಜಲ, ಸಾಮಾಜಿಕ ನ್ಯಾಯದ ವಿಚಾರಗಳಲ್ಲಿ ಜಾತಿ ಧರ್ಮಗಳನ್ನು ಬದಿಗಿಟ್ಟು ಎಲ್ಲಾ ಸಂಘಟನೆಗಳನ್ನು ಒಳಗೊಂಡ ಒಕ್ಕೂಟವೊಂದು ಅಸ್ತಿತ್ವಕ್ಕೆ ಬರಲಿದೆ ಭಾರತೀಯರ ಸೇವಾ ಸಮಿತಿಯ ರಾಷ್ಟ್ರೀಯ ಅಧ್ಯಕ್ಷ ಹೆಚ್.ಎಂ.ರಾಮಚಂದ್ರ ಹೇಳಿದರು.

ಕೆ.ಆರ್.ಪುರ ಸಮೀಪದ ಹೂಡಿಯಲ್ಲಿ ಹಮ್ಮಿಕೊಂಡಿದ್ದ ಭಾರತೀಯರ ಸರ್ವ ಸಂಘಟನೆಗಳ ಸಮಾನತೆ ಒಕ್ಕೂಟದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಯಾವುದೇ ಮೂಲೆಯಲ್ಲಿ ಯಾವುದೇ ಸಮಸ್ಯೆ ಇರಲಿ, ಬಡವ– ಬಲ್ಲಿದ, ಮೇಲು ಕೀಳು ಎನ್ನದೆ ಜಾತಿ ಧರ್ಮ ಬದಿಗಿಟ್ಟು ಹಕ್ಕುಗಳಿಗಾಗಿ ಎಲ್ಲರೂ ಒಂದೇ ವೇದಿಕೆಯ ಮೂಲಕ ಹೋರಾಟ ರೂಪಿಸಲು ಸಮಾನತೆ ಒಕ್ಕೂಟ ರಚಿಸಲಾಗುವುದು ಎಂದರು.

ಚಿಂತಾಮಣಿ ಅಮರ್, ದೇವರಾಜ್, ಮುನಿಮಾರಪ್ಪ, ಬಸವರಾಜ ಪಡುಕೋಟೆ, ನಸ್ರು, ಡಾ. ಅಜಿತ್ ಕುಮಾರ್, ಕೃಷ್ಣಮೂರ್ತಿ, ಸೋಣಪ್ಪ, ಅಂಜಿನಪ್ಪ ಯಾದವ್ ಇದ್ದರು.

ಕಾಂತಾರ ಪ್ರೀಕ್ವೆಲ್ ಜೂನಿಯರ್ ಆರ್ಟಿಸ್ಟ್ ಸಾವು

ಉಡುಪಿ: ಕೊಲ್ಲೂರಿನ ಸೌಪರ್ಣಿಕ ನದಿಗೆ ಸ್ನೇಹಿತರ ಜೊತೆ ಸ್ನಾನಕ್ಕೆ ತೆರಳಿದ್ದ ಕೇರಳದ ಕೋಟಯಂನ ಕಪಿಲ್ (32) ನೀರಿಗೆ ಬಿದ್ದು ಮೃತಪಟ್ಟಿದ್ದಾರೆ.



ಕಪಿಲ್

ಇವರು 'ಕಾಂತಾರ ಪ್ರೀಕ್ವೆಲ್' ಸಿನಿಮಾದಲ್ಲಿ ಜೂನಿಯರ್ ಆರ್ಟಿಸ್ಟ್ ಆಗಿ ಕೆಲಸ ಮಾಡುತ್ತಿದ್ದರು.

'ಮಂಗಳವಾರ ಮಧ್ಯಾಹ್ನ 3.30ರ ವೇಳೆಗೆ ಸೌಪರ್ಣಿಕ ನದಿಯ ಸ್ನಾನ ಘಟ್ಟದ ಬಳಿ ಸ್ನೇಹಿತರೊಂದಿಗೆ ಸ್ನಾನಕ್ಕೆ ತೆರಳಿದ್ದ ವೇಳೆ ಇವರು ಕಾಲು ಜಾರಿ ನದಿಗೆ ಬಿದ್ದು, ನೀರಿನ ರಭಸಕ್ಕೆ ಕೊಚ್ಚಿ-ಹೋಗಿದ್ದರು. ಇವರ ಜೊತೆಗಿದ್ದ ಇನ್ನೊಬ್ಬ ಯುವಕನನ್ನು ರಕ್ಷಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಮುಳುಗು ತಜ್ಞ ದಿನೇಶ್ ಖಾರ್ವಿ ಅವರು ಕಾರ್ಯಾಚರಣೆ ನಡೆಸಿ ಸಂಜೆ ವೇಳೆಗೆ ಮೃತದೇಹವನ್ನು ಹೊರತೆಗೆದಿದ್ದಾರೆ.



ಲಕ್ಕೂರು ಶ್ರೀ ಮಹಾಲಕ್ಷ್ಮೀ

ಸಹಸ್ರ ಕಮಲ ಪುಷ್ಪಾರ್ಚನೆ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕಿನ ಲಕ್ಕೂರು ಗ್ರಾಮದಲ್ಲಿನ ಶ್ರೀ ಮಹಾಲಕ್ಷ್ಮೀ ದೇವಾಲಯದಲ್ಲಿ ಮೇ 8 (ಗುರುವಾರ) ಶ್ರೀ ಮಹಾಲಕ್ಷ್ಮೀಯವರಿಗೆ ಸಹಸ್ರ ಕಮಲ ಪುಷ್ಪಾರ್ಚನೆ ಹಾಗೂ ಸಹಸ್ರ ಕಮಲ ಪುಷ್ಪಯಾಗ ಮಹೋತ್ಸವ ಮತ್ತು ಶ್ರೀ ಮಹಾಲಕ್ಷ್ಮೀಯವರ ಪ್ರಾಕಾರೋತ್ಸವ ಏರ್ಪಡಿಸಲಾಗಿದೆ.

ಈ ಕಾರ್ಯಕ್ರಮಕ್ಕೆ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಎಂದು ದೇವಾಲಯದ ಅರ್ಚಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಒವುಸು ಕಾಲಿನ್ಸ್

ಗಡೀಪಾರು ಬಳಿಕವೂ ಭಾರತಕ್ಕೆ ಬಂದು ಮಾದಕ ವಸ್ತು ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಡೀಪಾರು ಮಾಡಿದ ನಂತರವೂ ಭಾರತಕ್ಕೆ ಬಂದು ಮಾದಕವಸ್ತು ಮಾರಾಟ ಮಾಡುತ್ತಿದ್ದ ಘಾನಾ ದೇಶದ ಪ್ರಜೆಯನ್ನು ಕೊತ್ತನೂರು ಠಾಣೆ ಪೊಲೀಸರು ಬಂಧಿಸಿ, ₹52.15 ಲಕ್ಷ ಮೌಲ್ಯದ ಎಂಡಿಎಂಎ ವಶಪಡಿಸಿಕೊಂಡಿದ್ದಾರೆ.

ಆರೋಪಿ ಒವುಸು ಕಾಲಿನ್ಸ್ (35) ಬಂಧಿತ ಆರೋಪಿ.

ವೈದ್ಯಕೀಯ ವೀಸಾ ಪಡೆದು ಭಾರತಕ್ಕೆ ಬಂದಿದ್ದ ಆರೋಪಿ, ಮಾದಕವಸ್ತುಗಳ ಮಾರಾಟದಲ್ಲಿ ತೊಡಗಿದ್ದ. ಈ ಹಿಂದೆ ಆರೋಪಿಯನ್ನು ಬಂಧಿಸಿದ್ದ ಮಾರತ್ ಹಳ್ಳಿ ಠಾಣೆ ಪೊಲೀಸರು ಭಾರತದಿಂದ ಗಡೀಪಾರು ಮಾಡಿದ್ದರು. ಆದರೆ ವಾಪಸ್ ಬಂದಿದ್ದ ಆರೋಪಿ, ಮತ್ತೊಬ್ಬ ವಿದೇಶಿ ಪ್ರಜೆಯಿಂದ ಕಡಿಮೆ ಬೆಲೆಗೆ ಮಾದಕ ವಸ್ತುಗಳನ್ನು ತಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಯಿಂದ ₹52.15 ಲಕ್ಷ ಮೌಲ್ಯದ 416 ಗ್ರಾಂ ಎಂಡಿಎಂ, ಕಾರು, ದ್ವಿಚಕ್ರ ವಾಹನ, ತೂಕದ ಯಂತ್ರಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಹೇಳಿದ್ದಾರೆ.

ಗಿರಿನಗರ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ: 258 ಗ್ರಾಂ ಚಿನ್ನಾಭರಣ ವಶಕ್ಕೆ

ಚಿಕ್ಕಪ್ಪನ ಲಾಕರ್‌ನಿಂದ ಚಿನ್ನ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಯಿಯ ಸಹೋದರಿಯ ಮನೆಯಲ್ಲಿ ಕಳ್ಳತನ ಮಾಡಿದ್ದ ಆರೋಪಿಯನ್ನು ಗಿರಿನಗರ ಠಾಣೆ ಪೊಲೀಸರು ಬಂಧಿಸಿ, 258 ಗ್ರಾಂ ಚಿನ್ನಾಭರಣವನ್ನು ವಶಕ್ಕೆ ಪಡೆದಿದ್ದಾರೆ.

ವೈದ್ಯ ದಂಪತಿಯ ಹೊಸಕೆರೆ-ಹಳ್ಳಿಯ ಮನೆಯಲ್ಲಿ ಕೃತ್ಯ ಎಸಗಿದ್ದ ಆರೋಪಿ ಪ್ರಥಮ್ ಎಂಬಾತನನ್ನು ಬಂಧಿಸಿದ್ದು, 24.51 ಲಕ್ಷ ಮೌಲ್ಯದ ಆಭರಣ ವಶಪಡಿಸಿಕೊಳ್ಳಲಾಗಿದೆ.

ಆರೋಪಿ ಪ್ರಥಮ್, ದೂರುದಾರರ ಪತ್ನಿಯ ಸಹೋದರಿಯ ಮಗ. ದಂಪತಿಯೇ ಪ್ರಥಮ್‌ನನ್ನು ಸಾಕಿ, ಉನ್ನತ ಶಿಕ್ಷಣ ಕೊಡಿಸಿದ್ದರು. ಚೆನ್ನೈನ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಆರೋಪಿ, ಚಿಕ್ಕಪ್ಪ ಮುಂಬೈಗೆ ತೆರಳಿದ್ದಾಗ ಮನೆಯಲ್ಲಿದ್ದ ಲಾಕರ್‌ನಿಂದ ಚಿನ್ನಾಭರಣಗಳನ್ನು ಕಳವು ಮಾಡಿದ್ದ. ಮುಂಬೈನಿಂದ ಮನೆಗೆ ಮರಳಿದ ಬಳಿಕ, ಲಾಕರ್ ಗಮನಿಸಿದಾಗ ಚಿನ್ನಾಭರಣಗಳು ಕಳ್ಳತನವಾಗಿರುವುದು ಗೊತ್ತಾಗಿತ್ತು.

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದ ಗಿರಿನಗರ ಪೊಲೀಸರು, ಮನೆಗೆಲಸದವರನ್ನು ವಿಚಾರಿಸಿದರು. ನಂತರ ಪ್ರಥಮ್, ಮನೆಗೆ ಬಂದು ಹೋಗಿರುವ ವಿಷಯ ಗೊತ್ತಾಯಿತು. ಚೆನ್ನೈನಲ್ಲಿದ್ದ ಪ್ರಥಮ್‌ನ ಬ್ಯಾಂಕ್ ವಹಿವಾಟಿನ ಮಾಹಿತಿ ಕಲೆಹಾಕಿದಾಗ ಹಣ ವರ್ಗಾವಣೆ ಆಗಿರುವುದು ಗೊತ್ತಾಯಿತು. ಕಳವು ಮಾಡಿರುವುದನ್ನು ಆರೋಪಿ ಒಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದರು.

ಆರೋಪಿ ಆಭರಣದ ಅಂಗಡಿಗಳಿಗೆ ಮಾರಾಟ ಮಾಡಿದ್ದ 258 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆದಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.



ಪೊಲೀಸರು ವಶಪಡಿಸಿಕೊಂಡಿರುವ ಚಿನ್ನಾಭರಣ

390 ಗ್ರಾಂ ಚಿನ್ನದ ಗಟ್ಟಿ ಜಪ್ತಿ

ಮನೆಯಲ್ಲಿ ಕನ್ನತನ ಹಾಗೂ ದ್ವಿಚಕ್ರ ವಾಹನಗಳ ಕನ್ನ ಮಾಡಿದ್ದ ಮಿಥುನ್ ಅಲಿಯಾಸ್ ಮಿಲ್ಕಿ ಹಾಗೂ ಸತೀಶ್ ಅಲಿಯಾಸ್ ಬುಡ್ಡ ಎಂಬುವರನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿ, 390 ಗ್ರಾಂ ಚಿನ್ನದ ಗಟ್ಟಿ, ಎರಡು ವಾಹನ ವಶಪಡಿಸಿಕೊಂಡಿದ್ದಾರೆ.


ಆರ್.ಆರ್.ನಗರದ ನಿವಾಸಿಯೊಬ್ಬರು ಜಯನಗರದ ಸಂಗಮ್ ಸರ್ಕಲ್‌ನಲ್ಲಿ ಸ್ವೀಟ್ ಅಂಗಡಿ ಬಳಿ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳವಾಗಿತ್ತು. ಈ ಬಗ್ಗೆ ತನಿಖೆ ಕೈಗೊಂಡ ಪೊಲೀಸರು, ಬಸವನಗುಡಿಯಲ್ಲಿರುವ ಗಾಂಧಿ ಬಜಾರ್ ರಸ್ತೆಯಲ್ಲಿ ದ್ವಿಚಕ್ರ ವಾಹನ ಸಮೇತ ಇಬ್ಬರನ್ನು ಬಂಧಿಸಿದರು.

ದ್ವಿಚಕ್ರ ವಾಹನ ಕಳವು ಮಾಡಿದಲ್ಲದೇ, ಠಾಣಾ ವ್ಯಾಪ್ತಿಯಲ್ಲಿ ಮತ್ತಿಬ್ಬರು ಸಹಚರರೊಂದಿಗೆ ಸೇರಿಕೊಂಡು ಮನೆ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ. ಮನೆಯಲ್ಲಿ ಚಿನ್ನಾಭರಣ ಕಳವು ಮಾಡಿದ್ದ ಕತ್ರಿಗುಪ್ಪೆ-ಯಲ್ಲಿರುವ ಆಭರಣ ಅಂಗಡಿಯಲ್ಲಿ ಮಾರಾಟ ಮಾಡಿದ್ದ390 ಗ್ರಾಂ ಚಿನ್ನದ ಗಟ್ಟಿಯನ್ನು ವಶಪಡಿಸಿಕೊಳ್ಳಲಾಯಿತು ಎಂದು ಪೊಲೀಸರು ತಿಳಿಸಿದರು.

ಕದ್ದ ಬೈಕ್‌ನಲ್ಲಿ ಸುತ್ತಾಡಿ ಮನೆಗಳನ್ನು ಗುರುತಿಸಿ, ಕಳ್ಳತನದ ಸಂಚು ರೂಪಿಸಿದ್ದರು. ಚಿನ್ನಾಭರಣ ಕದ್ದು, ಅದನ್ನು ಗಟ್ಟಿ ಮಾಡಿಸಿ ಮಾರಾಟ ಮಾಡುತ್ತಿದ್ದರು. ಮಿಥುನ್ ವಿರುದ್ಧ 9, ಸತೀಶ್ ವಿರುದ್ಧ 7 ಪ್ರಕರಣಗಳು ದಾಖಲಾಗಿವೆ. ಈ ಮೂಲಕ 4 ಪ್ರಕರಣಗಳು ಪತ್ತೆಯಾಗಿವೆ ಎಂದರು.


ನಿಧನ ವಾರ್ತೆ

ಬಸವರಾಜು



ಬೆಂಗಳೂರು: ನಾಯಂಡಹಳ್ಳಿಯ ಮಾಜಿ ಚೇರ್ಮನ್ ದಿ. ಬಿ. ರೇವಣ್ಣ ಅವರ ಪುತ್ರ ಆರ್. ಬಸವರಾಜು (74) ಅವರು ಮಂಗಳವಾರ ನಿಧನರಾದರು. ಮೃತರಿಗೆ ಪತ್ನಿ ಹಾಗೂ ಇಬ್ಬರು ಪುತ್ರರಿದ್ದಾರೆ. ಚಾಮರಾಜಪೇಟೆಯ ಟಿ.ಆರ್. ಮಿಲ್ ರುದ್ರಭೂಮಿಯಲ್ಲಿ ಮಂಗಳವಾರ ಸಂಜೆ ಅಂತ್ಯಸಂಸ್ಕಾರ ನೆರವೇರಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ತಂತ್ರಜ್ಞಾನ



ಐಫೋನ್‌ನಲ್ಲಿ ಕನ್ನಡದ ಕಂಪು

ಆ್ಯಪಲ್ ಸಾಧನಗಳನ್ನು ಸಂಪೂರ್ಣವಾಗಿ ಭಾರತೀಯ ಭಾಷೆಗಳಿಗೆ ಪರಿವರ್ತಿಸುವ ಸಂಗತಿ ಇತ್ತೀಚೆಗೆ ಗಮನ ಸೆಳೆಯುತ್ತಿದೆ. ಆ್ಯಪಲ್ ಇಂಟೆಲಿಜೆನ್ಸ್ ಕೂಡ ಭಾರತೀಯ ಮನಸ್ಸುಗಳನ್ನು ಆಕರ್ಷಿಸುತ್ತಿದೆ.

ಅವಿನಾಶ್ ಬಿ.

ಪ್ರತಿಷ್ಠೆಗೂ ಸುರಕ್ಷತೆಗೂ ಹೆಸರಾಗಿರುವ ಆ್ಯಪಲ್ ಸಾಧನಗಳು ಈಗ ಕನ್ನಡ ಸೇರಿದಂತೆ ಭಾರತೀಯ ಭಾಷೆಗಳಿಗೆ ತಕ್ಕಂತೆ ಸಂಪೂರ್ಣವಾಗಿ ಬದಲಾಗುವಂತಿವೆ. ಈಗಾಗಲೇ ಕನ್ನಡ ಸಹಿತ ಹಲವಾರು ಭಾರತೀಯ ಭಾಷೆಗಳಲ್ಲಿ ಟೈಪ್ ಮಾಡಲು ಅಂತರ್-ನಿರ್ಮಿತ ಕೀಬೋರ್ಡ್‌ಗಳನ್ನು ಒದಗಿಸಿರುವ ಆ್ಯಪಲ್, ಬಳಕೆದಾರ ಇಂಟರ್‌ಫೇಸನ್ನೇ ಆಯಾ ಭಾಷೆಗಳಿಗೆ ಬದಲಾಯಿಸುವ ಆಯ್ಕೆಯನ್ನು ಒದಗಿಸಿದೆ.

ಇದರೊಂದಿಗೆ ಚಾಟ್‌ಜಿಪಿಟಿ, ಮೆಟಾ ಎಐ, ಕೋಪೈಲಟ್, ಜೆಮಿನಿ ಮುಂತಾದ ಜನರೇಟಿವ್ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನಗಳು ಜನಸಾಮಾನ್ಯರನ್ನು ಆಕರ್ಷಿಸುತ್ತಿರುವ ಹೊತ್ತಿನಲ್ಲೇ 'ಆ್ಯಪಲ್ ಇಂಟೆಲಿಜೆನ್ಸ್' ಎಂಬ ಜನರೇಟಿವ್ ಎಐ ತಂತ್ರಜ್ಞಾನವನ್ನೂ ಭಾರತೀಯರ ಇಷ್ಟಗಳಿಗೆ ಅನುಗುಣವಾಗಿ ಒದಗಿಸಿದೆ.

ಕನ್ನಡಮಯ ಆ್ಯಪಲ್ ಐಫೋನ್

ಏಪ್ರಿಲ್ ತಿಂಗಳಲ್ಲಿ ಬಿಡುಗಡೆ ಮಾಡಿರುವ ಐಒಎಸ್ 18.4 ಕಾರ್ಯಾಚರಣಾ ವ್ಯವಸ್ಥೆ ಅಪ್‌ಡೇಟ್‌ನೊಂದಿಗೆ ಐಫೋನ್, ಐಪ್ಯಾಡ್ ಅಥವಾ ಮ್ಯಾಕ್ ಸಾಧನಗಳನ್ನು ಸಂಪೂರ್ಣವಾಗಿ ಕನ್ನಡಮಯವಾಗಿಸಿಕೊಳ್ಳಬಹುದು. ಅಂದರೆ ಈಗಾಗಲೇ ಲಭ್ಯವಿರುವ ಲಿಪ್ಯಂತರಣ (ಟ್ರಾನ್ಸ್‌ಲಿಟರೇಶನ್), ವರ್ಣಮಾಲೆ ಹಾಗೂ ಇನ್‌ಸ್ಕ್ರಿಪ್ಟ್ ಲೇಔಟ್ ಇರುವ ಕನ್ನಡ ಕೀಬೋರ್ಡ್‌ಗಳು ಮಾತ್ರವಷ್ಟೇ ಅಲ್ಲದೆ, ಸಂಪೂರ್ಣವಾಗಿ ಬಳಕೆದಾರ ಇಂಟರ್‌ಫೇಸನ್ನು (ಸೆಟ್ಟಿಂಗ್ಸ್, ಮೆನು, ಆ್ಯಪ್ ಹೆಸರುಗಳು, ಸೂಚನೆ, ಮಾಹಿತಿ, ಅಂಕಿಗಳು ಇತ್ಯಾದಿ) ಕನ್ನಡದಲ್ಲೇ ನೋಡುವಂತೆ ಹೊಂದಿಸಬಹುದು. ಉಳಿದಂತೆ ಬಾಂಗ್ಲಾ, ಗುಜರಾತಿ, ಮಲಯಾಳಂ, ಮರಾಠಿ, ಒಡಿಯಾ, ಪಂಜಾಬಿ, ತಮಿಳು, ತೆಲುಗು ಹಾಗೂ ಉರ್ದು ಭಾಷೆಗಳಲ್ಲೂ ಬಳಕೆದಾರ ಇಂಟರ್‌ಫೇಸನ್ನು ಹೊಂದಿಸಿಕೊಳ್ಳಬಹುದಾಗಿದೆ.

2017ರಲ್ಲಿ ಐಒಎಸ್ 11 ಬಿಡುಗಡೆಯಾದಾಗ ಆ್ಯಪಲ್ ಸಾಧನಗಳಲ್ಲಿ ಕನ್ನಡ ಮತ್ತು ಮಲಯಾಳಂ ಕೀಬೋರ್ಡ್‌ಗಳು ಅಂತರ್-ನಿರ್ಮಿತವಾಗಿ ಬಂದಿದ್ದವು. ಹಿಂದಿ ಮತ್ತು ತಮಿಳು ಕೀಬೋರ್ಡ್‌ಗಳು ಅದಕ್ಕೂ ಹಿಂದೆ ಐಒಎಸ್ 7ರಲ್ಲಿ ಹಾಗೂ ತೆಲುಗು, ಪಂಜಾಬಿ, ಗುಜರಾತಿ, ಮರಾಠಿ, ಬಂಗಾಳಿ ಮತ್ತು ಉರ್ದು ಕೀಬೋರ್ಡ್‌ಗಳು ಐಒಎಸ್ 9ರಲ್ಲಿ ಮತ್ತೀಗ ಅಸ್ಸಾಮಿ, ಬೋಡೋ, ಡೋಗ್ರಿ, ಕಾಶ್ಮೀರಿ, ಕೊಂಕಣಿ, ಮೈಥಿಲಿ, ಮಣಿಪುರಿ, ನೇಪಾಳಿ, ಒಡಿಯಾ, ಸಂಸ್ಕೃತ, ಸಂತಾಲಿ, ಸಿಂಧಿ ಕೀಬೋರ್ಡುಗಳೂ ಇವೆ. ಹೊಸದೇನೆಂದರೆ, ಯೂಸರ್ ಇಂಟರ್‌ಫೇಸ್ ಕೂಡ ಸಂಪೂರ್ಣವಾಗಿ ಕನ್ನಡ ಮತ್ತಿತರ 10 ಭಾರತೀಯ ಭಾಷೆಗಳಲ್ಲಿ ಕಾಣಿಸಿಕೊಳ್ಳುತ್ತಿದೆ.


ಭಾರತೀಯ ಭಾಷೆಗಳಲ್ಲಿ ಐಫೋನ್

ಹೀಗೆ ಬದಲಾಯಿಸಿಕೊಳ್ಳಿ

ಐಒಎಸ್ 18.4 (ಈಗಿನದು 18.4.1) ಕಾರ್ಯಾಚರಣಾ ವ್ಯವಸ್ಥೆಯನ್ನು ಸೆಟ್ಟಿಂಗ್ಸ್ > ಜನರಲ್ ಎಂಬಲ್ಲಿ ಸಾಫ್ಟ್‌ವೇರ್ ಅಪ್‌ಡೇಟ್ ಸ್ಪರ್ಶಿಸುವ ಮೂಲಕ ಅಪ್‌ಡೇಟ್ ಮಾಡಿಕೊಳ್ಳಿ. ನಂತರ, ಸೆಟ್ಟಿಂಗ್ಸ್‌ನಲ್ಲಿ 'ಲ್ಯಾಂಗ್ವೇಜ್ & ರೀಜನ್' ಎಂದಿರುವಲ್ಲಿ, Add Language ಮೂಲಕ ಕನ್ನಡ ಅಥವಾ ಬೇರಾವುದೇ ಭಾಷೆಯನ್ನು ಅಳವಡಿಸಿಕೊಳ್ಳಿ. ಉದಾಹರಣೆಗೆ, ಕನ್ನಡ ಅಳವಡಿಸಿದ ಬಳಿಕ, ಅದನ್ನು ಬಲಭಾಗದ ಮೂರು ಗೆರೆಯನ್ನು ಸ್ಪರ್ಶಿಸಿ ಎಳೆಯುವ ಮೂಲಕ (ಅಥವಾ ಬಲ-ಮೇಲ್ಭಾಗದಲ್ಲಿ ಎಡಿಟ್ ಬಟನ್ ಸ್ಪರ್ಶಿಸುವ ಮೂಲಕ) ಮೇಲಕ್ಕೆ ತನ್ನಿ. ಅದುವರೆಗೆ ಪ್ರಧಾನ ಭಾಷೆಯಾಗಿದ್ದ ಇಂಗ್ಲಿಷ್ ಕೆಳಕ್ಕೆ ಹೋಗುತ್ತದೆ. ನಂತರ ಫೋನ್ ರೀಸ್ಟಾರ್ಟ್ ಮಾಡಬೇಕೇ ಎಂದು ಕೇಳುತ್ತದೆ. 'ಕಂಟಿನ್ಯೂ' ಒತ್ತಿದರೆ ಕನ್ನಡ ಭಾಷೆಯನ್ನು ಹೊಂದಿಸಲಾಗುತ್ತದೆ. ಇಡೀ ಫೋನ್ ಕನ್ನಡಕ್ಕೆ ಬದಲಾಗುತ್ತದೆ. ಅದೇ ರೀತಿ, ಭಾಷೆ ಮತ್ತು ಪ್ರದೇಶ ಎಂದಿರುವಲ್ಲಿ, ಸಂಖ್ಯೆಗಳು ಎಂಬಲ್ಲಿ ಹೋದರೆ, ಕನ್ನಡ ಅಂಕಿಗಳಿಗೆ ಬದಲಾಯಿಸಿಕೊಳ್ಳುವ ಆಯ್ಕೆಯೂ ಕಾಣಿಸುತ್ತದೆ. ಹೀಗಾದಾಗ ಐಫೋನ್‌ನ ಎಲ್ಲ ವಿಷಯ, ಮೆನು, ಆ್ಯಪ್ ಹೆಸರು ಮುಂತಾದವೆಲ್ಲವೂ ಕನ್ನಡದಲ್ಲಿ ಗೋಚರಿಸುತ್ತದೆ. ಬಲದಿಂದ ಎಡಕ್ಕೆ ಸಾಗುವ ಉರ್ದುಭಾಷೆಯಲ್ಲೂ ಇದೇ ರೀತಿ ಹೊಂದಿಸಿಕೊಳ್ಳಬಹುದು.

ಭಾರತಕ್ಕೆ ಬಂತು ಆ್ಯಪಲ್ ಇಂಟೆಲಿಜೆನ್ಸ್

ಐಒಎಸ್ 18.4 ಅಪ್‌ಡೇಟ್‌ನಲ್ಲಿ ಬಹುನಿರೀಕ್ಷಿತ 'ಆ್ಯಪಲ್ ಇಂಟೆಲಿಜೆನ್ಸ್' ಎಂಬ ಜನರೇಟಿವ್ ತಂತ್ರಜ್ಞಾನವಿದೆ. ಇದರಿಂದ 'ಸಿರಿ' ಎಂಬ ಸಹಾಯಕ ತಂತ್ರಜ್ಞಾನವನ್ನು ಬಳಸಿ, ಫೋನ್‌ಗೆ ಸೂಚನೆ ನೀಡಿದ ತಕ್ಷಣವೇ ನಮಗೆ ಬೇಕಾದ ಮಾಹಿತಿ, ಪಠ್ಯ, ಅದರ ತಿದ್ದುಪಡಿ, ಚಿತ್ರರಚನೆ ಮುಂತಾದವೆಲ್ಲವನ್ನೂ ಸುಲಭವಾಗಿ ನಿರ್ವಹಿಸಬಹುದು. 'ನೋಟ್' ಆ್ಯಪ್ ಮೂಲಕವಾಗಿ ಆ್ಯಪಲ್ ಇಂಟೆಲಿಜೆನ್ಸ್‌ಗೆ ಜನಪ್ರಿಯ ಚಾಟ್‌ಜಿಪಿಟಿಯ ನೇರ ಬೆಂಬಲವಿದೆ. ಹೀಗಾಗಿ, ಚಾಟ್‌ಜಿಪಿಟಿಗೆ ಪ್ರತ್ಯೇಕ ಆ್ಯಪ್ ಅಥವಾ ಚಂದಾದಾರಿಕೆಯಿಲ್ಲದೆಯೇ ಇದನ್ನು ಬಳಸಿ, ತಮ್ಮ ಕಾರ್ಯಚಟುವಟಿಕೆಗಳನ್ನು ಮತ್ತಷ್ಟು ವೇಗವಾಗಿಸಬಹುದು. ನಿರ್ದಿಷ್ಟ ವಸ್ತು, ವಿಷಯ ಹೇಳಿ, ಇದರ ಬಗೆಗೆ ಕಥೆ ಬರೆದುಕೊಡು ಎಂದರೂ ಐಫೋನ್‌ನಲ್ಲೇ ಇದು ಸಿದ್ಧವಾಗುತ್ತದೆ.

ಯಾವೆಲ್ಲಾ ಸಾಧನಗಳಿಗೆ ಲಭ್ಯ?

ಐಒಎಸ್ 18, ಐಪ್ಯಾಡ್‌ಒಎಸ್ 18 ಹಾಗೂ ಮ್ಯಾಕ್‌ಒಎಸ್ 'ಸಿಕೋಯಾ' (Sequoia) ಕಾರ್ಯಾಚರಣಾ ವ್ಯವಸ್ಥೆಯಿರುವ ಆ್ಯಪಲ್ ಸಾಧನಗಳಲ್ಲಿ ಈ ವಿನೂತನ ಭಾಷಾ ವೈಶಿಷ್ಟ್ಯ ಹಾಗೂ ಸದ್ಯಕ್ಕೆ ಇಂಗ್ಲಿಷ್‌ನಲ್ಲಿ ಆ್ಯಪಲ್ ಇಂಟೆಲಿಜೆನ್ಸ್ ಕಾಣಸಿಗುತ್ತಿದೆ. ಐಫೋನ್ 16 ಸರಣಿಯ ಎಲ್ಲ ಫೋನ್‌ಗಳು, ಐಫೋನ್ 15 ಪ್ರೊ ಹಾಗೂ 15 ಪ್ರೊ ಮ್ಯಾಕ್ಸ್, ಐಪ್ಯಾಡ್ ಮಿನಿ ಹಾಗೂ ಎಂ1 ಮತ್ತು ನಂತರದ ಚಿಪ್‌ಸೆಟ್ ಇರುವ ಎಲ್ಲ ಐಪ್ಯಾಡ್ ಹಾಗೂ ಮ್ಯಾಕ್ ಸಾಧನಗಳಲ್ಲಿ ಕಾರ್ಯಾಚರಣಾ ವ್ಯವಸ್ಥೆ ಅಪ್‌ಡೇಟ್ ಮಾಡಿಕೊಂಡರೆ, ಈ ಹೊಸ ವೈಶಿಷ್ಟ್ಯಗಳು ದೊರೆಯುತ್ತವೆ.

ವೈಶಿಷ್ಟ್ಯ

ಸಿರಿ ಎಂಬ ಧ್ವನಿ ಸಹಾಯಕ ತಂತ್ರಜ್ಞಾನವನ್ನು ಬಳಸಿ, ಆದೇಶಗಳನ್ನು ನೀಡಿ ನಮಗೆ ಬೇಕಾದ ಕೆಲಸಗಳನ್ನು ಅಂತರ್ಜಾಲ ಸಂಪರ್ಕದ ಮೂಲಕವಾಗಿ ಮಾಡಿಕೊಳ್ಳಬಹುದು. ಇದರೊಂದಿಗೆ, ಪ್ಲೇಗ್ರೌಂಡ್ ಎಂಬ ಆ್ಯಪ್ ಮೂಲಕ, ಹಲವು ಥೀಮ್‌ಗಳ ಬೆಂಬಲದೊಂದಿಗೆ ಆಕರ್ಷಕವಾಗಿ ಚಿತ್ರಗಳನ್ನು ರಚಿಸಬಹುದು ಹಾಗೂ ನಮ್ಮದೇ ಚಿತ್ರಗಳನ್ನು ತಿದ್ದಬಹುದು. ಇದಲ್ಲದೆ, ನೋಟ್ ಆ್ಯಪ್‌ನಲ್ಲಿ ಚಾಟ್‌ಜಿಪಿಟಿಗೆ ನೀಡುವ ಕಮಾಂಡ್‌ಗಳನ್ನು ನೀಡಿ, ಒಂದು ಕಥೆ ಬರೆಯಬಹುದು ಹಾಗೂ ಅದಕ್ಕೆ ಸೂಕ್ತವಾದ ಚಿತ್ರಗಳನ್ನು ರಚಿಸಿಕೊಡುವಂತೆ ನಾವು ಈ ಕೃತಕ ಬುದ್ಧಿಮತ್ತೆ (ಆ್ಯಪಲ್ ಇಂಟೆಲಿಜೆನ್ಸ್) ವ್ಯವಸ್ಥೆಗೆ ಸೂಚಿಸಿದರೆ, ಕ್ಷಣ ಮಾತ್ರದಲ್ಲಿ ಕಥೆಯೂ ಸಿದ್ಧ, ಅದಕ್ಕೆ ಸೂಕ್ತವಾದ ಚಿತ್ರಗಳೂ ಸಿದ್ಧ. ಸೂಕ್ತ ಪ್ರಾಂಪ್ಟ್ ಅಥವಾ ಆದೇಶಗಳನ್ನು ನೀಡಿ ಪಠ್ಯ ಅಥವಾ ಚಿತ್ರವನ್ನು ತಿದ್ದುಪಡಿ ಕೂಡ ಮಾಡಬಹುದು.

ಕಾಲಿಲ್ಲದ ರೋಬೊ ಚಿಮ್ಮುತಿದೆ ನೋಡಿ

ನೇಸರ ಕಾಡನಕುಪ್ಪೆ

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಗಳು ಬಿರುಸಿನಿಂದ ನಡೆಯುತ್ತಿರುವುದು ಯಾರಿಗೆ ತಾನೇ ತಿಳಿದಿಲ್ಲ! ದಿನೇ ದಿನೇ ಪಂದ್ಯಗಳ ನಡುವಿನ ಆಟ ಕಾವೇರಿರುತ್ತಿರುವ ಮಧ್ಯೆಯೇ ಕ್ರೀಡಾಂಗಣದಲ್ಲಿ ಪುಟಪುಟನೇ ಓಡಾಡುವ 'ರೋಬೊ ನಾಯಿ'ಯನ್ನು ನೀವು ನೋಡಿರಬೇಕಲ್ಲವೇ? 'ಚಂಪಕ್' ಎಂಬ ಹೆಸರನ್ನೂ ಅದಕ್ಕೆ ನಾಮಕರಣ ಮಾಡಲಾಗಿದೆ.

ಓಡುವುದು, ನೆಗೆಯುವುದು, ಕೈಕುಲುಕುವುದು – ಹೀಗೆ ಹಲವು ಬಗೆಯ ಆಂಗಿಕ ಪ್ರದರ್ಶನಗಳನ್ನು ಮಾಡುವ ಪ್ರಯತ್ನವನ್ನು ಈ ರೋಬೊ ನಾಯಿ ಮಾಡುತ್ತಿದೆ. ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ(ಬಿಸಿಸಿಐ)ಯು ಡಬ್ಲ್ಯೂಟಿವಿಷನ್ ಮತ್ತು ಆಮ್ನಿಕ್ಯಾಮ್ ಸಹಯೋಗದಲ್ಲಿ ಈ ರೋಬೊವನ್ನು ನಿರ್ಮಿಸಿದೆ. ಇಂತಹುದೇ ಮತ್ತೊಂದು ವಿಸ್ಮಯದ ರೋಬೊವನ್ನು ಅಮೆರಿಕದ ಜಾರ್ಜಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸ್ಕೂಲ್ ಆಫ್ ಕೆಮಿಕಲ್ ಅಂಡ್ ಬಯೋ ಮಾಲಿಕ್ಯುರ್ ಎಂಜಿನಿಯರಿಂಗ್ ಸಂಸ್ಥೆಯ ಎಂಜಿನಿಯರುಗಳು ಈಗ ನಿರ್ಮಿಸಿದ್ದಾರೆ. ಇದರ ವಿಶೇಷವೇನೆಂದರೆ, ಇದು ಜಂತುಹುಳುವಿನಿಂದ ಸ್ಫೂರ್ತಿಯನ್ನು ಪಡೆದು ನಿರ್ಮಾಣವಾಗಿರುವ ರೋಬೊ. ಜಂತುಹುಳುವಿನ ರಚನೆ, ಅದರ ಚಲನವಲನಗಳನ್ನು ಅಧ್ಯಯನ ನಡೆಸಿ, ಅದನ್ನೇ ಅನುಕರಿಸುವಂತೆ ಈ ರೋಬೊವನ್ನು ವಿಜ್ಞಾನಿಗಳು ಸಿದ್ಧಪಡಿಸಿದ್ದಾರೆ.

ಕೇವಲ ಐದು ಇಂಚು ಗಾತ್ರವಿರುವ ಈ ರೋಬೊ ಹತ್ತು ಅಡಿಗಳಷ್ಟು ಎತ್ತರವನ್ನು ಜಿಗಿಯುವ ಸಾಮರ್ಥ್ಯವನ್ನು ಹೊಂದಿದೆ. ಬ್ಯಾಸ್ಕೆಟ್ ಬಾಲ್‌ನ ನೆಟ್ ಸುಮಾರು 10 ಅಡಿಗಳಷ್ಟು ಎತ್ತರದಲ್ಲಿ ಇರುತ್ತದೆ. ಈ ನೆಟ್ ಅನ್ನು ತಲುಪಿ ಅದರೊಳಗಿಂದ ತೂರಿ ಆಚೆ ಬಂದು ಈ ರೋಬೊ ಗಮನ ಸೆಳೆದಿದೆ. ಆದರೆ, ಇಲ್ಲಿ ಆಶ್ಚರ್ಯಪಡಬೇಕಾದ್ದು ಈ ರೋಬೊವನ್ನು ಇಷ್ಟು ಎತ್ತರವನ್ನು ಜಿಗಿದಿದೆಯಲ್ಲ ಎಂಬ ವಿಚಾರಕ್ಕಲ್ಲ. ಈ ರೋಬೊಗೆ ಕಾಲುಗಳೇ ಇಲ್ಲ. ಆದರೂ, ಇದಕ್ಕೆ ಅಷ್ಟು ಎತ್ತರವನ್ನು ಜಿಗಿಯುವಷ್ಟು ಶಕ್ತಿ ಇದೆ ಎನ್ನುವುದೇ ಇದರ ಹೆಗ್ಗಳಿಕೆಯಾಗಿದೆ ಎಂದು ವಿಜ್ಞಾನಿಗಳು ವ್ಯಾಖ್ಯಾನಿಸಿದ್ದಾರೆ.

ಬಯೋ ಮಿಮಿಕ್ರಿ

'ಸೈನ್ಸ್ ರೋಬೊಟಿಕ್ಸ್' ನಿಯತಕಾಲಿಕೆಯಲ್ಲಿ ಈ ಸಂಶೋಧನೆಯನ್ನು ಭಾರತೀಯ ಮೂಲದ ಸನ್ನಿ ಕುಮಾರ್ ಮತ್ತು ಇಷಾಂತ್ ತಿವಾರಿ ಅವರ ತಂಡವು ಪ್ರಕಟಿಸಿದೆ. ಇವರ ತಂಡದ ಮೊದಲ ಆವಿಷ್ಕಾರವೆಂದರೆ, ಜಂತುಹುಳುವಿನ ದೇಹದ ರಚನೆಯ ಅತಿ ಸೂಕ್ಷ್ಮ ಅಧ್ಯಯನ. ಸಾಮಾನ್ಯವಾಗಿ ಸಸ್ತನಿಗಳ ದೇಹವನ್ನೇ ಮನೆ ಮಾಡಿಕೊಳ್ಳುವ ಈ ಜಂತುವು ಸಣ್ಣಕರುಳು, ದೊಡ್ಡಕರುಳಿನಲ್ಲಿ ಸೇರಿಕೊಂಡು ಸಸ್ತನಿಯು ಸೇವಿಸುವ ಆಹಾರವನ್ನೇ ತಾನೂ ತಿನ್ನುತ್ತ ಜೀವಿಸುತ್ತಿರುತ್ತದೆ. ಈ ಹುಳುವು ಎಷ್ಟು ಬಲಶಾಲಿ ಎಂದರೆ, ಜೀರ್ಣಾಂಗ ವ್ಯವಸ್ಥೆಯಲ್ಲಿ ಇರುವ ಹೈಡ್ರೋಕ್ಲೋರಿಕ್ ಆ್ಯಸಿಡ್‌ಗೆ ಸಹಿತ ಈ ಹುಳುವನ್ನು ಅಷ್ಟು ಸುಲಭವಾಗಿ ಕೊಲ್ಲಲು ಸಾಧ್ಯವಾಗುವುದಿಲ್ಲ. ಹಾಗಾಗಿಯೇ, ಶುದ್ಧೀಕರಿಸಿದ ನೀರಿನ ಸೇವನೆ, ಆಗಿಂದ್ದಾಗ್ಗೆ ಜಂತುಹುಳುಗಳನ್ನು ಕೊಲ್ಲುವ ಔಷಧವನ್ನು ಸೇವಿಸಬೇಕು ಎಂದು ವೈದ್ಯರು ಹೇಳುವುದು. ಇಷ್ಟು ಬಲಶಾಲಿಯಾದ ಈ ಹುಳುವು ದೇಹದಲ್ಲಿನ ಅತಿ ಕ್ಲಿಷ್ಟ ರಚನೆಯ ಅಂಗಾಗಗಳ ಮೂಲಕ ಹೇಗೆ ಚಲಿಸುತ್ತದೆ ಎಂಬುದನ್ನು ವಿಜ್ಞಾನಿಗಳು ಅವಲೋಕಿಸಿದ್ದಾರೆ. ಮೊದಲನೆಯದಾಗಿ ಜಂತುಹುಳುವು ಕೊಳವೆಯಾಕಾರ ದೇಹವನ್ನು ಹೊಂದಿರುವ, ಆದರೆ ಕಾಲುಗಳಿಲ್ಲದ ಜೀವಿ. ಅತಿ ವೇಗವಾಗಿ ಮುನ್ನುಗ್ಗುವ, ಮುನ್ನುಗ್ಗಿ ಪುಟಿಯುವ ಸಾಮರ್ಥ್ಯವನ್ನು ಹೊಂದಿರುವ ಈ ಹುಳುವಿನ ಚಲನೆಯ ಕ್ರಮದ ಬಗ್ಗೆ ಅಧ್ಯಯನ ಮಾಡಿದ್ದಾರೆ. ಇವುಗಳ ಚುರುಕುತನ ವಿಜ್ಞಾನಿಗಳನ್ನು ಬೆರಗಾಗಿಸಿದೆ.

ಅದೇ ಗುಣವನ್ನು ವಿಜ್ಞಾನಿಗಳು ಈ ರೋಬೊವಿನ ವಿನ್ಯಾಸದಲ್ಲಿ ತಂದಿದ್ದಾರೆ. ಸದ್ಯಕ್ಕೆ ಅಧ್ಯಯನದ ಉದ್ದೇಶದಿಂದ ಕೇವಲ ಐದು ಇಂಚಿನ ರೋಬೊ ತಯಾರಾಗಿದೆ. ಮುಂದಿನ ದಿನಗಳಲ್ಲಿ ವಿವಿಧ ಅಗತ್ಯಗಳಿಗೆ ತಕ್ಕಂತೆ ವಿವಿಧ ಗಾತ್ರಗಳಲ್ಲಿ ಈ ರೋಬೊವಿನ ನಿರ್ಮಾಣ ಮಾಡಬಹುದಂತೆ. ಕಾಲುಗಳಿಲ್ಲದ ಜಂತುಹುಳುವನ್ನೇ ಆಕಾರದಲ್ಲಿ ಹೋಲುವ ರೋಬೊವನ್ನು ರಬ್ಬರೀಕರಿಸಿದ ವಸ್ತುವಿನಿಂದ ನಿರ್ಮಾಣ ಮಾಡಲಾಗಿದೆ. ಅತಿ ವೇಗವಾಗಿ ಕುಗ್ಗುವ–ಹಿಗ್ಗುವ ಮೂಲಕ ಇದು ಹಿಂದೆ–ಮುಂದೆ ಚಲಿಸಬಹುದು. ಕಾಲುಗಳಿಲ್ಲದ ಬಹುತೇಕ ಜೀವಿಗಳು ಹೀಗೆಯೇ ಚಲಿಸುವುದು. ಉದಾಹರಣೆಗೆ ಹಾವುಗಳು.

ನ್ಯಾನೋ ರಬ್ಬರ್ ಎಲಾಸ್ಟಿಕ್ 'ದೇಹ' ಮತ್ತು ನ್ಯಾನೋ ಬ್ಯಾಟರಿಯನ್ನು ಹೊಂದಿರುವ ಈ ರೋಬೊವಿನಲ್ಲಿ ಅತಿ ಸೂಕ್ಷ್ಮ ರೇಡಿಯೋ ಟ್ರಾನ್ಸ್‌ಮಿಟರ್ ಇದ್ದು, ತನ್ನ ಸಂಚಾರ ಸೂಚನೆಯನ್ನು ಅದರಿಂದ ಗ್ರಹಿಸಿ ಅದಕ್ಕೆ ತಕ್ಕಂತೆ ವರ್ತಿಸುತ್ತದೆ. ಮೊದಲ ಪ್ರಯತ್ನದಲ್ಲೇ ಐದು ಇಂಚಿನ ಈ ರೋಬೊ 10 ಅಡಿ ಎತ್ತರಕ್ಕೆ ನೆಗೆದಿದೆಯಂತೆ.

ಈ ಕಾಲಿಲ್ಲದ. ಹುಳುವಿನ ಆಕಾರದ ರೋಬೊ ಮುಂದೆ ಎಲ್ಲೆಲ್ಲಿ ನಮ್ಮ ಪ್ರಯೋಜನಕ್ಕೆ ಒದಗಲಿದೆ ಎಂದು ಕಾದು ನೋಡೋಣ.


ಸಾಂಕೇತಿಕ ಚಿತ್ರ

ಪ್ರತಿಕ್ರಿಯೆ

'ಕೃತಕ ಬುದ್ಧಿಮತ್ತೆ: ಜಿಪಿಯು ಏಕೆ? ಸಿಪಿಯು ಸಾಕು!' (ಏಪ್ರಿಲ್ 30, 2025) – ಈ ಲೇಖನದಲ್ಲಿ ಲೇಖಕರು ಕೃತಕ ಬುದ್ಧಿಮತ್ತೆಯ ವಿಸ್ತಾರ, ಇಂದಿನ ಸ್ಥಿತಿಗತಿಗಳನ್ನು ಗಣನೆಗೆ ತೆಗೆದುಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಭವಿಷ್ಯದ 'ಎಐ' ತಂತ್ರಜ್ಞಾನವು ಈಗ ನೋಡುತ್ತಿರುವುದಕ್ಕಿಂತ ಬಹಳ ವಿಭಿನ್ನವಾಗಿರಲಿದೆ. ಅಷ್ಟು ಡೇಟಾಗಳನ್ನು ಪ್ರಾಸೆಸ್ ಮಾಡಲು ಅಗಾಧ ಶಕ್ತಿಯ ಪ್ರಾಸೆಸರ್‌ಗಳು ಬೇಕಾಗುತ್ತವೆ. ಜಿಪಿಯು ಮಾಡಿದರೂ ಅದರಿಂದ ಉಂಟಾಗುವ 'ಹೀಟ್' ಅನ್ನು ಹೇಗೆ ಕಡಿಮೆ ಮಾಡುವುದು ಎನ್ನುವ ಆಲೋಚನೆಗಳು ನಡೆಯುತ್ತಿವೆ. ಹೀಗಿರುವಾಗ 'ಸಿಪಿಯು ಸಾಕು' ಎನ್ನುವುದು ಸರಿಯಲ್ಲ ಎನ್ನಿಸಿತು.

ಶಂಕರ್ ಎಂ., ಬೆಂಗಳೂರು


ತಂತ್ರಜ್ಞಾನ
ಕೃತಕ ಬುದ್ಧಿಮತ್ತೆ
ಜಿಪಿಯು ಏಕೆ? ಸಿಪಿಯು ಸಾಕು!

ಸಿಇಟಿ- ನೀಟ್ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣ

8) ಮೆಗ್ನೇಸಿಯಮ್ ಲೋಹದಿಂದ ಮೆಗ್ನೇಸಿಯಂ ಆಕ್ಸೈಡ್ ಉಂಟಾಗುವುದನ್ನು ಹೇಗೆ ತೋರಿಸುವಿರಿ?

ಉತ್ತರ:– ಮರಳು ಕಾಗದದಿಂದ ಉಜ್ಜ ಸ್ವಚ್ಛಗೊಳಿಸಿರುವ ಒಂದು ಮೆಗ್ನೇಸಿಯಂ ಪಟ್ಟಿಯನ್ನು ತೆಗೆದುಕೊಳ್ಳಿ, ಅದನ್ನು ಇಕ್ಕಳದ ಸಹಾಯದಿಂದ ಒಂದು ತುದಿಯಲ್ಲಿ ಹಿಡಿದುಕೊಳ್ಳಿ, ಇನ್ನೊಂದು ತುದಿಯನ್ನು ಮದ್ಯಸಾರ ದೀಪದ ಜ್ವಾಲೆಯಲ್ಲಿ ಕಾಯಿಸಿ ಮೆಗ್ನೇಸಿಯಂ ಪಟ್ಟಿಯು ಪ್ರಕಾಶಮಾನವಾದ ಬಿಳಿ ಜ್ವಾಲೆಯೊಂದಿಗೆ ಉರಿದು ಬೆಳ್ಳನೆಯ ಬೂದಿಯನ್ನು ಕೊಡುತ್ತದೆ. ಇಲ್ಲಿ ಉತ್ಪತ್ತಿಯಾದ ಈ ಬೆಳ್ಳನೆಯ ಬೂದಿಯೇ ಮೆಗ್ನಿಷಿಯಂ ಆಕ್ಸೈಡ್, ಈ ಕ್ರಿಯೆಯಲ್ಲಿ ಮೆಗ್ನೇಷಿಯಂ ಲೋಹವು ಆಕ್ಸಿಜನ್ ಜೊತೆ ಸಹವರ್ತಿಸಿ ಮೆಗ್ನೇಸಿಯಮ ಆಕ್ಸೈಡ್ ಉಂಟು ಮಾಡುತ್ತದೆ.

9) ಸೀಸದ ನೈಟ್ರೇಟ್ ದ್ರಾವಣ ಮತ್ತು ಪೊಟ್ಯಾಸಿಯಂ ಆಯೋಡೈಡ್ ನಡುವೆ ಉಂಟಾಗುವ ರಾಸಾಯನಿಕ ಕ್ರಿಯೆಯನ್ನು ವಿವರಿಸಿ

ಉತ್ತರ:– ಒಂದು ಪ್ರನಾಳದಲ್ಲಿ ಸ್ವಲ್ಪ ಸೀಸದ ನೈಟ್ರೇಟ್ ದ್ರಾವಣ ತೆಗೆದುಕೊಳ್ಳಿ ಅದಕ್ಕೆ ಸ್ವಲ್ಪ ಪೊಟ್ಯಸಿಯಂ ಆಯೋಡೈಡ್ ಸೇರಿಸಿ ಚೆನ್ನಾಗಿ ಕುಲುಕಿ ಈಗ ಘನ ಸ್ಥಿತಿಯಲ್ಲಿರುವ ಹಳದಿ ಬಣ್ಣದ ಒಂದು ಹೊಸ ಸಂಯುಕ್ತ ಉಂಟಾಗುವುದು ಕಂಡುಬರುತ್ತದೆ, ಈ ಸಂಯುಕ್ತದ ಹೆಸರು ಸೀಸದ ಅಯೋಡೈಡ್, ಈ ಕ್ರಿಯೆಯಲ್ಲಿ ಪೊಟಾಸಿಯಂ ನೈಟ್ರೇಟ್ ಎಂಬ ಇನ್ನೊಂದು ಸಂಯುಕ್ತವೂ ಉಂಟಾಗುತ್ತದೆ, ಇದು ದ್ರಾವಣದಲ್ಲಿ ವಿಲೀನಗೊಂಡಿರುತ್ತದೆ, ಸೀಸದ ನೈಟ್ರೇಟ್ ದ್ರಾವಣ ಮತ್ತು ಪೊಟ್ಯಾಸಿಯಂ ಅಯೊಡೈಡ್‌ಗಳ ನಡುವೆ ಉಂಟಾಗುವುದು ಒಂದು ರಾಸಾಯನಿಕ ಕ್ರಿಯೆ, ಈ ಕ್ರಿಯೆಯಲ್ಲಿ ಹೊಸ ಪದಾರ್ಥಗಳು ಉತ್ಪತ್ತಿಯಾಗುತ್ತದೆ.

10) ರಾಸಾಯನಿಕ ಬದಲಾವಣೆ ಎಂದರೇನು? ಉದಾಹರಣೆ ಕೊಡಿ

ಉತ್ತರ:– ಯಾವುದೇ ರಾಸಾಯನಿಕ ಪದಾರ್ಥ ಇಲ್ಲವೇ ಪದಾರ್ಥಗಳಲ್ಲಿ ಉಂಟಾಗುವ ಬದಲಾವಣೆಯಿಂದ ಒಂದು ಅಥವಾ ಹೆಚ್ಚು ಹೊಸ ರಾಸಾಯನಿಕ ಪದಾರ್ಥಗಳನ್ನು ಉತ್ಪತ್ತಿ ಮಾಡುವ ಕ್ರಿಯೆಗೆ ರಾಸಾಯನಿಕ ಬದಲಾವಣೆ ಎನ್ನುತ್ತಾರೆ. ಉದಾ:– ಇಂಧನ ದಹನ, ಕಬ್ಬಿಣ ತುಕ್ಕು ಹಿಡಿಯುವುದು

11) ರಾಸಾಯನಿಕ ಕ್ರಿಯೆ ನಡೆದಾಗ ಗಮನಿಸಬಹುದಾದ ವೀಕ್ಷಣೆಗಳ ಪಟ್ಟಿ ಮಾಡಿ.

ಉತ್ತರ:– ರಾಸಾಯನಿಕ ್ರಯೆ ನಡೆದಾಗ ಈ ಕೆಳಗಿನ ಬದಲಾವಣೆ ಕಾಣಬಹುದು

1) ಪದಾರ್ಥಗಳ ಸ್ಥಿತಿ ಬದಲಾವಣೆ
2) ಪದಾರ್ಥಗಳ ಬಣ್ಣ ಬದಲಾವಣೆ
3) ಅನಿಲ ಬಿಡುಗಡೆ
4) ತಾಪದಲ್ಲಿ ಬದಲಾವಣೆ

12) ರಾಸಾಯನಿಕ ಕ್ರಿಯೆಗೆ ಸಂಬಂಧಿಸಿದಂತೆ ಪ್ರತಿವರ್ತಕಗಳು ಮತ್ತು ಉತ್ಪನ್ನಗಳು ಎಂದರೇನು?

ಉತ್ತರ:– ಒಂದು ರಾಸಾಯನಿಕ ಕ್ರಿಯೆಯಲ್ಲಿ ಪಾಲ್ಗೊಳ್ಳುವ ಪದಾರ್ಥಗಳಿಗೆ ಪ್ರತಿವರ್ತಕಗಳು ಎಂದು ಹೆಸರು, ಒಂದು ರಾಸಾಯನಿಕ ಕ್ರಿಯೆಯಲ್ಲಿ ಉಂಟಾಗುವ ಹೊಸಪದಾರ್ಥಗಳಿಗೆ ಉತ್ಪನ್ನ ಎನ್ನುವರು

13) ರಾಸಾಯನಿಕ ಸಮೀಕರಣ ಎಂದರೇನು?


ಉತ್ತರ:– ಸಂಕೇತಗಳು ಮತ್ತು ಸೂತ್ರಗಳನ್ನು ಉಪಯೋಗಿಸಿಕೊಂಡು ಒಂದು ರಾಸಾಯನಿಕ ಕ್ರಿಯೆಯನ್ನು ಪ್ರತಿನಿಧಿಸುವುದಕ್ಕೆ ರಾಸಾಯನಿಕ ಸಮೀಕರಣ ಎನ್ನುವರು.

14) ರಾಸಾಯನಿಕ ಸಮೀಕರಣದಲ್ಲಿ ಬಾಣದ ಗುರುತು ಏನನ್ನು ಸೂಚಿಸುತ್ತದೆ?

ಉತ್ತರ:– ರಾಸಾಯನಿಕ ಸಮೀಕರಣದಲ್ಲಿರುವ ಬಾಣದ ಗುರುತು ರಾಸಾಯನಿಕ ಕ್ರಿಯೆ ಜರಗುವ ದಿಕ್ಕನ್ನು ಸೂಚಿಸುತ್ತದೆ.

15) ನೀರಿನ ವಿದ್ಯುದ್ವಿಭಜನೆಯಲ್ಲಿ ಉಪಯೋಗಿಸುವ ಉಪಕರಣದ ಅಂದವಾದ ಚಿತ್ರವನ್ನು ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:–



16) ಸಮೀಕರಣಗಳನ್ನು ಸರಿದೂಗಿಸುವ ಪ್ರಕ್ರಿಯೆಯನ್ನು ಒಳಗೊಂಡ ಹಂತಗಳನ್ನು ಬರೆಯಿರಿ

ಉತ್ತರ:– ಸಮೀಕರಣಗಳನ್ನು ಸರಿದೂಗಿಸುವ ಪ್ರಕ್ರಿಯೆಗಳ ಹಂತಗಳು ಹೀಗಿವೆ:–

ಹಂತ 1 :– ರಾಸಾಯನಿಕ ಕ್ರಿಯೆಯ ಪ್ರತಿವರ್ತಕಗಳು ಮತ್ತು ಉತ್ಪನ್ನಗಳು ಯಾವುವು ಎಂಬುದನ್ನು ಮೊದಲು ತಿಳಿದುಕೊಂಡು ಆ ರಾಸಾಯನಿಕ ಕ್ರಿಯೆಗೆ ಪದ ಸಮೀಕರಣವನ್ನು ಬರೆಯಬೇಕು. ಪ್ರತಿವರ್ತಕಗಳನ್ನು ಬಾಣದ ಗುರುತಿನ ಎಡಗಡೆಯೂ ಉತ್ಪನ್ನಗಳನ್ನು ಬಾಣದ ಗುರುತಿನ ಬಲಗಡೆ ಬರೆಯಬೇಕು

ಹಂತ–2:– ಈ ಹಂತದಲ್ಲಿ ರಾಸಾಯನಿಕ ಕ್ರಿಯೆಯ ಕಚ್ಚಾ ಸಮೀಕರಣ ಬರೆಯಲಾಗುತ್ತದೆ. ಇಲ್ಲಿ ಪ್ರತಿಪ್ರವರ್ತಕ ಮತ್ತು ಉತ್ಪನ್ನಗಳ ರಾಸಾಯನಿಕ ಸೂತ್ರ/ಸಂಕೇತಗಳನ್ನು ಉಪಯೋಗಿಸಿ ಸಮೀಕರಣಗಳನ್ನು ಬರೆಯಲಾಗುತ್ತದೆ. ಈ ಹಂತದಲ್ಲಿ ಸಮೀಕರಣವು ಸರಿದೂಗಿಸಿರುವುದಿಲ್ಲ

ಹಂತ 3 :– ಸಾಮಾನ್ಯವಾಗಿ ಗರಿಷ್ಠ ಸಂಖ್ಯೆಯ ಪರಮಾಣುಗಳನ್ನು ಹೊಂದಿರುವ ಸಂಯುಕ್ತದಿಂದ ಸರಿದೂಗಿಸುವಿಕೆಯನ್ನು ಪ್ರಾರಂಭಿಸಲಾಗುತ್ತದೆ. ಹಾಂ! ಪರಮಾಣುಗಳ ಸಂಖ್ಯೆಯನ್ನು ಸರಿದೂಗಿಸಲು ಸಂಯುಕ್ತಗಳ ಅಥವಾ ಧಾತುಗಳ ಅಣುಸೂತ್ರವನ್ನು ಬದಲಾಯಿಸುವಂತೆ ಇಲ್ಲ.

ಹಂತ 4:– ಸಮೀಕರಣದ ಎಡಭಾದಲ್ಲಿರುವ ಪ್ರತಿವರ್ತಕ ಮತ್ತು ಬಲಭಾಗದಲ್ಲಿರುವ ಉತ್ಪನ್ನದ ಪ್ರತಿಯೊಂದು ಪರಮಾಣುವಿನ ಸಂಖ್ಯೆಯನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿಕೊಳ್ಳಲಾಗುವುದು

ಹಂತ 5:– ಅತ್ಯಧಿಕ ಪರಮಾಣುಗಳುಳ್ಳ ಸಂಯುಕ್ತದಿಂದ ಸರಿದೂಗಿಸುವ ಕ್ರಿಯೆಯನ್ನು ಆರಂಭಿಸಲಾಗುತ್ತದೆ. ಸಾಮಾನ್ಯವಾಗಿ ಸರಿದೂಗಿಸದೇ ಇರುವ ಮೂರನೇ ಧಾತುವನ್ನು ಆರಿಸಿಕೊಂಡು ಸರಿದೂಗಿಸಲಾಗುತ್ತದೆ.

ಹಂತ–6:– ಅಂತಿಮವಾಗಿ ಸರಿದೂಗಿಸಿದ ಸಮೀಕರಣದ ನಿಖರತೆಯನ್ನು ಪರೀಕ್ಷಿಸಲು ಸಮೀಕರಣದ 2 ಬದಿಯಲ್ಲಿರುವ ಧಾತುಗಳ ಪರಮಾಣುಗಳನ್ನು ಲೆಕ್ಕ ಮಾಡಲಾಗುತ್ತದೆ.

ಹಂತ 7:– ಭೌತ ಸ್ಥಿತಿಗಳ ಸಂಕೇತಗಳನ್ನು ಬರೆಯುವುದು

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

PUC - CHEMISTRY

Types of Solutions

Problems:-

1. Calculate the molality of a solution containing 5.3 g of anhydrous NaCO in 200 g of water?

Ans:-

$$\text{Molality (m)} = \frac{\left(\frac{\text{Mass of solute in grams}}{\text{molar mass}}\right)}{\left(\frac{\text{Mass of solvent in grams}}{1000}\right)}$$

$$\therefore \text{Molality (m)} = \frac{5.3\,g/106\,g\,mol}{200\,g/1000} = \frac{(0.05\,mol)}{(0.2\,kg)} = 0.25\,mol/kg\,(or)\,0.25\,m$$

2. Calculate the molarity of the solution containing 4.9 grams of HSO dissolved in 250 mL of the solution?

Ans:-

$$\text{Molarity (M)} = \frac{\left(\frac{\text{Mass of solute in grams}}{\text{molar mass}}\right)}{\left(\frac{\text{Volume of solution in mL}}{1000}\right)} = \frac{4.9\,g/98\,g\,mol^{-1}}{250\,mL/1000} = \frac{(0.05\,mol)}{(0.25\,L)} = 0.2\,mol\,L^{-1}\,(or)\,0.2\,M$$

3. Calculate the normality of a solution containing 0.74 g of $Ca(OH)_2$ dissolved in 200 mL of the solution?

Ans:-

$$\text{Normality (N)} = \frac{\text{Gram equivalents of the solute}}{\text{Volume of solution in litres}}$$

$$\text{Equivalent mass of } Ca(OH)_2 = \frac{\text{Molar mass}}{\text{Acidity}} = \frac{74}{2} = 37\,g\,equiv^{-1}$$

$$\therefore \text{Normality of solution (N)} = \frac{0.74\,g/37\,g\,equiv^{-1}}{200\,mL/1000} = 0.1\,equiv/L\,(or)\,0.1\,N$$

4. The density of 10% by mass of KCl solution is 1.06 g cm^{-3}. Calculate the molarity of the solution.

Ans:- ***I. Calculation of volume of the solution:***

Mass of the solution = 100 g

Density of the solution = 1.06 g cm^{-3}

$$\text{Volume of solution} = \frac{\text{Mass of solution}}{\text{Density}} = \frac{100\,g}{1.06\,g\,cm^{-3}} = 94.34\,cm^3$$

II. Calculation of molarity of the solution:

$$\text{Molarity of solution (M)} = \frac{\left(\frac{\text{Mass of KCl}}{\text{Molar mass of KCl}}\right)}{\text{Volume of solution in } dm^3}$$

Mass of the KCl = 10 g

Molar mass of KCl = 39 + 35.5 = 74.5 g mol^{-1}

Volume of the solution = 94.34 cm^3 = 0.0943 dm^3

$$\text{Molarity (M)} = \frac{10\,g/(74.5\,g\,mol^{-1})}{0.0943\,dm^3} = 1.42\,mol\,dm^{-3} = 1.42\,M$$

5. 3.6 M sulphuric acid solution is 29% H_2SO_4. Calculate the density of the solution.

Soln:- ***I. Calculation of mass of the solution:***

Mass of H_2SO_4 in 3.6 M solution

= (3.6 mol) x (98 g mol^{-1})

= 352.8 g

29% H_2SO_4 means,

29 g of H_2SO_4 are present in solution = 100 g

∴ 352.8 g of H_2SO_4 are present in solution

$$= \frac{100\,g}{29\,g}(352.8\,g) = 1216.5\,g$$

II. Calculation of the density of the solution:

$$\text{Density of the solution} = \frac{\text{Mass of solution}}{\text{Volume of solution}} = \frac{1216.5\,g}{1000\,mL} = 1.22\,g\,mL^{-1}$$

6. The solubility of $Ba(OH)_2 . 8H_2O$ in water at 298 K is 5.6 g per 100 g of water. What is the molality of the hydroxide ions in a saturated solution of barium hydroxide at 298 K? (Atomic mass of Ba = 137, O = 16)

Soln:- ***I. Calculation of molality of the solution:***

$$\text{Molality of solution (m)} = \frac{\left(\frac{\text{Mass of solute}}{\text{Molar mass of solute}}\right)}{\text{Mass of solvent in kg}}$$

Mass of solute, $Ba(OH)_2 . 8H_2O$ = 5.6 g

Molar mass of solute, $Ba(OH)_2 . 8H_2O$

= 137 + 2 x (16 + 1) + 8 x 18 = 315 g mol^{-1}

Mass of the solvent (water) = 100 g = 0.1 kg

$$\text{Molality (m)} = \frac{5.6\,g/(315\,g\,mol^{-1})}{0.1\,kg} = 0.18\,mol\,kg^{-1} = 0.18\,m$$

II. Calculation of molality of the OH^- ions:

Barium hydroxide ionises in water as follows –

$$Ba(OH)_2 \xrightarrow{(aq)} Ba^{2+}(aq) + 2OH^-(aq)$$

This shows that the molality of OH^- ions is twice the molaltiy of $Ba(OH)_2$ = 2 x 0.18 m = 0.36 m

7. A solution has been prepared by dissolving 0.49 g of sulphuric acid in 100 mL of the solution. Calculate normality of the solution.

Soln:- Normality of solution (N)

$$= \frac{\text{No. of gram equivalents of } H_2SO_4}{\text{Volume of solution in litres}}$$

Mass of H_2SO_4 = 0.49 g

Equivalent Mass of H_2SO_4 =

$$= \frac{\text{Molar mass}}{\text{Basicity}} = \frac{98.0}{2} = 49.0\,g\,equiv^{-1}$$

Volume of the solution = 100 mL

$$= \frac{100}{1000} = 0.1\,L$$

$$\text{Normality of solution (N)} = \frac{\left(\frac{\text{Mass of } H_2SO_4}{\text{Eq. mass of } H_2SO_4}\right)}{\text{Volume of solution in litres}} = \frac{0.49\,g/49\,g\,equiv^{-1}}{0.1\,L} = 0.1\,equiv.L^{-1} = 0.1\,N$$

5. Calculate the number of molecules of oxalic acid ($H_2C_2O_4 . 2H_2O$) in 100 mL of 0.2 N oxalic acid solution.

Soln:- ***I. Calculation of mass of the oxalic acid:***

$$\text{Normality of solution} = \frac{\left(\frac{\text{Mass of Oxalic acid}}{\text{Equivalent mass}}\right)}{\text{Volume of solution in litres}} = 0.2\,N = 0.2\,equiv.L^{-1}$$

Equivalent mass of the acid = Molar mass / Basicity

(Contd……)

ಹಿಂದುತ್ವವಾದಿ ಕಾರ್ಯಕರ್ತ, ರೌಡಿ ಶೀಟರ್ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣ

ಪೊಲೀಸ್ ಮೇಲಿನ ಆರೋಪ ತನಿಖೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಹಿಂದುತ್ವವಾದಿ ಕಾರ್ಯಕರ್ತ, ರೌಡಿ ಶೀಟರ್ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳು ಮಾಡಿರುವ ಆರೋಪಗಳ ಬಗ್ಗೆ ಪರಿಶೀಲನೆಗೆ ಮುಂದಾಗಿರುವ ಪೊಲೀಸರು, ಬಜಪೆ ಪೊಲೀಸ್ ಠಾಣೆ ಸಿಬ್ಬಂದಿಯೊಬ್ಬರ ವಿರುದ್ಧ ತನಿಖೆ ನಡೆಸುತ್ತಿದ್ದಾರೆ.

'ಬಜಪೆ ಪೊಲೀಸ್ ಠಾಣೆಯ ಗುಪ್ತಚರ ವಿಭಾಗದ ಸಿಬ್ಬಂದಿಯೊಬ್ಬರು ಸುಹಾಸ್ ಹತ್ಯೆ ಆರೋಪಿಗಳ ಜೊತೆ ಸಂತೋಷ ಕೂಟದಲ್ಲಿ ಭಾಗಿಯಾಗಿದ್ದ ಆರೋಪದ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಎಸಿಪಿ ದರ್ಜೆಯ ಅಧಿಕಾರಿಯೊಬ್ಬರಿಗೆ ಪೊಲೀಸ್ ಕಮಿಷನರ್ ಸೂಚನೆ ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ತನಿಖೆ ಬಗ್ಗೆ ಕೆಲವು ರಾಜಕೀಯ ಪಕ್ಷಗಳು ಮಾಡಿರುವ ಆರೋಪಗಳೂ ನಮ್ಮ ಗಮನಕ್ಕೂ ಬಂದಿವೆ. ಅವರು ಆರೋಪಿಸಿರುವ ಅಂಶಗಳ ಬಗ್ಗೆಯೂ ಪರಿಶೀಲನೆ ಮಾಡುತ್ತಿದ್ದೇವೆ. ಈಗಾಗಲೇ ಬಂಧನಕ್ಕೊಳಗಾಗಿರುವ ಆರೋಪಿಗಳಲ್ಲದೇ ಇತರರು ಈ ಕೃತ್ಯದಲ್ಲಿ ಭಾಗಿಯಾಗಿರುವ ಸುಳಿವು ಹಾಗೂ ಪುರಾವೆ ಸಿಕ್ಕರೆ ಅವರನ್ನೂ ಮುಲಾಜಿಲ್ಲದೇ ಬಂಧಿಸಲಿದ್ದೇವೆ. ತನಿಖೆಯಲ್ಲಿ ನಮ್ಮ ಕಡೆಯಿಂದ ಯಾವುದೇ ತಾರತಮ್ಯ ಆಗಲು ಅವಕಾಶ ನೀಡುವುದಿಲ್ಲ' ಎಂದು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ 'ಪ್ರಜಾವಾಣಿ'ಗೆ ತಿಳಿಸಿದರು.

ಹಣ ವರ್ಗಾವಣೆ -ವಿಶೇಷ ನಿಗಾ: 'ಆರೋಪಿಗಳ ಆರ್ಥಿಕ ವಹಿವಾಟುಗಳನ್ನೂ ತನಿಖೆಗೆ ಒಳಪಡಿಸಲಾಗಿದೆ. ಹತ್ಯೆಯ ಪ್ರಮುಖ ಆರೋಪಿ ಸಫ್ವಾನ್ ಖಾತೆಗೆ ವಿದೇಶಿ ಮೂಲದಿಂದ ಹಣ ವರ್ಗಾವಣೆ ಆಗಿರುವ ಬಗ್ಗೆ ನಮಗೆ ಈ ವರೆಗೆ ಯಾವುದೇ ಪುರಾವೆ ಸಿಕ್ಕಿಲ್ಲ. ಸುಹಾಸ್ ಹತ್ಯೆಗೆ ಸಂಬಂಧಿಸಿದಂತೆ ನಡೆದಿರಬಹುದಾದ ಹಣಕಾಸು ವರ್ಗಾವಣೆಯ ಮೇಲೂ ವಿಶೇಷ ನಿಗಾ ಇಟ್ಟಿದ್ದೇವೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಕಮಿಷನರೇಟ್ ವ್ಯಾಪ್ತಿಯಲ್ಲಿ ಇದುವರೆಗೆ ಪ್ರಮುಖ ಅಪರಾಧ ಕೃತ್ಯಗಳು, ಕೋಮು ಅಪರಾಧ ಚಟುವಟಿಕೆಯಲ್ಲಿ ಭಾಗಿಯಾದ ಒಟ್ಟು 18 ಮಂದಿ ಆರೋಪಿಗಳ ಮನೆಗಳಲ್ಲಿ ಪೊಲೀಸರು ತಪಾಸಣೆ ನಡೆಸಿದ್ದಾರೆ.

'ಸುಹಾಸ್ ಹತ್ಯೆಯಲ್ಲಿ ಉದ್ಯಮಿ ಕೈವಾಡ'

'ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದಲ್ಲಿ ಚಿಕ್ಕಮಗಳೂರು ಜಿಲ್ಲೆ ಕಳಸದ ಉದ್ಯಮಿಯೊಬ್ಬನ ಕೈವಾಡವಿರುವ ಸಂದೇಹ ಇದ್ದು, ಆತನನ್ನು ಬಂಧಿಸಬೇಕು' ಎಂದು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ ಸತೀಶ ಕುಂಪಲ ಒತ್ತಾಯಿಸಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಬಂಧಿತ ಆರೋಪಿಗಳಾದ ರಂಜಿತ್ ಮತ್ತು ನಾಗರಾಜ್ ಅವರು ಈ ಉದ್ಯಮಿ ಬಳಿ ಕೆಲಸಕ್ಕಿದ್ದರು. ಈ ಉದ್ಯಮಿ ಜೊತೆ ನಂಟು ಹೊಂದಿರುವ ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್ ಹಾಗೂ ಕೆಪಿಸಿಸಿ ಉಪಾಧ್ಯಕ್ಷ ಇನಾಯತ್ ಅಲಿಯನ್ನೂ ವಿಚಾರಣೆಗೆ ಒಳಪಡಿಸಬೇಕು' ಎಂದರು.

'ಕಳಸದ ಹೋಮ್ ಸ್ಟೇಯಲ್ಲಿ, ಈ ಹತ್ಯೆ ನಡೆಯುವ ಮುನ್ನ ಆರೋಪಿಗಳು ಸಂತೋಷಕೂಟ ನಡೆಸಿದ್ದ ಫೋಟೊಗಳಿವೆ. ಪ್ರಮುಖ ಆರೋಪಿ ಸಫ್ವಾನ್ ಖಾತೆಗೆ ವಿದೇಶದಿಂದ ಹಣ ವರ್ಗಾವಣೆ ಆಗಿರುವ ಸಂದೇಹವಿದೆ' ಎಂದರು.

ಬಿಜೆಪಿ ಸರ್ಕಾರದಲ್ಲೇ ರೌಡಿಶೀಟ್: ದಿನೇಶ್


ದಿನೇಶ್ ಗುಂಡೂರಾವ್

ಬೆಂಗಳೂರು: 'ಹತ್ಯೆಯಾದ ಸುಹಾಸ್ ಶೆಟ್ಟಿ ವಿರುದ್ಧ ರೌಡಿ ಶೀಟ್ ತೆರೆದಿದ್ದು 2020ರಲ್ಲಿ. ಆಗ ಅಧಿಕಾರದಲ್ಲಿದ್ದದ್ದು ಬಿಜೆಪಿ ಸರ್ಕಾರ. ಗೃಹ ಸಚಿವರಾಗಿದ್ದವರು ಬಸವರಾಜ ಬೊಮ್ಮಾಯಿ. ಇಂದು ಸುಹಾಸ್‌ನನ್ನು ಮಹಾತ್ಮ ಎಂದು ಬಿಂಬಿಸುತ್ತಿರುವ ಬಿಜೆಪಿಯವರು ಆಗ ಯಾಕೆ ರೌಡಿ ಪಟ್ಟಿಗೆ ಸೇರಿಸಿದ್ದರು' ಎಂದು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪ್ರಶ್ನಿಸಿದ್ದಾರೆ.

ಸುಹಾಸ್ ಶೆಟ್ಟಿ ವಿರುದ್ಧ ರೌಡಿ ಶೀಟ್ ತೆರೆಯಲು ಪೊಲೀಸ್ ಇಲಾಖೆ ಹೊರಡಿಸಿದ್ದ ಆದೇಶದ ಪ್ರತಿಯನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿರುವ ದಿನೇಶ್, 'ಅಮಾಯಕರ ತಲೆಯಲ್ಲಿ ಮತಾಂಧತೆಯ ಅಮಲು ತುಂಬಿ ಕಂಡವರ ಮಕ್ಕಳನ್ನು ಬಾವಿಗೆ ತಳ್ಳುತ್ತಿರುವ ಬಿಜೆಪಿ ನಾಯಕರ ಗಮನಕ್ಕೆ ಇದು' ಎಂದಿದ್ದಾರೆ. 'ಕರಾವಳಿಯನ್ನು ಕೋಮು ಪ್ರಯೋಗ ಶಾಲೆಯಾಗಿ ಮಾಡಿಕೊಂಡಿರುವ ಬಿಜೆಪಿಯವರೇ ಕ್ರಿಮಿನಲ್‌ಗಳ ನಿಜವಾದ ಸೃಷ್ಟಿಕರ್ತರು. ಅವರು ಅಧಿಕಾರದಲ್ಲಿದ್ದಾಗ ಕ್ರಿಮಿನಲ್‌ಗಳನ್ನು ಸೃಷ್ಟಿಸುತ್ತಾರೆ, ರೌಡಿ ಶೀಟ್ ತೆರೆಯುತ್ತಾರೆ. ಹಣ ಬಿದ್ದ ಕೂಡಲೆ ಅದೇ ಕ್ರಿಮಿನಲ್‌ಗಳನ್ನು ಮಹಾತ್ಮರಂತೆ ಬಿಂಬಿಸಿ ಹುತಾತ್ಮರನ್ನಾಗಿ ಮಾಡುತ್ತಾರೆ' ಎಂದಿದ್ದಾರೆ.

ಕಾರಾಗೃಹ ವಾರ್ಡರ್ ಬಂಧನ

ಜಾಲತಾಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಿಂದನೆ

ಪ್ರಜಾವಾಣಿ ವಾರ್ತೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊ ಹರಿಬಿಟ್ಟ ಆರೋಪದ ಮೇರೆಗೆ ಇಲ್ಲಿನ ಕೇಂದ್ರಕಾರಾಗೃಹದ ವಾರ್ಡರ್, ಸಾಲಿಗ್ರಾಮನಿವಾಸಿ ಎಚ್.ಎನ್. ಮಧುಕುಮಾರ್ ಅವರನ್ನು ಮಂಗಳವಾರ ಬೆಟ್ಟದಪುರ ಪೊಲೀಸರು ಬಂಧಿಸಿದ್ದಾರೆ.


ಎಚ್‌.ಎನ್‌. ಮಧು ಕುಮಾರ್

'ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಮುಖ್ಯಮಂತ್ರಿಯು ಎಎಸ್‌ಪಿ ವಿರುದ್ಧ ಕೈ ಎತ್ತಿದ್ದನ್ನು ಖಂಡಿಸಿ ಏ.28ರಂದು ಮಧುಕುಮಾರ್ ವಿಡಿಯೊ ಮಾಡಿದ್ದರು. ಈ ಬಗ್ಗೆ ಕಾಂಗ್ರೆಸ್ ಕಾರ್ಯಕರ್ತರು ವಾಟ್ಸ್ ಆ್ಯಪ್ ಮೂಲಕ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡು ಮೈಸೂರಿನಲ್ಲಿ ಬಂಧಿಸಿದ್ದೇವೆ' ಎಂದು ಪೊಲೀಸರು ತಿಳಿಸಿದರು.

ವಿಡಿಯೊದಲ್ಲಿ, 'ಸಿದ್ದರಾಮಯ್ಯ, ಲೋ ಎಸ್‌ಪಿ ಎನ್ನುತ್ತೀಯ, ನಾವು ಓಟು ಹಾಕಿದ್ದಕ್ಕೆ ಅಲ್ಲಿದ್ದೀಯ, ನೀನು ಐದು ವರ್ಷ ಇರೋನು, ನಮ್ಮ ಸೇವೆ 35 ವರ್ಷ. ಎಲ್‌ಎಲ್‌ಬಿ ಎಷ್ಟು ದುಡ್ಡು ಕೊಟ್ಟು ಮಾಡಿದ್ದೀಯಾ, ಅಷ್ಟು ಓದಿದೋರಿಗೆ ಸರ್ಕಾರಿ ಅಧಿಕಾರಿಗಳನ್ನು ಹೇಗೆ ನಡೆಸಿಕೊಳ್ಳಬೇಕು ಎಂದು ಗೊತ್ತಿಲ್ಲವೇ. ಏನಾದ್ರು ಮಾಡಿಕೋ, ಕರ್ನಾಟಕ ಪೊಲೀಸ್ ನಿನ್ನ ಆಳಲ್ಲ. ನೀನೇನು ಸರ್ಕಾರ ಅಲ್ಲ. ಇಲಾಖೆಯವರ ಬಗ್ಗೆ ಮಾತಾಡಿದರೆ ಎಚ್ಚರ' ಎಂದು ಏಕವಚನದಲ್ಲಿ ನಿಂದಿಸಿದ್ದಾರೆ.

'ಮೈಸೂರು ಕಾರಾಗೃಹದ ಸಿಬ್ಬಂದಿಗೆ ಯಾವಾಗ ವೇತನ ಹಾಕಿಸಿದ್ದೀ. ಈ ವಿಡಿಯೊ ಎಲ್ಲರಿಗೂ ತಲುಪಿಸಿ, ನನ್ನ ಕೆಲಸ ಹೋದರೂ ಪರವಾಗಿಲ್ಲ. ಇಂದು ಎಸ್‌ಪಿಗೆ ಹೇಳಿದ್ದಾರೆ, ಇನ್ನು ಕಾನ್‌ಸ್ಟೆಬಲ್‌ಗಳನ್ನು ಬಿಡುತ್ತಾರೆಯೇ. ಅವರ ತವರು ಜಿಲ್ಲೆಯಲ್ಲಿ ಉದಯಗಿರಿ ಠಾಣೆಗೆ ಕಲ್ಲು ಹೊಡೆದಾಗ ಭದ್ರತೆ ನೀಡಲು ಸಾಧ್ಯವಾಗಿಲ್ಲ, ಅಂಥವರು ದೇಶದ ಭದ್ರತೆಯ ಬಗ್ಗೆ ಹೇಗೆ ಮೋದಿಯನ್ನು ಪ್ರಶ್ನಿಸುತ್ತಾರೆ' ಎಂದು ಹೇಳಿದ್ದು, ಅವಾಚ್ಯ ಪದಗಳನ್ನೂ ಬಳಸಿದ್ದಾರೆ.

'ಮಧುಕುಮಾರ್ ಮಾಡಿರುವ ವಿಡಿಯೊ ಸೋಮವಾರ ಹರಿದಾಡಿದ್ದು ಗೊತ್ತಾದ ಕೂಡಲೇ ಅವರನ್ನು ಅಮಾನತುಗೊಳಿಸಿ, ಇಲಾಖಾ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ' ಎಂದು ಕಾರಾಗೃಹದ ಮುಖ್ಯ ಅಧೀಕ್ಷಕ ಪಿ.ಎಸ್.ರಮೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಮಧುಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಿ, ಬಂಧಿಸಬೇಕು' ಎಂದು ಆಗ್ರಹಿಸಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಕಾರಾಗೃಹದ ಮುಂಭಾಗ ಮಂಗಳವಾರ ಪ್ರತಿಭಟಿಸಿದರು.

'ಒಳ ಮೀಸಲಾತಿ ಸಮೀಕ್ಷೆಯಲ್ಲಿ ಅಕ್ರಮ'

ಸ್ಥಗಿತಕ್ಕೆ ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ಸಂಘ–ಸಂಸ್ಥೆಗಳ ಮಹಾಒಕ್ಕೂಟದ ಒತ್ತಾಯ

ಪ್ರಜಾವಾಣಿ ವಾರ್ತೆ

ಮಂಗಳೂರು: ಒಳ ಮೀಸಲಾತಿ ಸಮೀಕ್ಷೆ ಹೆಸರಿನಲ್ಲಿ ಸಂವಿಧಾನ ವಿರೋಧಿ ಕೆಲಸ ನಡೆಯುತ್ತಿದ್ದು, ಈ ಅಕ್ರಮ ಸರಿಪಡಿಸುವವರೆಗೆ ಸಮೀಕ್ಷೆ ಕಾರ್ಯ ಸ್ಥಗಿತಗೊಳಿಸಬೇಕು ಎಂದು ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ಸಂಘ–ಸಂಸ್ಥೆಗಳ ಮಹಾಒಕ್ಕೂಟ ಒತ್ತಾಯಿಸಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಒಕ್ಕೂಟದ ಅಧ್ಯಕ್ಷ ಲೋಲಾಕ್ಷ, 'ನ್ಯಾ. ಎಚ್.ಎನ್. ನಾಗಮೋಹನದಾಸ್ ಏಕ ಸದಸ್ಯ ವಿಚಾರಣಾ ಆಯೋಗದ ನಿರ್ದೇಶನದಂತೆ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ ಆರಂಭವಾಗಿದೆ. ಈ ಸಮೀಕ್ಷೆಯಲ್ಲಿ ದೊಡ್ಡ ಜಾತಿಯನ್ನು ಮೀಸಲಾತಿ ಒಳಗೆ ತರುವ ಷಡ್ಯಂತ್ರವಿದೆ' ಎಂದು ಆರೋಪಿಸಿದರು.

'ಇದನ್ನು ನಮ್ಮ ಒಕ್ಕೂಟ ವಿರೋಧಿಸಿದ್ದು, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ಗಮನ ಸೆಳೆದಿದೆ. ಸರ್ಕಾರದಿಂದ ಈ ಬಗ್ಗೆ ತುರ್ತು ಕ್ರಮ ಆಗದಿದ್ದಲ್ಲಿ ಮುಂದಿನ ಹೋರಾಟ ರೂಪಿಸಲಾಗುತ್ತದೆ' ಎಂದರು.


ಪರಿಶಿಷ್ಟ ಜಾತಿಗಳ ಒಳಮೀಸಲಾತಿಯ ವರ್ಗೀಕರಣಕ್ಕಾಗಿ ಆರಂಭಗೊಂಡಿರುವ ಸಮೀಕ್ಷೆಯ ಭಾಗವಾಗಿ ಮಂಗಳವಾರ ಕಲಬುರಗಿಯ ತಾರಫೈಲ್ ಬಡಾವಣೆಯಲ್ಲಿ ಗಣತಿದಾರರು ಮನೆ–ಮನೆಗೆ ತೆರಳಿ ಮಾಹಿತಿ ಸಂಗ್ರಹಿಸಿದರು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಇತ್ತೀಚೆಗೆ ಯುಟ್ಯೂಬ್ ಚಾನೆಲ್‌ವೊಂದಕ್ಕೆ ಸಂದರ್ಶನ ನೀಡಿರುವ ನ್ಯಾ. ನಾಗಮೋಹನ್ ದಾಸ್ ಅವರು, 'ಬೇರೆ ಧರ್ಮಕ್ಕೆ ಮತಾಂತರಗೊಂಡವರು ಆಚರಣೆಯಲ್ಲಿ ಆ ಧರ್ಮವನ್ನು ಅನುಸರಿಸುತ್ತ, ಸರ್ಕಾರಿ ದಾಖಲೆಗಳಲ್ಲಿ ಪರಿಶಿಷ್ಟ ಜಾತಿ ಎಂದು ಮುಂದುವರಿಸಿ, ಉಪಜಾತಿಯನ್ನು ಬರೆಸಿದ್ದರೆ, ಅಂತಹವರು ಸಮೀಕ್ಷೆಗೆ ಒಳಪಡಬಹುದು' ಎಂದಿದ್ದಾರೆ. ಇದು ಸಂವಿಧಾನ ಮತ್ತು ಕಾನೂನಿನ ಉಲ್ಲಂಘನೆಯಾಗಿದೆ. ಸಂವಿಧಾನದ ವಿಧಿ 341(1) ರ ಅಡಿಯಲ್ಲಿ ರಾಷ್ಟ್ರಪತಿ ಹೊರಡಿಸಿರುವ ಸಂವಿಧಾನದ (ಪರಿಶಿಷ್ಟ ಜಾತಿಗಳು) ಆದೇಶ, (1950ರಲ್ಲಿ– ತಿದ್ದುಪಡಿಗಳು ಸೇರಿದಂತೆ) ಹಿಂದೂ, ಸಿಖ್ ಮತ್ತು ಬೌದ್ಧ ಧರ್ಮ ಆಚರಿಸುವವರನ್ನು ಹೊರತುಪಡಿಸಿ ಇತರ ಯಾರನ್ನೂ ಪರಿಶಿಷ್ಟ ಜಾತಿಯವರು ಎಂದು ಪರಿಗಣಿಸಲು ಅವಕಾಶ ಇಲ್ಲ ಎಂದು ಹೇಳಿದರು.

ಸಮೀಕ್ಷೆಯ ನೋಡಲ್ ಇಲಾಖೆಯಾಗಿರುವ ಸಮಾಜ ಕಲ್ಯಾಣ ಇಲಾಖೆಯು ಈ ಬಗ್ಗೆ ಸ್ಪಷ್ಟನೆ ನೀಡಬೇಕು. ಸಮೀಕ್ಷೆಯ ವೇಳೆ ಧರ್ಮದ ಹೆಸರು ನೋಂದಾಯಿಸಲು ಪ್ರತ್ಯೇಕ ಕಾಲಂ ಇಡಬೇಕು ಎಂದು ಆಗ್ರಹಿಸಿದರು.

ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಜಾತಿಗಳನ್ನು 1950ರಲ್ಲಿ ರಾಷ್ಟ್ರಪತಿ ಹೊರಡಿಸಿರುವ ಅಧಿಸೂಚನೆಯಲ್ಲೇ 'ಜಾತಿಗಳು' ಎಂದು ಪರಿಗಣಿಸಲಾಗಿದ್ದು, ನಂತರದ ಎಲ್ಲ ತಿದ್ದುಪಡಿಗಳಲ್ಲೂ ಇವನ್ನು ಜಾತಿಗಳು ಎಂದೇ ಪರಿಗಣಿಸಲಾಗಿದೆ. ಸಮೀಕ್ಷೆಯ ಕಾಲಂನಲ್ಲಿ ಕೈಬಿಟ್ಟಿರುವ ಈ ಮೂರು ಜಾತಿಗಳ ಹೆಸರನ್ನು ಅವುಗಳ ಸಂಕೇತ ಸಂಖ್ಯೆಗಳೊಂದಿಗೆ ಇತರ ಜಾತಿಗಳ ಜೊತೆಗೆ ಸೇರಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸಂಘಟನೆಯ ಪ್ರಧಾನ ಕಾರ್ಯದರ್ಶಿ ಕಾಂತಪ್ಪ ಅಲಂಗಾರ್, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಅಧ್ಯಯನ ಮತ್ತು ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಮೋಹನಾಂಗಯ್ಯ ಸ್ವಾಮಿ, ಮುಗೇರ ಸಂಘದ ಮುಖಂಡ ಸುಂದರ ಮೇರ, ಅಖಿಲ ಭಾರತ ಮುಂಡಾಲ ಯುವ ವೇದಿಕೆ ಅಧ್ಯಕ್ಷ ಪ್ರದೀಪ್ ಕಾಪಿಕಾಡ್, ದಲಿತ ಸಂಘರ್ಷ ಸಮಿತಿ ಮುಖಂಡ ಅಶೋಕ್ ಕೊಂಚಾಡಿ, ಅನಿಲ್ ಕಂಕನಾಡಿ ಹಾಜರಿದ್ದರು.

'ಮುಖ್ಯಮಂತ್ರಿ ಕಚೇರಿಯಲ್ಲಿ ಹಿಂದುಳಿದವರು ಎಷ್ಟಿದ್ದಾರೆ?'

ನವದೆಹಲಿ: 'ಸಾಮಾಜಿಕ ನ್ಯಾಯದ ಹೀರೋ ಎಂದು ತಮಗೆ ತಾವೇ ಬಿರುದು ಕೊಟ್ಟು ಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರನ್ನು ಪದೇ ಪದೇ ಟೀಕಿಸುತ್ತಿದ್ದಾರೆ. ತಮ್ಮ ಮುಖ್ಯಮಂತ್ರಿ ಸಚಿವಾಲಯದಲ್ಲಿ ಹಿಂದುಳಿದವರು ಹಾಗೂ ಕುರುಬರು ಎಷ್ಟಿದ್ದಾರೆ ಎಂಬುದರ ಬಗ್ಗೆ ಮೊದಲು ಉತ್ತರ ಕೊಡಲಿ' ಎಂದು ರಾಜ್ಯಸಭಾ ಸದಸ್ಯ ಎಚ್.ಡಿ. ದೇವೇಗೌಡ ಸವಾಲು ಎಸೆದರು.


ದೇವೇಗೌಡ

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕರ್ನಾಟಕದ ಜಾತಿಗಣತಿಗೆ ಸಿದ್ದರಾಮಯ್ಯ ಅವರ ಸಂಪುಟದಲ್ಲಿಯೇ ಸಹಮತ ಇಲ್ಲ. ಈ ಬಗ್ಗೆ ಸಿದ್ದರಾಮಯ್ಯ ಅವರಿಗೆ ನಾನು ಪತ್ರ ಬರೆದಿದ್ದೆ. ನನಗೆ ಅವರು ಈವರೆಗೆ ಉತ್ತರ ಕೊಟ್ಟಿಲ್ಲ' ಎಂದರು.

'ಜಾತಿ ಸಮೀಕ್ಷೆ ಮೂಲಕ ತಾವು ಬೆಣ್ಣೆ ತಿಂದು, ಉಳಿದವರಿಗೆ ನೀರು ಮಜ್ಜಿಗೆ ಕೊಡಲು ಹೊರಟಿದ್ದಾರೆ. ಇದು ಸರಿಯಲ್ಲ. ಜನರು ಎಲ್ಲವನ್ನೂ ಗಮನಿಸುತ್ತಿದ್ದಾರೆ' ಎಂದರು.

ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಸಂಬಂಧಿಸಿದಂತೆ ಮೋದಿ ಅವರ ನೇತೃತ್ವದಲ್ಲಿ ಕೈಗೊಳ್ಳುತ್ತಿರುವ ಎಲ್ಲ ಕ್ರಮಗಳನ್ನು ಮುಕ್ತಕಂಠದಿಂದ ಬೆಂಬಲಿಸುವುದಾಗಿ ಘೋಷಿಸಿದರು.

'ಈ ಕೆಲಸ ಮಾಡಿದವರಿಗೆ ತಕ್ಕ ಶಾಸ್ತಿ ಆಗಲೇಬೇಕು. ರಕ್ಷಣಾ ಪಡೆಗಳಿಗೆ ಮೋದಿ ಅವರು ಮುಕ್ತ ಸ್ವಾತಂತ್ರ್ಯ ನೀಡಿದ್ದಾರೆ. ಮೊದಲ ಬಾರಿಗೆ ದೇಶದ ಪ್ರಧಾನಿಯೊಬ್ಬರು ಇಂತಹ ದಿಟ್ಟ ನಿರ್ಧಾರ ಕೈಗೊಂಡಿದ್ದಾರೆ' ಎಂದರು.

'1971ರ ಯುದ್ಧ ಕಾಲಕ್ಕೂ ಈಗಿನ ಪರಿಸ್ಥಿತಿಗೂ ಬಹಳ ವ್ಯತ್ಯಾಸವಿದೆ. ಹೋಲಿಕೆ ಮಾಡಲು ಸಾಧ್ಯವಿಲ್ಲ. ಭಾರತ ಅಗಾಧವಾಗಿ ಬೆಳೆದಿದೆ. ಕಳೆದ ಹತ್ತು ವರ್ಷಗಳಲ್ಲಿ ದೇಶವು ಸಾಕಷ್ಟು ಅಭಿವೃದ್ಧಿ, ಬದಲಾವಣೆಯನ್ನು ಕಂಡಿದೆ ಎಂದರು.

ಕೊಹ್ಲಿ ಕಟೌಟ್‌ಗೆ ರಕ್ತಾಭಿಷೇಕ; ಎಫ್‌ಐಆರ್

ಮೊಳಕಾಲ್ಮುರು (ಚಿತ್ರದುರ್ಗ ಜಿಲ್ಲೆ): ಐಪಿಎಲ್ ಪಂದ್ಯಾವಳಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡ ಮೇ 3ರಂದು ಗೆಲುವು ಸಾಧಿಸಿದ್ದ ಸಂಭ್ರಮದಲ್ಲಿ ಮೇಕೆ ಬಲಿ ನೀಡಿ ವಿಕೃತಿ ಮೆರೆದಿದ್ದ ತಾಲ್ಲೂಕಿನ ಮಾರಮ್ಮನಹಳ್ಳಿ ಗ್ರಾಮದ ಮೂವರು ಅಭಿಮಾನಿಗಳ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಗ್ರಾಮದ ಸಣ್ಣಪಾಲಯ್ಯ, ಜಯಣ್ಣ, ತಿಪ್ಪೇಸ್ವಾಮಿ ವಿರುದ್ಧ ಪ್ರಾಣಿಬಲಿ ನಿಷೇಧ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಗ್ರಾಮದ ಯುವಕರು ಮೇ 4ರಂದು ನೆಚ್ಚಿನ ಆಟಗಾರ ವಿರಾಟ್ ಕೊಹ್ಲಿ ಕಟೌಟ್ ಎದುರು ಮೇಕೆಯೊಂದನ್ನು ಕತ್ತರಿಸಿ, ರಕ್ತಾಭಿಷೇಕ ಮಾಡಿದ್ದರು.

ಮೇಕೆಯನ್ನು ಮಚ್ಚಿನಿಂದ ಕತ್ತರಿಸಿ, ಎತ್ತಿ ಹಿಡಿದು ಕೊಹ್ಲಿ ಭಾವಚಿತ್ರಕ್ಕೆ ರಕ್ತ ಚಿಮ್ಮಿಸುವ ದೃಶ್ಯಗಳನ್ನು ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದರು. ಇದಕ್ಕೆ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ವಿಡಿಯೊ ವೀಕ್ಷಿಸಿದ ಮೊಳಕಾಲ್ಮುರು ಠಾಣೆ ಪೊಲೀಸರು ಸೋಮವಾರ ಗ್ರಾಮಕ್ಕೆ ಭೇಟಿ ನೀಡಿ ಆರೋಪಿಗಳನ್ನು ಗುರುತಿಸಿ ಪ್ರಕರಣ ದಾಖಲಿಸಿದ್ದಾರೆ.

ನಾಗರಹೊಳೆಯ ಕರಡಿಕಲ್ಲು ಅತ್ತೂರು ಕೊಲ್ಲಿ ಹಾಡಿ

ಅರಣ್ಯ ಪ್ರವೇಶಿಸಿದ ಆದಿವಾಸಿಗಳು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿರುವ ಪೊನ್ನಂಪೇಟೆ ತಾಲ್ಲೂಕಿನ ಕೆ.ಬಾಡಗ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರಡಿಕಲ್ಲು ಅತ್ತೂರು ಕೊಲ್ಲಿ ಹಾಡಿಗೆ ಬಂದು ಪ್ರತಿಭಟನೆ ಆರಂಭಿಸಿರುವ ಜೇನುಕುರುಬ ಪಂಗಡಕ್ಕೆ ಸೇರಿದ 52 ಕುಟುಂಬಗಳ ಮನವೊಲಿಕೆ ಕಾರ್ಯ ವಿಫಲಗೊಂಡಿದೆ.

'ಹಲವು ವರ್ಷಗಳ ಹಿಂದೆ ಈ ಪ್ರದೇಶದಿಂದ ಬಲವಂತವಾಗಿ ಒಕ್ಕಲೆಬ್ಬಿಸಲಾಗಿತ್ತು' ಎಂದು ಹೇಳಿರುವ ನಾಗರಹೊಳೆ ಆದಿವಾಸಿ ಜಮ್ಮಾಪಾಳೆ ಹಕ್ಕು ಸ್ಥಾಪನಾ ಸಮಿತಿಯ ಕಾರ್ಯದರ್ಶಿ ಶಿವು, 'ಅರಣ್ಯ ಹಕ್ಕು ಕಾಯ್ದೆ ಪ್ರಕಾರ ವೈಯಕ್ತಿಕ ಹಕ್ಕು ಹಾಗೂ ಸಮುದಾಯ ಹಕ್ಕುಗಳಿಗಾಗಿ ಒತ್ತಾಯಿಸಿ ನಮ್ಮ ಮೂಲಸ್ಥಾನಕ್ಕೆ ಬಂದಿದ್ದೇವೆ. ಇಲ್ಲಿ ನಾವು 3 ಗುಡಿಸಲುಗಳನ್ನು ನಿರ್ಮಿಸಿದ್ದೇವೆ. ಇದಕ್ಕೆ ಅರಣ್ಯ ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿದರೂ ನಾವು ಹಿಂದೇಟು ಹಾಕಿಲ್ಲ' ಎಂದರು.

ಸ್ಥಳಕ್ಕೆ ಅರಣ್ಯ ಇಲಾಖೆಯ ನೂರಾರು ಸಿಬ್ಬಂದಿ ಹಾಗೂ ಅಧಿಕಾರಿಗಳು ಭೇಟಿ ನೀಡಿ ಮನವೊಲಿಕೆಗೆ ಪ್ರಯತ್ನಪಟ್ಟರಾದರೂ ಆದಿವಾಸಿಗಳು ಒಪ್ಪಲಿಲ್ಲ.

ಪ್ರಕರಣ ಏನು?

ನಾಗರಹೊಳೆ ಅರಣ್ಯ ಪ್ರದೇಶದ, ಕೆ.ಬಾಡಗ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಕರಡಿಕಲ್ಲು ಅತ್ತೂರು ಕೊಲ್ಲಿ ಹಾಡಿಯಲ್ಲಿ ವಾಸವಿದ್ದ ಜೇನುಕುರುಬ 52 ಕುಟುಂಬಗಳನ್ನು ಈ ಹಿಂದೆ ಕಾಡಿನಿಂದ ಬಲವಂತವಾಗಿ ಹೊರಹಾಕಲಾಗಿತ್ತು ಎಂದು ನಾಗರಹೊಳೆ ಆದಿವಾಸಿ ಜಮ್ಮಾಪಾಳೆ ಹಕ್ಕು ಸ್ಥಾಪನಾ ಸಮಿತಿ ಆರೋಪಿಸಿದೆ. '2021ರಲ್ಲಿ ಇವರು ಅರಣ್ಯ ಹಕ್ಕು ಕಾಯ್ದೆ ಅನ್ವಯ ವೈಯಕ್ತಿಕ ಹಕ್ಕು ಹಾಗೂ ಸಮುದಾಯ ಹಕ್ಕುಗಳಿಗಾಗಿ ಅರ್ಜಿ ಸಲ್ಲಿಸಿದ್ದರು. ಆ ಬಳಿಕ ಹೋರಾಟವನ್ನೂ ನಡೆಸಿದ್ದರು. ನಂತರ, 2024ರ ಅಕ್ಟೋಬರ್‌ನಲ್ಲಿ ಜಂಟಿ ಸರ್ವೆ ಕಾರ್ಯವೂ ನಡೆದಿತ್ತು. ಆದರೆ, ಇದುವರೆಗೂ ಸರ್ವೆ ಕಾರ್ಯದ ವರದಿಯನ್ನು ಸಲ್ಲಿಸಿಲ್ಲ. ಹಾಗಾಗಿ, ನಮ್ಮ ಹಕ್ಕು ಸ್ಥಾಪನೆಗಾಗಿ ನಾವೇ ಹೊರಟಿದ್ದೇವೆ' ಎಂದು ಸಮಿತಿಯ ಕಾರ್ಯದರ್ಶಿ ಶಿವು ಹೇಳುತ್ತಾರೆ.

'ಹಕ್ಕು ಸ್ಥಾಪನೆ ವೇಳೆ ಯಾವುದೇ ತೊಂದರೆಯಾದರೂ ಅದಕ್ಕೆ ಜಿಲ್ಲಾಡಳಿತವೇ ಹೊಣೆ' ಎಂದು ಸಮಿತಿಯು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರಿಗೆ ಪತ್ರವನ್ನೂ ಬರೆದಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಪೊಲೀಸರು, 'ಮನವೊಲಿಕೆ ಕಾರ್ಯ ವಿಫಲಗೊಂಡಿದ್ದರಿಂದ ನಾವು ವಾಪಸ್ ಬಂದಿದ್ದೇವೆ' ಎಂದರು.

ಮಂಗಳವಾರದ ಪ್ರತಿಭಟನೆಯಲ್ಲಿ ಭಾಗಿಯಾಗಿ ಬೆಂಬಲ ಸೂಚಿಸಿದ ನಟ ಚೇತನ್, 'ಇಡೀ ವ್ಯವಸ್ಥೆಯೇ ಆದಿವಾಸಿಗಳ ವಿರುದ್ಧವಿದೆ. ಆಳುವ ವ್ಯವಸ್ಥೆಯು ಹಣ, ರಾಜಕೀಯ, ಭೂಮಾಲೀಕರ ಪರವಾಗಿಯೇ ಇದೆ' ಎಂದು ಹರಿಹಾಯ್ದರು.

'ಸಾವಿರಾರು ವರ್ಷಗಳ ಕಾಲ ಕಾಡಿನಲ್ಲೇ ನೆಲಸಿರುವ ಆದಿವಾಸಿಗಳೇ ನಿಜವಾದ ಪರಿಸರವಾದಿಗಳು. ಆದರೆ, ಅವರಿಗೆ ಜಾಗ ಕೊಡದೇ ಕಾಫಿ ಎಸ್ಟೇಟ್ ಮಾಲೀಕರಿಗೆ, ಶ್ರೀಮಂತರಿಗೆ ಜಾಗ ಕೊಡುತ್ತಿದ್ದಾರೆ. ಈ ಅನ್ಯಾಯದ ವ್ಯವಸ್ಥೆಯನ್ನು ವಿರೋಧಿಸಬೇಕು' ಎಂದರು.

ಈ ಕುರಿತು ಪ್ರತಿಕ್ರಿಯೆ ಪಡೆಯಲು ನಾಗರಹೊಳೆ ಹುಲಿ ಯೋಜನೆ ನಿರ್ದೇಶಕಿ ಪಿ.ಎ.ಸೀಮಾ ಹಾಗೂ ಎಸಿಎಫ್ ಜೆ.ಅನನ್ಯಕುಮಾರ್ ಅವರು ಮೊಬೈಲ್‌ಫೋನ್ ಸಂಪರ್ಕಕ್ಕೆ ಸಿಗಲಿಲ್ಲ.


ಕೊಡಗು ಜಿಲ್ಲೆಯ ನಾಗರಹೊಳೆ ಅರಣ್ಯ ಪ್ರದೇಶದ ಪೊನ್ನಂಪೇಟೆ ತಾಲ್ಲೂಕಿನ ಕೆ.ಬಾಡಗ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಕರಡಿಕಲ್ಲು ಅತ್ತೂರು ಕೊಲ್ಲಿ ಹಾಡಿಯಲ್ಲಿ ವಾಸವಿದ್ದ ಜೇನುಕುರುಬ ಪಂಗಡಕ್ಕೆ ಸೇರಿದ 52 ಕುಟುಂಬಗಳ ಸದಸ್ಯರು ಪ್ರತಿಭಟನೆ ನಡೆಸಿದರು.

ಜನಾರ್ದನ ರೆಡ್ಡಿಗೆ ಏಳು ವರ್ಷ ಜೈಲು

ಒಂದನೇ ಪುಟದಿಂದ...

2007 ಮತ್ತು 2009ರ ನಡುವೆ ನಡೆದ ಅಕ್ರಮ ಗಣಿಗಾರಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ₹884 ಕೋಟಿ ನಷ್ಟವಾಗಿದೆ ಎಂದು ಸಿಬಿಐ ಪರ ವಕೀಲರು ವಾದಿಸಿದ್ದರು.

ಆರೋಪಿಗಳ ವಿರುದ್ಧ ಸಿಬಿಐ 2009ರ ಡಿಸೆಂಬರ್ 8ರಂದು ಪ್ರಕರಣ ದಾಖಲಿಸಿತ್ತು. ಮೊದಲ ಆರೋಪಪಟ್ಟಿಯನ್ನು 2011ರ ಡಿಸೆಂಬರ್ 3ರಂದು ಸಲ್ಲಿಸಿತ್ತು. ನಂತರ ಗಣಿ ಕಂಪನಿಯ ನಿರ್ದೇಶಕರೂ ಆಗಿರುವ ರೆಡ್ಡಿ, ಶ್ರೀನಿವಾಸ್ ರೆಡ್ಡಿ, ರಾಜಗೋಪಾಲ್, ದಿವಂಗತ ಆರ್. ಲಿಂಗಾ ರೆಡ್ಡಿ ಮತ್ತು ಒಎಂಸಿ ವಿರುದ್ಧದ ಪ್ರಕರಣದಲ್ಲಿ ಮೂರು ಪೂರಕ ಆರೋಪಪಟ್ಟಿಗಳನ್ನು ಸಲ್ಲಿಸಿತ್ತು.

ನ್ಯಾಯಾಲಯವು 219 ಸಾಕ್ಷಿಗಳ ವಿಚಾರಣೆ ನಡೆಸಿತ್ತು. ಅಕ್ರಮ ನಡೆದಿರುವುದಕ್ಕೆ ಸಾಕ್ಷಿಯಾಗಿ 3,336 ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು.

'ದಲಿತರು ಕ್ಷೌರ ಕೇಳಿದ್ದಕ್ಕೆ ಅಂಗಡಿಯೇ ಬಂದ್'

ಪ್ರಜಾವಾಣಿ ವಾರ್ತೆ

ಕೊಪ್ಪಳ: ಜಿಲ್ಲಾ ಕೇಂದ್ರದಿಂದ ಏಳು ಕಿ.ಮೀ. ದೂರದಲ್ಲಿರುವ ತಾಲ್ಲೂಕಿನ ಮುದ್ದಾಬಳ್ಳಿ ಗ್ರಾಮದಲ್ಲಿ ದಲಿತರು ಕ್ಷೌರ ಮಾಡುವಂತೆ ಕೇಳಿದ್ದರಿಂದ ಕ್ಷೌರದ ಅಂಗಡಿಗಳನ್ನೇ ಬಂದ್ ಮಾಡಲಾಗಿದೆ ಎನ್ನುವ ಆರೋಪ ಕೇಳಿಬಂದಿದೆ.

'ಎಲ್ಲರಂತೆ ನಮಗೂ ಕ್ಷೌರ ಮಾಡಬೇಕು' ಎಂದು ಗ್ರಾಮದ ದಲಿತ ಯುವಕರು ಕೇಳಿದ್ದು, ಅದಕ್ಕೆ ಮೊದಲು ಕ್ಷೌರಿಕರು ನಿರಾಕರಿಸಿದ್ದರು. ಎರಡು ತಿಂಗಳ ಹಿಂದೆ ಇದು ಜಟಾಪಟಿಗೂ ಕಾರಣವಾಗಿತ್ತು. ಆಗ ಮಧ್ಯಪ್ರವೇಶಿಸಿದ್ದ ಪೊಲೀಸರು ಅಸ್ಪೃಶ್ಯತೆ ಆಚರಣೆ ಮಾಡಿದರೆ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ ಎನ್ನುವ ಎಚ್ಚರಿಕೆ ನೀಡಿ ಎಲ್ಲರಿಗೂ ಕಡ್ಡಾಯವಾಗಿ ಕ್ಷೌರ ಮಾಡಬೇಕು ಎಂದು ಸೂಚಿಸಿದ್ದಾಗ ಒಪ್ಪಿಕೊಂಡಿದ್ದರು. ಈಗ ಮತ್ತೆ ದಲಿತರನ್ನು ಹೊರತುಪಡಿಸಿ ಉಳಿದವರ ಮನೆ ಮನೆಗೆ ಮಾತ್ರ ಹೋಗಿ ಕ್ಷೌರ ಮಾಡುತ್ತಿದ್ದಾರೆ ಎನ್ನುವ ಆರೋಪ ಗ್ರಾಮಸ್ಥರಿಂದ ಕೇಳಿಬಂದಿದೆ.


ಕೊಪ್ಪಳ ತಾಲ್ಲೂಕಿನ ಮುದ್ದಾಬಳ್ಳಿ ಗ್ರಾಮದಲ್ಲಿ ಕ್ಷೌರದ ಅಂಗಡಿ ಬಂದ್ ಮಾಡಿರುವುದು

ಮುದ್ದಾಬಳ್ಳಿ ಗ್ರಾಮದಲ್ಲಿ ಎರಡು ಕ್ಷೌರದ ಅಂಗಡಿಗಳು ಹಾಗೂ ಮೂರ್ನಾಲ್ಕು ಹೋಟೆಲ್‌ಗಳು ಇವೆ. ಹೋಟೆಲ್‌ಗಳ ಮಾಲೀಕರಿಗೆ ಎಚ್ಚರಿಕೆ ನೀಡಿದ ಬಳಿಕ ಅಲ್ಲಿ ಎಲ್ಲರಿಗೂ ಅವಕಾಶ ನೀಡಲಾಗುತ್ತಿದೆ. ಈಗ ಗ್ರಾಮದ ಕ್ಷೌರದ ಅಂಗಡಿಗಳನ್ನು ಬಂದ್ ಮಾಡಿದ್ದರಿಂದ ಅಲ್ಲಿನ ದಲಿತರು ಕೊಪ್ಪಳಕ್ಕೆ ಬಂದು ಕ್ಷೌರ ಮಾಡಿಸಿಕೊಳ್ಳುತ್ತಿದ್ದಾರೆ.

ಈ ಘಟನೆ ಬಗ್ಗೆ ಮಂಗಳವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜ ದಢೇಸೂಗೂರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ದಲಿತರ ಪರ ಎಂದು ಹೇಳಿಕೊಳ್ಳುತ್ತಾರೆ. ಅವರ ಆಪ್ತ ಶಾಸಕ ರಾಘವೇಂದ್ರ ಹಿಟ್ನಾಳ ಕ್ಷೇತ್ರದಲ್ಲಿಯೇ ಅಸ್ಪೃಶ್ಯತೆ ಜೀವಂತ ಇದೆ. ತಾರತಮ್ಯ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಮುದ್ದಾಬಳ್ಳಿ ಗ್ರಾಮದಲ್ಲಿ ಎರಡು ಕ್ಷೌರದ ಅಂಗಡಿಗಳಷ್ಟೇ ಇವೆ. ಅದರಲ್ಲಿ ಒಬ್ಬರಿಗೆ ಅನಾರೋಗ್ಯವಿದೆ. ಇನ್ನೊಬ್ಬರು ಹೊಲದ ಕೆಲಸ ಮಾಡುತ್ತಿದ್ದಾರೆ. ದಲಿತರಿಗೆ ಕ್ಷೌರ ನಿರಾಕರಿಸಿಲ್ಲ' ಎಂದು ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ಧಿ ತಿಳಿಸಿದರು.

ಕೇಂದ್ರ ಗೃಹ ಸಚಿವಾಲಯಕ್ಕೆ ಹೈಕೋರ್ಟ್ ನೋಟಿಸ್ • ಗುರುವಾರ ಮುಂದಿನ ವಿಚಾರಣೆ

ವೀಸಾ ವಿಸ್ತರಿಸಿ: ಪಾಕ್ ಮಕ್ಕಳ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ತಾಯಿ ಮತ್ತು ಪಾಕಿಸ್ತಾನದ ತಂದೆಗೆ ಜನಿಸಿದ ಮೂರು ಪುಟ್ಟ ಮಕ್ಕಳು ಪಾಕಿಸ್ತಾನಕ್ಕೆ ಮರಳಲು ಸಾಧ್ಯವಾಗದೇ, ತಮ್ಮ ವೀಸಾ ವಿಸ್ತರಣೆಗೆ ಕೋರಿ ಅರ್ಜಿ ಸಲ್ಲಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವಾಲಯದ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಬೀಬಿ ಯಾಮಿನಾ (8), ಮಹಮೂದ್ ಮುದಸ್ಸರ್ (4) ಮತ್ತು ಮಹಮೂದ್ ಯೂಸುಫ್ (3) ಪರ ಅವರ ತಾಯಿ ರಾಂಶ ಜಹಾನ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ರಜಾಕಾಲದ ಏಕಸದಸ್ಯ ನ್ಯಾಯಪೀಠದ ನ್ಯಾಯಮೂರ್ತಿ ಎಂ.ಜಿ.ಉಮಾ ಅವರು ಮಂಗಳವಾರ ವಿಚಾರಣೆ ನಡೆಸಿದರು.

ಅರ್ಜಿದಾರರ ಪರ ಹೈಕೋರ್ಟ್ ವಕೀಲರಾದ ಕೆ.ಎಸ್.ಗಣೇಶ್ ಮತ್ತು ಎಸ್.ವೈ.ಸುಮಾ ದೀಕ್ಷಿತ್ ಅವರ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದ ಕಾರ್ಯದರ್ಶಿ ಮತ್ತು ಮೈಸೂರು ಪೊಲೀಸ್ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಿತು.



ಅರ್ಜಿಯಲ್ಲಿ ಏನಿದೆ?: ಅರ್ಜಿದಾರ ಮಕ್ಕಳ ತಾಯಿ ರಾಂಶ ಜಹಾನ್ (33) ಭಾರತ–ಪಾಕಿಸ್ತಾನ ಗಡಿಯ ಅಟ್ಟಾರಿಗೆ 2025ರ ಏಪ್ರಿಲ್ 28ರಂದು ತೆರಳಿದ್ದರು. ಇವರನ್ನು ಪಾಕಿಸ್ತಾನಕ್ಕೆ ಕರೆದೊಯ್ಯಲು ಮಕ್ಕಳ ತಂದೆಯಾದ ಮುಹಮ್ಮದ್ ಫಾರೂಕ್ ಬಂದಿರಲಿಲ್ಲ. ಸಣ್ಣ ವಯಸ್ಸಿನ ಈ ಮಕ್ಕಳನ್ನು ಸ್ವೀಕರಿಸಲು ಗಡಿಯಲ್ಲಿ ಯಾರೂ ಮುಂದೆ ಬಾರದ ಕಾರಣ ಭಾರತದ ವಲಸೆ ಅಧಿಕಾರಿಗಳು ಇವರೆಲ್ಲರನ್ನೂ ಪುನಃ ಮೈಸೂರಿಗೆ ಕಳುಹಿಸಿದ್ದರು.

ಈ ಹಿನ್ನೆಲೆಯಲ್ಲಿ ಭಾರತೀಯ ನಿವಾಸಿಯಾದ ಮಕ್ಕಳ ತಾಯಿ ರಾಂಶ ಜಹಾನ್, ಮೈಸೂರು ಪೊಲೀಸ್ ಆಯುಕ್ತರು ಮತ್ತು ಎಫ್‌ಆರ್‌ಒ (ವಿದೇಶೀಯರ ನೋಂದಣಿ ಕಚೇರಿ) ಅಧಿಕಾರಿಗೆ ಏಪ್ರಿಲ್ 29ರಂದು ಮನವಿ ಸಲ್ಲಿಸಿ, 'ನನ್ನ ಮೂವರು ಮಕ್ಕಳಿಗೆ ಮಾನವೀಯ ನೆಲೆಯಲ್ಲಿ ಹಾಗೂ ನಾನು ನನ್ನ ಪತಿಯಿಂದ ಪ್ರತ್ಯೇಕಗೊಂಡಿರುವ ಆಧಾರದಲ್ಲಿ ನಮಗೆ ದೀರ್ಘಾವಧಿ ವೀಸಾ ಅಥವಾ ವೀಸಾ ವಿಸ್ತರಣೆಗೆ ಅವಕಾಶ ಮಾಡಿಕೊಡಬೇಕು' ಎಂದು ಕೋರಿದ್ದರು.

ಏತನ್ಮಧ್ಯೆ, ಗಡುವು ಮುಗಿದ ಕಾರಣ ಹೈಕೋರ್ಟ್ ಮೆಟ್ಟಿಲು ತುಳಿದಿರುವ ರಾಂಶ ಜಹಾನ್, 'ನಮ್ಮ ಕೋರಿಕೆಯನ್ನು ಪರಿಗಣಿಸಲು ಹೈಕೋರ್ಟ್, ಪೊಲೀಸ್ ಆಯುಕ್ತರಿಗೆ ನಿರ್ದೇಶಿಸಬೇಕು ಮತ್ತು ಈ ಕೋರಿಕೆ ಇತ್ಯರ್ಥ ಆಗುವ ತನಕ ಪೊಲೀಸರು ನಮ್ಮ ವಿರುದ್ಧ ಬಲವಂತದ ಕ್ರಮ ಕೈಗೊಳ್ಳದಂತೆ ನಿರ್ದೇಶಿಸಬೇಕು' ಎಂದು ಕೋರಿ ಈ ರಿಟ್ ಅರ್ಜಿ ಸಲ್ಲಿಸಿದ್ದಾರೆ.

ಪಾಕ್ ಪತಿ: ರಾಂಶ ಜಹಾನ್ ಅವರು ಬಲೂಚಿಸ್ತಾನದ ಕ್ವೆಟ್ಟಾದ ಖಾಂಧಾರಿ ನಗರದ ಕಾಯಂ ನಿವಾಸಿ ಮುಹಮ್ಮದ್ ಫಾರೂಕ್ ಅವರನ್ನು ಷರಿಯತ್ ಕಾನೂನಿನ ಪ್ರಕಾರ ಮದುವೆಯಾಗಿದ್ದು ಮೂವರು ಮಕ್ಕಳನ್ನು ಪಡೆದಿದ್ದಾರೆ. ಪಾಕಿಸ್ತಾನದ ಪೌರತ್ವ ಪಡೆಯದೆ ಭಾರತದ ಪ್ರಜೆಯಾಗಿಯೇ ಮುಂದುವರಿದಿದ್ದಾರೆ.

ರಾಂಶ ಜಹಾನ್ ತಮ್ಮ ಸಂಬಂಧಿಕರ ವಿವಾಹ ಕಾರ್ಯಕ್ರಮದಲ್ಲಿ ಭಾಗಿಯಾಗಲು 2025ರ ಜ. 4ರಂದು ಮಕ್ಕಳೊಂದಿಗೆ ಪಾಕಿಸ್ತಾನದಿಂದ ಭಾರತಕ್ಕೆ ಬಂದಿದ್ದರು ಮತ್ತು 2025ರ ಜೂನ್ 18ರವರೆಗೂ ಇವರಿಗೆ ವೀಸಾ ನೀಡಲಾಗಿದೆ. ರಾಂಶ ಜಹಾನ್ ಸದ್ಯ ಮೈಸೂರಿನ ರಾಜೀವ್ ನಗರದ 2ನೇ ಹಂತದ 15ನೇ ತಿರುವಿನಲ್ಲಿ ವಾಸವಿದ್ದಾರೆ.

ಪಹಲ್ಗಾಮ್‌ನಲ್ಲಿ ಉಗ್ರರು ಗುಂಡಿನ ದಾಳಿ ನಡೆಸಿ ಹತ್ಯೆಗೈದ ಬಳಿಕ ಕೇಂದ್ರ ಸರ್ಕಾರವು; ವೀಸಾ ಪಡೆದು ಭಾರತದಲ್ಲಿರುವ ಪಾಕಿಸ್ತಾನದ ಪ್ರಜೆಗಳಿಗೆ ದೇಶ ತೊರೆಯಲು ಏಪ್ರಿಲ್ 30ರ ಗಡುವು ವಿಧಿಸಿತ್ತು.

ಬೆಂಗಳೂರಿನಲ್ಲಿ ಇಂದು ತಾಲೀಮು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾವುದೇ ರೀತಿಯ ವಾಯುದಾಳಿ ನಡೆದರೆ ನಾಗರಿಕರು ಸ್ವರಕ್ಷಣೆಗಾಗಿ ಅನುಸರಿಸಬೇಕಾದ ಕ್ರಮಗಳ ಕುರಿತು ತಾಲೀಮು ನಡೆಸಲು ರಾಜ್ಯದಲ್ಲೂ ಸಿದ್ಧತೆಗಳು ನಡೆದಿವೆ.

ಕೇಂದ್ರ ಗೃಹ ಇಲಾಖೆ ಸೂಚನೆ ಮೇರೆಗೆ ಸ್ವರಕ್ಷಣಾ ತಾಲೀಮು ನಡೆಸಲು ಬೆಂಗಳೂರು, ಉತ್ತರ ಕನ್ನಡ ಜಿಲ್ಲೆಯ ಕಾರವಾರದ ಮಲ್ಲಾಪುರ ಹಾಗೂ ರಾಯಚೂರಿನ ಶಕ್ತಿನಗರವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಬೆಂಗಳೂರಿನಲ್ಲಿ ರಕ್ಷಣಾ ಇಲಾಖೆಯ ಹಲವು ಸಂಸ್ಥೆಗಳು, ಇಸ್ರೊ, ಡಿಆರ್‌ಡಿಒ, ಭಾರತೀಯ ವಿಜ್ಞಾನ ಸಂಸ್ಥೆ, ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ, ಐ.ಟಿ-ಬಿ.ಟಿ ಕಂಪನಿಗಳಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೈಗಾ ಅಣುಶಕ್ತಿ ಸ್ಥಾವರ, ಸೀಬರ್ಡ್ ನೌಕಾ ನೆಲೆ ಹಾಗೂ ರಾಯಚೂರಿನಲ್ಲಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರಗಳಿದ್ದು, ಹೆಚ್ಚಿನ ನಿಗಾ ಇಡಲು ಕೇಂದ್ರ ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ. ಬೆಂಗಳೂರಿನ 35 ಸ್ಥಳಗಳಲ್ಲಿ ಸೈರನ್ ವ್ಯವಸ್ಥೆಯಿದ್ದು, ಈ ಪೈಕಿ ಮೂರು ತಾಂತ್ರಿಕ ಕಾರಣದಿಂದ ಕಾರ್ಯ ನಿರ್ವಹಿಸುತ್ತಿಲ್ಲ. ಬುಧವಾರ ಮಧ್ಯಾಹ್ನ 3.30ಕ್ಕೆ ಹಲಸೂರಿನ ನಾಗರಿಕ ರಕ್ಷಣಾ ಕೇಂದ್ರದಲ್ಲಿ ಮಾತ್ರ ಸೈರನ್ ಮೊಳಗಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಉಳಿದ 31 ಸ್ಥಳಗಳಲ್ಲಿ ಹಂತಹಂತವಾಗಿ ತಾಲೀಮು ನಡೆಸಲಾಗುತ್ತದೆ.

ಉತ್ತರ ಕನ್ನಡ, ರಾಯಚೂರು, ಮೈಸೂರು, ಮಂಡ್ಯದಲ್ಲೂ ಸ್ವರಕ್ಷಣೆಯ ತಾಲೀಮು ನಡೆಸುವ ದಿನಾಂಕವನ್ನು ಮುಂದಿನ ವಾರ ನಿರ್ಧರಿಸಲಾಗುವುದು ಎಂದು ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಡಿಜಿಪಿ ಪ್ರಶಾಂತ್ ಕುಮಾರ್ ಠಾಕೂರ್ ತಿಳಿಸಿದ್ದಾರೆ.

ವಾಯು ದಾಳಿ ಸಂದರ್ಭದಲ್ಲಿ ನಾಗರಿಕರು ಯಾವ ರೀತಿ ವರ್ತಿಸಬೇಕು ಎಂಬುದನ್ನು ತಿಳಿಸಿ, ಶೋಧ ಹಾಗೂ ರಕ್ಷಣಾ ಕಾರ್ಯಾಚರಣೆ, ಗಾಯಾಳುಗಳ ಸ್ಥಳಾಂತರ, ತುರ್ತು ಚಿಕಿತ್ಸೆಗೆ ಆಸ್ಪತ್ರೆಗಳ ಸಜ್ಜುಗೊಳಿಸುವಿಕೆಯ ಕುರಿತು ಅಣಕು ಕಾರ್ಯಾಚರಣೆ ನಡೆಯಲಿದೆ.



ಅಗ್ನಿಶಾಮಕ ಹಾಗೂ ತುರ್ತು ಸೇವಾ ಇಲಾಖೆ ಸಿಬ್ಬಂದಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಹಾಗೂ ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ಸಿಬ್ಬಂದಿ ಪಾಲ್ಗೊಳ್ಳಲಿದ್ದಾರೆ. ಅಗ್ನಿಶಾಮಕ ಇಲಾಖೆಯ ಕೇಂದ್ರ ಕಚೇರಿಯಲ್ಲಿ ಮಂಗಳವಾರ ಸಿದ್ಧತೆ ಮಾಡಿಕೊಳ್ಳಲಾಯಿತು.

ಮೂರು ಕಡೆ ತಾಂತ್ರಿಕ ದೋಷ: ಹುಳಿಮಾವು, ಮಹದೇವಪುರ, ಮಯೋ ಹಾಲ್ ಅಗ್ನಿಶಾಮಕ ಠಾಣೆಯಲ್ಲಿರುವ ಸೈರನ್‌ಗಳು ತಾಂತ್ರಿಕ ದೋಷದಿಂದ ಕೆಲಸ ಮಾಡುತ್ತಿಲ್ಲ. ದುರಸ್ತಿ ಕಾರ್ಯ ಮಾಡಲಾಗುತ್ತಿದೆ. ದುರಸ್ತಿಯಾದರೆ ಅಲ್ಲಿಯೂ ಸೈರನ್ ಮೊಳಗಲಿದೆ. ಬೆಂಗಳೂರಿನಲ್ಲಿ ಒಂದು ವಾರ ತಾಲೀಮು ನಡೆಯಲಿದೆ. ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆನೆಗಳ ಅಕಾಲಿಕ ಸಾವು: ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಲೇವಾರಿ

ಮಾನವ – ಪ್ರಾಣಿ ಸಂಘರ್ಷ ತಡೆಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಾಣಿ ಸಂಪತ್ತನ್ನು ಸಂರಕ್ಷಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಬದ್ಧತೆ ತೋರಬೇಕು' ಎಂದು ಹೇಳಿರುವ ಹೈಕೋರ್ಟ್, 'ಕಾಡಿನ ಅಂಚಿನಲ್ಲಿ ವಿದ್ಯುತ್ ಅವಘಡಗಳಿಗೆ ಒಳಗಾಗಿ ಆನೆಗಳು ಸಾವಿಗೆ ಈಡಾಗುವುದನ್ನು ತಡೆಯಲು ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಆದೇಶಿಸಿದೆ.

ರಾಜ್ಯದಲ್ಲಿ ಆನೆಗಳ ಸರಣಿ ಸಾವಿನ ಕುರಿತಂತೆ ಮಾಧ್ಯಮಗಳ ವರದಿ ಆಧರಿಸಿ ಸ್ವಯಂಪ್ರೇರಿತವಾಗಿ ದಾಖಲಿಸಿ-ಕೊಂಡಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ, ಮಾನವ ಪ್ರಾಣಿ ಸಂಘರ್ಷ ತಡೆಗೆ ಹಲವು ನಿರ್ದೇಶ- ನಗಳನ್ನು ನೀಡಿದೆ.



ನಿರ್ದೇಶನಗಳೇನು?

- ಆನೆಗಳ ಆವಾಸ ಸ್ಥಾನಗಳು, ಗಡಿಯಂಚಿನ ಪ್ರದೇಶಗಳಲ್ಲಿ ಅನಧಿಕೃತ ವಿದ್ಯುತ್ ತಂತಿಗಳು ಮತ್ತು ಅಕ್ರಮ ವಿದ್ಯುತ್ ಬೇಲಿಗಳಿಂದ ಅಪಘಾತಗಳು ಸಂಭವಿಸುವ ಸಾಧ್ಯತೆ ಇರುವ ಪ್ರದೇಶಗಳನ್ನು ಗುರುತಿಸಬೇಕು
- ವಿವಿಧ ಅರಣ್ಯ ವೃತ್ತಗಳಿಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರದೇಶವಾರು ತನಿಖಾ ಸಮಿತಿಗಳನ್ನು ರಚಿಸಬೇಕು
- ಆನೆ ಕಾರ್ಯಪಡೆ ಶಿಫಾರಸುಗಳನ್ನು ಜಾರಿಗೆ ತರಬೇಕು
- ಅರಣ್ಯ ಪ್ರದೇಶಗಳ ಮೂಲಕ ವಿದ್ಯುತ್ ಪ್ರಸರಣ ಮಾರ್ಗಗಳನ್ನು ಅಳವಡಿಸುವ ಕುರಿತು 2016ರ ಅಕ್ಟೋಬರ್ 24ರಂದು; ಪರಿಸರ, ಅರಣ್ಯ ಮತ್ತು ಹವಾಮಾನ ವೈಪರೀತ್ಯ ಸಚಿವಾಲಯ ಹೊರಡಿಸಿರುವ ಮಾರ್ಗಸೂಚಿಗಳನ್ನು ಜಾರಿಗೊಳಿಸಬೇಕು ಮತ್ತು ಅವುಗಳ ಮೇಲ್ವಿಚಾರಣೆ ಮಾಡಬೇಕು
- ಆನೆಗಳು ಮತ್ತು ಆನೆ ಕಾರಿಡಾರ್‌ಗಳ ಆವಾಸ ಸ್ಥಾನಗಳನ್ನು ನಿಯಂತ್ರಿಸಬೇಕು
- ವಿದ್ಯುತ್ ಮಾರ್ಗಗಳ ನಿರ್ವಹಣೆಯಿಂದಾಗಿ ಅಥವಾ ರಾಷ್ಟ್ರೀಯ ವನ್ಯಜೀವಿ ಮಂಡಳಿಯು ನಿಗದಿಪಡಿಸಿದ ಭೂಪ್ರದೇಶ ಮತ್ತು ಕಡಿದಾದ ಪ್ರದೇಶಗಳಿಗೆ ಕನಿಷ್ಠ ಎತ್ತರಕ್ಕೆ ಇರಬಹುದಾದ ಮಾನದಂಡಗಳನ್ನು ಪಾಲಿಸದೇ ಇರುವ ಕಾರಣ ಅನಾಹುತ ಸಂಭವಿಸುತ್ತವೆ. ಹೀಗಾಗಿ, ಜೋತು ಬಿದ್ದಿರುವ ವಿದ್ಯುತ್ ಮಾರ್ಗಗಳನ್ನು ಪರಿಶೀಲಿಸಲು ಅರಣ್ಯ ಅಧಿಕಾರಿಗಳು ಇಂಧನ ಇಲಾಖೆಯೊಂದಿಗೆ ಕಾರ್ಯನಿರ್ವಹಿಸಬೇಕು
- ಆನೆಗಳು ತಮ್ಮ ಹೊಲಗಳಿಗೆ ಪ್ರವೇಶಿಸುವುದನ್ನು ತಡೆಯಲು ಅರಣ್ಯದ ಆಜುಬಾಜಿನ ರೈತರು ತಮ್ಮ ಕೃಷಿ ಹೊಲಗಳಿಗೆ ಹಾಕುವ ಅಕ್ರಮ ವಿದ್ಯುತ್ ಬೇಲಿ ಪರಿಶೀಲಿಸಲು, ತಡೆಯಲು ಮತ್ತು ನಾಶಮಾಡಲು ಪರಿಣಾಮಕಾರಿ ಕಾರ್ಯವಿಧಾನ ಹೊಂದಬೇಕು
- ಅನಧಿಕೃತ ವಿದ್ಯುತ್ ಬೇಲಿ ಹಾಕಲು ರೈತರಿಗೆ ಅನುಮತಿ ನೀಡಬಾರದು ಮತ್ತು ರೈತರು ತಮ್ಮ ಬೆಳೆಗಳನ್ನು ವೈಜ್ಞಾನಿಕ ಮತ್ತು ರಕ್ಷಣಾತ್ಮಕ ಬ್ಯಾರಿಕೇಡ್‌ಗಳಿಂದ ಸಂರಕ್ಷಿಸಿಕೊಳ್ಳಬೇಕು
- ವಿದ್ಯುತ್ ಕೇಬಲ್‌ಗಳು ಮತ್ತು ದೂರಸಂಪರ್ಕ ಟವರ್‌ಗಳನ್ನು ನಿರ್ಮಿಸುವಾಗ ಅವುಗಳಿಗಿರುವ ನಿಯಮಗಳನ್ನು ಎಚ್ಚರಿಕೆಯಿಂದ ಪಾಲಿಸಬೇಕು. ಪರಿಸರ ಸೂಕ್ಷ್ಮ ವಲಯಗಳಲ್ಲಿ ನೆಲದಾಳದಲ್ಲಿ ಕೇಬಲ್ ಅಳವಡಿಕೆಯನ್ನು ಉತ್ತೇಜಿಸಬೇಕು.
- ಅಕ್ರಮ ವಿದ್ಯುತ್ ಬೇಲಿಗಳ ಬಗ್ಗೆ ಹಾಗೂ ಆನೆಗಳ ರಕ್ಷಣೆಯ ಮಹತ್ವದ ಬಗ್ಗೆ ರೈತರಲ್ಲಿ ಅರಿವು ಮೂಡಿಸಲು ಸಮುದಾಯ ಜಾಗೃತಿ ಮೂಡಿಸಬೇಕು.
- ಆನೆಗಳ ಆಕಸ್ಮಿಕ ಸಾವಿನಂತಹ ಘಟನೆಗಳಿಗೆ ಗುರಿ ಆಗುವ ಪ್ರದೇಶಗಳಲ್ಲಿ ಗಸ್ತು ತಿರುಗಬೇಕು
- ಆನೆಗಳ ಸುರಕ್ಷಿತ ಚಲನೆಯನ್ನು ಖಾತ್ರಿಪಡಿಸಿಕೊಳ್ಳಲು, ಆನೆಗಳಿಗೆ ಎದುರಾಗುವ ಅಪಘಾತಗಳನ್ನು ತಗ್ಗಿಸಲು ಅಪೇಕ್ಷಿತ ಸ್ಥಳಗಳಲ್ಲಿ ಮೇಲ್ಸೇತುವೆಗಳನ್ನು ನಿರ್ಮಿಸಬೇಕು.
- ಅಧಿಕಾರಿಗಳು ಇ-ಕಣ್ಗಾವಲು ವ್ಯವಸ್ಥೆ ಸೇರಿದಂತೆ ಅತ್ಯಾಧುನಿಕ ತಾಂತ್ರಿಕ ಆವಿಷ್ಕಾರಗಳನ್ನು ಬಳಸಬೇಕು. ನಾಗರಹೊಳೆ ಹುಲಿ ಮೀಸಲು ಪ್ರದೇಶದಲ್ಲಿ ಬಳಸಿರುವ ಎಐ ಸಾಫ್ಟ್‌ವೇರ್ ಅನ್ನು ಎಲ್ಲೆಡೆ ವಿಸ್ತರಿಸಬೇಕು

ಅಪಘಾತ; ಐವರ ಸಾವು



ಅಪಘಾತದಲ್ಲಿ ಮೃತಪಟ್ಟ ವಿಠ್ಠಲ ಶೆಟ್ಟಿ ಮತ್ತು ಕುಟುಂಬದ ಸದಸ್ಯರು

ಹುಬ್ಬಳ್ಳಿ: ತಾಲ್ಲೂಕಿನ ಕಿರೆಸೂರ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ಬೆಳಿಗ್ಗೆ ಲಾರಿ ಮತ್ತು ಕಾರು ನಡುವೆ ಅಪಘಾತವಾಗಿದ್ದು, ಕಾರಿನಲ್ಲಿದ್ದ ಒಂದೇ ಕುಟುಂಬದ ಐವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ಶಿವಮೊಗ್ಗ ಜಿಲ್ಲೆ ಸಾಗರದ ಮೂರುಕೈ ಗ್ರಾಮದ ದಂಪತಿ ವಿಠ್ಠಲ ಶೆಟ್ಟಿ(55) ಮತ್ತು ಶಶಿಕಲಾ ಶೆಟ್ಟಿ(48), ಅವರ ಪುತ್ರಿ ಶ್ವೇತಾ(28), ಪುತ್ರ ಸಂದೀಪ(26) ಹಾಗೂ ವಿಠ್ಠಲ ಶೆಟ್ಟಿ ಸಹೋದರನ ಪುತ್ರಿ ಅಂಜಲಿ(28) ಮೃತರು' ಎಂದು ಹುಬ್ಬಳ್ಳಿ ಗ್ರಾಮೀಣ ಠಾಣೆ ಪೊಲೀಸರು ತಿಳಿಸಿದ್ದಾರೆ.

'ಸಂದೀಪ ಕಾರು ಚಾಲನೆ ಮಾಡುತ್ತಿದ್ದು, ನವಲಗುಂದ ಕಡೆಯಿಂದ ಹುಬ್ಬಳ್ಳಿಗೆ ಬರುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದಿದ್ದಾರೆ' ಎಂದು ಎಸ್‌ಪಿ ಗೋಪಾಲ ಬ್ಯಾಕೋಡ ತಿಳಿಸಿದ್ದಾರೆ.

'ವಿಠ್ಠಲ ಶೆಟ್ಟಿ 30 ವರ್ಷಗಳಿಂದ ಬಾಗಲಕೋಟೆಯ ಕುಳಗೇರಿ ಕ್ರಾಸ್ ಬಳಿ ಹೋಟೆಲ್ (ರಾಘವೇಂದ್ರ ಕ್ಯಾಂಟೀನ್) ನಡೆಸುತ್ತ, ಬದುಕು ಕಟ್ಟಿಕೊಂಡಿದ್ದರು.

ಮಗಳು ಶ್ವೇತಾ ನಿಶ್ಚಿತಾರ್ಥಕ್ಕೆ ಆವಿನಳ್ಳಿಗೆ ಕುಟುಂಬ ಸಮೇತ ತೆರಳಿದ್ದರು. ಅಲ್ಲಿಂದ ಬರುವಾಗ ದುರ್ಘಟನೆ ನಡೆದಿದೆ' ಎಂದು ವಿಠ್ಠಲ ಶೆಟ್ಟಿ ಸಂಬಂಧಿ ಸತೀಶ ಶೆಟ್ಟಿ ತಿಳಿಸಿದರು.

'ಮಂಗಳವಾರ ನಸುಕಿನ ಜಾವ 4ಕ್ಕೆ ಸಾಗರದಿಂದ ಹೊರಟು, ಬೆಳಿಗ್ಗೆ 7.15ಕ್ಕೆ ವರೂರ ಬಳಿ ಉಪಾಹಾರ ಮಾಡಿದ್ದಾರೆ. ಬೈಪಾಸ್ ರಸ್ತೆಯಿಂದ ವಿಜಯಪುರ ರಸ್ತೆಗೆ ಅವರು ತೆರಳಿದ್ದು, 8 ಗಂಟೆ ಸುಮಾರಿಗೆ ಅಪಘಾತವಾಗಿದೆ. ವಿಠ್ಠಲ ಅವರ ಸಹೋದರನ ಮಗಳು ಅಂಜಲಿ, ನರಗುಂದದಲ್ಲಿ ಗ್ರಾಮ ಲೆಕ್ಕಾಧಿಕಾರಿಯಾಗಿದ್ದರು' ಎಂದು ಸುಧಾಕರ ಶೆಟ್ಟಿ ತಿಳಿಸಿದರು.

ಪ್ರಜಾವಾಣಿ ವರದಿ ಪರಿಣಾಮ: ವಾಹನಗಳ ಟೋಲ್ ಸಂಗ್ರಹ ರದ್ದುಗೊಳಿಸಿದ ಕಾವೇರಿ ನಿಗಮ

ಬೃಂದಾವನ ಪ್ರವೇಶ ಶುಲ್ಕ ಇಳಿಕೆ

ಪ್ರಜಾವಾಣಿ ವಾರ್ತೆ

ಮಂಡ್ಯ: ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣ-ರಾಜಸಾಗರ ಅಣೆಕಟ್ಟೆಯ ವಿಶ್ವವಿಖ್ಯಾತ 'ಬೃಂದಾವನ' ಉದ್ಯಾನದ ಪ್ರವೇಶ ಶುಲ್ಕವನ್ನು ಹೆಚ್ಚಿಸಿದ ನಿರ್ಧಾರದಿಂದ ಹಿಂದೆ ಸರಿದಿರುವ ಕಾವೇರಿ ನೀರಾವರಿ ನಿಗಮವು, ಮೊದಲಿನಂತೆ ಪ್ರವಾಸಿಗರಿಂದ ತಲಾ ₹50 ಮಾತ್ರ ಪಡೆಯಲು ಮುಂದಾಗಿದೆ. ಬುಧವಾರದಿಂದಲೇ (ಮೇ 7) ಇದು ಜಾರಿಗೊಳ್ಳಲಿದೆ.

ಮೇ 1ರಿಂದ ಪ್ರವೇಶ ಶುಲ್ಕ, ವಾಹನ ಪಾರ್ಕಿಂಗ್, ಟೋಲ್ ದರವನ್ನು ಎರಡು ಪಟ್ಟು ಹೆಚ್ಚಿಸಿದ್ದ ಬಗ್ಗೆ 'ಪ್ರಜಾವಾಣಿ'ಯಲ್ಲಿ 'ಬೃಂದಾವನ ಪ್ರವೇಶ ದರ ದುಪ್ಪಟ್ಟು' ವಿಶೇಷ ವರದಿ ಪ್ರಕಟವಾದ ಬೆನ್ನಲ್ಲೇ, ದರ ಏರಿಕೆ ಬಗ್ಗೆ ಸಾರ್ವಜನಿಕರು ಮತ್ತು ಪ್ರವಾಸಿಗರಿಂದ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು

ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ ರೈತ ಸಂಘದ ವತಿಯಿಂದ ಬೃಂದಾವನ ಮುಂಭಾಗ ಮಂಗಳವಾರ ಪ್ರತಿಭಟನೆಯೂ ನಡೆಯಿತು. 'ಪ್ರವಾಸಿಗರಿಂದ ಮಿತಿ ಮೀರಿದ ಶುಲ್ಕ ವಸೂಲಿ ಮಾಡಲಾಗುತ್ತಿದ್ದು, ಇದು ಹೊರೆಯಾಗಿದೆ. ಶುದ್ಧ ಕುಡಿಯುವ ನೀರು ಮತ್ತು ಶೌಚಾಲಯ ಕಲ್ಪಿಸಿಲ್ಲ. ಮೂಲಸೌಕರ್ಯ ಕಲ್ಪಿಸು-ವವರೆಗೆ ಶುಲ್ಕ ಹೆಚ್ಚಿಸಬಾರದು' ಎಂದು ದರ್ಶನ್ ಎಚ್ಚರಿಕೆ ನೀಡಿದರು.

ಇದರಿಂದ ಎಚ್ಚೆತ್ತುಕೊಂಡ ನಿಗಮದ ಅಧಿಕಾರಿಗಳು ದರ ಇಳಿಸಿದ್ದಾರೆ. ಅಣೆಕಟ್ಟೆ ಕೆಳಗಿನ ಸೇತುವೆ ಬಳಿಯೂ ವಾಹನಗಳಿಂದ ಟೋಲ್ ಸಂಗ್ರಹಿಸುವುದನ್ನು ನಿಲ್ಲಿಸಲಾಗಿದೆ.

'ಟೋಲ್ ಸಂಗ್ರಹಿಸುವುದನ್ನು ಸ್ಥಗಿತಗೊಳಿಸ-ಲಾಗಿದೆ. ಪ್ರವೇಶದರ, ಪಾರ್ಕಿಂಗ್ ದರವನ್ನು ಹಿಂದೆ ಇದ್ದಂತೆ ಪಡೆಯಲಾಗುವುದು.' ಎಂದು ನಿಗಮದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಫಾರೂಕ್ ಅಹಮದ್ ಅಬು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.



'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿದ್ದ ವಿಶೇಷ ವರದಿ

ಟಿಂಬರ್ ಮಾಫಿಯಾ ಕೊನೆಗಾಣಿಸಿ ಎ.ಟಿ.ರಾಮಸ್ವಾಮಿ ಆಗ್ರಹ

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯದಲ್ಲಿ ಟಿಂಬರ್ ಮಾಫಿಯಾ ವ್ಯಾಪಕವಾಗಿದ್ದು, ಅದನ್ನು ಕೊನೆಗಾಣಿಸಲು ಸರ್ಕಾರ ಎಲ್ಲ ಜಿಲ್ಲೆಗಳಲ್ಲಿ ಮರ ಪ್ರಾಧಿಕಾರ ರಚಿಸಬೇಕು' ಎಂದು 'ಪರಿಸರಕ್ಕಾಗಿ ನಾವು' ಸಂಘಟನೆ ಅಧ್ಯಕ್ಷ ಎ.ಟಿ. ರಾಮಸ್ವಾಮಿ ಆಗ್ರಹಿಸಿದರು.


ಎ.ಟಿ. ರಾಮಸ್ವಾಮಿ

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಮಾಫಿಯಾವನ್ನು ನಿಯಂತ್ರಿಸದೆ, ಅರಣ್ಯ ಇಲಾಖೆ ಹಾಗೂ ಸರ್ಕಾರ ನಿರ್ಲಕ್ಷ್ಯ ವಹಿಸಿವೆ' ಎಂದರು.

'1976ರಲ್ಲಿಯೇ ಮರಗಳ ಸಂರಕ್ಷಣಾ ಕಾಯ್ದೆ ರೂಪುಗೊಂಡಿದೆ. ಕಾಯ್ದೆಯನ್ವಯ ಸ್ಥಳೀಯವಾಗಿ ಮರ ಪ್ರಾಧಿಕಾರ ರಚಿಸಬೇಕಿತ್ತು. ಅಭಿವೃದ್ಧಿ ಹೆಸರಿನಲ್ಲಿ ಮರಗಳ ಹನನ ವ್ಯಾಪಕವಾಗಿದ್ದು, ಸಕ್ರಿಯವಾಗಿರುವ ಮಾಫಿಯಾವನ್ನು ಕೊನೆಗಾಣಿಸಲು ಅಧಿಕಾರಿಗಳಲ್ಲಿ ಇಚ್ಛಾಶಕ್ತಿ ಕೊರತೆಯಿದೆ. ಕಾನೂನು ಮಾಡುವವರೇ ತಪ್ಪೆಸಗಿದವ-ರಿಗೆ ರಕ್ಷಣೆ ಒದಗಿಸುತ್ತಿದ್ದಾರೆ' ಎಂದು ಆರೋಪಿಸಿದರು.

'ರಾಜ್ಯದ ವಿಸ್ತೀರ್ಣದ ಶೇ 33ರಷ್ಟು ಅರಣ್ಯ ಇರಬೇಕಿತ್ತು. ಈಗ ಅದರ ಅರ್ಧದಷ್ಟಿದೆ. ದಟ್ಟಾರಣ್ಯಗಳು, ಹಸಿರು ವಲಯಗಳಿಗೆ ತೊಂದರೆಯಾಗು ತ್ತಿದೆ. ತಪ್ಪು ತಿದ್ದಿಕೊಳ್ಳದಿದ್ದರೆ ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ಉಳಿಸಿಕೊಡಲು ಸಾಧ್ಯವಿಲ್ಲ. ಕೆಡುಕು ಮಾಡುವವರನ್ನು ನೋಡುತ್ತಾ ಸುಮ್ಮನಿರಲಾಗದು. ಹೀಗಾಗಿ ರಾಜ್ಯದಾದ್ಯಂತ ಸಂಘಟನೆಯು ಹೋರಾಡಲಿದೆ' ಎಂದರು.

ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ, ಕಾರ್ಯದರ್ಶಿ ಗಂಟಯ್ಯ, ಪಿಯುಸಿಎಲ್‌ನ ಕಮಲ್ ಗೋಪಿನಾಥ್, ನಂಜಮ್ಮ, 'ಕ್ಲೀನ್ ಮೈಸೂರು' ಸಂಘಟನೆಯ ಲೀಲಾ ವೆಂಕಟೇಶ್ ಪಾಲ್ಗೊಂಡಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಜನರಿಗೆ ಹಿರಿಯರಿಂದ ಬರುವ ಆಭರಣಗಳಲ್ಲಿ ಭಾಷೆಯೂ ಒಂದು. ಅದು ಚೆನ್ನಾಗಿದ್ದಷ್ಟೂ ಭೂಷಣ.

-ಬಿ.ಎಂ.ಶ್ರೀ.

ಮಣಿಪುರದಲ್ಲಿ ನಿಲ್ಲದ ಹಿಂಸಾಚಾರ ಶಾಂತಿ ಮರೀಚಿಕೆ ಆಗದಿರಲಿ

ಮಣಿಪುರದಲ್ಲಿ ಜನಾಂಗೀಯ ಹಿಂಸಾಚಾರ ಶುರುವಾಗಿ ಎರಡು ವರ್ಷಗಳು ಕಳೆದಿವೆ. ಆದರೆ, ರಾಜ್ಯದ ಪರಿಸ್ಥಿತಿ ಈಗಲೂ ಶಾಂತವಾಗಿಲ್ಲ, ಅಲ್ಲಿನ ಜನಜೀವನ ಸಹಜವಾಗಿಲ್ಲ. ಮೈತೇಯಿ ಸಮುದಾಯದವರನ್ನು ಪರಿಶಿಷ್ಟ ವರ್ಗಗಳ ಪಟ್ಟಿಯಲ್ಲಿ ಸೇರಿಸುವ ಬಗ್ಗೆ ಪರಿಗಣಿಸುವಂತೆ ಹೈಕೋರ್ಟ್ ಅಲ್ಲಿನ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದ್ದನ್ನು ವಿರೋಧಿಸಿ ಕುಕಿ ಸಮುದಾಯದವರು ಆಯೋಜಿಸಿದ್ದ ಜಾಥಾ ವೇಳೆ ಆರಂಭವಾದ ಹಿಂಸಾಚಾರ ವಿವಿಧೆಡೆ ಹರಡಿತು. ನಂತರದ ದಿನಗಳಲ್ಲಿ ಇಡೀ ರಾಜ್ಯವು ಹಿಂಸೆಗೆ ಸಿಲುಕಿ ನಲುಗಿದೆ. ಮಣಿಪುರ ರಾಜ್ಯವು ಈಗ ಸಮುದಾಯಗಳ ನೆಲೆಯಲ್ಲಿ ಭೌತಿಕವಾಗಿಯೂ ಒಡೆದುಹೋದಂತಿದೆ. ಒಂದು ಸಮುದಾಯಕ್ಕೆ ಸೇರಿದ ಜನರಿಗೆ ಇನ್ನೊಂದು ಸಮುದಾಯದ ಜನ ಇರುವ ಪ್ರದೇಶವನ್ನು ಪ್ರವೇಶಿಸಲು ಅಲ್ಲಿ ಅವಕಾಶ ಕೊಡುತ್ತಿಲ್ಲ. ಅಲ್ಲಿನ ಜನರ ಕೈಯಲ್ಲಿ ಈಗ ಶಸ್ತ್ರಾಸ್ತ್ರಗಳು ಇವೆ, ಸರ್ಕಾರದ ಶಸ್ತ್ರಾಗಾರಗಳಿಂದ ಲೂಟಿ ಮಾಡಿದ ಬಂದೂಕು ಮತ್ತು ಗುಂಡುಗಳು ಅಲ್ಲಿ ಜನರಿಗೆ ಮುಕ್ತವಾಗಿ ಸಿಗುತ್ತಿವೆ. ರಾಜ್ಯದಲ್ಲಿ ನಿತ್ಯದ ಜನಜೀವನಕ್ಕೆ ಧಕ್ಕೆ ಆಗಿದೆ. ಹಿಂಸಾಚಾರಕ್ಕೆ ತುತ್ತಾಗಿ 250ಕ್ಕೂ ಹೆಚ್ಚು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಅಂದಾಜು 60,000 ಜನ ಶಿಬಿರಗಳಲ್ಲಿ ವಾಸ ಮಾಡುತ್ತಿದ್ದಾರೆ.



ಕುಕಿ ಮತ್ತು ಮೈತೇಯಿ ಸಮುದಾಯದವರ ನಡುವಿನ ವೈಮನಸ್ಸನ್ನು ಸರಿಪಡಿಸಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ, ಆಗಿರುವ ಗಾಯಗಳಿಗೆ ‘ಔಷಧಿ’ ನೀಡಬೇಕಾಗಿದೆ

ರಾಜ್ಯದ ಪರಿಸ್ಥಿತಿಯನ್ನು ಹತೋಟಿಗೆ ತರಲು ರಾಜ್ಯ ಸರ್ಕಾರಕ್ಕೆ ಹಾಗೂ ಕೇಂದ್ರ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಮುಖ್ಯಮಂತ್ರಿಯಾಗಿದ್ದ ಎನ್. ಬಿರೇನ್ ಸಿಂಗ್ ಅವರು ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರುವ ಬದಲು, ಅದು ಇನ್ನಷ್ಟು ಹದಗೆಡುವಂತೆ ಮಾಡಿದ್ದರು. ಅವರು ಮೈತೇಯಿ ಸಮುದಾಯಕ್ಕೆ ಸೇರಿದವರು. ರಾಜ್ಯದ ಪಾಲಿಗೆ ನಿಷ್ಪಕ್ಷಪಾತ ನಾಯಕನಂತೆ ವರ್ತಿಸುವ ಬದಲು ಅವರು ಮೈತೇಯಿ ಸಮುದಾಯದ ನಾಯಕನಂತೆ ವರ್ತಿಸಿದರು, ಆ ರೀತಿಯಲ್ಲೇ ಮಾತುಗಳನ್ನು ಆಡಿದರು. ಅವರು ಬಹಳಷ್ಟು ಹಾನಿ ಉಂಟುಮಾಡಿದ ನಂತರದಲ್ಲಿ ಕೇಂದ್ರ ಸರ್ಕಾರವು ಫೆಬ್ರುವರಿಯಲ್ಲಿ ಅವರು ರಾಜೀನಾಮೆ ಸಲ್ಲಿಸುವಂತೆ ಮಾಡಿತು. ರಾಷ್ಟ್ರಪತಿ ಆಡಳಿತ ಜಾರಿಗೆ ಬಂದ ನಂತರದಲ್ಲಿ ಪರಿಸ್ಥಿತಿಯನ್ನು ತಿಳಿಗೊಳಿಸಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂಬ ಆಶಾವಾದ ಇತ್ತು. ಆದರೆ ಅಂತಹ ಕ್ರಮಗಳು ಆಗಿಲ್ಲ. ದೆಹಲಿಯಲ್ಲಿ ಮಾತುಕತೆ ನಡೆಯಿತಾದರೂ ಅದು ಎಲ್ಲರನ್ನೂ ಪ್ರತಿನಿಧಿಸಲಿಲ್ಲ ಎಂದು ಹೇಳಲಾಗಿದೆ. ಎರಡೂ ಬದಿಯವರು ತಮ್ಮ ನಿಲುವುಗಳಿಗೆ ಅಂಟಿಕೊಂಡಿದ್ದರು. ಹೀಗಾಗಿ, ಮಾತುಕತೆಯ ಮೂಲಕ ಯಾವ ಪ್ರಗತಿಯೂ ಆಗಲಿಲ್ಲ. ತಮಗೆ ಪ್ರತ್ಯೇಕ ಆಡಳಿತಾತ್ಮಕ ಪ್ರದೇಶವನ್ನು ನೀಡಬೇಕು ಎಂದು ಕುಕಿ ಸಮುದಾಯದವರು ಆಗ್ರಹಿಸುತ್ತಿದ್ದಾರೆ. ಈ ಆಗ್ರಹಕ್ಕೆ ಮೈತೇಯಿ ಸಮುದಾಯದ ಪ್ರಬಲ ವಿರೋಧ ಇದೆ. ರಾಜ್ಯಪಾಲ ಎ.ಕೆ. ಭಲ್ಲಾ ಅವರಿಗೆ ಮಣಿಪುರದ ಪರಿಸ್ಥಿತಿ ಚೆನ್ನಾಗಿ ಅರ್ಥವಾಗುತ್ತದೆ ಎನ್ನಲಾಗಿದೆ. ಆದರೆ ಅವರಿಂದ ಕೂಡ ನಿರೀಕ್ಷಿತ ಫಲ ಸಿಕ್ಕಿಲ್ಲ.

ಕೇಂದ್ರ ಸರ್ಕಾರವು ನಿರ್ಲಕ್ಷ್ಯದ ಧೋರಣೆಯನ್ನು ಅನುಸರಿಸುತ್ತಿದೆ. ಹಿಂಸೆಗೆ ತುತ್ತಾಗಿರುವ ರಾಜ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಎರಡು ವರ್ಷಗಳಿಂದ ಭೇಟಿ ನೀಡಿಲ್ಲ. ರಾಜ್ಯದ ಪರಿಸ್ಥಿತಿಯ ಬಗ್ಗೆ ಚರ್ಚಿಸಲು ಸಂಸತ್ತಿನಲ್ಲಿ ಹೆಚ್ಚು ಸಮಯ ನೀಡಿಲ್ಲ. ಕುಕಿ ಮತ್ತು ಮೈತೇಯಿ ಸಮುದಾಯದವರನ್ನು ಒಂದೆಡೆ ಸೇರಿಸಿ, ಅವರ ನಡುವಿನ ವೈಮನಸ್ಸನ್ನು ಸರಿಪಡಿಸಲು ಕ್ರಮ ತೆಗೆದುಕೊಳ್ಳದೇ ಇದ್ದರೆ ಮಣಿಪುರದ ಪಾಲಿಗೆ ಶಾಂತಿ ಮತ್ತು ಸಹಜ ಬದುಕು ಮರೀಚಿಕೆಯಂತೆ ಆಗುತ್ತದೆ. ರಾಜ್ಯದಲ್ಲಿ ಹಿಂಸಾಕೃತ್ಯಗಳು ಆಗಾಗ ನಡೆಯುತ್ತಲೇ ಇವೆ. ಅಲ್ಲಿ ಎಲ್ಲೆಡೆ ಬಿಗುವಿನ ಹಾಗೂ ಅನುಮಾನದ ವಾತಾವರಣ ಇದೆ. ಆಗಿರುವ ನಷ್ಟಕ್ಕೆ ಯಾರೂ ಹೊಣೆ ಹೊರುತ್ತಿಲ್ಲ. ಗಾಯಗಳಿಗೆ ‘ಔಷಧಿ’ ನೀಡುವ ಕೆಲಸವನ್ನು ಯಾರೂ ಮಾಡುತ್ತಿಲ್ಲ. ಹಿಂಸಾಚಾರ ಭುಗಿಲೆದ್ದ ದಿನದ ವಾರ್ಷಿಕದಂದು ಕುಕಿ ಮತ್ತು ಮೈತೇಯಿ ಸಮುದಾಯಗಳು ನೆಲಸಿರುವ ಪ್ರದೇಶಗಳಲ್ಲಿ ಸಂಪೂರ್ಣ ಬಂದ್ ನಡೆದಿದ್ದನ್ನು ಕಂಡರೆ, ಪರಿಸ್ಥಿತಿಯ ಬಗ್ಗೆ ಅಲ್ಲಿನ ಜನರಲ್ಲಿ ಯಾವ ಬಗೆಯ ಭಾವನೆ ಇರಬಹುದು ಎಂಬುದು ಅರಿವಾಗುತ್ತದೆ.

ದಿನದ ಟ್ವೀಟ್

ಹೀಗಿದೆ ವಸ್ತುಸ್ಥಿತಿ!



ವಿಪರ್ಯಾಸ! ‘ಅನೈಇಲೇಷನ್ ಆಫ್ ಕಾಸ್ಟ್’ ಕೃತಿಯ ಲೇಖಕರನ್ನು ಕೊಂಡಾಡುವ ಹಾಗೂ ಆರಾಧಿಸುವ (ಎಲ್ಲ ರಾಜಕೀಯ ಪಕ್ಷಗಳಿಗೆ ಸೇರಿದ) ಎಲ್ಲರೂ ಇಂದು ಜಾತಿ ಜನಗಣತಿಯನ್ನು ಜೋರಾಗಿ ಬೆಂಬಲಿಸುತ್ತಿದ್ದಾರೆ.

ಸುಧೀಂದ್ರ ಕುಲಕರ್ಣಿ, ಲೇಖಕ, ರಾಜಕೀಯ ವಿಶ್ಲೇಷಕ

ಕಿಡಿನುಡಿ



ಜಲಮೂಲಗಳು ತ್ಯಾಜ್ಯ ಸಂಗ್ರಹ ತಾಣಗಳಾಗಿವೆ. ನದಿ ಮಾಲಿನ್ಯ ಹೆಚ್ಚಾಗುತ್ತಿದೆ. ಇಂತಹ ಸಂದರ್ಭದಲ್ಲಿ, ಕಾವೇರಿ ಆರತಿಗೆ ಕೋಟ್ಯಂತರ ರೂಪಾಯಿ ವ್ಯಯಿಸುವುದರಿಂದ ಯಾವ ಸಾರ್ಥಕತೆ ಸಿಗುತ್ತದೆ?

ಎ.ಟಿ.ರಾಮಸ್ವಾಮಿ, ‘ಪರಿಸರಕ್ಕಾಗಿ ನಾವು’ ಸಂಘಟನೆಯ ಅಧ್ಯಕ್ಷ

25 ವರ್ಷಗಳ ಹಿಂದೆ

ಭಾನುವಾರ, 7-5-2000

• ‘ಲವ್ ವೈರಸ್’ ಹುಟ್ಟುಹಾಕಿದ ಶಂಕಿತನ ಗುರುತು ಪತ್ತೆ

ಮನಿಲಾ, ಮೇ 6 (ಎಎಫ್‌ಪಿ, ರಾಯಿಟರ್ಸ್)– ಜಗತ್ತಿನಾದ್ಯಂತ ಕಂಪ್ಯೂಟರ್ ಕಾರ್ಯಕ್ರಮಗಳನ್ನೆಲ್ಲ ಅಸ್ತವ್ಯಸ್ತಗೊಳಿಸುವಲ್ಲಿ ಸಫಲವಾಗಿರುವ ‘ಲವ್ ವೈರಸ್’ ಅನ್ನು ಹುಟ್ಟುಹಾಕಿದ ಶಂಕಿತನೊಬ್ಬನನ್ನು ಗುರುತಿಸಲಾಗಿದೆ ಎಂದು ಫಿಲಿಪ್ಪೀನ್ಸ್‌ನ ತನಿಖಾ ಅಧಿಕಾರಿಗಳು ಮತ್ತು ಇಂಟರ್‌ನೆಟ್ ಸೇವೆಯ ಅಧಿಕಾರಿಗಳು ಹೇಳಿದ್ದಾರೆ.

ಮನಿಲಾದ ಪಂಡಕಾನ್ ಜಿಲ್ಲೆಯಲ್ಲಿನ ಮಧ್ಯಮ ವರ್ಗದ ಕುಟುಂಬವೊಂದಕ್ಕೆ ಸೇರಿದ 23 ವರ್ಷದ ಯುವಕನೊಬ್ಬ ಈ ವೈರಸ್ ಸೃಷ್ಟಿಸಿರಬೇಕು ಎಂದು ಇಂಟರ್‌ನೆಟ್‌ನಲ್ಲಿ ಬಂದ ಸಂದೇಶಗಳನ್ನು ಆಧರಿಸಿ ಈ ಗುಮಾನಿ ಪಡಲಾಗಿದೆ.

ಗುರುವಾರ ಏಷ್ಯಾದಲ್ಲಿ ಮೊದಲು ಕಾಣಿಸಿಕೊಂಡ ‘ಐ ಲವ್ ಯು’ ವೈರಸ್ ಮಿಂಚಿನ ವೇಗದಲ್ಲಿ ಜಗತ್ತಿನ ಮೂಲೆ ಮೂಲೆಗಳಲ್ಲಿನ ಕಂಪ್ಯೂಟರ್‌ಗಳಿಗೆ ಹರಡುತ್ತಿದೆ. ಅಮೆರಿಕದಲ್ಲಿನ ಪ್ರಮುಖ ಕಂಪನಿಗಳು, ಪೆಂಟಗನ್, ಕೇಂದ್ರೀಯ ಗುಪ್ತಚರ ಇಲಾಖೆ ಹಾಗೂ ಬ್ರಿಟಿಷ್ ಪಾರ್ಲಿಮೆಂಟ್ ಈಗಾಗಲೇ ಇ-ಮೇಲ್ ವ್ಯವಸ್ಥೆಯನ್ನು ರದ್ದುಪಡಿಸಿವೆ.

ಲವ್ ವೈರಸ್ ಕಾಣಿಸಿಕೊಂಡಾಗಿನಿಂದ ಈವರೆಗೆ ಜಗತ್ತಿನಾದ್ಯಂತ 2.61 ಶತಕೋಟಿ ಡಾಲರ್ ಮೊತ್ತದ ಹಾನಿ ಉಂಟಾಗಿದೆ.

• ವಿಚ್ಛೇದನ ಪಡೆಯದ ಮತಾಂತರ ಮದುವೆ ಅನೂರ್ಜಿತ: ಸುಪ್ರೀಂ ಕೋರ್ಟ್

ನವದೆಹಲಿ, ಮೇ 6 (ಯುಎನ್‌ಐ)– ತನ್ನ ಮೊದಲ ಹೆಂಡತಿಯಿಂದ ವಿಚ್ಛೇದನ ಪಡೆಯದ ಹಿಂದೂ ವ್ಯಕ್ತಿಯೊಬ್ಬ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ನಂತರ ಎರಡನೇ ಮದುವೆಯಾದಲ್ಲಿ ಆ ಮದುವೆ ಅನೂರ್ಜಿತವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಪುನರುಚ್ಚರಿಸಿದೆ.

ಭಾರತೀಯ ದಂಡ ಸಂಹಿತೆಯ ಸೆಕ್ಷನ್ 494ರ ಅನ್ವಯ ಈ ಬಗೆಯ ಎರಡನೇ ಮದುವೆ ಅನೂರ್ಜಿತಗೊಳ್ಳುವುದು ಮತ್ತು ವ್ಯಕ್ತಿಯ ಕೃತ್ಯವನ್ನು ಅಪರಾಧವೆಂದು ಪರಿಗಣಿಸಲಾಗುವುದು ಎಂದು ಹೇಳಿದೆ.

50 ವರ್ಷಗಳ ಹಿಂದೆ

ಬುಧವಾರ, 7-5-1975

• ಹುಬ್ಬಳ್ಳಿ-ಧಾರವಾಡ ಅಭಿವೃದ್ಧಿ ಬಗ್ಗೆ ವಿವರ ನೀಡಲು ಸಚಿವರ ಸೂಚನೆ

ಹುಬ್ಬಳ್ಳಿ, ಮೇ 6– ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ನಿನ ಕೆಲಸ ಕಾರ್ಯಗಳ ಬಗ್ಗೆ ಅಧಿಕಾರಿಗಳಿಂದ ತಾವು ಕೆಲವು ವಿವರಗಳನ್ನು ಕೇಳಿರುವುದಾಗಿ ಪೌರಾಡಳಿತ ಖಾತೆ ಸಚಿವ ಡಿ.ಕೆ. ನಾಯ್ಕರ್ ಅವರು ಇಂದು ಹೇಳಿದರು.

ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ ವಿವಿಧ ಅಭಿವೃದ್ಧಿ ಕಾರ್ಯಗಳಿಗಾಗಿ ಸರ್ಕಾರದ ಆದೇಶದಂತೆ ನಿಗದಿಯಾದ ಅವಧಿಯಲ್ಲಿ ಸಕಾಲಕ್ಕೆ ಎಷ್ಟು ಹಣ ವೆಚ್ಚ ಮಾಡಿದೆ, ಸಾಲ ಸೌಲಭ್ಯ ನೆರವು ಪಡೆದು ಯೋಜನೆಗಳನ್ನು ಕಾರ್ಯಗತ ಮಾಡಲು ಕಾರ್ಪೊರೇಷನ್ ಒದಗಿಸಿಕೊಂಡಿರುವ ಆರ್ಥಿಕ ಸಂಪನ್ಮೂಲದ ಮೊತ್ತವೆಷ್ಟು ಮತ್ತು ಆಗಿರುವ ಪ್ರಗತಿ ಎಷ್ಟು ಹಾಗೂ ಮರುಪಾವತಿ ಸ್ಥಿತಿ ಹೇಗಿದೆ ಎಂಬ ಅಂಶಗಳು ಕಾರ್ಪೊರೇಷನ್ ಕಮಿಷನರ್ ಅವರಿಂದ ತಾವು ಕೇಳಿರುವ ವಿವರಗಳಲ್ಲಿ ಮುಖ್ಯವಾದವುಗಳೆಂದೂ ಸಚಿವರು ಹೇಳಿದರು.

• ಕಳ್ಳಸಾಗಣೆದಾರರ ವಿರುದ್ಧ ಕ್ರಮ ಹಿಂಜರಿಕೆ ಇಲ್ಲ: ಸಚಿವರ ಸ್ಪಷ್ಟನೆ

ನವದೆಹಲಿ, ಮೇ 6– ಕಳ್ಳಸಾಗಣೆದಾರರ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರ ಈಚೆಗೆ ಹಿಂಜರಿಯುತ್ತಿದೆ ಎಂಬ ಆಪಾದನೆಯನ್ನು ಹಣಕಾಸು ಖಾತೆ ಸ್ಟೇಟ್ ಸಚಿವ ಪಿ.ಕೆ. ಮುಖರ್ಜಿ ಇಂದು ರಾಜ್ಯಸಭೆಯಲ್ಲಿ ಅಲ್ಲಗಳೆದರು.

ಈ ಆಪಾದನೆಯನ್ನು ಸಮರ್ಥಿಸಿಕೊಳ್ಳಲು ಯಾವ ನಿದರ್ಶನವೂ ಇಲ್ಲ. ಬದಲಾಗಿ ಈಚೆಗೆ ಕಳ್ಳಸಾಗಣೆದಾರರನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಂಧಿಸಲಾಗಿದೆ; ದಾಳಿ ನಡೆಸಿ, ವಶಪಡಿಸಿಕೊಂಡ ಕಳ್ಳಸಾಗಣೆ ಮಾಲುಗಳ ಪ್ರಮಾಣವೂ ಹೆಚ್ಚಿದೆ. ಕೆಲವು ಕಳ್ಳಸಾಗಣೆದಾರರನ್ನು ಕೋರ್ಟ್ ಬಿಡುಗಡೆ ಮಾಡಿರುವುದರ ಬಗ್ಗೆ ತಮಗೂ ಕಳವಳವುಂಟಾಗಿದೆಯೆಂದೂ ಮಾರುಕಟ್ಟೆಗೆ ಹೊಸದಾಗಿ ಹೆಚ್ಚು ಹೆಚ್ಚು ಕಳ್ಳಮಾಲು ಬರುತ್ತಿದೆ ಎಂಬ ವರದಿಗಳು ಈ ಆತಂಕವನ್ನು ಇನ್ನಷ್ಟು ಹೆಚ್ಚಿಸಿದೆ ಎಂದೂ ಸಚಿವರು ಹೇಳಿದರು.

80 ವರ್ಷಗಳ ಇತಿಹಾಸ ಹೇಳುವ ಕೃತಿ ‘ದಿ ಅನ್‌ಡೈಯಿಂಗ್ ಲೈಟ್’

ಭಾರತ: ಒಂದಾನೊಂದು ಕಾಲದಲ್ಲಿ...



ವಿಶ್ಲೇಷಣೆ

ಯೋಗೇಂದ್ರ ಯಾದವ್

ಅಗತ್ಯ ಇಲ್ಲದಲ್ಲಿ ಮೂಗು ತೂರಿಸುವುದನ್ನು ಬಿಟ್ಟುಬಿಟ್ಟರೆ ನೀವು ಇನ್ನೂ ಹೆಚ್ಚಿನದನ್ನು ಕಾಣಲು ಸಾಧ್ಯ. ಗೋಪಾಲಕೃಷ್ಣ ಗಾಂಧಿ ಅವರು ಸ್ವತಂತ್ರ ಭಾರತದ ಇತಿಹಾಸದ ಕುರಿತು ರಚಿಸಿರುವ ‘ದಿ ಅನ್‌ಡೈಯಿಂಗ್ ಲೈಟ್’ ಎಂಬ ಕೃತಿಯನ್ನು ಓದಿ ಮುಗಿಸಿದಾಗ ನನಗೆ ಹಾಗೆ ಅನ್ನಿಸಿತು. ದೊಡ್ಡ ಮತ್ತು ಸಣ್ಣ ಪ್ರಕರಣಗಳು, ರಾಷ್ಟ್ರೀಯ ಮತ್ತು ಕೌಟುಂಬಿಕ ನಾಟಕಗಳೆಲ್ಲವನ್ನೂ ತಮ್ಮನ್ನು ಅದರ ಕೇಂದ್ರದಲ್ಲಿ ಇರಿಸಿಕೊಳ್ಳದೆಯೇ ದಾಖಲಿಸುವುದು ಸಣ್ಣ ಸಾಧನೆ ಏನಲ್ಲ.


ಸ್ವ ಎಂಬುದನ್ನು ಮೀರಿ ನಿಲ್ಲುವುದು ಮೋಹಕವಾದ ವೈಯಕ್ತಿಕ ಸದ್ಗುಣವಷ್ಟೇ ಅಲ್ಲ, ಗೋಪಾಲಕೃಷ್ಣ ಅವರಿಗೆ ಇದು ದೂರದಲ್ಲೇ ನಿಂತು ಇತಿಹಾಸವನ್ನು ಓದುವ ಮತ್ತು ನೋಡುವ ವಿಧಾನ. ನಿಜ ಹೇಳಬೇಕೆಂದರೆ, ಗೋಪಾಲಕೃಷ್ಣ ಅವರದ್ದು ಸ್ವತಂತ್ರ ಭಾರತದ ವಸ್ತುನಿಷ್ಠ ಇತಿಹಾಸವನ್ನು ಕಟ್ಟಿಕೊಡುವ ಪ್ರಯತ್ನ ಅಲ್ಲ. ಇಲ್ಲಿ ಹೊಸ ಹೊಸ ಆಕರಗಳಿಲ್ಲ, ಭಾವೋನ್ಮಾದಕ್ಕೆ ಕಾರಣವಾಗಬಲ್ಲ ಹೊಸ ಸಂಗತಿಗಳಿಲ್ಲ. ಇತಿಹಾಸದ ಹೊಸ ಸಿದ್ಧಾಂತವನ್ನು ಕಟ್ಟಿಕೊಡುವ ಪ್ರಯತ್ನವೂ ಇಲ್ಲಿ ಇಲ್ಲ. ಇದು ಆತ್ಮಚರಿತ್ರೆಯೂ ಅಲ್ಲ. ಪುಸ್ತಕವೇ ಹೇಳುವಂತೆ, ವ್ಯಕ್ತಿಯೊಬ್ಬ ಕಂಡ ಹಿಂದಿನ 80 ವರ್ಷಗಳ ಇತಿಹಾಸ. ಭಾರತೀಯನೊಬ್ಬನ ಬದುಕು ಮತ್ತು ಮನಸ್ಸಿನ ಮುಂದೆ ಸ್ವತಂತ್ರ ಭಾರತದಲ್ಲಿ ದೊಡ್ಡ ದೊಡ್ಡ ಪ್ರಕರಣಗಳು ಹೇಗೆ ತೆರೆದುಕೊಂಡವು ಎಂಬುದರ ಕತೆ ಇದು.

ಗೋಪಾಲಕೃಷ್ಣ ಗಾಂಧಿ ಅಪರಿಚಿತ ವ್ಯಕ್ತಿಯೇನೂ ಅಲ್ಲ. ಒಂದು ವೇಳೆ ನಿಮ್ಮ ತಂದೆಯ ಅಜ್ಜ ರಾಷ್ಟ್ರಪಿತನಾಗಿ, ತಾಯಿಯ ಅಜ್ಜ ಭಾರತದ ಕೊನೆಯ ಗವರ್ನರ್ ಜನರಲ್ ಆಗಿದ್ದರೆ ಬಹುಶಃ ಅಪರಿಚಿತರಾಗಿ ಉಳಿಯುವುದು ನಿಮಗೆ ಸಾಧ್ಯವಿಲ್ಲ. ಗೋಪಾಲಕೃಷ್ಣ (ಮತ್ತು ಅವರ ಒಡಹುಟ್ಟಿದವರು ಕೂಡ) ಅವರ ಬಹುದೊಡ್ಡ ಸಾಧನೆ ಎಂದರೆ, ತಮ್ಮ ವಂಶ ಪರಂಪರೆಯನ್ನು ಅವರು ಸಹಜವಾಗಿ ಸ್ವೀಕರಿಸಿದ್ದಾರೆ. ತಮ್ಮ ವಂಶ ಪರಂಪರೆಯ ಕುರಿತು ಅವರು ಅಹಂ ತೋರಿದ್ದೂ ಇಲ್ಲ, ಅದನ್ನೊಂದು ಶಿಲುಬೆಯಂತೆ ಹೊತ್ತದ್ದೂ ಇಲ್ಲ. ಹಾಗಿದ್ದರೂ ಅವರು ತಮ್ಮ ಉಪನಾಮವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂಬ ಆರೋಪಗಳಿಂದ ಈ ನಡವಳಿಕೆಯು ಅವರನ್ನು ರಕ್ಷಿಸಲಿಲ್ಲ. ಅನಾಮಧೇಯ ವ್ಯಕ್ತಿಯೊಬ್ಬ ತಮಗೆ ಬರೆದ ಪತ್ರದ ಮೂಲಕ ಅವರು ಇದನ್ನು ತೋರಿಸಿದ್ದಾರೆ: ‘ಗಾಂಧಿ ಎಂಬ ಚೆಕ್ ಅನ್ನು ನೀವು ಯಾವಾಗಲೂ ನಗದೀಕರಿಸಿಕೊಂಡಿದ್ದೀರಿ ಮತ್ತು ಆಯಕಟ್ಟಿನ ಹುದ್ದೆಗಳನ್ನು ಪಡೆದುಕೊಂಡಿದ್ದೀರಿ... ನೀವೊಬ್ಬ ಬಹಳ ಸಾಧಾರಣವಾದ ಜಂಟಿ ಕಾರ್ಯದರ್ಶಿ ಮಟ್ಟದ ಅಧಿಕಾರಿ... ನಿಮಗೆ ಆತ್ಮಗೌರವವೇ ಇಲ್ಲವೇ?’

ಗೋಪಾಲಕೃಷ್ಣ ಅವರನ್ನು 2007ರಲ್ಲಿ ಮೊದಲ ಬಾರಿ ನಾನು ಎದುರಾದೆ. ಶಿಕ್ಷಣ ಸಂಸ್ಥೆಗಳಲ್ಲಿ ಒಬಿಸಿ ಮೀಸಲಾತಿಯ ಹಿಂದಿನ ತರ್ಕ ಏನು ಎಂಬುದನ್ನು ವಿವರಿಸಿ ಲೇಖನವೊಂದನ್ನು ಬರೆದಿದ್ದೆ. ಕೆಲ ದಿನಗಳಲ್ಲಿ ರಾಜಭವನ, ಕೋಲ್ಕತ್ತ, ಪಶ್ಚಿಮ ಬಂಗಾಳ ಎಂಬ ವಿಳಾಸದಿಂದ ನನಗೆ ಪತ್ರವೊಂದು ಬಂದಿತು. ಅಚ್ಚುಕಟ್ಟಾದ ಕೈಬರಹದಲ್ಲಿ ನನ್ನ ವಿಳಾಸ ಬರೆಯಲಾಗಿತ್ತು. ರಾಜ್ಯಪಾಲರ ಲೆಟರ್‌ಹೆಡ್‌ನಲ್ಲಿ ಅದೇ ಅಚ್ಚುಕಟ್ಟಾದ ಕೈಬರಹದಲ್ಲಿ ನನ್ನ ಲೇಖನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಈ ಬಗ್ಗೆ ಇನ್ನಷ್ಟು ಸಂವಾದ ನಡೆಸಲು ಬಯಸುವುದಾಗಿ ಹೇಳಿದ್ದರು. ರಾಜ್ಯಪಾಲರೊಬ್ಬರು ಕೈಬರಹದಲ್ಲಿ ಪತ್ರವನ್ನು ಬರೆಯುವುದು ನನ್ನಲ್ಲಿ ಅಚ್ಚರಿ ಮೂಡಿಸಿತ್ತು. ಇದು, ಗೋಪಾಲಕೃಷ್ಣ ಅವರ ಹವ್ಯಾಸ ಅಥವಾ ಅಭ್ಯಾಸವಷ್ಟೇ ಅಲ್ಲ, ಅದೊಂದು ಸಂಸ್ಕಾರ.

ಗೋಪಾಲಕೃಷ್ಣ ಅವರ ಮೇಲೆ ಮಹಾತ್ಮ ಗಾಂಧಿಗಿಂತ (ಗಾಂಧಿ ಹತ್ಯೆಯಾದಾಗ ಗೋಪಾಲಕೃಷ್ಣ ಅವರಿಗೆ ಎರಡೂವರೆ ವರ್ಷ ವಯಸ್ಸು) ಹೆಚ್ಚು ಪ್ರಭಾವ ಬೀರಿದವರು ತಾಯಿಯ ಅಜ್ಜ ಸಿ. ರಾಜಗೋಪಾಲಾಚಾರಿ ಅಥವಾ ರಾಜಾಜಿ. ಕಾಂಗ್ರೆಸ್ ಪಕ್ಷಕ್ಕೆ ಬಹುಮತ ಸಿಗದೇ ಇದ್ದಾಗ ರಾಜಾಜಿ ತಮಿಳುನಾಡಿನ ಮುಖ್ಯಮಂತ್ರಿ ಆದ ರೀತಿ ಸಂಶಯಾಸ್ಪದ ಎಂಬುದನ್ನು ಅವರು ಒಪ್ಪಿಕೊಳ್ಳುತ್ತಾರೆ: ‘ಇದು ಪ್ರಜಾಸತ್ತಾತ್ಮಕ ಅಲ್ಲ, ನಾಮನಿರ್ದೇಶನದ ಮಾದರಿಯಲ್ಲಿ ಅಲ್ಲದೇ ಇದ್ದರೂ ಚುನಾವಣಾ ಫಲಿತಾಂಶ ಬಂದ ಬಳಿಕ ಯಾವ ರೀತಿ ಆಗಬೇಕಿತ್ತೋ ಆ ರೀತಿ ಆಗಲಿಲ್ಲ’. ತಮ್ಮ ಕುಟುಂಬದ ಕುರಿತು ಇರುವ ಮುಜುಗರದಾಯಕವಾದ ಸತ್ಯವನ್ನು ಒಪ್ಪಿಕೊಳ್ಳುವುದಕ್ಕೂ ಅವರಿಗೆ ಯಾವ ಹಿಂಜರಿಕೆಯೂ ಇಲ್ಲ: ‘ನಮ್ಮ ಕುಟುಂಬಕ್ಕೆ ಹರಿಜನ ಸೇವೆಯ ಪ್ರಭಾವಳಿ ಇದೆ. ಆದರೆ, ಆತ್ಮೀಯ ಗೆಳೆಯರ ಬಳಗದಲ್ಲಿ ದಲಿತರು ಒಬ್ಬರೂ ಇಲ್ಲ. ಮುಸ್ಲಿಂ, ಕ್ರೈಸ್ತ ಮತ್ತು ಸಿಖ್ ಗೆಳೆಯರಿದ್ದಾರೆ. ಅಮೆರಿಕದ ಕಪ್ಪು ವರ್ಣೀಯ ಗೆಳೆಯರಿದ್ದಾರೆ. ಜಗತ್ತಿನ ವಿವಿಧ ಭಾಗಗಳ ಯಹೂದಿ ಗೆಳೆಯರಿದ್ದಾರೆ. ಆದರೆ, ಭಾರತದ ಒಬ್ಬನೇ ಒಬ್ಬ ದಲಿತ ಇಲ್ಲ’.

ಈ ಕತೆಯು ಈ ಹಿಂದೆ ಪರಂಪರೆಯನ್ನು ಗೌರವಿಸುವ ನಾಯಕರು ಇದ್ದರು ಎಂಬುದನ್ನು ನೆನಪಿಸುತ್ತದೆ. ಕಮ್ಯುನಿಸ್ಟ್ ನಾಯಕ ಇ.ಎಂ.ಎಸ್ ನಂಬೂದಿರಿಪಾಡ್ ಅವರ ನೇತೃತ್ವದ ಸರ್ಕಾರವನ್ನು ನೆಹರೂ ನ್ಯಾಯಯುತ ಅಲ್ಲದ ರೀತಿಯಲ್ಲಿ ವಜಾ ಮಾಡಿದ್ದರು. ಆದರೆ, ನೆಹರೂ ಸಾವಿನ ಬಳಿಕ ಅವರ ಕುರಿತು ನಂಬೂದಿರಿಪಾಡ್ ಅವರು ನಿರರ್ಗಳವಾಗಿ ಮಾತನಾಡಿದ್ದರು. 1962ರ ಚೀನಾ–ಭಾರತ ಯುದ್ಧದ ಬಳಿಕ ಸೇಂಟ್ ಸ್ಟೀಫನ್ ಕಾಲೇಜಿನಲ್ಲಿ ಮಾತನಾಡಿದ್ದ ಜಯಪ್ರಕಾಶ ನಾರಾಯಣ್ ‘ಏನಿದ್ದರೂ ಚೀನೀಯರು ನಮಗೆ ಏಷ್ಯಾದ ಗೆಳೆಯರು’ ಎಂದಿದ್ದರು. ಘನತೆಯ ರಾಜಕಾರಣ ಮಾಡಿದ ಮನಮೋಹನ್ ಸಿಂಗ್ ಅವರ ಕಾಲದವರೆಗೆ ಈ ಪರಂಪರೆ ಇತ್ತು ಎಂಬುದನ್ನು ಗೋಪಾಲಕೃಷ್ಣ ನೆನಪಿಸುತ್ತಾರೆ.



ರಾಜ್ಯಪಾಲರಾಗಿದ್ದಾಗ ನ್ಯಾಯಪರತೆ ಮತ್ತು ನಿರ್ಭೀತಿಯಿಂದ ಕೆಲಸ ಮಾಡಿದ್ದ ಗೋಪಾಲಕೃಷ್ಣ ಅವರು ಸಾಂವಿಧಾನಿಕ ಮರ್ಯಾದೆಯನ್ನು ಎಂದೂ ಮೀರಿದವರಲ್ಲ. ನಂದಿಗ್ರಾಮ ಹೋರಾಟ ನಡೆಯುತ್ತಿದ್ದ ಪ್ರಕ್ಷುಬ್ಧ ಸಂದರ್ಭದಲ್ಲಿ ಅವರು ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿದ್ದರು. ನಂದಿಗ್ರಾಮದಲ್ಲಿ ನಡೆದ ಹತ್ಯೆಗಳಿಗೆ ಸರ್ಕಾರವೇ ಹೊಣೆ ಎಂಬ ಹೇಳಿಕೆ ನೀಡಿದ ನಾಲ್ಕನೇ ದಿನ ಗೋಪಾಲಕೃಷ್ಣ ಅವರು ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯ ಅವರನ್ನು ಭೇಟಿಯಾದರು. ‘ನಿಮಗೆ ಬೇಕಿದ್ದರೆ ಕೇಂದ್ರಕ್ಕೆ ಹೇಳಿ ರಾಜ್ಯಪಾಲರನ್ನು ಬದಲಾಯಿಸಿಕೊಳ್ಳಿ’ ಎಂದು ಗೋಪಾಲಕೃಷ್ಣ ಅವರು ಬುದ್ಧದೇವ ಅವರಿಗೆ ಹೇಳುತ್ತಾರೆ. ಆಗ ಕೇಂದ್ರದ ಆಡಳಿತಾರೂಢ ಮೈತ್ರಿಕೂಟದಲ್ಲಿ ಎಡರಂಗವೂ ಇತ್ತು. ‘ನಾನು ಅಂತಹ ವ್ಯಕ್ತಿ ಅಲ್ಲ’ ಎಂದು ಬುದ್ಧದೇವ ಪ್ರತಿಕ್ರಿಯೆ ನೀಡುತ್ತಾರೆ. ಇತಿಹಾಸವು ಶ್ರೇಷ್ಠ ವ್ಯಕ್ತಿಗಳಿಂದಷ್ಟೇ ರೂಪುಗೊಳ್ಳುವುದಿಲ್ಲ, ಸಾಮಾನ್ಯ ಜನ ಅವರನ್ನು ಮೀರಿಸಬಲ್ಲರು ಎಂಬುದನ್ನೂ ಕೃತಿಯು ನೆನಪಿಸುತ್ತದೆ.

ರಾಜಾಜಿ ಮಗಳು ನಮಗಿರಿ ಅವರಿಗೆ ಹೈದರಾಬಾದ್ ನಿಜಾಮ ವಜ್ರದ ಹಾರವೊಂದನ್ನು ಉಡುಗೊರೆಯಾಗಿ ಕೊಟ್ಟ ಕತೆಯೂ ಪುಸ್ತಕದಲ್ಲಿ ಇದೆ. ವಿಧವೆಯಾಗಿರುವ ಮಗಳು ಇಂತಹ ಹಾರವನ್ನು ಧರಿಸುವುದಿಲ್ಲ ಎಂದು ಹೇಳಿ ಉಡುಗೊರೆಯನ್ನು ರಾಜಾಜಿ ಹಿಂದಿರುಗಿಸುತ್ತಾರೆ. ‘ತಂದೆಯವರ ನಿರ್ಧಾರದ ಕುರಿತು ವಿಷಾದವೇನೂ ಇಲ್ಲ. ಆದರೆ, ವಿಧವೆ ಎಂಬುದನ್ನು ಇಲ್ಲಿ ಬಳಸಿಕೊಳ್ಳಬೇಕಾಗಿರಲಿಲ್ಲ. ಬದಲಿಗೆ, ನಾವು ಗಾಂಧೀಜಿಯ ಅನುಯಾಯಿಗಳು, ಇಂತಹ ದುಬಾರಿ ವಸ್ತು ಬಳಸುವುದಿಲ್ಲ ಎಂದು ಹೇಳಬಹುದಿತ್ತು’ ಎಂದು ಕೆಲವು ವರ್ಷಗಳ ಬಳಿಕ ನಮಗಿರಿ ಹೇಳುತ್ತಾರೆ. ‘ಶ್ರೇಷ್ಠ ವ್ಯಕ್ತಿಗಳ ಕುಟುಂಬಗಳಿಗೆ ಸೇರಿದ ಹೆಣ್ಣುಮಕ್ಕಳು ದ್ವಂದ್ವದ ಸಂದರ್ಭಗಳಲ್ಲಿ ತಮ್ಮ ಪೂರ್ವಜರನ್ನು ಮೀರಿಸಿಬಿಡಬಹುದು’ ಎಂದು ಗೋಪಾಲಕೃಷ್ಣ ಬರೆಯುತ್ತಾರೆ.

ಈ ವಾರದಲ್ಲಿ ಓದಬಹುದಾದ ಇನ್ನೊಂದು ಕತೆ ಮಕ್ಬೂಲ್ ಶೇರ್ವಾನಿ ಹುತಾತ್ಮನಾದ ಸಂಗತಿಯದ್ದು– ‘ಇದು ಮತಾಂಧತೆಯ ಅತಿ ದೊಡ್ಡ ಸಂತ್ರಸ್ತ ಮತ್ತು ಮಾನವ ದಿಟ್ಟತನದ ಅತಿದೊಡ್ಡ ಸಂಕೇತದ ಕತೆ’. 1947ರಲ್ಲಿ ಪಾಕಿಸ್ತಾನದ ಸಶಸ್ತ್ರ ಪಡೆಗಳು ಕಾಶ್ಮೀರವನ್ನು ಆಕ್ರಮಿಸಲು ಆದಿವಾಸಿಗಳನ್ನು ಬಳಸಿಕೊಂಡಾಗ, ಶೇಖ್ ಅಬ್ದುಲ್ಲಾ ಅವರ ಅನುಯಾಯಿಯಾಗಿದ್ದ 19 ವರ್ಷದ ಮಕ್ಬೂಲ್ ಸ್ಥಳೀಯವಾಗಿ ಪ್ರತಿರೋಧವನ್ನು ಸಂಘಟಿಸುತ್ತಾರೆ. ಕೊನೆಗೂ ಅವರನ್ನು ಆಕ್ರಮಣಕಾರರು ಹಿಡಿಯುತ್ತಾರೆ. ಬಾರಾಮುಲ್ಲಾ ಚೌಕದಲ್ಲಿ ನಿಲ್ಲಿಸಿ ‘ಪಾಕಿಸ್ತಾನ ಜಿಂದಾಬಾದ್’ ಎಂದು ಕೂಗಲು ಹೇಳುತ್ತಾರೆ. 14 ಆದಿವಾಸಿಗಳು ಗುಂಡಿಕ್ಕುವ ಮೊದಲು ಶೇರ್ವಾನಿ ಹೇಳಿದ್ದು ‘ಹಿಂದೂ–ಮುಸ್ಲಿಂ ಒಗ್ಗಟ್ಟಿಗೆ ಜಯವಾಗಲಿ’ ಎಂದು. ‘ಹಿಂದೂ, ಸಿಖ್, ಮುಸ್ಲಿಂ ಅಥವಾ ಯಾರು ಬೇಕಿದ್ದರೂ ಹೆಮ್ಮೆಪಡಬಹುದಾದ ಹುತಾತ್ಮನ ಕತೆ ಇದು’ ಎಂದು ಶೇರ್ವಾನಿಯ ಸಾವನ್ನು ಗೋಪಾಲಕೃಷ್ಣ ಬಣ್ಣಿಸುತ್ತಾರೆ.

ಕಾಶ್ಮೀರಿ ಅಸ್ಮಿತೆಗಾಗಿ ಇನ್ನೊಬ್ಬ ಧೈರ್ಯಶಾಲಿ ಪಹಲ್ಗಾಮ್‌ನಲ್ಲಿ ಜೀವ ತೆರುತ್ತಾರೆ. ಅವರೇ ಕುದುರೆ ಸವಾರಿ ಸೇವೆ ಒದಗಿಸುತ್ತಿದ್ದ 29 ವರ್ಷದ ಸಯ್ಯದ್ ಆದಿಲ್ ಹುಸೇನ್. ಉಗ್ರರು ದಾಳಿ ನಡೆಸಿದಾಗ ಅವರನ್ನು ತಡೆಯಲು ಯತ್ನಿಸಿದರು. ಕುದುರೆಯಲ್ಲಿ ತಾವು ಕರೆತಂದಿದ್ದವರನ್ನು ರಕ್ಷಿಸಲು ಯತ್ನಿಸಿ ಉಗ್ರರ ಗುಂಡಿಗೆ ಬಲಿಯಾದರು.

ಚುರುಮುರಿ



ಮಕ್ಕಳಿರಲವ್ವ...

• ಮಣ್ಣೆ ರಾಜು

ಸರ್ಕಾರಿ ಶಾಲೆಯಲ್ಲಿ ಮಕ್ಕಳ ದಾಖಲಾತಿ ಪ್ರಮಾಣ ಹೆಚ್ಚಿಸಬೇಕು ಎಂದು ದೊಡ್ಡ ಸಾಹೇಬ್ರು ಆದೇಶ ಮಾಡಿದ್ದರು. ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವಂತೆ ಪೋಷಕರ ಮನವೊಲಿಸಲು ಮೇಷ್ಟ್ರುಗಳ ಜೊತೆ ಅಧಿಕಾರಿಗಳು ಶಂಕ್ರಿ ಮನೆಗೆ ಬಂದರು.

‘ಮಕ್ಕಳಿರಲವ್ವ ಶಾಲೆ ತುಂಬಾ ಅನ್ನೋ ಆಂದೋಲನ ಮಾಡ್ತಿದ್ದೀವಿ. ನಿಮ್ಮ ಮಕ್ಕಳು ಯಾವ ಶಾಲೆಯಲ್ಲಿ ಓದುತ್ತಿದ್ದಾರೆ?’ ಚಿಕ್ಕ ಸಾಹೇಬ್ರು ಕೇಳಿದ್ರು.

‘ದೊಡ್ಡ ಸ್ಕೂಲು ಸಾರ್, ನಾಲ್ಕು ಫ್ಲೋರ್ ಬಿಲ್ಡಿಂಗ್, ಒಳ್ಳೊಳ್ಳೆ ಟೀಚರ್‌ಗಳಿದ್ದಾರೆ’ ಶಂಕ್ರಿಗೆ ಹೆಮ್ಮೆ.

‘ಆ ಟೀಚರ್‌ಗಳು ನಮಗೆ ಅರ್ಥವಾಗದಷ್ಟು ಚೆನ್ನಾಗಿ ಇಂಗ್ಲಿಷ್ ಮಾತಾಡ್ತಾರೆ’ ಸುಮಿಗೂ ಖುಷಿ.

‘ಸ್ಕೂಲ್ ಫೀಸ್ ಕಟ್ಟಿದ್ದೀರ?’

‘ಮೂರು ಕಂತು ಕಟ್ಟಲು ಅವಕಾಶ ಮಾಡಿಕೊಟ್ಟಿದ್ದಾರೆ. ಒಡವೆ ಅಡವಿಟ್ಟು ಮೊದಲ ಕಂತು ಕಟ್ಟಿದ್ದೀವಿ’.

‘ನಿಮ್ಮ ಮಕ್ಕಳನ್ನ ಆ ಸ್ಕೂಲ್ ಬಿಡಿಸಿ ಸರ್ಕಾರಿ ಶಾಲೆಗೆ ಸೇರಿಸಿ’.

‘ಯಾಕೆ ಸಾರ್? ನಮ್ಮ ಮಕ್ಕಳು ಏನು ಅನ್ಯಾಯ ಮಾಡಿದ್ದಾರೆ?’ ಸುಮಿಗೆ ಸಿಟ್ಟು.

‘ಸರ್ಕಾರಕ್ಕೆ ಅನ್ಯಾಯ ಆಗ್ತಿದೆ. ಸರ್ಕಾರ ಶಾಲಾ ಮಕ್ಕಳಿಗೆ ಉಚಿತವಾಗಿ ಪುಸ್ತಕ, ಸಮವಸ್ತ್ರ, ಬಿಸಿಯೂಟ ಕೊಡುತ್ತಿದೆ. ಖಾಸಗಿ ಶಾಲೆಗಳಂತೆ ಲಕ್ಷಾಂತರ ರೂಪಾಯಿ ಫೀಸ್ ಕೇಳುವುದಿಲ್ಲ. ಸರ್ಕಾರಿ ಶಾಲೆಯಲ್ಲಿ ಓದಿದರೆ ಹಲವು ರೀತಿಯ ಅನುಕೂಲಗಳಿವೆ’ ಮನವೊಲಿಸುವ ಪ್ರಯತ್ನ ಮಾಡಿದರು.

‘ನಿಮ್ಮ ಮಕ್ಕಳು ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದಾರಾ ಸಾರ್?’ ಶಂಕ್ರಿ ಕೇಳಿದ. ಸಾಹೇಬ್ರಿಗೆ ಕಸಿವಿಸಿ ಆಯಿತು. ‘ಅದೆಲ್ಲಾ ಕೇಳಬಾರದು’ ಅಂದರು.

‘ಅಕ್ಕಪಕ್ಕದ ಮಕ್ಕಳು ದೊಡ್ಡ ಬಿಲ್ಡಿಂಗ್ ಸ್ಕೂಲಿಗೆ ಸೇರಿ ಮೆರೆದರೆ ನಮ್ಮ ಮಕ್ಕಳು ಸರ್ಕಾರಿ ಶಾಲೆಗೆ ಸೇರಿದೆವೆಂದು ನೊಂದುಕೊಳ್ಳೋದಿಲ್ವಾ? ಅವರ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿದರೆ ನಾವೂ ಸೇರಿಸ್ತೀವಿ’.

‘ಸರಿಬಿಡಿ, ನೆರೆಹೊರೆಯವರ ಮನವೊಲಿಸುವ ಪ್ರಯತ್ನ ಮಾಡ್ತೀವಿ’ ಎಂದು ಹೇಳುತ್ತಾ ಸಾಹೇಬ್ರು ಹೊರಟರು.

ಚರ್ಚೆ

ಸಂಸ್ಕೃತ: ‘ಸುಲಭದ ದಾರಿ’ ಬೇಡ

ಅಂಕ ಗಳಿಕೆಯ ಉದ್ದೇಶದಿಂದ ಮಾತ್ರವಲ್ಲದೆ, ಭಾಷೆಯನ್ನು ಶ್ರಮವಹಿಸಿ ತಮ್ಮದನ್ನಾಗಿಸಿಕೊಳ್ಳುವ ವಿಧಾನವನ್ನು ಮಕ್ಕಳಿಗೆ ತಿಳಿಸಬೇಕಾಗಿದೆ

• ಬಿ.ಎಸ್.ಭಗವಾನ್

‘ಪ್ರಥಮ ಭಾಷೆ ಮತ್ತು ನ್ಯಾಯದ ಗಂಟೆ’ ಎಂಬ ಪು.ಸೂ.ಲಕ್ಷ್ಮೀನಾರಾಯಣ ರಾವ್ ಅವರ ಲೇಖನ (ಸಂಗತ, ಮೇ 5) ಗಮನಿಸಿದೆ. ಸಂಸ್ಕೃತವು ಕೋಡಿಂಗ್ ಮಾಡಬಹುದಾದ ಕಂಪ್ಯೂಟರ್‌ಸ್ನೇಹಿ ವೈಜ್ಞಾನಿಕ ಭಾಷೆ ಎಂಬ ‘ನಾಸಾ’ದ ಅಭಿಪ್ರಾಯವನ್ನು ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ಉಲ್ಲೇಖಿಸಿರುವ ವರದಿಯೂ ಕಾಕತಾಳೀಯವಾಗಿ ಅದೇ ದಿನ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಮಹಾತ್ಮ ಗಾಂಧಿ ‘ಸಂಸ್ಕೃತವನ್ನು ತಿಳಿಯದೆ ನಿಜ ಭಾರತೀಯನಾಗಲು, ನಿಜ ಶಿಕ್ಷಿತನಾಗಲು ಸಾಧ್ಯವಿಲ್ಲ’ ಎಂದು ಹೇಳಿದ್ದರು.

ಬೆಂಗಳೂರಿನ ದಕ್ಷಿಣ ಭಾಗದಲ್ಲಿರುವ ‘ಅಕ್ಷರಂ’ ಸಂಸ್ಥೆಯಲ್ಲಿ ಹನ್ನೊಂದು ವರ್ಷಗಳ ಹಿಂದೆ ‘ಸಂಸ್ಕೃತ ಭಾರತೀ’ ಅಂತರರಾಷ್ಟ್ರೀಯ ಸಂಸ್ಥೆಯ ವತಿಯಿಂದ ಏರ್ಪಡಿಸಿದ್ದ ಹತ್ತು ದಿನಗಳ ‘ಸಂಭಾಷಣೆ ಮೂಲಕ ಸಂಸ್ಕೃತ’ ಎಂಬ ಕಮ್ಮಟದಲ್ಲಿ ಭಾಗವಹಿಸಿದ್ದೆ. ಪ್ರತಿದಿನ ಬೆಳಿಗ್ಗೆ ಮತ್ತು ಮಧ್ಯಾಹ್ನ ಮನಮುಟ್ಟುವಂತೆ ಸಂಸ್ಕೃತವನ್ನು ಹೇಳಿಕೊಡಲಾಯಿತು. ಸಮಾರೋಪದ ದಿನ ಇಪ್ಪತ್ತು ಶಿಬಿರಾರ್ಥಿಗಳೂ ಸಂಸ್ಕೃತದ ಮೂಲಕ ಕೆಲವು ವಾಕ್ಯಗಳಲ್ಲಾದರೂ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದರು. ಕೆಲವರು ಸಂಸ್ಕೃತದಲ್ಲಿ ಪುಟ್ಟ ಕಥೆ, ಕವನ, ಪ್ರಬಂಧಗಳನ್ನು ರಚಿಸಿದ್ದರು.

ಹಾಗಿದ್ದರೆ ಆ ಶಿಬಿರದ ಯಶಸ್ಸಿಗೆ ಕಾರಣವೇನು? ಬೋಧಕರು ಸಂಸ್ಕೃತದ ಮೂಲಕವೇ ಸಂಸ್ಕೃತವನ್ನು ಹೇಳಿಕೊಟ್ಟಿದ್ದು. ಅವರು ಇಂಗ್ಲಿಷ್ ಅಥವಾ ಕನ್ನಡದ ಒಂದು ಪದವನ್ನೂ ಅಪ್ಪಿತಪ್ಪಿಯೂ ಬಳಸುತ್ತಿರಲಿಲ್ಲ. ಮೊದಲ ಎರಡು ದಿನ ನಮಗೆ ಹೊರನಡೆಯೋಣ ಅನ್ನಿಸುವಷ್ಟು ಬೇಸರವಾಯಿತು. ಆದರೆ ನಂತರದ ದಿನಗಳಲ್ಲಿ ತರಗತಿಯು ಸೂಜಿಗಲ್ಲಿನಂತೆ ಸೆಳೆಯಿತು. ಕಂಪ್ಯೂಟರ್‌ಗೆ ‘ಸಂಗಣಕ’, ಚೆಕ್‌ಗೆ ‘ಧನಾದೇಶ ಪತ್ರ’, ಚಿಲ್ಲರೆ ಹಣಕ್ಕೆ ‘ಪರ್ಯಾಯ ಧನಮ್’... ಹೀಗೆಲ್ಲ ಪರಿಚಿತ ಎನ್ನಿಸುವ ಪದಗಳೇ ಅಲ್ಲಿ ಕೇಳಿಬರುತ್ತಿದ್ದವು. 8, 9 ಮತ್ತು 10ನೇ ತರಗತಿಗಳಲ್ಲಿ ಹೀಗೆ ಸಂಸ್ಕೃತವನ್ನು ಸಂಸ್ಕೃತದ ಮೂಲಕವೇ ಬೋಧಿಸಿದರೆ ಸಂಸ್ಕೃತ ಭಾಷೆ ಖಂಡಿತವಾಗಿಯೂ ಆಟಕ್ಕೂ ಲೆಕ್ಕಕ್ಕೂ ಸಲ್ಲುತ್ತದೆ.

ನಿಜವೆ, ಮೂರು ವರ್ಷ ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ಕಲಿತವರು ಬಂದೆ, ಹೋದೆ ಅಥವಾ ಹೇಗಿದ್ದೀರಿ ಎನ್ನುವಂತಹ ಪದಗಳನ್ನಾದರೂ ಸಂಸ್ಕೃತದಲ್ಲಿ ಮಾತನಾಡಬೇಕು. ಈ ದಿಸೆಯಲ್ಲಿ ಸಂಸ್ಕೃತದ ಮೇಷ್ಟ್ರುಗಳು ಔದಾರ್ಯಕ್ಕೆ ಸೊಪ್ಪುಹಾಕದೆ ಸಂಸ್ಕೃತ ಮಾಧ್ಯಮದಲ್ಲೇ ಸಂಸ್ಕೃತವನ್ನು ಹೇಳಿಕೊಡಬೇಕು. ಭಾಷಾಂತರ ಪಠ್ಯವನ್ನು ಬದಿಗಿಟ್ಟು ಮೂಲ ಪಠ್ಯವನ್ನೇ ಬೋಧಿಸಬೇಕು. ಅಂಕ ಗಳಿಕೆಯ ನಿಮಿತ್ತ ಸಂಸ್ಕೃತವನ್ನು ಪ್ರಥಮ ಭಾಷೆಯನ್ನಾಗಿಸಿಕೊಂಡ ವಿದ್ಯಾರ್ಥಿಗಳ ಮನಸ್ಸು ಜ್ಞಾನದ ಕಡೆಗೆ ಹರಿಯುವಂತೆ ಮಾಡಬೇಕು.

ಸಂಸ್ಕೃತದ ಮೇಷ್ಟ್ರುಗಳು ಕಾಲೇಜು, ವಿಶ್ವವಿದ್ಯಾಲಯ ಅಥವಾ ಎಲ್ಲಿಯಾದರೂ ಒಂದೆಡೆ ಕಲೆತಾಗ ಸಂಸ್ಕೃತದಲ್ಲೇ ಪರಸ್ಪರ ಸಂಭಾಷಿಸಿದರೆ ಮಾದರಿ ಎನ್ನಿಸುತ್ತದೆ. ಇಲ್ಲವಾದರೆ, ಸಂಸ್ಕೃತ ತಮ್ಮ ಬೋಧಕರಿಗೂ ಅಪಥ್ಯ ಎಂಬ ಭಾವನೆ ತಳೆದು ಮಕ್ಕಳು ಅನುವಾದ, ಕಂಠಪಾಠ, ಅಂಕಗಳ ಮೋಹದಲ್ಲಿ ಸಿಲುಕುತ್ತಾರೆ. ದಿನನಿತ್ಯ ಒಂದಿಲ್ಲೊಂದು ಸಂದರ್ಭದಲ್ಲಿ ನಮ್ಮ ಕಿವಿಗೆ ಸಂಸ್ಕೃತದ ಸುಭಾಷಿತಗಳು, ಶ್ಲೋಕಗಳು, ವ್ಯಂಗ್ಯೋಕ್ತಿಗಳು ಬೀಳುತ್ತಲೇ ಇರುತ್ತವೆ. ನಾವು ಅವನ್ನು ಯಾಂತ್ರಿಕವಾಗಿ ಒಂದು ಕಿವಿಯಲ್ಲಿ ಕೇಳಿ ಇನ್ನೊಂದು ಕಿವಿಯ ಮೂಲಕ ಸಾಗಹಾಕುವುದೇ ಹೆಚ್ಚು. ನಮಗೆ ಈಗಾಗಲೇ ಅಲ್ಪಸ್ವಲ್ಪವಾದರೂ ಪರಿಚಿತವಿರುವ ಪದಗಳೊಂದಿಗೆ ಅವನ್ನು ಅರ್ಥಮಾಡಿಕೊಂಡರೆ ನಿಜಕ್ಕೂ ಎಷ್ಟೊಂದು ಸ್ವಾರಸ್ಯ, ಸತ್ವಯುತ ಅನ್ನಿಸುತ್ತದೆ. ಅಲ್ಪಸ್ವಲ್ಪ ವ್ಯಾಕರಣ, ಉಚ್ಚಾರಣೆ ಗೊತ್ತಿದ್ದರೆ ಆಯಿತು, ಜ್ಞಾನದ ಕೀಲಿಕೈ ನಮ್ಮದಾಗುತ್ತದೆ.



ಇಂಗ್ಲಿಷ್ ಬೋಧಿಸುವವರು ಇಂಗ್ಲಿಷ್ ಭಾಷೆಯನ್ನು ಚೆನ್ನಾಗಿ ತಿಳಿದಿರಬೇಕು, ಇಂಗ್ಲಿಷ್ ಮುಖಾಂತರವೇ ಸಮರ್ಥವಾಗಿ ಪಾಠ ಮಾಡಬೇಕು ಎಂದು ಒತ್ತಾಯಿಸುತ್ತೇವೆ. ಆದರೆ ಸಂಸ್ಕೃತದ ಬಗ್ಗೆ ಅದೇ ಆಶಯ ಏಕಿಲ್ಲ? ಯಾವುದೇ ಭಾಷೆಯನ್ನು ಇನ್ನೊಂದು ಭಾಷೆಯ ಮೂಲಕ ‘ಈ ಪದಕ್ಕೆ ಆ ಪದ, ಅದಕ್ಕೆ ಇದು’ ಎಂಬ ಸೂತ್ರದಿಂದ ಕಲಿಸಲು ಸಾಧ್ಯವೇ? ಹೊಸದನ್ನು ಆಡಿಯೇ ಕಲಿಸಬೇಕು. ಲೇಖಕರು ಉಲ್ಲೇಖಿಸಿದಂತೆ, ಸಂಸ್ಕೃತವನ್ನು ಪ್ರಥಮ ಭಾಷಾ ವಿಷಯವಾಗಿ ಅಳವಡಿಸಿಕೊಂಡಾಗಿನಿಂದಲೂ ಅಂದರೆ ಸುಮಾರು ಐವತ್ತು ವರ್ಷಗಳಿಂದಲೂ ಇದೇ ಸಮಸ್ಯೆ ಇದೆ. ಪ್ರಥಮ ಭಾಷೆಯಾಗಿ ಸಂಸ್ಕೃತದ ಓದು ವಿದ್ಯಾರ್ಥಿಗಳಿಗೆ ಬರೀ ನೆಪ ಎಂಬಂತೆ ಅಥವಾ ಅಂಕ ಗಳಿಕೆಗಾಗಿ ಮಾತ್ರ ಎಂಬಂತೆ ಆಗುವುದು ಶಿಕ್ಷಣ ಕ್ರಮಕ್ಕೇ ಅವಮಾನ. ಬರೀ ಅಂಕ ಗಳಿಕೆಯ ಉದ್ದೇಶದಿಂದ ‘ಸುಲಭದ ದಾರಿ’ ತೋರದೆ, ಭಾಷೆಯನ್ನು ಶ್ರಮವಹಿಸಿ ತಮ್ಮದನ್ನಾಗಿಸಿಕೊಳ್ಳುವ ವಿಧಾನವನ್ನು ಶಿಷ್ಯರಿಗೆ ನಿರ್ದೇಶಿಸುವುದು ಗುರುವಿನ ಜವಾಬ್ದಾರಿ. ಅಂಕ ಗಳಿಸಿದೆ, ಆದರೆ ಸಂಸ್ಕೃತ ಸಾಹಿತ್ಯದಲ್ಲಿ ಅಪಾರವಾಗಿರುವ ಶ್ರೇಷ್ಠ ಕಾವ್ಯ, ನಾಟಕ ಅಥವಾ ಅರ್ಥಶಾಸ್ತ್ರದಂತಹ ವಿಚಾರಗಳನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತಿಲ್ಲವಲ್ಲ ಎಂದು ಕೊರಗುವವರುಂಟು.

ಪ್ರಥಮ ಭಾಷೆಯೋ ಐಚ್ಛಿಕವೋ ಒಟ್ಟಿನಲ್ಲಿ ಸಂಸ್ಕೃತ ಕಲಿಯುವವರನ್ನು ಉತ್ತೇಜಿಸೋಣ. ಸಂಸ್ಕೃತ ಕಲಿಯುವವರೆಲ್ಲರೂ ಅಂಕ ವ್ಯಾಮೋಹಿಗಳು ಅಥವಾ ಹೆಚ್ಚಿನ ಅಂಕಕ್ಕಾಗಿ ಹಿಂಬಾಗಿಲನ್ನು ಆಶ್ರಯಿಸುವವರು ಆಗಬೇಕಿಲ್ಲ. ಸಂಸ್ಕೃತ ಕಲಿಕೆಗೆ ಈಗ ಬಹಳಷ್ಟು ಅವಕಾಶಗಳಿವೆ. ಸಂಸ್ಕೃತದ ಮೂಲಕ ವಾರ್ತೆಗಳು ಪ್ರಸಾರವಾಗುತ್ತವೆ. ಆನ್‌ಲೈನ್ ಮೂಲಕ ಸಂಸ್ಕೃತವನ್ನು ಕಲಿಯಬಹುದು. ಸಂಸ್ಕೃತದಿಂದ ಹಾಗೂ ಸಂಸ್ಕೃತಕ್ಕೆ ಭಾಷೆಗಳು ಕ್ಷಣಾರ್ಧದಲ್ಲಿ ಭಾಷಾಂತರಗೊಳ್ಳುತ್ತವೆ. ಸಂಸ್ಕೃತ ನಾಟಕಗಳು ಬಿತ್ತರಗೊಳ್ಳುತ್ತವೆ. ಅಡಿಟಿಪ್ಪಣಿ ವ್ಯವಸ್ಥೆಯೂ ಇರುತ್ತದೆ. ಮುಖ್ಯವಾಗಿ, ಇಲ್ಲಿ ಬೇಕಾಗಿರುವುದು ಕಲಿಯಲು ಅಗತ್ಯವಾದ ಕುತೂಹಲ ಮತ್ತು ಶ್ರದ್ಧೆ.

ವಾಚಕರ ವಾಣಿ

ಉತ್ತಮ ಫಲಿತಾಂಶ ಎಲ್ಲರ ಹೊಣೆ

ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳ ಕಳಪೆ ಸಾಧನೆಗೆ ಶಿಕ್ಷಕರನ್ನೇ ಹೆಚ್ಚಾಗಿ ಹೊಣೆ ಮಾಡಲಾಗುತ್ತಿದೆ. ಆದರೆ ಇದು ಎಷ್ಟು ಸರಿ? ವಿದ್ಯಾರ್ಥಿಗಳು ಸರಿಯಾಗಿ ಅಭ್ಯಾಸ ಮಾಡದಿದ್ದರೆ, ಪೋಷಕರು ತಮ್ಮ ಮಕ್ಕಳ ಓದಿನ ಕಡೆ ಅಗತ್ಯ ಕಾಳಜಿ ವಹಿಸದಿದ್ದರೆ ಶಿಕ್ಷಕರಷ್ಟೇ ಏನು ಮಾಡಲು ಸಾಧ್ಯ? ಉತ್ತಮ ಫಲಿತಾಂಶ ಪಡೆಯುವಲ್ಲಿ ಇವರೆಲ್ಲರ ಹೊಣೆಗಾರಿಕೆಯೂ ಇರುತ್ತದೆ. ಇನ್ನು ಮುಂದಾದರೂ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಎಲ್ಲರೂ ಎಚ್ಚೆತ್ತುಕೊಂಡು ಮುಂದಡಿ ಇಡಬೇಕು. ಆಗಮಾತ್ರ ಫಲಿತಾಂಶದಲ್ಲಿ ಸುಧಾರಣೆ ಸಾಧ್ಯ.

ಎಚ್.ಎಸ್.ಟಿ.ಸ್ವಾಮಿ, ಚಿತ್ರದುರ್ಗ

ಬೆಲೆ ಏರಿಕೆಯ ಯಾತನೆ ತಪ್ಪಲಿ

ಪ್ರಬಲ ಜಾತಿಗಳ ಮುಖಂಡರಿಗೆ ಸಾಮಾಜಿಕ ನ್ಯಾಯದ ಬಗ್ಗೆ ನಿಜವಾಗಿಯೂ ಪ್ರೀತಿ ಇದ್ದರೆ, ಸಣ್ಣ ಜಾತಿಗಳಿಗೆ ಮಾನ್ಯತೆ ಸಿಗುವಂತೆ ನೋಡಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟಿರುವ ರವೀಂದ್ರ ಭಟ್ಟ ಅವರ ‘ದೊಡ್ಡವರೆಲ್ಲಾ ಜಾಣರು, ಚಿಕ್ಕವರೆಲ್ಲಾ ಕೋಣರು!’ ಎಂಬ ಶೀರ್ಷಿಕೆಯ ಲೇಖನ (ಪ್ರ.ವಾ., ಏ. 29) ಸಕಾಲಿಕವಾಗಿದೆ. ರಾಜ್ಯದಲ್ಲಿರುವ ಎಷ್ಟೋ ಸಣ್ಣಪುಟ್ಟ ಜಾತಿಗಳಿಗೆ ದೊಡ್ಡ ಗುರುಗಳಾಗಲಿ ಅಥವಾ ನಾಯಕರಾಗಲಿ ಇಲ್ಲ. ಅಂತಹ ನಾವೆಲ್ಲ ಈ ರಾಜ್ಯದ ಜನಸಾಮಾನ್ಯರು ಮತ್ತು ಧ್ವನಿ ಇಲ್ಲದವರು. ಮುಖ್ಯವಾಗಿ ಇತ್ತೀಚಿನ ದಿನಗಳಲ್ಲಿ ದಿನಬಳಕೆಯ ಪದಾರ್ಥಗಳ ಬೆಲೆ ಗಗನಕ್ಕೇರಿದೆ. ಇದರಿಂದ ನಾವು ಈಗಾಗಲೇ ನರಕಯಾತನೆ ಅನುಭವಿಸುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ, ಸಣ್ಣಪುಟ್ಟ ಸಮುದಾಯಗಳಿಗೆ ಸೇರಿರುವ ಬಡಜನರ ಮನವಿ ಏನೆಂದರೆ, ನಮಗ್ಯಾರಿಗೂ ಸ್ವರ್ಗದ ಆಸೆಯಿಲ್ಲ, ನಾವು ಈಗ ಬೆಲೆ ಏರಿಕೆಯಿಂದ ಅನುಭವಿಸುತ್ತಿರುವ ನರಕಯಾತನೆ ಮೊದಲು ಕಡಿಮೆಯಾದರೆ ಸಾಕು. ರಾಜ್ಯ ಸರ್ಕಾರ ಇದನ್ನು ಮನಗಾಣಲಿ.

ಎ.ವಿ.ಶಾಮರಾವ್, ಬೆಂಗಳೂರು

ರಾಷ್ಟ್ರದ ಭದ್ರತೆ: ರಾಜಕೀಯ ಸಲ್ಲ

‘ಪಾಕಿಸ್ತಾನವನ್ನು ಹತೋಟಿಯಲ್ಲಿ ಇಡಲು ಕಾಂಗ್ರೆಸ್ ಪಕ್ಷವು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಂಪೂರ್ಣ ಬೆಂಬಲ ನೀಡಿದೆ’ ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆ ಸ್ವಾಗತಾರ್ಹ. ಉಗ್ರರನ್ನು ಮಟ್ಟ ಹಾಕುವ ವಿಷಯದಲ್ಲಿ ಯಾವುದೇ ಪಕ್ಷವು ರಾಜಕೀಯ ಬೆರೆಸಬಾರದು. ರಾಷ್ಟ್ರದ ಭದ್ರತೆ ಮತ್ತು ಸಮಗ್ರತೆಯ ಸಂರಕ್ಷಣೆ ಎಲ್ಲಾ ರಾಜಕೀಯ ಪಕ್ಷಗಳ ಆದ್ಯ ಕರ್ತವ್ಯ ಆಗಿರುತ್ತದೆ. ಈ ವಿಚಾರದಲ್ಲಿ ಅವು ಒಮ್ಮನಸ್ಸಿನಿಂದ ಕೇಂದ್ರ ಸರ್ಕಾರದೊಂದಿಗೆ ಕೈಜೋಡಿಸಬೇಕು.

ಕೆ.ವಿ.ವಾಸು, ಮೈಸೂರು

ಜನಜನಿತ ಅಭಿಪ್ರಾಯಕ್ಕೆ ಪೆಟ್ಟು

ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೂನ್ಯ ಫಲಿತಾಂಶ ದಾಖಲಿಸಿರುವ ರಾಜ್ಯದ 144 ಶಾಲೆಗಳ ಪೈಕಿ 108 ಖಾಸಗಿ ಶಾಲೆಗಳೇ ಇರುವುದು ಅಚ್ಚರಿಯ ಸಂಗತಿ. ಖಾಸಗಿ ಶಾಲೆಗಳ ವಿದ್ಯಾರ್ಥಿಗಳು ಕಲಿಕೆಯಲ್ಲಿ ಮುಂದೆ ಇರುತ್ತಾರೆ, ಆ ಕಾರಣಕ್ಕಾಗಿಯೇ ಪೋಷಕರು ಸರ್ಕಾರಿ ಶಾಲೆಗಳನ್ನು ಬಿಟ್ಟು ಖಾಸಗಿ ಶಿಕ್ಷಣ ಸಂಸ್ಥೆಗಳ ಕಡೆ ಒಲವು ತೋರಿಸುತ್ತಾರೆ ಎನ್ನುವ ಅಭಿಪ್ರಾಯ ಜನಜನಿತವಾಗಿದೆ. ಆದರೆ ಈಗಿನ ಫಲಿತಾಂಶ ಇಂತಹ ನಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿದೆ.

ಯಾವುದೇ ಒಂದು ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ ಒಬ್ಬ ವಿದ್ಯಾರ್ಥಿಯೂ ತೇರ್ಗಡೆಯಾಗಿಲ್ಲ ಎಂದಾದರೆ, ತಪ್ಪು ವಿದ್ಯಾರ್ಥಿಗಳದ್ದಲ್ಲ, ನೇರವಾಗಿ ಶಿಕ್ಷಣ ಸಂಸ್ಥೆಯದ್ದೇ ಆಗಿರುತ್ತದೆ. ಪರೀಕ್ಷಾ ತಯಾರಿಗೆ ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ನೀಡಲು ಮತ್ತು ಪಠ್ಯ ಬೋಧನೆ ಮಾಡಲು ಸಾಧ್ಯವಾಗದೇ ಹೋದರೆ ಅಂತಹ ಸಂಸ್ಥೆಯನ್ನು ನಡೆಸುವುದಾದರೂ ಏಕೆ? ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದ ಜೊತೆ ಚೆಲ್ಲಾಟ ಆಡುವುದು ಸರಿಯಲ್ಲ. ಸರ್ಕಾರ ಇದಕ್ಕಾಗಿ ಪ್ರತ್ಯೇಕ ತಂಡವೊಂದನ್ನು ರಚಿಸಬೇಕು. ಆ ತಂಡದ ಸದಸ್ಯರು ಇಂತಹ ಶಾಲೆಗಳಿಗೆ ಭೇಟಿ ನೀಡಿ, ಶೂನ್ಯ ಫಲಿತಾಂಶದ ಹಿಂದಿರುವ ಕಾರಣಗಳನ್ನು, ಅಲ್ಲಿನ ಕುಂದುಕೊರತೆಗಳನ್ನು ಪರಿಶೀಲಿಸಿ ಸೂಕ್ತ ಕ್ರಮಗಳನ್ನು ಶಿಫಾರಸು ಮಾಡಬೇಕು.

ಕೆ.ಎನ್.ರಂಗನಾಥ್, ಉಜಿರೆ

ಕಾಗದದ ಹಾಳೆ ಮರುಬಳಕೆಯಾಗಲಿ

ಶಾಲಾ ಮಕ್ಕಳು ಬೇಸಿಗೆ ರಜೆ ಮುಗಿಸಿ ಮುಂದಿನ ತರಗತಿಗೆ ತೆರಳಲು ಅಣಿಯಾಗುವಾಗ, ಶಾಲೆಗಳಿಂದ ಹೊಸ ನೋಟ್ ಪುಸ್ತಕಗಳನ್ನು ಪಡೆಯುತ್ತಾರೆ. ಆಗ ಹಿಂದಿನ ವರ್ಷದ ನೋಟ್ ಪುಸ್ತಕಗಳನ್ನು– ಅವುಗಳಲ್ಲಿ ಬರೆಯದೇ ಉಳಿದ ಹಾಳೆಗಳು ಇದ್ದರೂ– ಪೋಷಕರು ಹಳೆಯ ಪತ್ರಿಕೆಗಳ ಜೊತೆ ಮಾರಲು ಮುಂದಾಗುತ್ತಾರೆ. ಆದರೆ ಇಂತಹ ಹಾಳೆಗಳ ಮರುಬಳಕೆಯ ಬಗ್ಗೆ ಎಲ್ಲರೂ ಆಲೋಚನೆ ಮಾಡಬೇಕು. ಕೆಲವು ವಿದ್ಯಾರ್ಥಿಗಳಂತೂ ಬೋರ್ಡ್ ಒರೆಸಲು, ಊಟ ಮಾಡಿದ ನಂತರ ಡೆಸ್ಕ್ ಒರೆಸಲು ನೋಟ್ ಪುಸ್ತಕದ ಒಳ್ಳೆಯ ಹಾಳೆಗಳನ್ನೇ ಕೀಳುತ್ತಾರೆ. ಬರೆಯುವಾಗ ತಪ್ಪಾಯಿತು ಎನ್ನುವ ಕಾರಣಕ್ಕೆ, ತಾವು ಬರೆದ ತಪ್ಪುಗಳನ್ನು ಗುರುತಿಸಲು ಶಿಕ್ಷಕರು ಕೆಂಪು ಇಂಕನ್ನು ಹೆಚ್ಚಾಗಿ ಬಳಸಿದ್ದಾರೆ ಎನ್ನುವ ಕಾರಣಕ್ಕೆ ಹಾಳೆಗಳನ್ನು ಹರಿದು ಕಸದ ಬುಟ್ಟಿ ತುಂಬಿಸುವವರೂ ಇದ್ದಾರೆ. ಆದರೆ ಹೀಗೆ ಮಾಡುವುದು ಸರಿಯಲ್ಲ. ಬರೆಯುವ ಹಾಳೆಗಳು ಪುಸ್ತಕದ ರೂಪದಲ್ಲಿ ಬರಬೇಕಾದರೆ ಎಷ್ಟೋ ಮರಗಳು ಧರೆಗೆ ಉರುಳಿರುತ್ತವೆ. ಅಲ್ಲದೆ ಉತ್ತಮ ಗುಣಮಟ್ಟದ ಪುಸ್ತಕಗಳು ಸಹಜವಾಗಿ ದುಬಾರಿಯೇ ಆಗಿರುತ್ತವೆ. ಅಂಥ ಪುಸ್ತಕಗಳು ನಿಮ್ಮ ಬಳಿ ಇವೆ ಎಂದರೆ ಪೋಷಕರ ಶ್ರಮದ ಹಣ ಅದರ ಹಿಂದೆ ಇದ್ದೇ ಇರುತ್ತದೆ. ಆ ಪುಸ್ತಕಗಳನ್ನು ಹೊಂದಲಾಗದ ಎಷ್ಟೋ ಜನ ನಮ್ಮ ನಡುವೆ ಇದ್ದಾರೆ ಎಂಬುದನ್ನು ಮರೆಯಬಾರದು.

ಇಷ್ಟೇ ಅಲ್ಲದೆ ಮಕ್ಕಳು ಖರೀದಿಸುವ ಲೇಖನ ಸಾಮಗ್ರಿಗಳು ಹೆಚ್ಚಾಗಿ ಪ್ಲಾಸ್ಟಿಕ್‌ನಿಂದ ಮಾಡಿದವೇ ಆಗಿರುತ್ತವೆ. ಆಕರ್ಷಕವಾಗಿ ಕಾಣಬೇಕು ಎನ್ನುವ ಕಾರಣಕ್ಕೆ, ಶಾಲೆಗೆ ಕೊಂಡೊಯ್ಯುವ ನೀರಿನ ಬಾಟಲಿ, ಊಟದ ಡಬ್ಬಿಗಳು ಸಹ ಪ್ಲಾಸ್ಟಿಕ್‌ನವು ಆಗಿರುತ್ತವೆ. ಸ್ಟೀಲ್ ಊಟದ ಡಬ್ಬಿ, ಕುಡಿಯುವ ನೀರಿನ ಸ್ಟೀಲ್ ಬಾಟಲಿಯನ್ನು ಬಳಸುವ ಮೂಲಕ ವಿದ್ಯಾರ್ಥಿ ಹಂತದಲ್ಲೇ ಪರಿಸರ ಪ್ರಜ್ಞೆ ಬೆಳೆಸಿಕೊಂಡು, ಪ್ಲಾಸ್ಟಿಕ್ ಹಾವಳಿಗೆ ಕಡಿವಾಣ ಹಾಕಬೇಕಾಗಿದೆ.

ಸುಮಾವೀಣಾ, ಹಾಸನ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.


ಸ್ವರಕ್ಷಣೆ ತಾಲೀಮು ಭಾರತ ಯುದ್ಧ ಸನ್ನದ್ಧ?

ಪ್ರಜಾವಾಣಿ ವಾರ್ತೆ

ಪಹಲ್ಗಾಮ್ ದಾಳಿಯ ನಂತರ ಭಾರತ ಮತ್ತು ಪಾಕಿಸ್ತಾನದ ನಡುವೆ ಬಿಕ್ಕಟ್ಟು ತೀವ್ರಗೊಂಡಿದ್ದು, ಎರಡೂ ರಾಷ್ಟ್ರಗಳು ಹಲವು ರೀತಿಯ ಪ್ರತೀಕಾರದ ಕ್ರಮಗಳಿಗೆ ಕೈಹಾಕಿವೆ. ದಾಳಿ ನಡೆಸಿದ ಭಯೋತ್ಪಾದಕರಿಗಾಗಿ ಭಾರತ ತೀವ್ರವಾಗಿ ಹುಡುಕಾಟ ನಡೆಸುತ್ತಿದೆ. ಜತೆಗೆ, ಘಟನೆ ನಡೆದ ದಿನದಿಂದಲೂ ಪ್ರಧಾನಿ ನರೇಂದ್ರ ಮೋದಿ ಅವರು ಭದ್ರತೆಗೆ ಸಂಬಂಧಿಸಿದಂತೆ ಉನ್ನತ ಮಟ್ಟದ ಸಭೆಗಳನ್ನು ನಡೆಸುತ್ತಿದ್ದಾರೆ. ವಿಶೇಷವಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಶಾ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೋಭಾಲ್ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ. ವಾಯುಸೇನೆ, ಭೂಸೇನೆ ಮತ್ತು ನೌಕಾಸೇನೆಯ ಮುಖ್ಯಸ್ಥರು ಹಾಗೂ ಚೀಫ್ ಆಫ್ ಡಿಫೆನ್ಸ್ ಸ್ಟಾಫ್ ಜನರಲ್ ಅನಿಲ್ ಚೌಹಾಣ್ ಅವರೊಂದಿಗೂ ಚರ್ಚೆ ನಡೆಸಿದ್ದಾರೆ. ಉಗ್ರರ ದಾಳಿಗೆ ಪ್ರತೀಕಾರವಾಗಿ ಯಾವುದೇ ರೀತಿಯ ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರದ ಭದ್ರತೆ ಕುರಿತ ಸಂಪುಟ ಸಮಿತಿ (ಸಿಸಿಎಸ್) ಸೇನೆಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದೆ. ಇದಲ್ಲದೇ ಭಾರತವು ಪಾಕಿಸ್ತಾನ ವಿರುದ್ಧ ಆರ್ಥಿಕವಾಗಿ, ರಾಜತಾಂತ್ರಿಕವಾಗಿ ಮತ್ತು ರಾಜಕೀಯವಾಗಿಯೂ ಹಲವು ರೀತಿಯ ಕ್ರಮಗಳನ್ನು ಜರುಗಿಸುತ್ತಿದೆ.

ಅತ್ತ ಪಾಕಿಸ್ತಾನವು ಗಡಿ ನಿಯಂತ್ರಣ ರೇಖೆಯಲ್ಲಿ ಕದನವಿರಾಮ ಉಲ್ಲಂಘಿಸಿ ಅಪ್ರಚೋದಿತ ಗುಂಡಿನ ದಾಳಿ ನಡೆಸುತ್ತಿದೆ. ಭಾರತ ದಾಳಿ ಮಾಡಿದರೆ ಅದನ್ನು ಸಮರ್ಥವಾಗಿ ಎದುರಿಸಲಾಗುವುದು ಎಂದು ಪದೇ ಪದೇ ಹೇಳುತ್ತಿದೆ. ಯುದ್ಧವೇನಾದರೂ ನಡೆದರೆ, ಅಣ್ವಸ್ತ್ರ ದಾಳಿ ನಡೆಸಲೂ ಹಿಂಜರಿಯುವುದಿಲ್ಲ ಎಂದು ಹೇಳಿದೆ. ಗಡಿ ಪ್ರದೇಶದಲ್ಲಿ ಹೆಚ್ಚಿನ ಸೇನೆಯನ್ನು ಜಮಾವಣೆ ಮಾಡಿದೆ. ಜತೆಗೆ, ಗುರಿ ನಿರ್ದೇಶಿತ ಕ್ಷಿಪಣಿಗಳ ಪರೀಕ್ಷೆಯನ್ನೂ ನಡೆಸುತ್ತಿದೆ. 120 ಕಿ.ಮೀ. ದೂರ ಸಾಗಬಲ್ಲ ‘ಫತಾಹ್’ ಸರಣಿ ಕ್ಷಿಪಣಿ ಮತ್ತು 450 ಕಿ.ಮೀ. ದೂರ ಸಾಗಬಲ್ಲ ‘ಅಬ್ದಲೀ’ ಗುರಿ ನಿರ್ದೇಶಿತ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಪಾಕಿಸ್ತಾನವು ಯಶಸ್ವಿಯಾಗಿ ನಡೆಸಿದೆ. ಯುದ್ಧಸನ್ನದ್ಧವಾಗಿ ಇರುವಂತೆ ಸೇನಾ ಮುಖ್ಯಸ್ಥ ಆಸೀಮ್ ಮುನೀರ್ ಸೇನೆಗೆ ಸೂಚಿಸಿರುವುದಾಗಿ ವರದಿಯಾಗಿದೆ.

ಆಧಾರ: ಪಿಟಿಐ, ಕೇಂದ್ರ ಗೃಹ ಸಚಿವಾಲಯದ ಪತ್ರ, ಅಮೆರಿಕದ ನ್ಯಾಷನಲ್ ಸೆಕ್ಯೂರಿಟಿ ಆರ್ಕೈವ್



1971ರ ಯುದ್ಧದ ನೆನಪು

ಭಾರತ ಮತ್ತು ಪಾಕಿಸ್ತಾನದ ನಡುವೆ ಉಂಟಾಗಿರುವ ಉದ್ವಿಗ್ನತೆಯನ್ನು ಗಮನದಲ್ಲಿಟ್ಟುಕೊಂಡು ನಾಗರಿಕ ರಕ್ಷಣೆಗೆ ಸಂಬಂಧಿಸಿದಂತೆ ಸ್ವರಕ್ಷಣೆ ತಾಲೀಮುಗಳನ್ನು ಬುಧವಾರ (ಮೇ 7) ನಡೆಸುವಂತೆ ಕೇಂದ್ರ ಗೃಹ ಸಚಿವಾಲಯವು ರಾಜ್ಯಗಳಿಗೆ ಸೂಚಿಸಿದೆ. 1968ರ ನಾಗರಿಕ ರಕ್ಷಣೆ ಕಾಯ್ದೆಯ ನಿಯಮದ ಅಡಿಯಲ್ಲಿ ಈ ತಾಲೀಮು ನಡೆಸಲಾಗುತ್ತಿದೆ. ದೇಶದ 244 ‘ನಾಗರಿಕ ರಕ್ಷಣಾ ಜಿಲ್ಲೆ’ಗಳಲ್ಲಿ ಸ್ವರಕ್ಷಣೆ ತಾಲೀಮು ನಡೆಯಲಿದೆ. 1962ರಲ್ಲಿ ಚೀನಾ ವಿರುದ್ಧದ ಯುದ್ಧ ಮತ್ತು 1965 ಹಾಗೂ 1971ರಲ್ಲಿ ಪಾಕಿಸ್ತಾನದ ವಿರುದ್ಧ ನಡೆದಿದ್ದ ಯುದ್ಧಗಳಿಗೆ ಪೂರ್ವಭಾವಿಯಾಗಿ ಸ್ವರಕ್ಷಣೆ ತಾಲೀಮುಗಳನ್ನು ನಡೆಸಲಾಗಿತ್ತು. 1971ರಲ್ಲಿ ಬಾಂಗ್ಲಾ ವಿಮೋಚನೆಗಾಗಿ ಪಾಕ್ ವಿರುದ್ಧ ನಡೆದಿದ್ದ ಯುದ್ಧದಲ್ಲಿ ಭಾರತವು ಪಾಕಿಸ್ತಾನವನ್ನು ಮಣಿಸಿತ್ತು. ಅದೇ ಕೊನೆ; ನಂತರ ಇದೀಗ ಸ್ವರಕ್ಷಣೆ ತಾಲೀಮು ನಡೆಯುತ್ತಿದೆ. ಆಗ ಈ ತಾಲೀಮಿನಲ್ಲಿ ಸಕ್ರಿಯವಾಗಿದ್ದ ಅನೇಕರು ಈಗ ಅದನ್ನು ಸ್ಮರಿಸಿಕೊಳ್ಳುತ್ತಿದ್ದಾರೆ. ಸಾಮಾನ್ಯವಾಗಿ ಯುದ್ಧ ಸನ್ನದ್ಧತೆಯ ಭಾಗವಾಗಿ ಈ ತಾಲೀಮು ನಡೆಸಲಾಗುತ್ತದೆ. ದಾಳಿ ಸಂದರ್ಭದಲ್ಲಿ ಪರಿಸ್ಥಿತಿಯನ್ನು ಎದುರಿಸಲು ದೇಶದ ಜನರನ್ನು ಸಜ್ಜುಗೊಳಿಸುವ ಉದ್ದೇಶ ಇದರದ್ದು. ಪ್ರಪಂಚಾದ್ಯಂತ ಯುದ್ಧಕ್ಕೆ ಮೊದಲು ಇಂತಹ ತಾಲೀಮು ನಡೆಸಲಾಗುತ್ತಿತ್ತು. ಐದೂವರೆ ದಶಕಗಳ ನಂತರ ಈಗ ನಾಗರಿಕ ಸ್ವರಕ್ಷಣೆ ತಾಲೀಮು ನಡೆಸಲು ಕೇಂದ್ರ ಹೇಳಿರುವುದರಿಂದ ಪಾಕಿಸ್ತಾನದ ವಿರುದ್ಧ ಮತ್ತೊಂದು ಯುದ್ಧಕ್ಕೆ ಭಾರತ ಸನ್ನದ್ಧವಾಗಿದೆಯೇ ಎಂಬ ಚರ್ಚೆ ಆರಂಭಗೊಂಡಿದೆ.

ತಾಲೀಮಿನ ಮುಖ್ಯ ಉದ್ದೇಶಗಳು

- ವಾಯುದಾಳಿಯ ಎಚ್ಚರಿಕೆ ನೀಡುವ ಸೈರನ್‌ಗಳು ಎಷ್ಟು ಪರಿಣಾಮಕಾರಿ ಎನ್ನುವುದನ್ನು ವಿಶ್ಲೇಷಿಸುವುದು
- ಭಾರತೀಯ ವಾಯುಸೇನೆಯೊಂದಿಗೆ ಹಾಟ್‌ಲೈನ್/ರೇಡಿಯೊ ಸಂವಹನದ ಸಂಪರ್ಕ ವ್ಯವಸ್ಥೆಯ ಪರೀಕ್ಷೆ
- ನಿಯಂತ್ರಣ ಕೊಠಡಿ ಮತ್ತು ಛಾಯಾ ನಿಯಂತ್ರಣ ಕೊಠಡಿಗಳ ಕಾರ್ಯನಿರ್ವಹಣೆಯ ಪರಿಶೀಲನೆ
- ಶತ್ರುದಾಳಿಯ ಸಂದರ್ಭದಲ್ಲಿ ಸ್ವಯಂರಕ್ಷಣೆ ಮಾಡಿಕೊಳ್ಳುವುದು ಹೇಗೆ ಎಂಬ ಬಗ್ಗೆ ವಿದ್ಯಾರ್ಥಿಗಳು, ಉದ್ಯೋಗಿಗಳು ಸೇರಿದಂತೆ ನಾಗರಿಕರಿಗೆ ತಿಳಿವಳಿಕೆ ನೀಡುವುದು
- ಬ್ಲಾಕ್‌ಔಟ್ ಕ್ರಮಗಳು (ರಾತ್ರಿಯ ಹೊತ್ತು ಎಲ್ಲ ದೀಪಗಳನ್ನು ಆರಿಸಿ, ಶತ್ರುವಿನ ಯುದ್ಧ ವಿಮಾನಗಳಿಗೆ ಊರುಗಳು ಕಾಣದಂತೆ ಮಾಡುವುದು)
- ಪ್ರಮುಖ ನೆಲೆ/ಸ್ಥಾವರಗಳನ್ನು ಮರೆಮಾಚುವುದು
- ನಾಗರಿಕ ರಕ್ಷಣಾ ಸೇವೆಗಳಾದ ರಕ್ಷಣಾ ಕಾರ್ಯಾಚರಣೆ, ಬೆಂಕಿ ನಂದಿಸುವುದು ಮತ್ತು ಘಟಕ ನಿರ್ವಹಣೆಯ ಸನ್ನದ್ಧತೆಯನ್ನು ಪರೀಕ್ಷಿಸುವುದು
- ರಕ್ಷಣಾ/ಪರಿಹಾರ ಕಾರ್ಯಾಚರಣೆ, ಸುರಕ್ಷಿತ ಜಾಗಕ್ಕೆ ಜನರ ಸ್ಥಳಾಂತರ ಮತ್ತು ಅದಕ್ಕೆ ಸಂಬಂಧಿಸಿದ ಸಿದ್ಧತೆಗಳ ಮೌಲ್ಯಮಾಪನ ಮಾಡುವುದು

ಅಮೆರಿಕದ ‘ರಹಸ್ಯ’ ವರದಿಯಲ್ಲೇನಿದೆ?

ಭಾರತ ಮತ್ತು ಪಾಕಿಸ್ತಾನದ ನಡುವೆ ಉದ್ವಿಗ್ನತೆ ತೀವ್ರಗೊಳ್ಳುತ್ತಿರುವ ಹೊತ್ತಿನಲ್ಲೇ ಅಮೆರಿಕದ ಗುಪ್ತಚರ ಸಂಸ್ಥೆಯ (ಸಿಐಎ) ರಾಷ್ಟ್ರೀಯ ಗುಪ್ತಚರ ಅಂದಾಜು (ಎನ್‌ಐಇ) ಚರ್ಚೆಗೆ ಗ್ರಾಸವಾಗಿದೆ. ಭಾರತ ಮತ್ತು ಪಾಕಿಸ್ತಾನದ ನಡುವೆ 1990ರ ದಶಕದಲ್ಲಿ ಯುದ್ಧದ ಸಂಭಾವ್ಯತೆಯನ್ನು ಅರಿಯಲು ಸಿಐಎ 1993ರಲ್ಲಿ ಎನ್‌ಐಇ ಅನ್ನು ಸಿದ್ಧಪಡಿಸಿತ್ತು. ರಹಸ್ಯ ದಾಖಲೆಯಾಗಿ ಉಳಿದಿದ್ದ ಅದನ್ನು ಇದೇ ಫೆಬ್ರುವರಿಯಲ್ಲಿ ಅಮೆರಿಕ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿತ್ತು. ಎರಡೂ ದೇಶಗಳ ನಡುವೆ ಯುದ್ಧ ನಡೆಯುವ ಸಾಧ್ಯತೆ ಐದನೇ ಒಂದರಷ್ಟು ಎಂದು ಎನ್‌ಐಇ 90ರ ದಶಕದ ಆರಂಭದಲ್ಲಿ ವಿಶ್ಲೇಷಿಸಿತ್ತು. ‘ಎರಡೂ ರಾಷ್ಟ್ರಗಳ ನಡುವೆ ಪೂರ್ಣ ಪ್ರಮಾಣದಲ್ಲಿ ಯುದ್ಧ ನಡೆಯುವ ಸಾಧ್ಯತೆ ತೀರಾ ಕಡಿಮೆ. ಆದರೆ, ಹಲವು ಕಾರಣಗಳಿಂದ ಯುದ್ಧ ಸಂಭವಿಸಿದರೂ ಸಂಭವಿಸಬಹುದು. ಒಂದು ದೇಶದ ಮೇಲೆ ಉಗ್ರರ ದೊಡ್ಡ ದಾಳಿ ನಡೆದು, ಅದಕ್ಕೆ ಇನ್ನೊಂದು ದೇಶದ ಪ್ರಚೋದನೆಯೇ ಕಾರಣ ಎಂದು ಆ ದೇಶ ಭಾವಿಸಿದರೆ ಯುದ್ಧ ಆರಂಭವಾಗಬಹುದು’ ಎಂದು ಹೇಳಿತ್ತು. ಎನ್‌ಐಇಯಲ್ಲಿ ಚರ್ಚಿಸಿರುವ ಬಹುತೇಕ ಅಂಶಗಳು ಮೂರು ದಶಕಗಳ ನಂತರವೂ ಪ್ರಸ್ತುತವಾಗಿವೆ ಎನ್ನುವ ವಿಶ್ಲೇಷಣೆಗಳು ಕೇಳಿಬಂದಿವೆ.

ಬ್ಲಾಕ್ ಔಟ್ ಎಂದರೇನು?

ಬುಧವಾರ ನಡೆಯಲಿರುವ ನಾಗರಿಕ ರಕ್ಷಣೆ ತಾಲೀಮಿನ ಪ್ರಮುಖ ಭಾಗ ಬ್ಲಾಕ್‌ಔಟ್ ಕ್ರಮಗಳು. ಬ್ಲಾಕ್ ಔಟ್ ಎಂದರೆ ಊರು/ಪಟ್ಟಣ/ನಗರಗಳಲ್ಲಿ ರಾತ್ರಿ ವೇಳೆ ಜನಜೀವನವನ್ನು ಸಂಪೂರ್ಣವಾಗಿ ಸ್ತಬ್ಧಗೊಳಿಸುವುದು. ಅದರ ಭಾಗವಾಗಿ ಊರು/ಪಟ್ಟಣ/ನಗರಕ್ಕೆ ವಿದ್ಯುತ್ ಪೂರೈಕೆಯನ್ನು ದೀರ್ಘ ಅವಧಿಗೆ ನಿಲ್ಲಿಸಲಾಗುತ್ತದೆ. ಮನೆಗಳಲ್ಲಿ ಜನರು ಜನರೇಟರ್, ಇನ್‌ವರ್ಟರ್‌ಗಳನ್ನೂ ಬಳಸುವ ಹಾಗಿಲ್ಲ. ಬೀದಿ ದೀಪಗಳು ಉರಿಯುವುದಿಲ್ಲ. ಅಷ್ಟೇ ಏಕೆ, ಸಂಜೆಯ ಬಳಿಕ ಜನರು ವಾಹನಗಳ ಮೂಲಕ ಓಡಾಡಬಾರದು/ಅವುಗಳ ದೀಪಗಳನ್ನು ಬೆಳಗಿಸಬಾರದು. ದೂರವಾಣಿ, ಇಂಟರ್‌ನೆಟ್‌ನಂತಹ ಸಂವಹನ ವ್ಯವಸ್ಥೆಯನ್ನೂ ಸ್ಥಗಿತಗೊಳಿಸಲಾಗುತ್ತದೆ.



ಸಾಮಾನ್ಯವಾಗಿ, ಅಂತರರಾಷ್ಟ್ರೀಯ ಗಡಿಗೆ ಹತ್ತಿರವಿರುವ ಪ್ರದೇಶಗಳಲ್ಲಿ, ವಿದ್ಯುತ್ ಸ್ಥಾವರಗಳು, ಅಣೆಕಟ್ಟೆಗಳು, ರಕ್ಷಣಾ ಇಲಾಖೆಗೆ ಸೇರಿದ ಕಟ್ಟಡಗಳು ಇರುವ ಜಾಗಗಳಲ್ಲಿ ಯುದ್ಧದ ಸಂದರ್ಭದಲ್ಲಿ ಬ್ಲಾಕ್‌ಔಟ್ ಮಾಡಲಾಗುತ್ತದೆ. ಆ ಪ್ರದೇಶದಲ್ಲಿರುವ ಕಟ್ಟಡಗಳು, ಪ್ರಮುಖ ಸ್ಥಳಗಳನ್ನು ಶತ್ರುಗಳ ವೈಮಾನಿಕ ದಾಳಿಯಿಂದ ರಕ್ಷಿಸುವ ಉದ್ದೇಶ ಇದರ ಹಿಂದಿದೆ. ಯುದ್ಧದ ಸಮಯದಲ್ಲಿ ಈ ಬ್ಲಾಕ್‌ಔಟ್ ಕ್ರಮ ಹಲವು ದಿನಗಳವರೆಗೆ ಇರಬಹುದು. ಇದು ದೀರ್ಘಾವಧಿಗೆ ಜಾರಿಯಲ್ಲಿದ್ದರೆ ನಾಗರಿಕರು ಹಲವು ತೊಂದರೆಗಳನ್ನೂ ಅನುಭವಿಸಬೇಕಾಗುತ್ತದೆ.

1965 ಮತ್ತು 1971ರಲ್ಲಿ ಪಾಕಿಸ್ತಾನದೊಂದಿಗೆ ಯುದ್ಧ ನಡೆದಾಗ ಜಮ್ಮು ಮತ್ತು ಕಾಶ್ಮೀರ, ಪಂಜಾಬ್ ಮತ್ತು ರಾಜಸ್ಥಾನದ ಕೆಲವೆಡೆ ಹಲವು ದಿನ ಬ್ಲಾಕ್‌ಔಟ್ ಮಾಡಲಾಗಿತ್ತು. ರಾಜಧಾನಿ ದೆಹಲಿಯೂ ರಾತ್ರಿಹೊತ್ತು ಕತ್ತಲಲ್ಲಿ ಮುಳುಗಿತ್ತು. 1971ರ ಯುದ್ಧದ ವೇಳೆ ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳಲ್ಲೂ ಈ ಕ್ರಮ ಕೈಗೊಳ್ಳಲಾಗಿತ್ತು. ಕಾರ್ಗಿಲ್ ಯುದ್ಧ ನಡೆಯುತ್ತಿದ್ದ ಪ್ರದೇಶದಲ್ಲಿ ಜನವಸತಿ ಇಲ್ಲದೇ ಇದ್ದುದರಿಂದ ಆ ಸಂದರ್ಭದಲ್ಲಿ ಬ್ಲಾಕ್ ಔಟ್ ಮಾಡಲಾಗಿರಲಿಲ್ಲ.

ನಾಗರಿಕ ರಕ್ಷಣಾ ಜಿಲ್ಲೆ ಎಂದರೆ...

ಕರ್ನಾಟಕದ ಮೂರು ಜಿಲ್ಲೆಗಳು ಸೇರಿದಂತೆ ದೇಶದಾದ್ಯಂತ 244 ‘ನಾಗರಿಕ ರಕ್ಷಣಾ ಜಿಲ್ಲೆ’ಗಳಲ್ಲಿ ಬುಧವಾರ ನಾಗರಿಕರ ಸ್ವರಕ್ಷಣೆ ತಾಲೀಮು ನಡೆಯಲಿದೆ. ನಾಗರಿಕ ರಕ್ಷಣಾ ಜಿಲ್ಲೆಗಳು (ಸಿವಿಲ್ ಡಿಫೆನ್ಸ್ ಡಿಸ್ಟ್ರಿಕ್ಟ್) ಎಂದರೆ, ಸಾಮಾನ್ಯ ಜಿಲ್ಲೆಗಳಿಗಿಂತ ಭಿನ್ನ. ಸರ್ಕಾರ ನಾಗರಿಕ ರಕ್ಷಣೆಗೆ ಸಂಬಂಧಿಸಿದ ಯಾವುದೇ ಯೋಜನೆ ಅಥವಾ ಕಾರ್ಯಕ್ರಮ ಅಥವಾ ತರಬೇತಿಗಳನ್ನು ಹಮ್ಮಿಕೊಳ್ಳುವಾಗ ಈ ಜಿಲ್ಲೆಗಳನ್ನೇ ಆಯ್ಕೆ ಮಾಡಿಕೊಳ್ಳುತ್ತದೆ.

ಈ ಜಿಲ್ಲೆಗಳ ವರ್ಗೀಕರಣ ಹೇಗೆ?: ಕಾರ್ಯತಂತ್ರದ ದೃಷ್ಟಿಯಿಂದ ಹೆಚ್ಚು ಮಹತ್ವವಿರುವ ಮತ್ತು ಶತ್ರುಗಳ ದಾಳಿಗೆ ಒಳಗಾಗುವ ಸಾಧ್ಯತೆಯ ಆಧಾರದಲ್ಲಿ ಈ ಜಿಲ್ಲೆಗಳನ್ನು ಆಯ್ಕೆ ಮಾಡಲಾಗುತ್ತದೆ. ಇದಕ್ಕಾಗಿ ಕೆಲವು ಮಾನದಂಡಗಳೂ ಇವೆ.

- ಅಂತರರಾಷ್ಟ್ರೀಯ ಗಡಿಗೆ ಹತ್ತಿರ ಇರುವ ಜಿಲ್ಲೆಗಳು (ಉದಾ: ಪಾಕಿಸ್ತಾನದೊಂದಿಗೆ ಗಡಿ ಹೊಂದಿರುವ ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ರಾಜಸ್ಥಾನ ಮತ್ತು ಗುಜರಾತ್ ರಾಜ್ಯಗಳ ಹೆಚ್ಚು ಜಿಲ್ಲೆಗಳು ನಾಗರಿಕ ರಕ್ಷಣಾ ಜಿಲ್ಲೆಗಳ ಪಟ್ಟಿಯಲ್ಲಿ ಸ್ಥಾನ ಪಡೆದಿವೆ)
- ಅತ್ಯಂತ ಮಹತ್ವದ ಮೂಲಸೌಕರ್ಯಗಳನ್ನು ಹೊಂದಿರುವ ಜಿಲ್ಲೆಗಳು. ಅಂದರೆ, ರಕ್ಷಣಾ ಘಟಕಗಳು, ಪರಮಾಣು ಸ್ಥಾವರಗಳು, ವಿದ್ಯುತ್ ಉತ್ಪಾದನಾ ಘಟಕಗಳು, ಬಂದರುಗಳು, ತೈಲಾಗಾರಗಳು, ಸಂವಹನ ಜಾಲ ಇರುವ ಜಿಲ್ಲೆಗಳು
- ಜನಸಂಖ್ಯೆ ಹೆಚ್ಚು ಇರುವ ಜಿಲ್ಲೆಗಳು. ಬಹುತೇಕ ಸಂದರ್ಭಗಳಲ್ಲಿ ಇವು ಮಹಾನಗರಗಳನ್ನು ಹೊಂದಿರುವ ಜಿಲ್ಲೆಗಳಾಗಿರುತ್ತವೆ. ಶತ್ರುಗಳು ದೊಡ್ಡ ನಗರ ಪ್ರದೇಶಗಳನ್ನು ಗುರಿಯಾಗಿಸಿಕೊಂಡು ದಾಳಿ ಮಾಡುವ ಸಾಧ್ಯತೆ ಹೆಚ್ಚಿರುತ್ತದೆ
- ಕರಾವಳಿ ಪ್ರದೇಶದ ಜಿಲ್ಲೆಗಳು. ದೇಶದ ರಕ್ಷಣೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸುವ ಕರಾವಳಿ ಪ್ರದೇಶಗಳನ್ನು ಶತ್ರುಗಳು ಗುರಿಯಾಗಿಸುವ ಅಪಾಯ ಇರುತ್ತದೆ

ಜನರ ರಕ್ಷಣೆಗೆ ಕಾಯ್ದೆ

1962, 1965ರ ಯುದ್ಧಗಳ ನಂತರ ನಾಗರಿಕ ರಕ್ಷಣಾ ಕಾಯ್ದೆ–1968 ರೂಪಿಸುವ ಮೂಲಕ ನಾಗರಿಕ ರಕ್ಷಣೆಯ ವ್ಯಾಪ್ತಿಯನ್ನು ವಿಸ್ತರಿಸಲಾಗಿತ್ತು. ಶತ್ರುದಾಳಿಯ ಸಂದರ್ಭದಲ್ಲಿ ದೇಶದ ಜನತೆ, ಆಸ್ತಿಪಾಸ್ತಿ ಮತ್ತು ಪ್ರದೇಶಗಳನ್ನು ರಕ್ಷಿಸುವ ಸಲುವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು, ತುರ್ತು ಸಂದರ್ಭಗಳನ್ನು ನಿಭಾಯಿಸಲು ಅಗತ್ಯವಾದ ಮಾರ್ಗಸೂಚಿಯನ್ನು ಕಾಯ್ದೆ ಒಳಗೊಂಡಿತ್ತು. 2009ರಲ್ಲಿ ಕಾಯ್ದೆಗೆ ತಿದ್ದುಪಡಿ ತಂದು, ವಿಪತ್ತು ನಿರ್ವಹಣೆಯನ್ನೂ ಅದರಡಿ ಸೇರಿಸಲಾಯಿತು. ಯುದ್ಧ ಮತ್ತಿತರ ತುರ್ತು ಸಂದರ್ಭಗಳಲ್ಲಿ ವಿದ್ಯಾರ್ಥಿಗಳು, ಸರ್ಕಾರಿ ಮತ್ತು ಖಾಸಗಿ ಉದ್ಯೋಗಿಗಳು, ಆಸ್ಪತ್ರೆ ಸಿಬ್ಬಂದಿ ಸೇರಿದಂತೆ ದೇಶದ ಜನರನ್ನು ಸ್ವಯಂಸೇವಕರನ್ನಾಗಿ ನೇಮಿಸಿಕೊಳ್ಳಲು ಕಾಯ್ದೆಯಲ್ಲಿ ಅವಕಾಶವಿದೆ.

ರಾಷ್ಟ್ರೀಯ

₹ 7.25 ಕೋಟಿಯ ಪುಸ್ತಕ ಖರೀದಿ, ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಸರ್ಕಾರಿ ಸ್ವಾಮ್ಯದ ಯೂನಿಯನ್ ಬ್ಯಾಂಕ್ ₹ 7.25 ಕೋಟಿ ವೆಚ್ಚದಲ್ಲಿ, ಕೃಷ್ಣಮೂರ್ತಿ ವಿ.ಸುಬ್ರಹ್ಮಣಿಯನ್ ರಚಿಸಿರುವ ಕೃತಿಯ ಎರಡು ಲಕ್ಷ ಪ್ರತಿಗಳನ್ನು ಖರೀದಿಸಿದೆ. ಇದರ ಹಿಂದಿನ ಹಿತಾಸಕ್ತಿ ಕುರಿತು ತನಿಖೆ ನಡೆಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

‘ಇಂಡಿಯಾ@100: ಎನ್‌ವಿಷನಿಂಗ್ ಟುಮಾರೊ‘ಸ್’ ಎಕನಾಮಿಕ್ ಪವರ್ ಹೌಸ್’ ಶೀರ್ಷಿಕೆಯ 1,99,872 ಪ್ರತಿಗಳನ್ನು ಬ್ಯಾಂಕ್ ಖರೀದಿಸಿದೆ. ₹ 3.5 ಕೋಟಿಯನ್ನು ಮುಂಗಡವಾಗಿ ಪಾವತಿಸಿದೆ. ಉಳಿದ ಮೊತ್ತ ಪಾವತಿಸಿ ‘ಇತರೆ ವೆಚ್ಚ’ಗಳಡಿ ನಮೂದಿಸುವಂತೆ ಪ್ರಾದೇಶಿಕ ಕಚೇರಿಗಳಿಗೆ ಸೂಚಿಸಿದೆ ಎಂದು ಆರೋಪಿಸಿದೆ.

ಸುಬ್ರಹ್ಮಣಿಯನ್ ಅವರು ಮಾಜಿ ಮುಖ್ಯ ಆರ್ಥಿಕ ಸಲಹೆಗಾರರಾಗಿದ್ದರು. ಒಂದೆರಡು ದಿನಗಳ ಹಿಂದಷ್ಟೇ ಅಂತರ ರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಭಾರತದ ಕಾರ್ಯನಿರ್ವಾಹಕ ನಿರ್ದೇಶಕ ಸ್ಥಾನದಿಂದ ಪದಚ್ಯುತಗೊಂಡಿದ್ದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಪಕ್ಷದ ಸಾಮಾಜಿಕ ಮಾಧ್ಯಮ ವಿಭಾಗದ ಅಧ್ಯಕ್ಷೆ ಸುಪ್ರಿಯಾ ಶ್ರೀನೆತ್ ಅವರು, ‘ಬ್ಯಾಂಕ್‌ನ ದಾಖಲೆಗಳ ಪ್ರಕಾರ, ಕಳೆದ ವರ್ಷ ಜೂನ್–ಜುಲೈ ತಿಂಗಳಲ್ಲಿ 1.99 ಲಕ್ಷ ಪ್ರತಿಗಳ ಖರೀದಿಗೆ ಆದೇಶಿಸಲಾಗಿದೆ’ ಎಂದರು.

‘ಪ್ರಧಾನಿ ಮೋದಿ ಮತ್ತು ಬಿಜೆಪಿಯ ಹೊಗಳುಭಟರಾಗಿದ್ದವರ ಈ ಕೃತಿಯ ಪ್ರತಿಗಳನ್ನು ಬ್ಯಾಂಕ್‌ನ ವಲಯ, ಪ್ರಾದೇಶಿಕ ಕಚೇರಿಗಳ ಮೂಲಕ ವಿದ್ಯಾರ್ಥಿಗಳು, ಖಾತೆದಾರರು, ಕಾಲೇಜುಗಳು, ಗ್ರಂಥಾಲಯಗಳಿಗೆ ವಿತರಿಸಲಾಗುವುದು’ ಎಂದು ಶ್ರೀನೆತ್ ತಿಳಿಸಿದರು.



ಸುಪ್ರಿಯಾ

‘ಕೋವಿಡ್ ವೇಳೆ ಇದೇ ವ್ಯಕ್ತಿಯು ಮುಖ್ಯ ಆರ್ಥಿಕ ಸಲಹೆಗಾರರಾಗಿದ್ದರು. ಆ ಅವಧಿಯಲ್ಲಿ ದೇಶ ಶೇ 24ರಷ್ಟು ಆರ್ಥಿಕ ಕುಸಿತ ಕಂಡಿತ್ತು. ಆಗ ಅವರು ಆರ್ಥಿಕ ಸಲಹೆ ನೀಡಿದ್ದಕ್ಕಿಂತಲೂ ಸರ್ಕಾರವನ್ನು ಹೊಗಳಿದ್ದೇ ಹೆಚ್ಚು’ ಎಂದು ಟೀಕಿಸಿದರು.

‘ಬೃಹತ್ ಸಂಖ್ಯೆಯಲ್ಲಿ ಪ್ರತಿಗಳನ್ನು ಖರೀದಿಸಿರುವ ಬ್ಯಾಂಕ್‌ನ ನಡೆ ಕುರಿತು ತನಿಖೆಗೆ ಆಗ್ರಹಿಸಿದ ಅವರು, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಈ ವಿಷಯದಲ್ಲಿ ಸಮಗ್ರ ವಿವರ ನೀಡಬಹುದು’ ಎಂದು ಆಶಿಸಿದರು.

ಪ್ರಸಕ್ತ ವರ್ಷದ ಜೂನ್ ತಿಂಗಳಲ್ಲಿ ಅಧಿಕಾರಾವಧಿಯ ವಿಸ್ತರಣೆ ನಿರೀಕ್ಷೆಯಲ್ಲಿರುವ ಯೂನಿಯನ್ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ ಎ.ಮಣಿಮೇಖಲೈ ಅವರು, ಈ ವಹಿವಾಟಿನ ಮೂಲಕ ‘ತಮ್ಮ ಅವಧಿಯ ವಿಸ್ತರಣೆಗಾಗಿ ಪರೋಕ್ಷವಾಗಿ ಲಂಚ ನೀಡಿದ್ದಾರೆಯೇ’ ಎಂದು ಶ್ರೀನೆತ್ ಪ್ರಶ್ನಿಸಿದರು.

ಕೃತಿಗಳನ್ನು ಖರೀದಿಸುವ ಪೂರ್ವಭಾವಿಯಾಗಿ ಬ್ಯಾಂಕ್ ಆಡಳಿತ ಮಂಡಳಿ ಹಾಗೂ ಹಣಕಾಸು ಸೇವೆಗಳ ಇಲಾಖೆಯ ಅನುಮೋದನೆ ಪಡೆಯಲಾಗಿದೆಯೇ ಎಂದು ಪ್ರಶ್ನಿಸಿದರು.

ಜಾತಿಗಣತಿ: ಸರ್ವಪಕ್ಷ ಸಭೆಗೆ ಮಲ್ಲಿಕಾರ್ಜುನ ಖರ್ಗೆ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ವೈಜ್ಞಾನಿಕವಾಗಿ ಜಾತಿ ಗಣತಿ ನಡೆಸಬೇಕು ಎಂದು ಒತ್ತಾಯಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ‘ಜಾತಿ ಗಣತಿಯು ಕೇವಲ ಜಾತಿ ಎಣಿಸುವುದಕ್ಕೆ ಸೀಮಿತವಾಗಬಾರದು. ದೊಡ್ಡ ಸಾಮಾಜಿಕ– ಆರ್ಥಿಕ ಉದ್ದೇಶಗಳನ್ನು ಈಡೇರಿಸಲು ಸಹಾಯವಾಗಬೇಕು’ ಎಂದು ಆಗ್ರಹಿಸಿದ್ದಾರೆ.

‘ಜಾತಿ ಗಣತಿಯ ವರದಿಯಲ್ಲಿ ಯಾವುದೇ ವಿಷಯವನ್ನು ಮರೆಮಾಚಬಾರದು. ಪ್ರತಿ ಜಾತಿಯ ಸಂಪೂರ್ಣ ಸಾಮಾಜಿಕ– ಆರ್ಥಿಕ ದತ್ತಾಂಶವನ್ನು ಲಭ್ಯವಾಗುವಂತೆ ಮಾಡಿ ಅವರಿಗೆ ಸಾಂವಿಧಾನಿಕವಾಗಿ ನೀಡಲಾದ ಹಕ್ಕುಗಳನ್ನು ಒದಗಿಸಲು ಹಾಗೂ ಒಂದು ಜನಗಣತಿಯಿಂದ ಮತ್ತೊಂದು ಜನಗಣತಿಗೆ ಅವರ ಸಾಮಾಜಿಕ– ಆರ್ಥಿಕ ಪ್ರಗತಿಯನ್ನು ಅಳೆಯಬಹುದು ಎಂಬುದನ್ನು ಖಚಿತಪಡಿಸಿಕೊಳ್ಳುವಂತಾಗಬೇಕು. ಜಾತಿ ಗಣತಿಯ ಕುರಿತು ಶೀಘ್ರದಲ್ಲಿ ಸರ್ವ ಪಕ್ಷಗಳ ಸಭೆ ನಡೆಸಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

ಪ್ರಧಾನಿ ಅವರಿಗೆ ಸೋಮವಾರ ಬರೆದಿರುವ ಪತ್ರದಲ್ಲಿ, ‘ಸರ್ಕಾರವು ಯಾವುದೇ ವಿವರಗಳನ್ನು ಒದಗಿಸದೆ ಜನಗಣತಿಯೊಂದಿಗೆ ಜಾತಿ ಗಣತಿ ನಡೆಸುವುದಾಗಿ ಘೋಷಿಸಿದೆ’ ಎಂದು ಆಕ್ಷೇಪಿಸಿದ್ದಾರೆ. ‘ಜಾತಿಗಣತಿಯ ಪ್ರಶ್ನಾವಳಿಗಳನ್ನು ವಿನ್ಯಾಸಗೊಳಿಸಲು ತೆಲಂಗಾಣ ಮಾದರಿ ಅಳವಡಿಸಿಕೊಳ್ಳಬೇಕು. ಶೇ 50ರ ಮೀಸಲಾತಿ ಮಿತಿಯನ್ನು ತೆಗೆದು ಹಾಕಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ಜಾರಿಗೊಳಿಸಬೇಕು’ ಎಂದು ಒತ್ತಾಯಿಸಿದ್ದಾರೆ.


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

❌ ಭಾರಿ ಸ್ಫೋಟ ಸಂಭವಿಸುವ ಮತ್ತು ಜನರು ಬೆದರಿ ಓಡುವ ದೃಶ್ಯಾವಳಿಯನ್ನು ಒಳಗೊಂಡ ವಿಡಿಯೊ ತುಣುಕನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಳಕೆದಾರರು ಹಂಚಿಕೊಳ್ಳುತ್ತಿದ್ದಾರೆ. ಭಾರತ ಸೇನೆಯು ಪಾಕಿಸ್ತಾನದ ಸಿಯಾಲ್‌ಕೋಟ್ ಮೇಲೆ ದಾಳಿ ನಡೆಸಿರುವ ವಿಡಿಯೊವನ್ನು ಅಲ್–ಜಝೀರಾ ವಾಹಿನಿ ಬಿಡುಗಡೆ ಮಾಡಿದೆ ಎಂಬ ಪ್ರತಿಪಾದನೆಯೊಂದಿಗೆ ಈ ತುಣುಕನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು.

✅ ವಿಡಿಯೊವನ್ನು ಕೀಫ್ರೇಮ್‌ಗಳಾಗಿ ವಿಭಾಗಿಸಿ, ಒಂದು ಫ್ರೇಮ್ ಅನ್ನು ರಿವರ್ಸ್ ಇಮೇಜ್ ವಿಧಾನದಲ್ಲಿ ಹುಡುಕಾಟ ನಡೆಸಿದಾಗ, ಅಲ್ ಜಝೀರಾ ವಾಹಿನಿಯ ವಾಟರ್‌ಮಾರ್ಕ್ ಹೊಂದಿರುವ ಇದೇ ವಿಡಿಯೊವನ್ನು 2023ರ ನ.9ರಂದು ಪೋಸ್ಟ್ ಮಾಡಿರುವುದು ಕಂಡು ಬಂತು. ಪ್ಯಾಲೆಸ್ಟೀನ್‌ನ ಮಾಧ್ಯಮ ಕ್ಯುಡ್ಸ್ ನ್ಯೂಸ್ ನೆಟ್‌ವರ್ಕ್ ತನ್ನ ಅಧಿಕೃತ ‘ಎಕ್ಸ್’ ಖಾತೆಯಲ್ಲಿ ಇದೇ ವಿಡಿಯೊವನ್ನು ಹಂಚಿಕೊಂಡಿತ್ತು. ಗಾಜಾ ಪಟ್ಟಿಯಲ್ಲಿ ಇಂಡೊನೇಷ್ಯಾದ ಆಸ್ಪತ್ರೆ ಇರುವ ಪ್ರದೇಶವನ್ನು ಗುರಿಯಾಗಿಸಿಕೊಂಡು ಇಸ್ರೇಲ್ ಬಾಂಬ್ ದಾಳಿ ಮಾಡಿದೆ. ಇದರಲ್ಲಿ ಹಲವರು ಮೃತಪಟ್ಟಿದ್ದು, ಬಹುತೇಕರು ಮಕ್ಕಳು ಎಂದು ವರದಿಯಾಗಿದೆ’ ಎಂದು ಅದರಲ್ಲಿ ವಿವರಿಸಲಾಗಿತ್ತು. ಇದರ ಆಧಾರದಲ್ಲಿ ಅರೇಬಿಕ್ ಭಾಷೆಯಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಿದಾಗ ಅಲ್–ಜಝೀರಾದ ಅರೇಬಿಕ್ ಭಾಷೆಯ ಅಧಿಕೃತ ಯುಟ್ಯೂಬ್ ಚಾನೆಲ್‌ನಲ್ಲಿ 2023ರ ನ.9ರಂದು ಇದೇ ವಿಡಿಯೊವನ್ನು ಪೋಸ್ಟ್ ಮಾಡಲಾಗಿತ್ತು. ಹಳೆಯ ವಿಡಿಯೊವನ್ನು ಪೋಸ್ಟ್ ಮಾಡಿ ಪಾಕಿಸ್ತಾನದ ಸಿಯಾಲ್‌ಕೋಟ್‌ನ ಮೇಲೆ ಭಾರತ ಸೇನೆ ದಾಳಿ ಮಾಡಿದೆ ಎಂದು ಬಿಂಬಿಸಲಾಗಿದೆ ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಬುಧವಾರ ಮೇ 7, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ದಶಮಿ ಗಂ. 10-20 ನಕ್ಷತ್ರ: ಪೂರ್ವ ಫಾಲ್ಗುಣಿ ಗಂ. 18-17 ಯೋಗ: ವ್ಯಾಘಾತ ಗಂ. 25-05 ಕರಣ: ಗರಜೆ ಗಂ. 10-20, ಮೇಷ ಮಾಸದ 24 ನೇ ದಿನ.
ರಾಹುಕಾಲ: ಮಧ್ಯಾಹ್ನ 12-00 – 01-30
ಸೂರ್ಯೋದಯ: 06-10 ಸೂರ್ಯಾಸ್ತ: 06-44
ಮುಸ್ಲಿಂ ದಿನಾಂಕ: 08 ಜುಲ್ಖಾಯದ್
ಅದೃಷ್ಟ ಸಂಖ್ಯೆ: 5, 8

ಮೇಷ: ನಿಮ್ಮ ಸಾಧನೆಗಳಿಗಾಗಿ ಪ್ರಶಂಸೆಯ ನುಡಿ ಮತ್ತು ಸನ್ಮಾನಗಳನ್ನು ಪಡೆಯುವಿರಿ. ಸುದ್ದಿಗೋಷ್ಠಿಗಳಲ್ಲಿ ಭಾಗವಹಿಸುವ ಉತ್ತಮ ಅವಕಾಶವನ್ನು ಪಡೆಯುವಿರಿ. ಮಗನ ಮುಂದಿನ ಓದಿನ ಬಗ್ಗೆ ಮನೆಯಲ್ಲಿ ಚರ್ಚೆಯಾಗುವುದು.

ವೃಷಭ: ತಂದೆಯವರಿಂದ ವಾಹನ ಅಥವಾ ವಸ್ತ್ರಾಭರಣ ಪ್ರಾಪ್ತಿಯಾಗಲಿದೆ. ದಾಂಪತ್ಯ ಜೀವನ ಸುಖಮಯವಾಗಿರುವುದು. ಸಾಮಾಜಿಕ ಕಾರ್ಯಕ್ರಮಗಳಿಂದ ಖ್ಯಾತಿ ಪಡೆಯಲಿದ್ದೀರಿ. ಕಲಾವಿದರಿಗೆ ಹೆಚ್ಚು ಅವಕಾಶ ಲಭ್ಯವಾಗಲಿದೆ.

ಮಿಥುನ: ಜೀವನದ ಕಷ್ಟ ಸುಖಗಳು ತಿರುಗುವ ಚಕ್ರದಂತಿರುವುದರಿಂದ ಒಳ್ಳೆಯ ದಿನಗಳು ನಿಮ್ಮ ಜೀವನದಲ್ಲಿ ಬರಲಿದೆ ಎಂಬ ಆಶಾಭಾವನೆಯನ್ನು ಮರೆಯದಿರಿ. ಗಿಡಮೂಲಿಕೆ ಔಷಧದಿಂದ ಅನಾರೋಗ್ಯ ದೂರವಾಗುವುದು.

ಕರ್ಕಾಟಕ: ಧಾರ್ಮಿಕ ಕೆಲಸದಲ್ಲಿ ಶ್ರದ್ಧೆ ತೋರಿದಷ್ಟೂ ಅಭಿವೃದ್ಧಿಯ ದಾರಿಯನ್ನು ಕಾಣಬಹುದು. ಶಿಸ್ತು ಮತ್ತು ಸ್ವಚ್ಛತೆಯ ಬಗ್ಗೆ ಗಮನಹರಿಸಿ. ನಿಮ್ಮೊಳಗೆ ಪ್ರಮುಖ ಅಥವಾ ಪ್ರಭಾವಶಾಲಿ ಪರಿವರ್ತನೆ ಕಂಡುಬರುವುದು.

ಸಿಂಹ: ದಿನನಿತ್ಯ ಬಳಕೆಯ ವಸ್ತುಗಳ ಖರೀದಿಯಲ್ಲಿ ಕೃಪಣತೆ ತೋರಿ ಕುಟುಂಬ ವರ್ಗದವರಿಂದ ದೂಷಣೆಗೆ ಒಳಗಾಗಬೇಡಿ. ಕೌಟುಂಬಿಕ ಸಮಸ್ಯೆ ಎದುರಾಗಿ ಮಾನಸಿಕ ಒತ್ತಡ ಅಧಿಕವಾಗಲಿದೆ. ಆದರೆ ಭಯಪಡುವ ಅಗತ್ಯವಿಲ್ಲ.

ಕನ್ಯಾ: ನಿಮ್ಮ ಹಣವು ಬಂಧುಗಳ ನೆರವಿನಿಂದ ನಿಮ್ಮ ಕೈಸೇರಲಿದೆ. ವಿವಾಹದ ವಿಷಯದಲ್ಲಿ ಮೌನ ಮುರಿದು ಮುಂದಿನ ವಿಷಯಗಳತ್ತ ಗಮನ ಹರಿಸುವಿರಿ. ಹೊಸ ಏಜೆನ್ಸಿಯೊಂದನ್ನು ಪ್ರಾರಂಭಿಸುವವರಿಗೆ ಈ ದಿನ ಸಕಾಲ.

ತುಲಾ: ಸಿವಿಲ್ ಎಂಜಿನಿಯರುಗಳಿಗೆ ಉತ್ತಮ ಅವಕಾಶ ಸಿಗುವುದು. ಸ್ನೇಹಪರ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು. ಸಂಸ್ಥೆಯಲ್ಲಿ ಅವಿರೋಧ ಆಯ್ಕೆಗೆ ಒಲವು ತೋರಿದ್ದರಿಂದ ಸುಲಭವಾಗಿ ಸ್ಥಾನ ಗಳಿಸುವಿರಿ.

ವೃಶ್ಚಿಕ: ಕೃಷಿಕಾರ್ಯ ಬಿಡುವಿಲ್ಲದೆ ನಡೆಯುವುದು ಮತ್ತು ಕೃಷಿ ಸಂಬಂಧಿತ ಯಂತ್ರೋಪಕರಣಗಳ ಖರೀದಿಗೆ ಮುಂದಾದರೆ ಹಣಕ್ಕೆ ಚಿಂತಿಸಬೇಡಿ ಗುಣಮಟ್ಟದ ಬಗ್ಗೆ ಪ್ರಾಧಾನ್ಯತೆ ನೀಡಿ. ಚಾಲಕರಿಗೆ ಬೇಡಿಕೆ ಹೆಚ್ಚಲಿದೆ.

ಧನು: ಮನೆಯಲ್ಲಿ ಸಣ್ಣ ಪ್ರಮಾಣದ ಕಲಹಕ್ಕೆ ನೀವು ಕಾರಣರಾದಿರಿ ಎಂದು ದುಃಖಿಸುವಂತಾಗುತ್ತದೆ. ಕೊಟ್ಟಿದ್ದ ಸಾಲ ಹಿಂಪಡೆಯಲು ಹರಸಾಹಸ ಪಡಬೇಕಾಗುತ್ತದೆ. ಆಲಸ್ಯತನವು ಕೆಲಸಕ್ಕೆ ಅಡ್ಡಿ ಉಂಟುಮಾಡುತ್ತದೆ.

ಮಕರ: ಸಾಮರ್ಥ್ಯ, ದಕ್ಷತೆ ಹಾಗೂ ಸೇವಾ ಮನೋಭಾವಗಳಿಂದಾಗಿ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆಯನ್ನು ನಿಮ್ಮದಾಗಿಸಿಕೊಳ್ಳುವಿರಿ. ಸಮಾರಂಭಗಳಲ್ಲಿ ಭಾಗವಹಿಸಬೇಕಾಗುವುದು. ವಾಹನ ಖರೀದಿಯ ಯೋಗವಿದೆ.

ಕುಂಭ: ಆಕರ್ಷಕ ಹಾಗೂ ಉಲ್ಲಸಿತ ವ್ಯಕ್ತಿಯೊಬ್ಬರು ಸಿಗುತ್ತಾರೆ. ನಿಮ್ಮದಾರಿಗೆ ಮೇಲಧಿಕಾರಿಗಳು ಹಸಿರು ನಿಶಾನೆ ತೋರಿಸುವುದರಿಂದ ಸಂತೋಷ ಇಮ್ಮಡಿಗೊಳ್ಳುವುದು. ಆತ್ಮವಿಶ್ವಾಸದಿಂದಿರಿ ಆದರೆ ಅತಿಯಾದ ಆತ್ಮವಿಶ್ವಾಸ ಸರಿಯಲ್ಲ.

ಮೀನ: ಅಂತರಾತ್ಮದ ಮಾತನ್ನು ಕೇಳುವುದರಿಂದ ಶ್ರೇಯಸ್ಸು ಉಂಟಾಗುತ್ತದೆ. ಸಣ್ಣ ಕೈಗಾರಿಕೆ ಉದ್ಯಮಿಗಳಿಗೆ ಲಾಭವಿದೆ. ಜನ್ಮದಾತರಿಗೂ ನಿಮಗೂ ಬಿರುಕು ಮೂಡುವ ಸಂಭವವಿದೆ. ತಾಳ್ಮೆ ಮತ್ತು ಸಹನೆ ಕಳೆದುಕೊಳ್ಳಬೇಡಿ.

ದೇಹವೇ ದೇವಾಲಯ

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

189

‘ತನುವೆಂಬ ಗುಡಿಯೊಳಗೆ, ಮನವೆಂಬ ಸಿಂಹಾಸನವನ್ನಿಟ್ಟು, ಘನಮಹಲಿಂಗವ ಮೂರ್ತಿಗೊಳಿಸಿ, ಸಕಲ ಕರ್ಣೇಂದ್ರಿಯಗಳಿಂದ ಪೂಜೋಪಚಾರವ ಸಿಂಗರಿಸಬಲ್ಲಡೆ, ಘನಕ್ಕೆಘನಮಹಿಮನೆಂಬೆನಯ್ಯ ಅಖಂಡೇಶ್ವರ.’- ಇದು ಷಣ್ಮುಖ ಶಿವಯೋಗಿಗಳ ವಚನ. ಅವರ ವಚನಾಂಕಿತ ಅಖಂಡೇಶ್ವರ. ಅದು ಅವರ ದೇವರು. ನಮ್ಮ ದೇವರು, ಮನೆದೇವರು ಬೇರೆ, ಮನದ ದೇವರು ಬೇರೆ, ಜಾತಿ ದೇವರು ಬೇರೆ, ಧರ್ಮದ ದೇವರು ಬೇರೆ, ನಡೆದುಕೊಳ್ಳುವ ದೇವರು ಬೇರೆ. ನಮ್ಮ ದೇವರು ಖಂಡಖಂಡ ತುಂಡು ತುಂಡಾಗಿವೆ. ಆದರೆ ಅವರು ದೇವರಿಗೆ ಅಖಂಡೇಶ್ವರ ಎಂದು ಹೆಸರು ಇಟ್ಟಿದ್ದಾರೆ. ಮಹಿಳೆಯರು ಮಂಗಳಸೂತ್ರ ಹಾಕಿಕೊಳ್ಳುತ್ತಾರೆ. ಕರಿಮಣಿ ಖಂಡಖಂಡ ಇವೆ. ಆದರೆ ಅವುಗಳನ್ನು ಒಂದುಗೂಡಿಸಿದ ದಾರ ಅಖಂಡವಾಗಿದೆ. ಹಾಗೆಯೇ ಈ ಜಗತ್ತು ನೋಡುವುದಕ್ಕೆ ಖಂಡಖಂಡವಾಗಿ ಕಾಣುತ್ತದೆಯಾದರೂ ಅದನ್ನು ಸೇರಿಸುವ ಸೂತ್ರ ಅಖಂಡವಾಗಿಯೇ ಇದೆ. ಅದಕ್ಕೆ ದೇವರನ್ನು ಅಖಂಡೇಶ್ವರ ಎನ್ನಲಾಗುತ್ತದೆ. ಅದಕ್ಕೆ ಶಿವಯೋಗಿಗಳು ಹೇಳುತ್ತಾರೆ ಜೀವನವೇ ಒಂದು ಪೂಜೆಯಾಗಬೇಕು. ಪೂಜೆ ಎಂದರೆ ಗುಡಿಯಲ್ಲಿ ಹೋಗಿ ಮಾಡುವುದಲ್ಲ. ನಿನ್ನ ದೇಹ ದೇವಾಲಯ ಆಗಬೇಕು. ಮನಸ್ಸು ಗರ್ಭಗುಡಿಯಾಗಬೇಕು. ನಿನ್ನ ಎದೆಯಲ್ಲಿ ಪರಮಾತ್ಮನ ಪ್ರತಿಷ್ಠಾಪನೆಯಾಗಬೇಕು. ಅದಕ್ಕೆ ಸತ್ಯ ದೇವರು ಎಂದು ಕರೆಯುತ್ತಾರೆ. ಇದು ಆಯಿತು ಎಂದರೆ ನೀವು ಏನು ಮಾತನಾಡುತ್ತೀರಿ ಅದೆಲ್ಲ ಸದ್ವಚನ ಆಗುತ್ತದೆ. ಯಾಕೆಂದರೆ ಒಳಗೆ ಸತ್ಯದೇವ ಇರ್ತಾನೆ. ಏನು ವಿಚಾರ ಮಾಡುತ್ತೀರಿ ಅದು ಸದ್ವಿಚಾರ, ಏನು ಕೆಲಸ ಮಾಡುತ್ತೀರಿ ಅದು ಸದಾಚಾರ. ಏನು ಭಾವಿಸುತ್ತೀರಿ ಅದು ಸದ್ಭಾವ. ಯಾಕೆಂದರೆ ದೇವರು ಎದೆಯಲ್ಲಿ ಕುಳಿತಿದ್ದಾನೆ. ನೀವು ದೇವರನ್ನು ಗುಡಿಯಲ್ಲಿ ಪೂಜೆ ಮಾಡುವವರಲ್ಲ, ಎದೆಯಲ್ಲಿಟ್ಟು ಪೂಜೆ ಮಾಡಿದರೆ ನಿಮ್ಮ ಜೀವನವೇ ಒಂದು ಆರಾಧನೆ.


ಸತ್ಯವನ್ನು ತಿಳಿದರೆ ಅದು ಜ್ಞಾನ ಮಾರ್ಗ. ಸತ್ಯವನ್ನು ನಂಬಿದರೆ ಅದು ಸತ್ಯಮಾರ್ಗ. ಸತ್ಯವನ್ನು ಆಚರಣೆ ಮಾಡಿದರೆ ಕರ್ಮ ಮಾರ್ಗ. ಇದೆಲ್ಲವನ್ನೂ ತಿಳಿದರೆ ಅದು ಮುಕ್ತಿಮಾರ್ಗ. ಸದಾಚಾರ ಎಂದರೆ ಸಂತರ ಆಚರಣೆ. ದೊಡ್ಡವರು ತಿಳಿದು ಬದುಕಿದ್ದಾರಲ್ಲ ಆ ಆಚರಣೆ. ಹಿಂದೆ ಬಹಳ ಜನ ದೊಡ್ಡದಾಗಿ ಬದುಕಿದರು. ವಿಶ್ವೇಶ್ವರಯ್ಯ ಎಷ್ಟು ದೊಡ್ಡವರಾಗಿದ್ದರು. ಕೆಆರ್‌ಎಸ್ ಅಣೆಕಟ್ಟೆ ಕಟ್ಟಿ ಮೈಸೂರು ಭಾಗವನ್ನು ನೀರಾವರಿ ಮಾಡಿದರು. ಆ ಭಾಗದ ಜನ ಈಗ ರೈಲು, ಬಸ್ಸಿನಲ್ಲಿ ಹೋಗುವಾಗ ಕಾಣುವ ತೆಂಗು, ಅಡಿಕೆ ನೋಡಿ, ಇದು ತೆಂಗು, ಇದು ಅಡಿಕೆ ಮರ ಎನ್ನುವುದಿಲ್ಲ. ಇದು ವಿಶ್ವೇಶ್ವರಯ್ಯ, ಇದು ವಿಶ್ವೇಶ್ವರಯ್ಯ ಎನ್ನುತ್ತಾರೆ. ಸತ್ಯದ ಆಚರಣೆಯಿಂದ ಅವರು ಅಷ್ಟು ದೊಡ್ಡದಾಗಿ ಬೆಳೆದರು. ನಮ್ಮ ಅಧಿಕಾರಿಗಳಿಗೆ, ನೌಕರರಿಗೆ ಯಾಕೆ ಹೀಗೆ ಮಾಡಲು ಆಗಲ್ಲ ಎಂದರೆ ಸತ್ಯದ ಆಚರಣೆಯ ಕೊರತೆ ಇದೆ. ಸತ್ಯದ ಆಚರಣೆಯಿಂದ ಸಮಾಜವನ್ನು ಕಟ್ಟಬೇಕು. ನಾವು ಭಾರತ್ ಬಂದ್, ಕರ್ನಾಟಕ ಬಂದ್ ಮಾಡುತ್ತೇವೆ. ಹೀಗಾದರೆ ದೇಶ ಉದ್ಧಾರ ಆಗೋದು ಹೇಗೆ? ಸದಾಚಾರದಿಂದ ದೇಶ ಕಟ್ಟಬೇಕು. ಮನುಷ್ಯನಲ್ಲಿ ಸದಾಚಾರ ಇರಬೇಕು, ಸದ್ಬುದ್ಧಿ ಇರಬೇಕು. ಸದ್ಭಾವ ಇರಬೇಕು. ಸದ್ವಿಚಾರ ಎಂದರೆ ಎಲ್ಲಿ ದೋಷ ಇದೆ ಎನ್ನುವುದನ್ನು ಪತ್ತೆ ಮಾಡುವುದು. ಬದುಕಿನಲ್ಲಿ ಕೆಟ್ಟದ್ದು ಒಳ್ಳೆಯದ್ದು ಎಲ್ಲವೂ ಬರತೈತಿ. ಕೆಟ್ಟದ್ದು ಬಿಟ್ಟು ಒಳ್ಳೆಯದನ್ನು ಆಯ್ಕೆ ಮಾಡಿಕೊಳ್ಳಬೇಕು. ಅದಕ್ಕೇ ಸದ್ವಿಚಾರ ಎಂದು ಕರೆಯುತ್ತಾರೆ. ❖

ಪದಬಂಧ 6035

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಚಾರ ಕೊನೆಗಿದ್ದಾಗಿನ ದುರಾದೃಷ್ಟ! (4)
3.ಅಭ್ಯಂಜನ ಮಾಡುವಾಗಿನ ಅಡ್ಡಿ ಈ ತರ ಬಂದಿದೆ! (4)
5.ಸ್ಲೇಟಿನ ಮೇಲೆ ಬರೆಯುವ ಸಾಧನ (3)
7.ನಿಯಮದಂತೆ ಕನ್ನಡಿಗ ಮಾಡಿರುವ ಎಕ್ಸ್ಚೇಂಜ್! (4)
9.ಆಕಾಶದಲ್ಲಿ ಸಂಚಾರ ಮಾಡುವವನು (5)
11.ಮಾನವುಳ್ಳ ಹೆಮ್ಮೆ! (4)
13.ನಲಿಯುತ್ತಿರುವ ರಾಷ್ಟ್ರಪಕ್ಷಿ (3)
15.ಈತ ಲೆಕ್ಕ ಬರೆಯುವವನು (4)
16.ಕೊನೆಗೆ ಮತ ಹಾಕಿ ತಿಳಿಸಿದ ಅಭಿಪ್ರಾಯ (4)

ಮೇಲಿಂದ ಕೆಳಕ್ಕೆ
2.ಸಮುದ್ರ ಜೀವಿಯಿಂದ ಉತ್ಪನ್ನವಾಗುವ ಈ ಕಠಿಣ ಪದಾರ್ಥ ನವರತ್ನಗಳಲ್ಲಿ ಒಂದೆನಿಸಿದೆ (3)
3.ಅವನಿರುವ ಭೂಮಿ (3)
4.ತನ್ಮಯನಾಗಿರುವ ಮಗ (3)
5.ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಎಂದು ವರ್ಣಿಸಿದ ಪಂಪನ ಹುಟ್ಟೂರು (4)
6.ಹೂವಿನಲ್ಲಿರುವ ಹುಡಿ (3)
7.ಲೋಹದ ಹಕ್ಕಿಯಲ್ಲಿನ ಪಯಣ (5)
8.ಮನವಿಗೊಂದು ಪರ್ಯಾಯ ಪದ (4)
10.ಜ್ಯೋತಿಶ್ಚಕ್ರದ ಹನ್ನೆರಡು ರಾಶಿಗಳಲ್ಲಿ ಒಂದು (3)
11.ಸದರದಿಂದ ಮುತ್ತಿಕ್ಕಿದ ತುಟಿ (3)
12.ಮತ್ತು ಬರಿಸುವಂಥದ್ದು (3)
14.ಬಿಡುವಿಗೊಂದು ಪರ್ಯಾಯ ಪದ(3)



6034ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮುಜಗರ 3.ಸಮಂಜಸ
5.ವಿವರ 6.ಪುಳಕ
8.ಸುಲಿಗೆ 9.ಸಂತಾಪ
10.ವರ್ಣನೆ 11.ಪಾವನ
12.ಧಿಮಾಕು 14.ಹಂತಕ
16.ಯಮಸುತ 17.ವಿತರಕ

ಮೇಲಿಂದ ಕೆಳಕ್ಕೆ:
1.ಮುಡಿಪು 2.ರವಿ
3.ಸರ 4.ಸಲಿಗೆ
7.ಕರತಾಡನ 8.ಸುವರ್ಣಸಂಧಿ
11.ಪಾನೀಯ 13.ಕುಹಕ
14.ಹಂತ 15.ಕವಿ

ಸುಡೊಕು 6419

						5		7
	2		6		7			
	6	5		4			9	1
	4				1		7	
8				2				4
	9		7			6		
9				3		4		
			4		8			9
2		4					5	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6418 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

ಆಸ್ತಿ ವಿವರ ನೀಡಿದ ನ್ಯಾಯಮೂರ್ತಿಗಳು

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಸೇರಿದಂತೆ ಹಲವು ನ್ಯಾಯಮೂರ್ತಿಗಳು ನೀಡಿರುವ ಆಸ್ತಿ ವಿವರವನ್ನು ಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಪಾರದರ್ಶಕತೆಯನ್ನು ಹೆಚ್ಚು ಮಾಡುವ ಉದ್ದೇಶದೊಂದಿಗೆ, ನ್ಯಾಯಮೂರ್ತಿಗಳ ಆಸ್ತಿಯ ಅಗತ್ಯ ವಿವರಗಳನ್ನು ಸಾರ್ವಜನಿಕಗೊಳಿಸುವ ತೀರ್ಮಾನವನ್ನು ಸುಪ್ರೀಂ ಕೋರ್ಟ್‌ನ ಪೂರ್ಣ ಪೀಠವು ಈಚೆಗೆ ತೆಗೆದುಕೊಂಡಿತ್ತು.

'ಯಾವೆಲ್ಲ ನ್ಯಾಯಮೂರ್ತಿಗಳು ತಮ್ಮ ಆಸ್ತಿ ವಿವರವನ್ನು ಈಗಾಗಲೇ ಸಲ್ಲಿಸಿದ್ದಾರೋ ಅವರಿಗೆ ಸಂಬಂಧಿಸಿದ ವಿವರ ನೀಡಲಾಗುತ್ತಿದೆ. ಇನ್ನುಳಿದ ನ್ಯಾಯಮೂರ್ತಿಗಳ ಆಸ್ತಿ ವಿವರವನ್ನು ಅವರು ಸಲ್ಲಿಸಿದ ನಂತರದಲ್ಲಿ ಬಹಿರಂಗಪಡಿಸಲಾಗುತ್ತದೆ' ಎಂದು ಕೋರ್ಟ್‌ನ ಪ್ರಕಟಣೆ ತಿಳಿಸಿದೆ. 21 ಮಂದಿ ನ್ಯಾಯಮೂರ್ತಿಗಳು ತಮ್ಮ ಆಸ್ತಿ ವಿವರ ನೀಡಿದ್ದಾರೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ

ನಿಶ್ಚಿತ ಠೇವಣಿ: ₹55.75 ಲಕ್ಷ **ಪಿಪಿಎಫ್:** ₹1.06 ಕೋಟಿ **ಜಿಪಿಎಫ್:** ₹1.77 ಕೋಟಿ
ಷೇರು: ₹14 ಸಾವಿರ ಮೌಲ್ಯದ್ದು
ಮನೆ: ದಕ್ಷಿಣ ದೆಹಲಿಯಲ್ಲಿ ಒಂದು ಫ್ಲ್ಯಾಟ್ (3 ಬಿಎಚ್‌ಕೆ), ಕಾಮನ್‌ವೆಲ್ತ್ ಕ್ರೀಡಾ ಗ್ರಾಮದಲ್ಲಿ ಒಂದು ಅಪಾರ್ಟ್‌ಮೆಂಟ್ (4 ಬಿಎಚ್‌ಕೆ), ಗುರುಗ್ರಾಮದ ಸಿಸ್ಪಾಲ್ ವಿಹಾರದಲ್ಲಿನ 4ಬಿಎಚ್‌ಕೆ ಫ್ಲ್ಯಾಟ್‌ನಲ್ಲಿ ಶೇ 56ರಷ್ಟು ಪಾಲು, ಹಿಮಾಚಲ ಪ್ರದೇಶ ಡಾಲ್‌ಹೌಸಿಯಲ್ಲಿ ಮನೆ ಮತ್ತು ಜಮೀನಿನಲ್ಲಿ ಪಾಲು.
250 ಗ್ರಾಂ ಚಿನ್ನ, 2 ಕೆ.ಜಿ. ಬೆಳ್ಳಿ (ಇವುಗಳಲ್ಲಿ ಹೆಚ್ಚಿನವು ಹಿರಿಯರಿಂದ ಬಂದವು, ಉಡುಗೊರೆಯಾಗಿ ಸಿಕ್ಕವು), ಮಾರುತಿ ಸ್ವಿಫ್ಟ್ ಕಾರು.

ನ್ಯಾಯಮೂರ್ತಿ ಬಿ.ಆರ್. ಗವಾಯಿ

ಬ್ಯಾಂಕ್ ಖಾತೆಯಲ್ಲಿ: ₹19.63 ಲಕ್ಷಕ್ಕೂ ಹೆಚ್ಚು
ಮನೆ: ಮಹಾರಾಷ್ಟ್ರದ ಅಮರಾವತಿಯಲ್ಲಿ ಒಂದು ಮನೆ (ತಂದೆಯಿಂದ ಬಂದಿದ್ದು), ಮುಂಬೈನ ಬಾಂದ್ರಾದಲ್ಲಿ ಮತ್ತು ದೆಹಲಿಯ ಡಿಫೆನ್ಸ್ ಕಾಲೊನಿಯಲ್ಲಿ ಅಪಾರ್ಟ್‌ಮೆಂಟ್‌ಗಳು, ಅಮರಾವತಿ ಮತ್ತು ನಾಗ್ಪುರದಲ್ಲಿ ಕೃಷಿ ಜಮೀನು.ಚಿನ್ನ, **ಬೆಳ್ಳಿ ಆಭರಣ:** ₹5.25 ಲಕ್ಷ (ಪತ್ನಿಯ ಹೆಸರಿನಲ್ಲಿ ₹29.70 ಲಕ್ಷ ಮೌಲ್ಯದ ಆಭರಣ)
ಠೇವಣಿ: ₹61,320

ನ್ಯಾಯಮೂರ್ತಿ ಸೂರ್ಯ ಕಾಂತ್

ಮನೆ: ಚಂಡೀಗಢದಲ್ಲಿ ಒಂದು ಮನೆ, ಪಂಚಕುಲಾದಲ್ಲಿ 13 ಎಕರೆ ಕೃಷಿ ಜಮೀನು, ಗುರುಗ್ರಾಮದಲ್ಲಿ 300 ಚದರ ಯಾರ್ಡ್ ಪ್ಲಾಟ್.
ಠೇವಣಿ: ₹4.11 ಕೋಟಿ
ಚಿನ್ನಾಭರಣ: 100 ಗ್ರಾಂ
ಮೂರು ಬೆಲೆಬಾಳುವ ವಾಚುಗಳು

ನ್ಯಾಯಮೂರ್ತಿ ಅಭಯ್ ಎಸ್. ಓಕ

ಮನೆ, ಜಮೀನು: ಠಾಣೆಯಲ್ಲಿ ಫ್ಲ್ಯಾಟ್, ಠಾಣೆಯಲ್ಲಿ ಇನ್ನೂ ಪಾಲು ಆಗದಿರುವ ಕೃಷಿ ಜಮೀನು
ನಿಶ್ಚಿತ ಠೇವಣಿ: ₹21.76 ಲಕ್ಷ
ಉಳಿತಾಯ ಖಾತೆ: ₹9.10 ಲಕ್ಷ

ನ್ಯಾಯಮೂರ್ತಿ ವಿಕ್ರಮ ನಾಥ್

ಹೂಡಿಕೆ: ₹1.5 ಕೋಟಿ
ಮನೆ: ನೊಯ್ಡಾದಲ್ಲಿ 2 ಬಿಎಚ್‌ಕೆ ಫ್ಲ್ಯಾಟ್, ಪ್ರಯಾಗರಾಜ್‌ನಲ್ಲಿ ಬಂಗಲೆ, ಕೌಶಾಂಬಿಯಲ್ಲಿ 20 ಬಿಘಾ ವಿಸ್ತೀರ್ಣದ ಕೃಷಿ ಜಮೀನು

ನ್ಯಾಯಮೂರ್ತಿ ಕೆ.ವಿ. ವಿಶ್ವನಾಥನ್

ಹೂಡಿಕೆಗಳು: ₹120 ಕೋಟಿ
ಆಸ್ತಿ: ದೆಹಲಿಯ ಸಫ್ದರ್‌ಜಂಗ್ ಅಭಿವೃದ್ಧಿ ಪ್ರದೇಶ ಮತ್ತು ಗುಲ್ಮೊಹರ್ ಪಾರ್ಕ್‌ನಲ್ಲಿ ಆಸ್ತಿ, ತಮಿಳುನಾಡಿನ ಕೊಯಮತ್ತೂರಿನಲ್ಲಿ ಅಪಾರ್ಟ್‌ಮೆಂಟ್

ಮಹಾರಾಷ್ಟ್ರದ ಒಬಿಸಿ ಮೀಸಲಾತಿ ಬಗ್ಗೆ 'ಸುಪ್ರೀಂ' ಮಾತು

ಮೀಸಲು ಹಂಚಿಕೆ ಯಾರಿಗೂ ಇಷ್ಟವಿಲ್ಲ



ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಮೀಸಲಾತಿಯ ವ್ಯವಸ್ಥೆಯನ್ನು ರೈಲಿಗೆ ಹೋಲಿಸಿರುವ ಸುಪ್ರೀಂ ಕೋರ್ಟ್, 'ರೈಲಿನ ಕಂಪಾರ್ಟ್‌ಮೆಂಟ್ ಪ್ರವೇಶಿಸಿರುವ ಜನ ಇತರರು ಅಲ್ಲಿಗೆ ಬರುವುದನ್ನು ಒಪ್ಪುವುದಿಲ್ಲ' ಎಂದು ಹೇಳಿದೆ.

ಮಹಾರಾಷ್ಟ್ರದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಒಬಿಸಿ ಸಮುದಾಯಗಳಿಗೆ ಮೀಸಲಾತಿ ನೀಡಿರುವುದನ್ನು ವಿರೋಧಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇರುವ ವಿಭಾಗೀಯ ಪೀಠವು ಈ ಮಾತು ಹೇಳಿದೆ.

ಮಹಾರಾಷ್ಟ್ರ ಸರ್ಕಾರ ರಚಿಸಿದ್ದ ಜಯಂತ ಕುಮಾರ್ ಬಂಥಿಯಾ ನೇತೃತ್ವದ ಆಯೋಗವು, ಒಬಿಸಿ ಸಮುದಾಯವು ನಿಜವಾಗಿಯೂ ರಾಜಕೀಯವಾಗಿ ಹಿಂದುಳಿದಿದೆಯೇ ಎಂಬುದನ್ನು ಪರಿಶೀಲಿಸದೆಯೇ ಆ ಸಮುದಾಯಕ್ಕೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಶೇ 27ರಷ್ಟು ಮೀಸಲಾತಿ ನೀಡಿದೆ ಎಂದು ಅರ್ಜಿದಾರ ಮಂಗೇಶ್ ಶಂಕರ್ ಸಸನೆ ಪರ ವಾದಿಸಿದ ಹಿರಿಯ ವಕೀಲ ಗೋಪಾಲ್ ಶಂಕರನಾರಾಯಣನ್ ಅವರು ಹೇಳಿದರು.

ಆಗ ಶಂಕರನಾರಾಯಣನ್ ಅವರತ್ತ ತಿರುಗಿದ ನ್ಯಾಯಮೂರ್ತಿ ಕಾಂತ್, 'ವಿಷಯ ಏನೆಂದರೆ, ಈ ದೇಶದಲ್ಲಿ ಮೀಸಲಾತಿಯು ರೈಲಿನಂತೆ ಆಗಿದೆ. ರೈಲಿನ ಕಂಪಾರ್ಟ್‌ಮೆಂಟ್ ಪ್ರವೇಶಿಸಿದವರು ಬೇರೆ ಯಾರೂ ಅಲ್ಲಿಗೆ ಬರುವುದನ್ನು ಬಯಸುವುದಿಲ್ಲ... ಇದನ್ನೇ ಅರ್ಜಿದಾರರೂ ಮಾಡುತ್ತಿದ್ದಾರೆ' ಎಂದರು.

ರಾಜಕೀಯವಾಗಿ ಹಿಂದುಳಿದಿರುವಿಕೆಯು ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಗಿಂತ ಭಿನ್ನವಾಗಿದೆ. ಒಬಿಸಿ ಸಮುದಾಯವು ರಾಜಕೀಯವಾಗಿ ಹಿಂದುಳಿದಿದೆ ಎಂದು ತಂತಾನೆ ಭಾವಿಸಲು ಆಗದು ಎಂದು ಶಂಕರನಾರಾಯಣನ್ ಹೇಳಿದರು.

'ಒಬಿಸಿ ಸಮುದಾಯಗಳಲ್ಲಿ ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವ ವರ್ಗಗಳನ್ನು ಮೀಸಲಾತಿಯ ಉದ್ದೇಶಕ್ಕಾಗಿ ಗುರುತಿಸಬೇಕು' ಎಂದು ಅವರು ವಾದಿಸಿದರು.

ಒಳಗೊಳ್ಳುವಿಕೆಯ ತತ್ವವನ್ನು ಪಾಲಿಸುವಾಗ, ಹೆಚ್ಚಿನ ವರ್ಗಗಳನ್ನು ರಾಜ್ಯಗಳು ಗುರುತಿಸಬೇಕು ಎಂದು ನ್ಯಾಯಮೂರ್ತಿ ಕಾಂತ್ ಹೇಳಿದರು. 'ಸಾಮಾಜಿಕವಾಗಿ, ರಾಜಕೀಯವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ವರ್ಗಗಳು ಇರುತ್ತವೆ. ಅವು ಸೌಲಭ್ಯಗಳಿಂದ ಏಕೆ ವಂಚಿತವಾಗಬೇಕು? ಸೌಲಭ್ಯಗಳು ನಿರ್ದಿಷ್ಟ ಕುಟುಂಬಕ್ಕೆ ಅಥವಾ ಗುಂಪಿಗೆ ಏಕೆ ಸೀಮಿತವಾಗಬೇಕು' ಎಂದು ಪ್ರಶ್ನಿಸಿದರು.

ಅರ್ಜಿಯ ಕುರಿತಾಗಿ ನೋಟಿಸ್ ಜಾರಿಗೆ ಆದೇಶಿಸಿದ ಪೀಠವು, ಸರ್ಕಾರದ ಪ್ರತಿಕ್ರಿಯೆ ಕೇಳಿದೆ. ಇದೇ ವಿಚಾರವಾಗಿ ಸಲ್ಲಿಕೆಯಾಗಿರುವ ಇತರ ಅರ್ಜಿಗಳೊಂದಿಗೆ ಈ ಅರ್ಜಿಯನ್ನು ಜೋಡಿಸುವಂತೆ ಸೂಚಿಸಿದೆ.

ಚುನಾವಣೆ ಬಗ್ಗೆ ನಾಲ್ಕು ವಾರಗಳಲ್ಲಿ ಅಧಿಸೂಚನೆ ಹೊರಡಿಸುವಂತೆ ಮಹಾರಾಷ್ಟ್ರ ಚುನಾವಣಾ ಆಯೋಗಕ್ಕೆ ಪೀಠವು ಸೂಚನೆ ನೀಡಿದೆ. ರಾಜ್ಯದ ಸ್ಥಳೀಯ ಸಂಸ್ಥೆಗಳಲ್ಲಿನ ಒಬಿಸಿ ಮೀಸಲಾತಿಗೆ ಸಂಬಂಧಿಸಿದ ಇನ್ನೊಂದು ಅರ್ಜಿಯ ವಿಚಾರಣೆ ನಡೆಸಿ ಈ ನಿರ್ದೇಶನ ನೀಡಿದೆ. ಚುನಾವಣೆಯನ್ನು ನಾಲ್ಕು ತಿಂಗಳಲ್ಲಿ ಪೂರ್ಣಗೊಳಿಸುವಂತೆಯೂ ಅದು ಸೂಚಿಸಿದೆ, ಸೂಕ್ತವಾದ ಪ್ರಕರಣಗಳಲ್ಲಿ ಹೆಚ್ಚಿನ ಸಮಯಾವಕಾಶ ಕೇಳಬಹುದು ಎಂದು ಹೇಳಿದೆ.

ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶವು ವಿಚಾರಣೆ ಹಂತದಲ್ಲಿರುವ ಅರ್ಜಿಗಳ ಬಗ್ಗೆ ಕೋರ್ಟ್ ನೀಡುವ ತೀರ್ಪಿಗೆ ಬದ್ಧವಾಗಿರಬೇಕಾಗುತ್ತದೆ.

ಪ್ರಜಾವಾಣಿ ಯುಗಾದಿ ನಾಟಕ ರಚನಾ ಸ್ಪರ್ಧೆ ಫಲಿತಾಂಶ

ಉಷಾ ಕಟ್ಟೆಮನೆಗೆ ಪ್ರಥಮ, ಚಾಂದ್ ಪಾಷಗೆ ದ್ವಿತೀಯ, ಅರೋಲಿಗೆ ತೃತೀಯ ಬಹುಮಾನ

ವೀರಲೋಕ



ಉಷಾ ಕಟ್ಟೆಮನೆ



ಚಾಂದ್ ಪಾಷ



ರಮೇಶ ಅರೋಲಿ

ಬೆಂಗಳೂರು: ಪ್ರಜಾವಾಣಿಯು ವೀರಲೋಕ ಪ್ರಕಾಶನದ ಸಹಯೋಗದಲ್ಲಿ ಆಯೋಜಿಸಿದ ಚೊಚ್ಚಲ 'ಯುಗಾದಿ ನಾಟಕ ರಚನಾ ಸ್ಪರ್ಧೆ 2025'ರ ಫಲಿತಾಂಶ ಹೀಗಿದೆ. ಉಷಾ ಕಟ್ಟೆಮನೆ ಅವರ 'ಸಲಾಂ ತಕ್ಕೋ ಕಡಲೂರ ದೊರೆಯೇ' ನಾಟಕ ಪ್ರಥಮ ಬಹುಮಾನ, ಚಾಂದ್ ಪಾಷ ಎನ್.ಎಸ್.ಅವರ 'ಮಸೀದಿಯೊಳಗೊಂದು ಹಣ್ಣು ದೀಪ' ಎರಡನೇ ಬಹುಮಾನ ಹಾಗೂ ರಮೇಶ ಅರೋಲಿ ಅವರ 'ತೀನ್ ಕಂದಿಲ್' ಮೂರನೇ ಬಹುಮಾನ ಪಡೆದುಕೊಂಡಿವೆ.

ಗೌರಿ ಚಂದ್ರಕೇಸರಿ ಅವರ 'ಕತ್ತಲು ಕುಡಿದವಳು', ಎನ್.ಎಸ್. ಶಂಕರ್ ಅವರ 'ಬಾಪೂ', ಜಗದೀಶ ಎಚ್.ಬಾಗೋಡಿ ಅವರ 'ಪ್ರತ್ಯೇಕ ಬುದ್ಧ', ಕಾವ್ಯಾ ಕಡಮೆ ಅವರ 'ಶಾಲುಮತಿ ಸಂಸ್ಥಾನ' ಹಾಗೂ ಎನ್.ಸಿ.ಮಹೇಶ್ ಅವರ 'ಅದು ಬೆಟ್ಟ ಇದು ಬೆಟ್ಟವೇ' ನಾಟಕಗಳು ತೀರ್ಪುಗಾರರ ಮೆಚ್ಚುಗೆ ಪಡೆದಿವೆ.

ನಾಟಕ ರಚನಾ ಸ್ಪರ್ಧೆಗೆ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಯಿತು. ರಂಗನಟಿ ಲಕ್ಷ್ಮಿ ಚಂದ್ರಶೇಖರ್ ಹಾಗೂ ರಂಗ ನಿರ್ದೇಶಕ ಬಿ.ಸುರೇಶ್ ತೀರ್ಪುಗಾರರಾಗಿದ್ದರು.

ಜೂನ್ 14ರಂದು ಬೆಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಬಹುಮಾನ ವಿವರ

- ಪ್ರಥಮ ಬಹುಮಾನ: ₹25,000
- ಎರಡನೇ ಬಹುಮಾನ: ₹15,000
- ಮೂರನೇ ಬಹುಮಾನ: ₹10,000
- ತೀರ್ಪುಗಾರರ ಮೆಚ್ಚುಗೆ ಪಡೆದ ಐದು ನಾಟಕಗಳಿಗೆ ತಲಾ ₹5,000

ನಾಟಕಗಳ ಕೊರತೆ ನೀಗಲಿದೆ



ಹೊಸದಾದ, ಒಳ್ಳೆಯ ಆರಂಭವಿದು. ಇಂದು ನಾಟಕ ರಚಿಸುವವರ ಸಂಖ್ಯೆ ಕಡಿಮೆಯಾಗುತ್ತಿದೆ. ನಾಟಕ ಆಡುವುದಕ್ಕೆ ಬೇಕಾದಷ್ಟು ಗುಂಪುಗಳು ಸಿದ್ಧಗೊಳ್ಳುತ್ತಿವೆ. ಹಳೇ ನಾಟಕಗಳು ಪ್ರದರ್ಶನಗೊಳ್ಳುತ್ತಿವೆ. ಈ ಸ್ಪರ್ಧೆ ಹೊಸ ರಕ್ತದ ಸಂಚಾರಕ್ಕೆ ಅನುವು ಮಾಡಿಕೊಡಲಿದೆ. ಅಂತಿಮ ಸುತ್ತಿಗೆ ಬಂದ ನಾಟಕಗಳಲ್ಲಿ ಎಲ್ಲವೂ ಉತ್ತಮ ಗುಣಮಟ್ಟದ್ದಾಗಿದ್ದವು. ವಸ್ತುವಿನ ದೃಷ್ಟಿಯಿಂದ ಪ್ರಗತಿಪರ ನಿಲುವುಳ್ಳ, ಆದರ್ಶವಾದವನ್ನು ಮುಂದಿಟ್ಟುಕೊಂಡು ಬರೆದವರು ಹಲವರಿದ್ದರು. ಧರ್ಮದ ಹೆಸರಿನಲ್ಲಿ ನಡೆಯುವ ಅನ್ಯಾಯ, ಭ್ರಷ್ಟಾಚಾರ, ರಾಜಕೀಯ ಸೇರಿದಂತೆ ಇವತ್ತಿನ ಸುತ್ತಮುತ್ತಲಿನ ಆಗುಹೋಗುಗಳನ್ನು ಚೆನ್ನಾಗಿ ಗ್ರಹಿಸಿ ನಾಟಕಗಳನ್ನು ರಚಿಸಲಾಗಿತ್ತು. ನಾಟಕಕಾರರಲ್ಲಿ ಈ ಎಲ್ಲಾ ವಿಷಯಗಳನ್ನು ಹೇಳಬೇಕು ಎನ್ನುವ ಉತ್ಕಟತೆ ಕಾಣಿಸುತ್ತಿತ್ತು. ಕೆಲವು ನಾಟಕಕಾರರಿಗೆ ರಂಗಭೂಮಿಯ ಉಪಯೋಗ ತಿಳಿದಿರಲಿಲ್ಲ. ನಾಟಕ ಬರೀ ಮಾತಿನ ಮನೆಯಾದರೆ ರಂಗಕ್ರಿಯೆ ಇರುವುದಿಲ್ಲ. ಬಹಳಷ್ಟು ನಾಟಕಗಳು ರಂಗತಂತ್ರದ ಕಡೆಯೂ ಗಮನಹರಿಸಿದ್ದವು. ಯಾರೂ ನಗರ ಜೀವನದ ಬಗ್ಗೆ ತಲೆಕೆಡಿಸಿಕೊಳ್ಳದೇ ಇದ್ದಿದ್ದು ಆಸಕ್ತಿ ಹುಟ್ಟಿಸಿತು. ಎಲ್ಲರೂ ಜನಪದದ ಹಿನ್ನೆಲೆಯಲ್ಲಿ ಬರೆದಿದ್ದರು. ಭಾಷೆ ದೃಷ್ಟಿಯಿಂದ ಉತ್ತರ ಕರ್ನಾಟಕದ ಭಾಷೆಯ ಬಳಕೆ ಗಟ್ಟಿಯಾಗಿತ್ತು. ರಂಗ ಪ್ರದರ್ಶನಕ್ಕೆ ಅರ್ಹವಾದ ಸಾಕಷ್ಟು ನಾಟಕಗಳು ಇದ್ದವು. ಇಂದು ಬೇರೆ ಭಾಷೆಯಿಂದ ಎರವಲು ಪಡೆದು ನಾಟಕ ಮಾಡುತ್ತಿದ್ದೇವೆ. ಈ ಸ್ಪರ್ಧೆಯು ಆ ಕೊರತೆಯನ್ನು ನೀಗಿಸಲಿದೆ.

ಲಕ್ಷ್ಮಿ ಚಂದ್ರಶೇಖರ್, ರಂಗ ನಟಿ

ಪ್ರಗತಿಪರ ನಿಲುವಿನ ನಾಟಕಗಳು



ಎಲ್ಲಾ ನಾಟಕಕಾರರು ರಂಗಭೂಮಿಯ, ರಂಗಭಾಷೆಯ ತಿಳಿವಳಿಕೆ ಉಳ್ಳವರಾಗಿದ್ದರು. ಜೊತೆಗೆ ನಾವು ಓದಿದ ಅಷ್ಟೂ ನಾಟಕಗಳು ಪ್ರಗತಿಪರ ನಿಲುವನ್ನು ಉಳ್ಳ ನಾಟಕಗಳಾಗಿದ್ದವು. ಸಮಕಾಲೀನ ವಿಷಯಗಳನ್ನು, ಪ್ರಶ್ನೆಗಳನ್ನು ಈ ನಾಟಕಗಳು ಪೌರಾಣಿಕ, ಐತಿಹಾಸಿಕ ನೆಲೆಯಲ್ಲಿ ಚರ್ಚೆ ಮಾಡುವ ಪ್ರಯತ್ನ ಮಾಡುತ್ತಿವೆ ಎನ್ನುವುದೇ ಸಂತೋಷ ಕೊಡುವ ವಿಷಯ. ಎಲ್ಲಾ ನಾಟಕಕಾರರೂ ಅಭಿನಂದನೆಗೆ ಅರ್ಹರು. 'ಪ್ರಜಾವಾಣಿ ದೀಪಾವಳಿ ಕಥಾ ಸ್ಪರ್ಧೆ'ಯಿಂದ ಹಲವು ಅತ್ಯುತ್ತಮ ಕಥೆಗಾರರು ಹುಟ್ಟಿಕೊಂಡಿದ್ದಾರೆ. ಗಟ್ಟಿ ನೆಲೆಯಿಂದ ನಾಟಕ ಬರೆಯುವ ಜನರು ಕಡಿಮೆ ಇದ್ದಾರೆ. ನಾಟಕ ರಚನಾ ಸ್ಪರ್ಧೆಯಿಂದ ಇಂತಹವರನ್ನು ಪ್ರೋತ್ಸಾಹಿಸುವ ಕೆಲಸವನ್ನು 'ಪ್ರಜಾವಾಣಿ' ಮಾಡುತ್ತಿರುವುದೇ ಒಳ್ಳೆಯ ನಡೆ. ಈ ನಡೆಯ ಪರಿಣಾಮ ಮತ್ತು ಫಲಿತಾಂಶ ಮುಂಬರುವ ದಿನಗಳಲ್ಲಿ ಕನ್ನಡದ ಸಾಂಸ್ಕೃತಿಕ ಲೋಕದಲ್ಲಿ ಕಾಣಲು ಸಾಧ್ಯ. ಅತ್ಯುತ್ತಮ ನಾಟಕಕಾರರು ಈ ಸ್ಪರ್ಧೆಯ ಮೂಲಕ ಬರುವಂತಾಗಲಿ. ಅವರಿಂದ ಒಟ್ಟು ಸಾಂಸ್ಕೃತಿಕ ಲೋಕ ಅರಳಲಿ, ಬೆಸಗೊಳ್ಳಲಿ ಮತ್ತು ಒಳಗೊಳ್ಳಲಿ.

ಬಿ.ಸುರೇಶ್, ರಂಗ ನಿರ್ದೇಶಕ



ಶಾಂತಿಗಾಗಿ ರ‍್ಯಾಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ಶಾಂತಿ ಸ್ಥಾಪನೆಗೆ ಒತ್ತು ನೀಡಬೇಕು ಎಂದು ಒತ್ತಾಯಿಸಿ ಲಾಹೋರ್‌ನಲ್ಲಿ ನಾಗರಿಕ ಸಮಿತಿ ಸದಸ್ಯರು ಮಂಗಳವಾರ ರ‍್ಯಾಲಿ ನಡೆಸಿದರು –ಎಎಫ್‌ಪಿ ಚಿತ್ರ

ರಾಷ್ಟ್ರೀಯ ಹಿತಾಸಕ್ತಿ ಮುಖ್ಯವಾದಾಗ ದೊಡ್ಡ ನಿರ್ಧಾರ ಸಾಧ್ಯ: ಮೋದಿ

ನವದೆಹಲಿ(ಪಿಟಿಐ): ರಾಷ್ಟ್ರೀಯ ಹಿತಾಸಕ್ತಿಗೆ ಪ್ರಾಧಾನ್ಯ ಹಾಗೂ ದೇಶದ ಸಾಮರ್ಥ್ಯದ ಮೇಲೆ ದೃಢವಾದ ನಂಬಿಕೆ ಇದ್ದಾಗ ದೊಡ್ಡ ನಿರ್ಧಾರಗಳನ್ನು ತೆಗೆದುಕೊಳ್ಳಲು, ಗುರಿ ಸಾಧನೆ ಸಾಧ್ಯವಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಪ್ರತಿಪಾದಿಸಿದ್ದಾರೆ.

ಎಬಿಪಿ ನೆಟ್‌ವರ್ಕ್ ಹಮ್ಮಿಕೊಂಡಿದ್ದ 'ಇಂಡಿಯಾ@2047' ಶೃಂಗಸಭೆಯಲ್ಲಿ ಮಾತನಾಡಿದ ಅವರು, 'ದೇಶದಲ್ಲಿನ ಪ್ರಸಕ್ತ ವಿದ್ಯಮಾನಗಳನ್ನು ಗಮನಿಸುವ ಜನರು, ಪ್ರಜಾಪ್ರಭುತ್ವದಿಂದ ಇಷ್ಟೆಲ್ಲಾ ಸಾಧ್ಯವಾಗುತ್ತಿದೆ ಎಂದು ಹೆಮ್ಮೆಯಿಂದ ಹೇಳಬಹುದು' ಎಂದರು.

'ನಮ್ಮ ಸರ್ಕಾರ ಜಿಡಿಪಿ ಕೇಂದ್ರಿತ ವಿಧಾನದ ಬದಲು 'ಜನರ ಒಟ್ಟು ಸಬಲೀಕರಣ'(ಜಿಇಪಿ) ಆಧಾರಿತ ಪ್ರಗತಿಯತ್ತ ಹೆಜ್ಜೆ ಹಾಕುತ್ತಿದೆ' ಎಂದರು.

ಸಿಂಧೂ ನದಿ ಒಪ್ಪಂದಕ್ಕೆ ತಡೆ ನೀಡಿರುವುದನ್ನು ಪ್ರಸ್ತಾಪಿಸುವ ಮೂಲಕ ಅವರು ದೊಡ್ಡ ನಿರ್ಧಾರ ತೆಗೆದುಕೊಂಡಿರುವುದನ್ನು ಉದಾಹರಿಸಿದರು.

ಉಗ್ರರ ದಾಳಿ ಸಾಧ್ಯತೆ ಕುರಿತ ವರದಿ, ಪ್ರವಾಸ ರದ್ದುಪಡಿಸಿದ್ದ ಮೋದಿ –ಖರ್ಗೆ

ಗುಪ್ತದಳ ಮಾಹಿತಿ ಸೇನೆಗೆ ನೀಡದ ಪ್ರಧಾನಿ



ಮಲ್ಲಿಕಾರ್ಜುನ ಖರ್ಗೆ

ರಾಂಚಿ (ಪಿಟಿಐ): ಕಾಶ್ಮೀರದ ಉಗ್ರರಿಂದ ದಾಳಿ ಸಾಧ್ಯತೆ ಕುರಿತು ಮೂರು ದಿನ ಮೊದಲೇ ಗುಪ್ತದಳ ವರದಿ ನೀಡಿದ್ದರೂ, ಅದನ್ನು ಭದ್ರತಾ ಪಡೆ ಮತ್ತು ಸ್ಥಳೀಯ ಪೊಲೀಸರಿಗೆ ಏಕೆ ನೀಡಿರಲಿಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಶ್ನಿಸಿದ್ದಾರೆ.

ಗುಪ್ತದಳದ ವರದಿ ಆಧರಿಸಿಯೇ ಪ್ರಧಾನಿ ಅವರ ಪ್ರವಾಸ ರದ್ದುಗೊಂಡಿತ್ತು. ಆದರೆ, ಭದ್ರತಾ ಪಡೆಗೆ ಏಕೆ ಮಾಹಿತಿ ನೀಡಿರಲಿಲ್ಲ. ಏಕೆ ಹೆಚ್ಚಿನ ಪಡೆ ನಿಯೋಜಿಸಲಿಲ್ಲ' ಎಂದು ಪ್ರಶ್ನಿಸಿದ್ದಾರೆ.

ಇಲ್ಲಿ 'ಸಂವಿಧಾನ ಉಳಿಸಿ' ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಕಾಶ್ಮೀರದಲ್ಲಿ ಅಗತ್ಯ ಭದ್ರತೆ ನಿಯೋಜಿಸದೇ ಇರುವುದರಿಂದ ಪಹಲ್ಗಾಮ್ ಕೃತ್ಯದ ಹೊಣೆಯನ್ನು ಕೇಂದ್ರವೇ ಹೊರಬೇಕು' ಎಂದರು.

'ಪಹಲ್ಗಾಮ್ ದಾಳಿಗೆ ಉತ್ತರವಾಗಿ ಪಾಕಿಸ್ತಾನದ ವಿರುದ್ಧ ಕೇಂದ್ರ ಸರ್ಕಾರ ಕೈಗೊಳ್ಳುವ ಯಾವುದೇ ಕ್ರಮಕ್ಕೆ ಕಾಂಗ್ರೆಸ್ ಬೆಂಬಲವಾಗಿ ನಿಲ್ಲಲಿದೆ. ಪಕ್ಷ, ಧರ್ಮ, ಜಾತಿಗಿಂತಲೂ ದೇಶ ದೊಡ್ಡದು' ಎಂದು ಹೇಳಿದರು.

'ಪಹಲ್ಗಾಮ್ ವಿಷಯದಲ್ಲಿ ಗುಪ್ತದಳದ ವೈಫಲ್ಯವಿದೆ ಎಂದು ಸರ್ವಪಕ್ಷಗಳ ಸಭೆಯಲ್ಲೂ ಸರ್ಕಾರ ಒಪ್ಪಿಕೊಂಡಿದೆ. ನನಗೆ ಬಂದಿರುವ ಮಾಹಿತಿ ಪ್ರಕಾರ, ಪಹಲ್ಗಾಮ್ ಘಟನೆಗೆ ಮೂರು ದಿನದ ಮುಂಚೆಯೇ ಉಗ್ರರ ದಾಳಿ ಸಾಧ್ಯತೆ ಕುರಿತು ಗುಪ್ತದಳದ ವರದಿ ಬಂದಿತ್ತು' ಎಂದು ಹೇಳಿದರು.

ದೇಶ ದುರ್ಬಲಗೊಳಿಸುವ ಹೇಳಿಕೆ –ಬಿಜೆಪಿ ಟೀಕೆ

ನವದೆಹಲಿ (ಪಿಟಿಐ): 'ಪ್ರಧಾನಿ ಅವರ ಕಾಶ್ಮೀರ ಪ್ರವಾಸ ರದ್ದು ಮತ್ತು ಪಹಲ್ಗಾಮ್ ಕೃತ್ಯ ಕುರಿತು ಖರ್ಗೆ ಅವರು ಬೇಜವಾಬ್ದಾರಿಯುತ ಹೇಳಿಕೆ ನೀಡಿದ್ದು, ಈ ಮೂಲಕ ದೇಶವನ್ನು ದುರ್ಬಲಗೊಳಿಸುತ್ತಿದ್ದಾರೆ' ಎಂದು ಬಿಜೆಪಿ ಟೀಕಿಸಿದೆ.


'ಒಂದು ಕಡೆ ಸರ್ವಪಕ್ಷಗಳ ಸಭೆಯಲ್ಲಿ ದೇಶದ ಪರ ಒಗ್ಗಟ್ಟಾಗಿದ್ದೇವೆ ಎನ್ನುತ್ತಾರೆ. ಇನ್ನೊಂದೆಡೆ, ಪಾಕಿಸ್ತಾನದ ಜೊತೆ ವಿಷಮ ಸ್ಥಿತಿ ಮೂಡುತ್ತಿರುವಾಗ ಹೀಗೆ ಹೇಳಿಕೆ ನೀಡುತ್ತಾರೆ' ಎಂದು ಬಿಜೆಪಿ ನಾಯಕ ರವಿಶಂಕರ ಪ್ರಸಾದ್ ಹೇಳಿದರು.

ಇಂತಹ ಹೇಳಿಕೆ ಮೂಲಕ ಖರ್ಗೆ ಅವರೂ ರಾಷ್ಟ್ರೀಯ ಭದ್ರತೆ ವಿಷಯದಲ್ಲಿ ವಿವಾದಿತ ಹೇಳಿಕೆ ನೀಡುವ ಪಕ್ಷದ ಬ್ರಿಗೇಡ್ ಜೊತೆಗೆ ಸೇರಿಕೊಂಡಿದ್ದಾರೆ ಎಂದು ಆರೋಪಿಸಿದರು. ಬಿಗುವಿನ ಸ್ಥಿತಿ ಮೂಡುತ್ತಿರುವಾಗ ದೇಶ ಒಗ್ಗಟ್ಟಾಗಿ ನಿಂತಿದೆ. ದೇಶವ್ಯಾಪಿ ಅಣಕು ತಾಲೀಮಿಗೆ ಸಿದ್ಧತೆ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಖರ್ಗೆ ಅವರ ಈ ಹೇಳಿಕೆ ನೋವು ಮೂಡಿಸುವಂತಹದ್ದು, ದುರದೃಷ್ಟಕರ ಎಂದು ಹೇಳಿದರು.

ವಿವಾದಿತ ಹೇಳಿಕೆಗಳನ್ನು ನೀಡದಂತೆ ಪಕ್ಷದವರನ್ನು ಖರ್ಗೆ ತಡೆಯಬೇಕಿತ್ತು. ಆದರೆ, ಬದಲಾಗಿ ಅವರು ಈ ಗುಂಪು ಸೇರಿಕೊಂಡಿದ್ದಾರೆ ಎಂದು ಹೇಳಿದರು.

> **ಉಗ್ರರ ವಿರುದ್ಧದ ಹೋರಾಟಕ್ಕೆ ಇಡೀ ದೇಶ ಪ್ರಧಾನಿ ಜೊತೆಗಿರುವಾಗ ಕಾಂಗ್ರೆಸ್ ರಾಜಕಾರಣ ಮಾಡುತ್ತಿದೆ. ಖರ್ಗೆ ಅವರ ಹೇಳಿಕೆ ಭದ್ರತಾ ಪಡೆಗಳ ನೈತಿಕ ಸ್ಥೈರ್ಯ ಕುಂದಿಸುವಂತಹದ್ದಾಗಿದೆ**
> **ಬಾಬುಲಾಲ್ ಮರಾಂಡಿ,** ಜಾರ್ಖಂಡ್ ಬಿಜೆಪಿ ಘಟಕದ ಅಧ್ಯಕ್ಷ

'ಯುದ್ಧ ಅನಿವಾರ್ಯ'



ಎಚ್‌.ಕೆ.ಪಾಟೀಲ

ಗದಗ: 'ಭಾರತ– ಪಾಕಿಸ್ತಾನ ಯುದ್ಧ ಅನಿವಾರ್ಯ. ಭಾರತ ಯುದ್ಧಕ್ಕೆ ತಯಾರಿ ನಡೆಸಿದೆ. ಯಾವುದೇ ಸನ್ನಿವೇಶ ಎದುರಿಸಲು ಮತ್ತು ಸ್ವರಕ್ಷಣೆ ತಾಲೀಮು ನಡೆಸಲು ಎಲ್ಲ ರಾಜ್ಯಗಳಿಗೆ ಕೇಂದ್ರ ಗೃಹ ಸಚಿವಾಲಯ ಸೂಚಿಸಿದೆ' ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಹೇಳಿದರು.

'ನಾವೆಲ್ಲರೂ ಯುದ್ಧಕ್ಕೆ ಸನ್ನದ್ಧರಾಗಿದ್ದೇವೆ. ಭಾರತದತ್ತ ಕಣ್ಣೆತ್ತಿ ನೋಡಿದರೆ ಸಹಿಸಲ್ಲ ಎಂಬ ಸಂದೇಶವನ್ನು ಪಾಕಿಸ್ತಾನಕ್ಕೆ ರವಾನಿಸಿದ್ದೇವೆ. ಈ ಹಿಂದೆ ಬಾಂಗ್ಲಾದೇಶ ಪ್ರತ್ಯೇಕಗೊಂಡಾಗ, ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಯಾವ ವಾತಾವರಣ ಸೃಷ್ಟಿಯಾಗಿತ್ತೋ ಅದೇ ಸ್ಥಿತಿ ಈಗಲೂ ಇದೆ' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಸೂಸೈಡ್ ಬಾಂಬ್ ಹೇಳಿಕೆಗೆ ಬದ್ಧ'



ಜಮೀರ್ ಅಹಮದ್ ಖಾನ್

ಕಲಬುರಗಿ: 'ಮೈಗೆ ಸೂಸೈಡ್ ಬಾಂಬ್ ಕಟ್ಟಿಕೊಂಡು ಯುದ್ಧಕ್ಕೆ ಹೋಗಲೂ ಸಿದ್ಧ ಎಂಬ ಹೇಳಿಕೆಗೆ ನಾನು ಈಗಲೂ ಬದ್ಧನಾಗಿದ್ದಾನೆ. ನನಗೆ ದೇಶ ಮುಖ್ಯ. ದೇಶಕ್ಕಾಗಿ ಬಲಿಯಾಗಲೂ ನಾನು ಸಿದ್ಧ' ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

'ಪಾಕ್ ವಿರುದ್ಧ ಜಮೀರ್ ಯುದ್ಧ ಮಾಡುವುದು ಬೇಡ, ಪಾಕ್ ಪರ ಘೋಷಣೆ ಕೂಗುವವರ ವಿರುದ್ಧ ಹೋರಾಡಲಿ' ಎಂದು ಬಿಜೆಪಿ ಮುಖಂಡ ಸಿ.ಟಿ. ರವಿ ನೀಡಿದ್ದ ಹೇಳಿಕೆಗೆ ಮಂಗಳವಾರ ಇಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಈಗಲೂ ನಾನು ನನ್ನ ಹೇಳಿಕೆಗೆ ನೂರಕ್ಕೆ ನೂರರಷ್ಟು ಬದ್ಧನಾಗಿದ್ದೇನೆ. ಸೂಸೈಡ್ ಬಾಂಬ್ ಕೊಡಲಿ, ಅದನ್ನು ಕಟ್ಟಿಕೊಂಡು ನಾನೇ ಹೋಗುತ್ತೇನೆ' ಎಂದು ಪುನರುಚ್ಚರಿಸಿದರು.

ಶರಾವತಿ ಯೋಜನಾ ಪ್ರದೇಶದಲ್ಲಿ ಹೈ ಅಲರ್ಟ್

ಪ್ರಜಾವಾಣಿ ವಾರ್ತೆ

ಕಾರ್ಗಲ್ (ಶಿವಮೊಗ್ಗ ಜಿಲ್ಲೆ): ಭಾರತ ಹಾಗೂ ಪಾಕಿಸ್ತಾನ ನಡುವೆ ಗಡಿಯಲ್ಲಿ ಉದ್ವಿಗ್ನ ಪರಿಸ್ಥಿತಿ ಇರುವ ಕಾರಣ ಶರಾವತಿ ಕಣಿವೆ ಯೋಜನಾ ಪ್ರದೇಶದಲ್ಲಿ ಕರ್ನಾಟಕ ವಿದ್ಯುತ್ ನಿಗಮದ (ಕೆಪಿಸಿ) ಭದ್ರತಾ ವ್ಯವಸ್ಥೆಯನ್ನು ಹೈ ಅಲರ್ಟ್ ಮಾಡಿ ಇರಿಸಲಾಗಿದೆ.

ಲಿಂಗನಮಕ್ಕಿ ಅಣೆಕಟ್ಟು, ಲಿಂಗನಮಕ್ಕಿ ಜಲವಿದ್ಯುದಾಗಾರ, ಮಹಾತ್ಮ ಗಾಂಧಿ ಮತ್ತು ಶರಾವತಿ ಜಲವಿದ್ಯುದಾಗಾರಗಳಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಕಮಾಂಡೊ ತರಬೇತಿ ಪಡೆದ ಅನುಭವಿ ಸಿಬ್ಬಂದಿ ಭದ್ರತಾ ಕಾರ್ಯಪಡೆಯ ಕಾವಲು ಇದೆ. ಎಲ್ಲ ಭದ್ರತಾ ಸಿಬ್ಬಂದಿ ಶರಾವತಿ ಕೇಂದ್ರ ಸ್ಥಾನದಲ್ಲಿಯೇ ಇರಬೇಕು. ಯಾವುದೇ ತುರ್ತು ಸಂದರ್ಭದಲ್ಲಿ ಕರ್ತವ್ಯ ನಿರ್ವಹಣೆಗೆ ಸದಾ ಸಿದ್ಧರಿರಬೇಕು ಎಂಬ ಸಂದೇಶ ನೀಡಿದ್ದಾಗಿ ಯೋಜನಾ ಪ್ರದೇಶದ ಭದ್ರತೆಯ ಹೊಣೆ ಹೊತ್ತಿರುವ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ (ಕೆಎಸ್ಐಎಸ್‌ಎಫ್) ಇನ್‌ಸ್ಪೆಕ್ಟರ್ ಬಿ.ವಿ. ಕುಮಾರ್ ಮಾಹಿತಿ ನೀಡಿದ್ದಾರೆ.

ಆದರೆ, ಮಾಕ್ ಡ್ರಿಲ್ ತಯಾರಿ ಬಗ್ಗೆ ಯಾವುದೇ ರೀತಿಯ ಆದೇಶಗಳು ಈವರೆಗೂ ದೊರೆತಿಲ್ಲ. ಮೇಲಧಿಕಾರಿಗಳ ಆದೇಶದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಶರಾವತಿ ಕಣಿವೆಯ ಭದ್ರತಾ ವಿಭಾಗದ ಮುಖ್ಯ ಎಂಜಿನಿಯರ್ ಆರ್.ರಮೇಶ್ ತಿಳಿಸಿದರು.

ಸ್ವರಕ್ಷಣೆ ತಾಲೀಮಿಗೆ ದೇಶ ಸಜ್ಜು

ಒಂದನೇ ಪುಟದಿಂದ...

'ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ನಡೆದ ನಂತರ ಪಾಕಿಸ್ತಾನದೊಂದಿಗಿನ ಸಂಘರ್ಷ ಉಲ್ಬಣಗೊಂಡಿದ್ದು, ಹೊಸ ಬಗೆಯ ಮತ್ತು ಸಂಕೀರ್ಣವಾದ ಬೆದರಿಕೆಗಳು ಎದುರಾಗುತ್ತಿವೆ. ಹೀಗಾಗಿ, ಎಲ್ಲ ರಾಜ್ಯಗಳು ಅಣಕು ತಾಲೀಮು ನಡೆಸಬೇಕು' ಎಂದು ಸಚಿವಾಲಯ ಸೂಚಿಸಿದೆ.

ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ ಮೋಹನ್ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ, ಅಣಕು ತಾಲೀಮು ಕುರಿತು ವಿಸ್ತೃತ ಚರ್ಚೆ ನಡೆಸಲಾಗಿದೆ. ದೇಶದ ನಾಗರಿಕ ಸೇವೆ ಮತ್ತು ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳು ಈ ಸಭೆಯಲ್ಲಿ ಪಾಲ್ಗೊಂಡಿದ್ದರು ಎಂದು ಮೂಲಗಳು ಹೇಳಿವೆ.

ಅಣಕು ತಾಲೀಮು ವೇಳೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆಯಲಾಗಿದೆ. ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ನಾಗರಿಕರು ತಮ್ಮ ರಕ್ಷಣೆಗೆ ಸಂಬಂಧಿಸಿದ ಕಾರ್ಯವಿಧಾನಗಳೊಂದಿಗೆ ಸನ್ನದ್ಧರಾಗಿರಬೇಕು ಎಂಬ ಉದ್ದೇಶದಿಂದ ಹಳ್ಳಿಗಳ ಮಟ್ಟದವರೆಗೂ ಅಣಕು ತಾಲೀಮು ನಡೆಸಲು ಯೋಜಿಸಲಾಗಿದೆ ಎಂದೂ ಹೇಳಿವೆ.

ರಾಜ್ಯಗಳಿಗೆ ನೀಡಲಾದ ಸೂಚನೆಗಳು

- ಅಣಕು ತಾಲೀಮಿನಲ್ಲಿ ಜನರ ಸಕ್ರಿಯ ಪಾಲ್ಗೊಳ್ಳುವಿಕೆ ಇರುವಂತೆ ನೋಡಿಕೊಳ್ಳಬೇಕು
- ವಿದ್ಯಾರ್ಥಿಗಳು, ಸರ್ಕಾರಿ ಹಾಗೂ ಖಾಸಗಿ ವಲಯದ ನೌಕರರು, ಆಸ್ಪತ್ರೆ ಸಿಬ್ಬಂದಿ, ರೈಲ್ವೆ ಮತ್ತು ಮೆಟ್ರೊ ಅಧಿಕಾರಿಗಳು ಪಾಲ್ಗೊಳ್ಳಬೇಕು
- ಪೊಲೀಸರು, ಪ್ಯಾರಾಮಿಲಿಟರಿ ಹಾಗೂ ಭದ್ರತಾ ಪಡೆಗಳ ಸಿಬ್ಬಂದಿ ಭಾಗವಹಿಸಬೇಕು
- ಶತ್ರು ರಾಷ್ಟ್ರಗಳಿಂದ ವೈಮಾನಿಕ ದಾಳಿ ನಡೆದ ಸಂದರ್ಭದಲ್ಲಿ ಎಲ್ಲ ವಿದ್ಯುತ್ ದೀಪಗಳನ್ನು ನಂದಿಸಲಾಗುತ್ತದೆ ಹಾಗೂ ಪ್ರಮುಖ ಸ್ಥಾವರ/ಘಟಕಗಳನ್ನು ಮುಚ್ಚಲಾಗುತ್ತದೆ. ಈ ಕುರಿತು ಅಣಕು ಕಾರ್ಯಾಚರಣೆ ನಡೆಸಬೇಕು
- ಕಂಟ್ರೋಲ್ ರೂಮ್‌ಗಳ ಕಾರ್ಯಾಚರಣೆ ಪರೀಕ್ಷೆ ನಡೆಸಬೇಕು, ಹಾಟ್‌ಲೈನ್ ಮತ್ತು ರೇಡಿಯೊ ಸಂವಹನವನ್ನು ವಾಯುಪಡೆಯೊಂದಿಗೆ ಸಂಪರ್ಕಿಸಬೇಕು
- ಜಿಲ್ಲಾಧಿಕಾರಿಗಳು, ಜಿಲ್ಲಾ ಮಟ್ಟದ ಪ್ರಾಧಿಕಾರಗಳು, ಗೃಹರಕ್ಷಕ ದಳ ಸಿಬ್ಬಂದಿ, ಎನ್‌ಸಿಸಿ, ಎನ್‌ಎಸ್‌ಎಸ್ ಹಾಗೂ ನೆಹರು ಯುವ ಕೇಂದ್ರ ಸಂಘಟನೆ ಕಾರ್ಯಕರ್ತರು ಪಾಲ್ಗೊಳ್ಳಬೇಕು



ಜಮ್ಮು–ಕಾಶ್ಮೀರದ ಶ್ರೀನಗರದ ದಾಲ್ ಸರೋವರದಲ್ಲಿ ಎಸ್‌ಡಿಆರ್‌ಎಫ್ ಸಿಬ್ಬಂದಿ ಮಂಗಳವಾರ ಅಣಕು ತಾಲೀಮು ನಡೆಸಿದರು –ಪಿಟಿಐ ಚಿತ್ರ

ಮಾನವಸಹಿತ ಗಗನಯಾನ 2027ಕ್ಕೆ ಮುಂದೂಡಿಕೆ

ಒಂದನೇ ಪುಟದಿಂದ...

'ಗಗನಯಾನ ಕಾರ್ಯಕ್ರಮದ ಭಾಗವಾಗಿ, ಮೊದಲ ಮಾನವರಹಿತ ಗಗನನೌಕೆಯನ್ನು ಈ ವರ್ಷಾಂತ್ಯಕ್ಕೆ ಉಡ್ಡಯನ ಮಾಡಲಾಗುತ್ತದೆ. ಮುಂದಿನ ವರ್ಷ ಮಾನವರಹಿತ ಎರಡು ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು' ಎಂದು ಹೇಳಿದರು.

'ಗಗನಯಾನಿಗಳನ್ನು ಒಳಗೊಂಡ ಮೊದಲ ಗಗನಯಾನ ಯೋಜನೆಯನ್ನು 2027ರ ಮೊದಲ ತ್ರೈಮಾಸಿಕದಲ್ಲಿ ಕಾರ್ಯಗತಗೊಳಿಸುವ ಗುರಿ ಹೊಂದಲಾಗಿದೆ. ಇದಕ್ಕೂ ಮುನ್ನ, ಮಾನವನನ್ನೇ ಹೋಲುವ 'ವ್ಯೋಮಮಿತ್ರ' ರೊಬಾಟ್‌ಅನ್ನು ಬಾಹ್ಯಾಕಾಶಕ್ಕೆ ಕಳಿಸಲಾಗುವುದು. ನಂತರ, ಗಗನಯಾನಿಗಳನ್ನು ಹೊತ್ತ ಗಗನನೌಕೆಯನ್ನು ಕೆಳ ಭೂ ಕಕ್ಷೆಗೆ ಉಡ್ಡಯನ ಮಾಡಲಾಗುತ್ತದೆ' ಎಂದು ವಿವರಿಸಿದರು.

'ಭೂಮಿಯಿಂದ 400 ಕಿ.ಮೀ ದೂರದ ಕೆಳ ಭೂಕಕ್ಷೆಗೆ ಗಗನಯಾನಿಗಳನ್ನು ಕರೆದೊಯ್ದು, ಸುರಕ್ಷಿತವಾಗಿ ಮರಳಿ ಭೂಮಿಗೆ ಕರೆತರುವುದು ಗಗನಯಾನ ಕಾರ್ಯಕ್ರಮದ ಉದ್ದೇಶ. ಇದಕ್ಕಾಗಿ 'ಪರಿಸರ ನಿಯಂತ್ರಣ ಮತ್ತು ಜೀವ ರಕ್ಷಕ ವ್ಯವಸ್ಥೆ'ಯನ್ನು (ಎನ್ವಿರಾನ್‌ಮೆಂಟ್ ಕಂಟ್ರೋಲ್ ಅಂಡ್ ಲೈಫ್ ಸಪೋರ್ಟ್ ಸಿಸ್ಟಮ್– ಇಸಿಎಲ್‌ಎಸ್‌ಎಸ್) ಅಭಿವೃದ್ಧಿಪಡಿಸಲಾಗುತ್ತಿದೆ' ಎಂದರು.



ವಿ. ನಾರಾಯಣನ್

'ಮಾನವ ಸಹಿತ ಗಗನಯಾನ ಬಹು ಸಂಕೀರ್ಣವಾದ ಯೋಜನೆ. ಇದಕ್ಕೆ ಅಗತ್ಯವಿರುವ ತಂತ್ರಜ್ಞಾನದ ಅಭಿವೃದ್ಧಿ ಶೇ 90ರಷ್ಟು ಪೂರ್ಣಗೊಂಡಿದ್ದು, ಅಂತಿಮ ಹಂತದ ಕಾರ್ಯ ನಡೆಯುತ್ತಿದೆ. ಈ ಯೋಜನೆಯಲ್ಲಿ ನಾವು ಯಶಸ್ಸು ಸಾಧಿಸಿದಲ್ಲಿ, ರಷ್ಯಾ, ಅಮೆರಿಕ ಹಾಗೂ ಚೀನಾ ನಂತರ, ಮಾನವನನ್ನು ಸ್ವತಂತ್ರವಾಗಿ ಬಾಹ್ಯಾಕಾಶಕ್ಕೆ ಕಳುಹಿಸಿದ ನಾಲ್ಕನೇ ರಾಷ್ಟ್ರ ಎಂಬ ಹೆಗ್ಗಳಿಕೆ ಭಾರತದದ್ದಾಗಲಿದೆ' ಎಂದು ಹೇಳಿದರು.

'ಉಪಗ್ರಹಗಳನ್ನು ಬೇರ್ಪಡಿಸುವ ಹಾಗೂ ಜೋಡಿಸುವ ಪ್ರಯೋಗ (ಸ್ಪೇಡೆಕ್ಸ್) ಯಶಸ್ವಿಯಾಗಿದೆ. ಸ್ಪೇಡೆಕ್ಸ್–2 ಕುರಿತು ಶೀಘ್ರವೇ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು' ಎಂದು ನಾರಾಯಣನ್ ತಿಳಿಸಿದರು.

2018ರಲ್ಲಿ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಗಗನಯಾನ ಯೋಜನೆ ಘೋಷಿಸಿದ್ದರು ಹಾಗೂ ಯೋಜನೆ ಅನುಷ್ಠಾನಕ್ಕೆ 2022ರ ಗುರಿ ನಿಗದಿ ಮಾಡಿದ್ದರು.


ದಿಲ್‌ಜಿತ್


ಪ್ರಿಯಾಂಕ ಚೋಪ್ರಾ, ನಿಕ್ ಜೋನಸ್

ರಾಜವರ್ಧನ್ ಜಾವಾ ಸವಾರಿ




ರಾಜವರ್ಧನ್

'ಕನ್ನಡದಲ್ಲಿ ಒಳ್ಳೆ ಕಂಟೆಂಟ್‌ಗಳಿವೆ. ಉತ್ತಮ ಬರಹಗಾರರಿದ್ದಾರೆ. ಅಂಥ ಕಥೆಗಳು ಸಿನಿಮಾವಾಗಬೇಕು ಎಂಬುದು ಎರಡು ವರ್ಷಗಳ ಹಿಂದಿನ ಕನಸು. ಹಾಗಾಗಿ ನಮ್ಮದೇ ಸಂಸ್ಥೆಗೆ ಚಾಲನೆ ನೀಡಿದೆ. ತಂದೆ ಡಿಂಗ್ರಿ ನಾಗರಾಜ್ ಕೂಡ ಸಿನಿಮಾ ನಿರ್ಮಾಣ ಮಾಡಿದ್ದರು. ಸಾಕಷ್ಟು ನಷ್ಟವಾಗಿ ನಂತರ ನಿರ್ಮಾಣದ ಸಹವಾಸಕ್ಕೆ ಹೋಗಲಿಲ್ಲ. ಹಾಗಂತ ಕೇವಲ ನಟನೆ ಮಾಡಿಕೊಂಡು, ಪೇಮೆಂಟ್ ತೆಗೆದುಕೊಳ್ಳುವುದಕ್ಕೆ ಸೀಮಿತವಾಗಿರಲು ಇಷ್ಟವಿಲ್ಲ. ಸಿನಿಮಾ ಎಂಬುದು ತಂಡದ ಯತ್ನ. ಸಮಾನ ಮನಸ್ಕರು ಒಂದಾದಾಗ ಒಂದೊಳ್ಳೆ ಸಿನಿಮಾ ಬರುತ್ತದೆ. ಉತ್ತಮ ಸಿನಿಮಾವನ್ನು ಜನ ಕೈಬಿಡುವುದಿಲ್ಲ ಎಂಬ ನಂಬಿಕೆ ಇದೆ' ಎಂದು ತಮ್ಮ ಹೊಸ ಕನಸು ಕುರಿತು ವಿವರಿಸಿದರು.

> ನಟ ರಾಜವರ್ಧನ್ 'ಬಾರ್ನ್ ಸ್ವಾಲೋ ಕಂಪನಿ' ಎಂಬ ನಿರ್ಮಾಣ ಸಂಸ್ಥೆಯನ್ನು ಪ್ರಾರಂಭಿಸಿದ್ದಾರೆ. ಇದರೊಂದಿಗೆ ಒಂದಷ್ಟು ಹೊಸ ಪ್ರತಿಭೆಗಳನ್ನು ಹುಟ್ಟುಹಾಕುವ ಕನಸು ಹೊಂದಿರುವ ಅವರು ತಮ್ಮ ಹೊಸ ಸಿನಿಮಾ ಕುರಿತು ಮಾಹಿತಿ ಹಂಚಿಕೊಂಡಿದ್ದಾರೆ.

ಈ ಸಂಸ್ಥೆಯಿಂದ 'ಜಾವಾ' ಸಿನಿಮಾ ಘೋಷಣೆಯಾಗಿದೆ. ದೇವ ಚಕ್ರವರ್ತಿ (ಚಂದ್ರಚೂಡ್) ಕಥೆ ಬರೆದು ನಿರ್ದೇಶಿಸುತ್ತಿದ್ದಾರೆ. ರಾಗಿಣಿ ಚಿತ್ರದ ನಾಯಕಿ. ಮೂರು ಭಾಷೆಗಳಲ್ಲಿ ನಿರ್ಮಾಣಗೊಳ್ಳುವ ಸಿನಿಮಾದಲ್ಲಿ ತೆಲುಗು, ತಮಿಳಿನ ಕಲಾವಿದರನ್ನು ಸೇರಿಸಿಕೊಳ್ಳುವ ಯೋಚನೆಯಲ್ಲಿ ಚಿತ್ರತಂಡವಿದೆ. ಚಿತ್ರೋದ್ಯಮದ ಕುರಿತಾದ ಕಥೆಯ ಎಳೆಯನ್ನು ಹೊಂದಿರುವ ಚಿತ್ರಕ್ಕೆ ಪೂರ್ಣಚಂದ್ರ ತೇಜಸ್ವಿ ಸಂಗೀತ, ಕೆ.ಎಂ.ಪ್ರಕಾಶ್ ಸಂಕಲನವಿರಲಿದೆ. ಜೂನ್‌ನಿಂದ ಚಿತ್ರೀಕರಣಕ್ಕೆ ತಂಡ ಸಿದ್ಧತೆ ನಡೆಸಿಕೊಂಡಿದೆ.

'ನಟರಾಗಿದ್ದಾಗ ಕೇವಲ ನಟನೆಗಷ್ಟೇ ಸೀಮಿತವಾಗಿರುತ್ತೇವೆ. ಕೆಲಸ ಮಾಡುತ್ತಿರುವ ಸಿನಿಮಾಗಳಲ್ಲಿ ಕೆಲವು ಅಂಶಗಳು ವರ್ಕ್ ಆಗುತ್ತಿಲ್ಲ ಎಂಬುದು ಗೊತ್ತಾಗುತ್ತಿರುತ್ತದೆ. ಎಷ್ಟೋ ಸಲ ತಪ್ಪುಗಳು ಕಣ್ಣೆದುರಿಗೆ ಕಾಣುತ್ತಿದ್ದರೂ ಹೇಳಲು ಸಾಧ್ಯವಾಗುವುದಿಲ್ಲ. ಒಂದು ತಂಡವಾಗಿ ಕೆಲಸ ಮಾಡಿದರೆ ಆ ಸಮಸ್ಯೆ ಬರುವುದಿಲ್ಲ. ಸ್ಕ್ರಿಪ್ಟ್ ಹಂತದಿಂದಲೇ ಇಲ್ಲಿ ಕೆಲಸ ಮಾಡುತ್ತೇವೆ. ಇನ್ನೂ ನಾಲ್ಕು ಕಥೆಗಳು ಸಿದ್ಧ ಇವೆ. ಹೊಸಬರ ಕಿರುಚಿತ್ರಗಳ ನಿರ್ಮಾಣ ಯೋಜನೆಯೂ ಇದೆ. ದುನಿಯಾ ಸೂರಿ ತಂಡದಲ್ಲಿ ಕೆಲಸ ಮಾಡಿರುವ ಬರಹಗಾರರು ನಮ್ಮ ಜೊತೆ ಇದ್ದಾರೆ. ಬೇರೆ ಭಾಷೆಯ ಬರಹಗಾರರೂ ಸ್ಕ್ರಿಪ್ಟ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಇವತ್ತು ಕಂಟೆಂಟ್ ಎಂಬುದೇ ಬಹಳ ಮುಖ್ಯ' ಎನ್ನುತ್ತಾರೆ ಅವರು.

'ಗಜರಾಮ', 'ಬಿಚ್ಚುಗತ್ತಿ' ಮೊದಲಾದ ಸಿನಿಮಾಗಳ ಮೂಲಕ ಗಮನ ಸೆಳೆದ ರಾಜವರ್ಧನ್ ಸದ್ಯ ತೆಲುಗು, ತಮಿಳು ಚಿತ್ರರಂಗಗಳತ್ತಲೂ ಗಮನ ಹರಿಸಿದ್ದಾರೆ. 'ಅವಕಾಶವಿಲ್ಲದೆ, ನನಗಾಗಿ ಈ ನಿರ್ಮಾಣ ಸಂಸ್ಥೆ ಪ್ರಾರಂಭಿಸಿಲ್ಲ. ನಟನಾಗಿ ಸಾಕಷ್ಟು ಅವಕಾಶಗಳಿವೆ. ಹೊಸ ಪ್ರತಿಭೆಗಳೊಂದಿಗೆ ಉತ್ತಮ ಚಿತ್ರಗಳನ್ನು ಮಾಡುವುದೇ ನಮ್ಮ ಗುರಿ. ಹಂತಹಂತವಾಗಿ ಹೊಸ ಸಿನಿಮಾಗಳನ್ನು ಪ್ರಾರಂಭಿಸುತ್ತೇವೆ. ಸಾಕಷ್ಟು ಸಿನಿಮಾಗಳು ಪ್ರಚಾರವಿಲ್ಲದೇ ಸೋತಿವೆ. ಅದರ ಪರಿಹಾರಕ್ಕೂ ಯೋಜನೆ ರೂಪಿಸುತ್ತಿದ್ದೇವೆ' ಎಂದು ಮಾತಿಗೆ ವಿರಾಮವಿತ್ತರು.

ಶೀಘ್ರದಲ್ಲೇ ತೆರೆಗೆ ಟೆರರ್


ಆದಿತ್ಯ


ಆದಿತ್ಯ ನಾಯಕರಾಗಿ ನಟಿಸಿರುವ, ರಂಜನ್ ಶಿವರಾಮ್ ನಿರ್ದೇಶನದ ಹೊಸ ಚಿತ್ರ 'ಟೆರರ್' ಬಿಡುಗಡೆಗೆ ಸಜ್ಜಾಗುತ್ತಿದೆ. ಚಿತ್ರದ ಎರಡನೇ ಹಾಡು 'ಹರ ಹರ ಮಹಾದೇವ' ಇತ್ತೀಚೆಗೆ ಬಿಡುಗಡೆಗೊಂಡಿತು.

ಸಿಲ್ಕ್ ಮಂಜು ನಿರ್ಮಾಣ ಮಾಡಿರುವ ಈ ಸಿನಿಮಾ ಇದೇ ಮಾಸಾಂತ್ಯದಲ್ಲಿ ಅಥವಾ ಜೂನ್ ಮೊದಲ ವಾರದಲ್ಲಿ ರಿಲೀಸ್ ಆಗಲಿದೆ. 'ಹರ ಹರ ಮಹಾದೇವ' ಹಾಡಿಗೆ ವಿ. ನಾಗೇಂದ್ರಪ್ರಸಾದ್ ಸಾಹಿತ್ಯ ಬರೆದಿದ್ದು, ಹರ್ಷವರ್ಧನ್ ರಾಜ್ ಸಂಗೀತ ನೀಡಿದ್ದಾರೆ.

'ಶ್ರೀನಗರ ಕಿಟ್ಟಿ, ದೇವರಾಜ್, ಶಶಿಕುಮಾರ್, ಕುಮಾರ್ ಬಂಗಾರಪ್ಪ, ಶರತ್ ಲೋಹಿತಾಶ್ವ, ಧರ್ಮ, ಕೋಟೆ ಪ್ರಭಾಕರ್ ಹೀಗೆ ಹಿರಿಯ ಹಾಗೂ ಅನುಭವಿ ಕಲಾವಿದರ ದೊಡ್ಡ ತಾರಾಬಳಗವೇ ಚಿತ್ರದಲ್ಲಿದ್ದು, ಭಿನ್ನವಾದ ಕಥೆಯನ್ನು ಸಿನಿಮಾ ಹೊಂದಿದೆ' ಎಂದಿದ್ದಾರೆ ಆದಿತ್ಯ. 'ಚಿತ್ರಕ್ಕೆ ನಾನೇ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದೇನೆ. ಸದ್ಯ ಚಿತ್ರಕ್ಕೆ ಹಿನ್ನೆಲೆ ಸಂಗೀತ ಅಳವಡಿಸಲಾಗುತ್ತಿದೆ' ಎಂದು ರಂಜನ್ ಮಾಹಿತಿ ನೀಡಿದರು.


ಮೆಟ್ ಗಾಲಾದಲ್ಲಿ ತಾರೆಯರ ಹೆಜ್ಜೆ

ನ್ಯೂಯಾರ್ಕ್‌ನ ಮೆಟ್ರೊಪಾಲಿಟನ್ ಮ್ಯೂಸಿಯಂನಲ್ಲಿ ನಡೆದ ವಿಶ್ವದ ಪ್ರತಿಷ್ಠಿತ ಮತ್ತು ಚಿತ್ತಾಕರ್ಷಕ ಫ್ಯಾಶನ್ ಶೋ ಮೆಟ್ ಗಾಲಾ 2025ರಲ್ಲಿ ಭಾರತೀಯ ಚಿತ್ರರಂಗದ ಹಲವು ಕಲಾವಿದರು ಹೆಜ್ಜೆ ಹಾಕಿದರು. ಬಾಲಿವುಡ್‌ನ ಶಾರುಕ್ ಖಾನ್, ಪಂಜಾಬಿ ಗಾಯಕ ದಿಲ್‌ಜಿತ್, ಮೊದಲ ಮಗುವಿನ ನಿರೀಕ್ಷೆಯಲ್ಲಿರುವ ನಟಿ ಕಿಯಾರ ಅಡ್ವಾಣಿ ಬ್ಲೂ ಕಾರ್ಪೆಟ್‌ನಲ್ಲಿ ಕಣ್ಮನ ಸೆಳೆಯುವ ವಿನ್ಯಾಸದ ಉಡುಪುಗಳನ್ನು ಪ್ರದರ್ಶಿಸಿದರು. ಇದು ಇವರೆಲ್ಲರ ಚೊಚ್ಚಲ ಮೆಟ್ ಗಾಲಾ. ನಟಿ ಪ್ರಿಯಾಂಕ ಚೋಪ್ರಾ ತಮ್ಮ ಪತಿ ನಿಕ್ ಜೋನಸ್ ಜೊತೆ ಕ್ಲಾಸಿಕ್ ಹಾಲಿವುಡ್ ಸ್ಟೈಲ್‌ನಲ್ಲಿ ಕಾಣಿಸಿಕೊಂಡರು. ತಮ್ಮ ನೆಲವನ್ನು ಪ್ರತಿನಿಧಿಸುತ್ತಾ ದಿಲ್‌ಜಿತ್ ಪಟಿಯಾಲದ ಮಹಾರಾಜ ಭುಪಿಂದರ್ ಸಿಂಗ್‌ಗೆ ಗೌರವ ಸಲ್ಲಿಸಿದರು. ಇನ್ನು ನಟ ಶಾರುಕ್ ಖಾನ್ ಅವರನ್ನು 'ತಾವ್ಯಾರು' ಇದೆ ಎಂದು ವಿದೇಶಿ ಮಾಧ್ಯಮದ ಪ್ರತಿನಿಧಿಯೊಬ್ಬರು ಕಾರ್ಯಕ್ರಮದಲ್ಲಿ ಕೇಳಿರುವುದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಪ್ರತ್ಯುತ್ತರವಾಗಿ 'ನಾನು ಶಾರುಕ್' ಎಂದು ಮಾತು ಪ್ರಾರಂಭಿಸಿದ ಅವರು, ತಮ್ಮ ವಸ್ತ್ರವಿನ್ಯಾಸಕ ಸಬ್ಯಸಾಚಿ ಮುಖರ್ಜಿ ಬಗ್ಗೆ ಮಾತನಾಡಿದ್ದಾರೆ. 'ಇದು ಶಾರುಕ್ ಅವರ ನಮ್ರತೆಯನ್ನು ತೋರುತ್ತದೆ' ಎಂದು ಹಲವರು ಹೇಳಿದ್ದರೆ, 'ವಿದೇಶಿ ಮಾಧ್ಯಮಗಳ ಅಜ್ಞಾನವಿದು' ಎಂದು ಹಲವರು ಕಿಡಿಕಾರಿದ್ದಾರೆ.


ಶಾರುಕ್ ಖಾನ್


ಕಿಯಾರ ಅಡ್ವಾಣಿ

ಅಮೆಜಾನ್ ಪ್ರೈಮ್‌ನಲ್ಲಿ ಅಮೃತಮತಿ


ಹರಿಪ್ರಿಯ

ನಿರ್ದೇಶಕ ಬರಗೂರು ರಾಮಚಂದ್ರಪ್ಪ ನಿರ್ದೇಶನದ 'ಅಮೃತಮತಿ' ಚಿತ್ರವು ಅಮೆಜಾನ್ ಪ್ರೈಮ್ ಒಟಿಟಿ ವೇದಿಕೆಯಲ್ಲಿ ಬಿಡುಗಡೆಯಾಗಿದೆ.

ಇಂಚರ ಪುಟ್ಟಣ್ಣ ಪ್ರೊಡಕ್ಷನ್ ಲಾಂಛನದಲ್ಲಿ ಪುಟ್ಟಣ್ಣ ಅವರು ಈ ಸಿನಿಮಾ ನಿರ್ಮಿಸಿದ್ದಾರೆ. ಚಿತ್ರವು ಹದಿಮೂರನೇ ಶತಮಾನದ ಕನ್ನಡ ಕವಿ ಜನ್ನನ 'ಯಶೋಧರ ಚರಿತ' ಕಾವ್ಯ ಪ್ರಸಂಗವನ್ನು ಆಧರಿಸಿ ರೂಪುಗೊಂಡಿದೆ. ಈ ಚಿತ್ರದಲ್ಲಿ ಮೂಲ ಕಥನವನ್ನು ಮರುಸೃಷ್ಟಿ ಮಾಡಿ ನಿರೂಪಿಸಿರುವುದು ವಿಶೇಷ. ಬರಗೂರು ಅವರು ನಿರ್ದೇಶನದ ಜೊತೆಗೆ ಚಿತ್ರಕಥೆ, ಸಂಭಾಷಣೆ ಮತ್ತು ಗೀತರಚನೆ ಮಾಡಿದ್ದಾರೆ. ನಟಿ ಹರಿಪ್ರಿಯ ಅವರು 'ಅಮೃತಮತಿ'ಯ ಪಾತ್ರದಲ್ಲಿ, ನಟ ಕಿಶೋರ್ ಅವರು 'ಯಶೋಧರ'ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸುಂದರ್‌ರಾಜ್, ಪ್ರಮೀಳಾ ಜೋಷಾಯ್, ತಿಲಕ್, ಅಂಬರೀಶ್ ಸಾರಂಗಿ, ವತ್ಸಲಾ ಮೋಹನ್, ಸುಪ್ರಿಯಾ ರಾವ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಸುರೇಶ್ ಅರಸು ಸಂಕಲನ, ನಾಗರಾಜ್ ಆದವಾನಿ ಛಾಯಾಚಿತ್ರಗ್ರಹಣ, ಶಮಿತಾ ಮಲ್ನಾಡ್ ಸಂಗೀತ ನಿರ್ದೇಶನ, ತ್ರಿಭುವನ್ ನೃತ್ಯ ಸಂಯೋಜನೆ ಚಿತ್ರಕ್ಕಿದೆ.

ನೌಕಾಪಡೆಯಿಂದ 'ಎಂಐಜಿಎಂ' ಪರೀಕ್ಷಾರ್ಥ ಪ್ರಯೋಗ ಯಶಸ್ವಿ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಘಟನೆ (ಡಿಆರ್‌ಡಿಒ) ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಿರುವ ಸಿಡಿಮದ್ದು 'ಮಲ್ಟಿ ಇನ್‌ಫ್ಲುಯೆನ್ಸ್ ಗ್ರೌಂಡ್ ಮೈನ್' (ಎಂಐಜಿಎಂ)ನ ಪರೀಕ್ಷಾರ್ಥ ಪ್ರಯೋಗವನ್ನು ಮಂಗಳವಾರ ಯಶಸ್ವಿಯಾಗಿ ನಡೆಸಲಾಗಿದೆ.

ಡಿಆರ್‌ಡಿಒ ಹಾಗೂ ನೌಕಾಪಡೆ ಜಂಟಿಯಾಗಿ ಈ ಪರೀಕ್ಷಾರ್ಥ ಪ್ರಯೋಗ ನಡೆಸಿದ್ದು, ಆಳ ಸಮುದ್ರದಲ್ಲಿ ಯುದ್ಧ ನಡೆಸುವ ಸಾಮರ್ಥ್ಯ ಸಾಬೀತುಪಡಿಸಿದಂತಾಗಿದೆ.


ಭಾರತೀಯ ನೌಕಾಪಡೆ 'ಎಂಐಜಿಎಂ'ನ ಪರೀಕ್ಷಾರ್ಥ ಪ್ರಯೋಗ ನಡೆಸಿದೆ

'ನೌಕಾಪಡೆಗೆ ಸೇರ್ಪಡೆ ಮಾಡುವುದಕ್ಕೆ ಈ ಸಿಡಿಮದ್ದು ವ್ಯವಸ್ಥೆಯು ಸಿದ್ಧವಾಗಿರುವುದನ್ನು ಈ ಪರೀಕ್ಷಾರ್ಥ ಪ್ರಯೋಗ ದೃಢೀಕರಿಸಿದೆ' ಎಂದು ಡಿಆರ್‌ಡಿಒ ಮುಖ್ಯಸ್ಥ ಹಾಗೂ ರಕ್ಷಣಾ ಇಲಾಖೆ ಕಾರ್ಯದರ್ಶಿ ಡಾ.ಸಮೀರ್ ವಿ.ಕಾಮತ್ ಹೇಳಿದ್ದಾರೆ.

'ಎಂಐಜಿಎಂ ಮುಂದಿನ ತಲೆಮಾರಿನ ಸಿಡಿಮದ್ದು. ಇದು, ರಹಸ್ಯವಾಗಿ ಕಾರ್ಯಾಚರಣೆ ನಡೆಸುವ ಹಡಗುಗಳು ಹಾಗೂ ಜಲಾಂತರ್ಗಾಮಿಗಳ ವಿರುದ್ಧದ ಕಾರ್ಯಾಚರಣೆಗೆ ಅಗತ್ಯವಿರುವ ನೌಕಾಪಡೆಯ ಸಾಮರ್ಥ್ಯವನ್ನು ಹೆಚ್ಚಿಸಲಿದೆ' ಎಂದು ನೌಕಾಪಡೆ ಮೂಲಗಳು ಹೇಳಿವೆ.

ಪ್ರಸ್ತುತ ಬಳಕೆಯಲ್ಲಿರುವ ಸಿಡಿಮದ್ದುಗಳು, ಭೌತಿಕವಾಗಿ ಸ್ಪರ್ಶವಾದಾಗ ಸ್ಫೋಟಗೊಳ್ಳುತ್ತವೆ. ಎಂಐಜಿಎಂ ಅತ್ಯಾಧುನಿಕ ಸಂದೇದಕಗಳನ್ನು ಒಳಗೊಂಡಿದ್ದು, ಶತ್ರು ರಾಷ್ಟ್ರಗಳ ಯುದ್ಧನೌಕೆಗಳ ಚಲನಚಲನಗಳನ್ನು ಬಹುದೂರದಿಂದಲೇ ಗ್ರಹಿಸಿ, ಅವುಗಳನ್ನು ನಾಶಪಡಿಸುವ ಸಾಮರ್ಥ್ಯ ಹೊಂದಿದೆ.

ಶತ್ರು ದೇಶಗಳ ಯುದ್ಧನೌಕೆ/ಜಲಾಂತರ್ಗಾಮಿಗಳ ಪ್ರೊಪೆಲರ್‌ಗಳು, ಎಂಜಿನ್‌ಗಳಿಂದ ಹೊರಡುವ ಶಬ್ದ, ಹಡಗುಗಳು 'ಎಂಐಜಿಎಂ'ಗಳ ಮೇಲೆ ಹಾದು ಹೋಗುವಾಗ, ನೀರಿನ ಒತ್ತಡದಲ್ಲಿ ಕಂಡು ಬರುವ ಬದಲಾವಣೆಯನ್ನು ಸಂವೇದಕಗಳು ಪತ್ತೆ ಹಚ್ಚಿ, ಅವುಗಳನ್ನು ನಾಶಪಡಿಸಲು ನೆರವಾಗುತ್ತವೆ ಎಂದೂ ಮೂಲಗಳು ಹೇಳಿವೆ.

ವಿಶಾಖಪಟ್ಟಣದಲ್ಲಿರುವ ನೇವಲ್ ಸೈನ್ಸ್ ಅಂಡ್ ಟೆಕ್ನಾಲಜಿಕಲ್ ಲ್ಯಾಬೊರೇಟರಿಯು ಡಿಆರ್‌ಡಿಒ ಅಂಗಸಂಸ್ಥೆಗಳಾದ ಪುಣೆಯ ಹೈಎನರ್ಜಿ ಮಟಿರಿಯಲ್ಸ್ ರಿಸರ್ಚ್ ಲ್ಯಾಬೊರೇಟರಿ, ಚಂಡೀಗಢದ ಟರ್ಮಿನಲ್ ಬ್ಯಾಲಿಸ್ಟಿಕ್ಸ್ ರಿಸರ್ಚ್ ಲ್ಯಾಬೊರೇಟರಿ, ವಿಶಾಖಪಟ್ಟಣದ ಭಾರತ್ ಡೈನಾಮಿಕ್ಸ್ ಲಿಮಿಟೆಡ್ ಹಾಗೂ ಹೈದರಾಬಾದ್‌ನ ಅಪೊಲೊ ಮೈಕ್ರೊಸಿಸ್ಟಮ್ಸ್ ಲಿಮಿಟೆಡ್ ಸಹಯೋಗದಲ್ಲಿ 'ಎಂಐಜಿಎಂ'ಅನ್ನು ಅಭಿವೃದ್ಧಿಪಡಿಸಿದೆ.

ಪ್ರವೀಣ್ ಸೂದ್ ಅವಧಿ ವಿಸ್ತರಣೆ?


ನವದೆಹಲಿ (ಪಿಟಿಐ): ಸಿಬಿಐ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ಪ್ರವೀಣ್ ಸೂದ್ ಅವರ ಅಧಿಕಾರಾವಧಿಯನ್ನು ಒಂದು ವರ್ಷ ಮುಂದುವರೆಸುವ ಬಗ್ಗೆ ಕೇಂದ್ರ ಸರ್ಕಾರ ಒಲವು ವ್ಯಕ್ತಪಡಿಸಿದೆ ಎಂದು ಮೂಲಗಳು ಹೇಳಿವೆ.

ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಸೋಮವಾರ ಸಭೆ ನಡೆದಿತ್ತು. ಈ ಸಭೆಯಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಸುಪ್ರೀಂ ಕೋರ್ಟ್‌ನ ಸಿಜೆಐ ಸಂಜೀವ್ ಖನ್ನಾ ಭಾಗವಹಿಸಿದ್ದರು.

ಸಭೆಯಲ್ಲಿ ಅಂತಿಮವಾಗಿ ಯಾವ ನಿರ್ಧಾರ ತೆಗೆದುಕೊಳ್ಳಲಾಯಿತು ಎಂಬ ಬಗ್ಗೆ ನಿಖರ ಮಾಹಿತಿಗಳಿಲ್ಲ. ಆದರೆ, ಸೂದ್ ಅವರ ಅಧಿಕಾರಾವಧಿಯನ್ನು ಒಂದು ವರ್ಷಕ್ಕೆ ವಿಸ್ತರಿಸುವ ಬಗ್ಗೆ ರಾಹುಲ್ ಗಾಂಧಿ ಅವರು ವಿರೋಧ ವ್ಯಕ್ತಪಡಿಸಿದರು ಎಂದು ತಿಳಿದುಬಂದಿದೆ.

ಪ್ರವೀಣ್ ಸೂದ್ ಅವರ ಎರಡು ವರ್ಷದ ಅಧಿಕಾರಾವಧಿಯು ಇದೇ ಮೇ 25ಕ್ಕೆ ಮುಕ್ತಾಯವಾಗಲಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,461
ಇಂದಿನ ಅಂತ್ಯ	24,379
	81
ದಿನದ ಕನಿಷ್ಠ	24,331

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹530
12 ಕ್ಕೆ	₹70
ಮೈಸೂರು	
100ಕ್ಕೆ	₹545

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಪ್ರ.ಕೆ)	₹268-536
ದ್ವಿತಳಿ (ಪ್ರ.ಕೆ)	₹346-710

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1330 (1310)
ಸೋಯಾ (ರಿಫೈನ್ಡ್)	₹1245 (1245)
ಸೂರ್ಯಕಾಂತಿ (ರಿಫೈನ್ಡ್)	₹1370 (1375)
ಪಾಮೋಲಿನ್	₹1210 (1210)

ಚಿನ್ನದ ದರ ₹2,400 ಬೆಳ್ಳಿ ₹1,800 ಏರಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ಬಂಗಾರದ ಬೆಲೆಯು ಏರಿಕೆ ಕಂಡಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ಬೆಲೆಯು ₹2,400 ಹೆಚ್ಚಳವಾಗಿದ್ದು, ₹99,750ಕ್ಕೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಧಾರಣೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿದ್ದು, ₹99,300 ಆಗಿದೆ.

ಆಭರಣ ತಯಾರಕರು ಮತ್ತು ದಾಸ್ತಾನುಗಾರರಿಂದ ಬಂಗಾರಕ್ಕೆ ಬೇಡಿಕೆ ಹೆಚ್ಚಳವಾಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಔಷಧ ಉತ್ಪನ್ನಗಳ ಮೇಲೆ ಸುಂಕ ಹೇರಿಕೆಯ ಪ್ರಸ್ತಾವ ಮಂಡಿಸಿದ್ದಾರೆ. ಅಲ್ಲದೆ, ವಿದೇಶಗಳಲ್ಲಿ ನಿರ್ಮಾಣಗೊಂಡ ಸಿನಿಮಾಗಳಿಗೆ ಶೇ 100ರಷ್ಟು ಸುಂಕ ವಿಧಿಸಲು ಮುಂದಾಗಿದೆ. ಹಾಗಾಗಿ, ಹಳದಿ ಲೋಹದ ಬೆಲೆಯು ಏರಿಕೆ ಕಂಡಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ. ಬೆಳ್ಳಿ ಧಾರಣೆಯು ಪ್ರತಿ ಕೆ.ಜಿಗೆ ₹1,800 ಹೆಚ್ಚಳವಾಗಿದ್ದು, ₹98,500 ಆಗಿದೆ.

ಮಾನವ ಅಭಿವೃದ್ಧಿ ಸೂಚ್ಯಂಕ: ದೇಶಕ್ಕೆ 130ನೇ ಸ್ಥಾನ

ಮೂರು ಸ್ಥಾನ ಜಿಗಿದ ಭಾರತ

ನವದೆಹಲಿ (ಪಿಟಿಐ): ವಿಶ್ವಸಂಸ್ಥೆಯ ಮಾನವ ಅಭಿವೃದ್ಧಿ ಕಾರ್ಯಕ್ರಮ (ಯುಎನ್‌ಡಿಪಿ) ವಿಭಾಗವು ಮಂಗಳವಾರ ಬಿಡುಗಡೆ ಮಾಡಿರುವ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ, ಭಾರತವು ಮೂರು ಸ್ಥಾನ ಮೇಲಕ್ಕೆ ಜಿಗಿದಿದೆ.

2022ರಿಂದ 2023ರ ನಡುವೆ ಮಾನವ ಅಭಿವೃದ್ಧಿ ಸೂಚ್ಯಂಕ ಮೌಲ್ಯವು 0.676ರಿಂದ 0.685ಕ್ಕೆ ಏರಿಕೆಯಾಗಿದೆ. ರ‍್ಯಾಂಕಿಂಗ್ ಪಟ್ಟಿಯಲ್ಲಿ 133ರಿಂದ 130ನೇ ಸ್ಥಾನಕ್ಕೇರಿದೆ.

ದೇಶದ ಆರೋಗ್ಯ ಮತ್ತು ಶಿಕ್ಷಣ ಅಸಮಾನತೆಯಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಆದಾಯ ಮತ್ತು ಲಿಂಗ ಅಸಮಾನತೆಯಲ್ಲೂ ಉತ್ತಮ ಸಾಧನೆ ತೋರಿದೆ. ಆದರೆ, ಭಾರತವು ಮಧ್ಯಮ ಅಭಿವೃದ್ಧಿ ಸ್ಥಾನದಲ್ಲಿಯೇ ಮುಂದುವರಿದಿದೆ ಎಂದು ಯುಎನ್‌ಡಿಪಿ ವರದಿ ವಿವರಿಸಿದೆ.

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು ಸ್ಥಾನ ಮೀಸಲಿಡುವ ಸಾಂವಿಧಾನಿಕ ತಿದ್ದುಪಡಿ ಮಸೂದೆಗೆ ಲೋಕಸಭೆ ಅಂಗೀಕಾರ ನೀಡಿದೆ. ಆದರೆ, ಮಹಿಳಾ ಕಾರ್ಮಿಕರ ಭಾಗವಹಿಸುವಿಕೆ ಮತ್ತು ರಾಜಕೀಯ ಪ್ರಾತಿನಿಧ್ಯದಲ್ಲಿ ಹಿನ್ನಡೆಯಾಗಿದೆ ಎಂದು ಹೇಳಿದೆ.

ಭಾರತದಲ್ಲಿ ಅಸಮಾನತೆಯು ಶೇ 30.7ರಷ್ಟು ತಗ್ಗಿದೆ. ದೇಶದ ಮಾನವ ಅಭಿವೃದ್ಧಿ ಸೂಚ್ಯಂಕ ಮೌಲ್ಯವು ಜಾಗತಿಕ ಮತ್ತು ದಕ್ಷಿಣ ಏಷ್ಯಾದ ಸರಾಸರಿಗೆ ಹೋಲಿಸಿದರೆ ಏರಿಕೆಯಾಗಿದೆ ಎಂದು ವರದಿ ಉಲ್ಲೇಖಿಸಿದೆ.

'ಭಾರತದ ಸಾಧನೆಯು ಗಮನಾರ್ಹವಾಗಿದೆ. ಶಾಲಾ ಕಲಿಕೆಯ ಅವಧಿ ಮತ್ತು ರಾಷ್ಟ್ರೀಯ ತಲಾದಾಯ ದಲ್ಲಿನ ಸಾಧನೆಯು ಗಣನೀಯ ಸುಧಾರಣೆ ಕಂಡಿದೆ' ಎಂದು ಭಾರತದ ಯುಎನ್‌ಡಿಪಿ ವಿಭಾಗದ ಪ್ರತಿನಿಧಿ ಏಂಜೆಲಾ ಲುಸಿಗಿ ಹೇಳಿದ್ದಾರೆ.

'ಸೂಚ್ಯಂಕ ಆರಂಭಗೊಂಡ ಅವಧಿಯಿಂದ ಇಲ್ಲಿಯವರೆಗೆ ಹೋಲಿಸಿದರೆ ಜೀವಿತಾವಧಿಯು ಗರಿಷ್ಠ ಮಟ್ಟದಲ್ಲಿ ಏರಿಕೆ ಕಂಡಿದೆ' ಎಂದಿದ್ದಾರೆ.

ಶಾಲಾ ಕಲಿಕೆ: ಶಾಲಾ ಕಲಿಕೆಯ ನಿರೀಕ್ಷಿತ ಅವಧಿಯಲ್ಲಿ ಹೆಚ್ಚಿನ ಸುಧಾರಣೆಯಾಗಿಲ್ಲ. 12.96 ವರ್ಷದಿಂದ 12.95 ವರ್ಷಕ್ಕೆ ಇಳಿದಿದೆ. ಶಾಲಾ ಕಲಿಕೆಯ ಸರಾಸರಿ ಅವಧಿಯು 6.88 ವರ್ಷ ಆಗಿದೆ (2022ರಲ್ಲಿ 6.57 ವರ್ಷ ಇತ್ತು).


ಆದರೆ, 90ರ ದಶಕದಲ್ಲಿನ ಶಿಕ್ಷಣ ವ್ಯವಸ್ಥೆಗೆ ಹೋಲಿಸಿದರೆ ಸಾಕಷ್ಟು ಸುಧಾರಣೆಯಾಗಿದೆ. ಶಿಕ್ಷಣ ಹಕ್ಕು ಕಾಯ್ದೆ, ಸಮಗ್ರ ಶಿಕ್ಷಣ ಅಭಿಯಾನ, ರಾಷ್ಟ್ರೀಯ ಶಿಕ್ಷಣ ನೀತಿ 2020 ಜಾರಿಯು ಇದಕ್ಕೆ ಸಹಕಾರಿಯಾಗಿದೆ.

ಎ.ಐ ಮುಂಚೂಣಿ



ದೇಶವು ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಅಭಿವೃದ್ಧಿಯಲ್ಲಿ ಮುಂಚೂಣಿ ಸ್ಥಾನ ಕಾಯ್ದುಕೊಂಡಿದೆ ಎಂದು ವರದಿಯು ಉಲ್ಲೇಖಿಸಿದೆ. ಎ.ಐ ಕೌಶಲ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡಿದೆ. 2019ರಲ್ಲಿ ದೇಶದಲ್ಲಿ ಎ.ಐ ಸಂಶೋಧಕರ ಸಂಖ್ಯೆ ಶೂನ್ಯ ಮಟ್ಟದಲ್ಲಿತ್ತು. ಈಗ ಶೇ 20ರಷ್ಟು ಏರಿಕೆಯಾಗಿದೆ. ಈ ವಲಯವು ಯುವಜನರಿಗೆ ಹೊಸ ಉದ್ಯೋಗ ಕಲ್ಪಿಸಲಿದೆ. ಜೊತೆಗೆ, ಉತ್ಪಾದಕತೆ ಹೆಚ್ಚಳಕ್ಕೆ ನೆರವಾಗಲಿದೆ. ಕೃಷಿ, ಆರೋಗ್ಯ ಸೇರಿ ಎಲ್ಲಾ ವಲಯಗಳಲ್ಲೂ ಈ ತಂತ್ರಜ್ಞಾನ ತಳವೂರುತ್ತಿದೆ ಎಂದು ಹೇಳಿದೆ.

13.5 ಕೋಟಿ ಜನ ಬಡತನ ಮುಕ್ತ



ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಜನ್‌ಧನ್ ಯೋಜನೆ ಸೇರಿ ಸರ್ಕಾರ ಜಾರಿಗೊಳಿಸಿರುವ ಡಿಜಿಟಲ್ ಸೇರ್ಪಡೆ ಕಾರ್ಯಕ್ರಮಗಳು ಬಡತನ ನಿರ್ಮೂಲನೆಗೆ ಹೆಚ್ಚಿನ ಕೊಡುಗೆ ನೀಡಿವೆ. 2015-16ರಿಂದ 2019-2021ರ ನಡುವೆ 13.5 ಕೋಟಿ ಜನರು ಬಹು ಆಯಾಮದ ಬಡತನ ರೇಖೆಯಿಂದ ಹೊರ ಬಂದಿದ್ದಾರೆ.



193
ಸಮೀಕ್ಷೆಗೆ ಒಳಪಟ್ಟ ಒಟ್ಟು ದೇಶಗಳು

53%
1990ರಿಂದ 2023ರ ವರೆಗೆ ದೇಶದ ಮಾನವ ಅಭಿವೃದ್ಧಿ ಸೂಚ್ಯಂಕ ಮೌಲ್ಯದ ಏರಿಕೆ ಪ್ರಮಾಣ

ತಲಾದಾಯ ನಾಲ್ಕು ಪಟ್ಟು ಏರಿಕೆ

ಭಾರತದ ಆರ್ಥಿಕ ಬೆಳವಣಿಗೆಯು ಸಾಕಷ್ಟು ಸುಧಾರಣೆಯಾಗಿದೆ. ರಾಷ್ಟ್ರೀಯ ಸರಾಸರಿ ತಲಾದಾಯವು ನಾಲ್ಕು ಪಟ್ಟು ಏರಿಕೆಯಾಗಿದೆ. 1990ರಲ್ಲಿ ತಲಾದಾಯ 2,167.22 ಡಾಲರ್ ಇತ್ತು. 2023ರಲ್ಲಿ 9,046.76 ಡಾಲರ್‌ಗೆ ಏರಿಕೆಯಾಗಿದೆ.

ಜೀವಿತಾವಧಿ ಹೆಚ್ಚಳ

ದೇಶದಲ್ಲಿ ಸರಾಸರಿ ಜೀವಿತಾವಧಿಯು 71.5 ವರ್ಷದಿಂದ 72 ವರ್ಷಕ್ಕೆ ಹೆಚ್ಚಳವಾಗಿದೆ. 1990ರಲ್ಲಿ ಭಾರತೀಯರ ಜೀವಿತಾವಧಿ 58.6 ವರ್ಷ ಇತ್ತು. ಸೂಚ್ಯಂಕ ಆರಂಭಗೊಂಡ ದಿನದಿಂದ ಇಲ್ಲಿಯವರೆಗೆ ದಾಖಲೆ ಪ್ರಮಾಣದಲ್ಲಿ ಏರಿಕೆಯಾಗಿದೆ. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ, ಆಯುಷ್ಮಾನ್ ಭಾರತ್, ಜನನಿ ಸುರಕ್ಷಾ ಯೋಜನೆ ಮತ್ತು ಪೋಷಣ್ ಅಭಿಯಾನವು ಇದಕ್ಕೆ ಬಹುದೊಡ್ಡ ಕೊಡುಗೆ ನೀಡಿವೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸಿದ್ದೇಶ್ವರ, ಹಾವೇರಿ.

- **ಪ್ರಶ್ನೆ: ನಮ್ಮದು ಗ್ರಾಮೀಣ ಪ್ರದೇಶ. ಕೃಷಿ ಹಾಗೂ ಸಣ್ಣ ಅಂಗಡಿ ವ್ಯಾಪಾರದ ಮೂಲಕ ಬದುಕು ಸಾಗಿಸುತ್ತಿದ್ದೇವೆ. ವಾರ್ಷಿಕ ಆದಾಯ ₹4 ಲಕ್ಷ. ಮನೆಯಲ್ಲಿ ನನ್ನ ಹಾಗೂ ಪತ್ನಿಯ ಹೆತ್ತವರು ಇದ್ದಾರೆ. ಅವರೆಲ್ಲಾ 60ರಿಂದ 75 ವಯಸ್ಸಿನವರು. ಅವರ ಆರೋಗ್ಯದಲ್ಲಿ ಆಗಾಗ್ಗೆ ಏರುಪೇರಾಗುತ್ತಿರುತ್ತದೆ. ಇಂತಹ ಸಂದರ್ಭದಲ್ಲಿ ಅವರ ಆರೋಗ್ಯದ ವೆಚ್ಚಕ್ಕೆ ಯಾವುದಾದರೂ ಆಸ್ಪತ್ರೆಗೆ ದಾಖಲಿಸಬೇಕಾದ ಸ್ಥಿತಿ ಬಂದರೆ ಅಷ್ಟೊಂದು ದೊಡ್ಡ ಮೊತ್ತವನ್ನು ಆಸ್ಪತ್ರೆಗೆ ಭರಿಸುವ ಸಾಮರ್ಥ್ಯ ನಮಗಿಲ್ಲ. ಇಂತಹ ಸಂದರ್ಭದಲ್ಲಿ ನಾವು ಏನು ಮಾಡಬಹುದು ಎಂಬ ಆತಂಕದಲ್ಲಿದ್ದೇವೆ. ಈ ಬಗ್ಗೆ ಮಾಹಿತಿ ನೀಡಿ.**

ಉತ್ತರ: ಮನೆಯಲ್ಲಿ ಹಿರಿಯರು ಇರುವಾಗ ವಯೋ ಸಹಜ ಕಾಯಿಲೆಗಳು ಅನಪೇಕ್ಷಿತವಾಗಿ ಬರುವುದು ಸಹಜ. ಹೀಗಿರುವಾಗ ಆತಂಕ ಬೇಡ. ಪ್ರಸ್ತುತ ಕೇಂದ್ರ ಸರ್ಕಾರದ 'ಆಯುಷ್ಮಾನ್- ಭಾರತ ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆಯಡಿ (ಎಬಿ ಪಿಎಂಜೆಎವೈ)' ನಿಮ್ಮ ತಂದೆ, ತಾಯಿ ಅಥವಾ ಹಿರಿಯ ನಾಗರಿಕರನ್ನು ಫಲಾನುಭವಿಗಳನ್ನಾಗಿ ದಾಖಲಿಸಬಹುದು.

ಈ ಯೋಜನೆಯು 2024ರ ಸೆಪ್ಟೆಂಬರ್ 11ರಿಂದ ಜಾರಿಯಲ್ಲಿದ್ದು 70 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನ ಹಿರಿಯ ನಾಗರಿಕರಿಗೆ ₹5 ಲಕ್ಷ ಮೊತ್ತದ ಪ್ರತ್ಯೇಕ ವಿಮಾ ಯೋಜನೆಯ ಪ್ರಯೋಜನ ಪಡೆಯಬಹುದು. ಒಂದು ವೇಳೆ ಕುಟುಂಬದ ಸದಸ್ಯರು ಈಗಾಗಲೇ ಯೋಜನೆಯ ಇತರೆ ಷರತ್ತುಗಳಿಗೆ ಒಳಪಟ್ಟಿದ್ದರೂ, ಹಿರಿಯ ನಾಗರಿಕರಿಗೆ ಇದು ಪ್ರತ್ಯೇಕ ಹೆಚ್ಚುವರಿ ವಿಮಾ ಯೋಜನೆಯಾಗಿದೆ. ಇದನ್ನು ಇತರೆ ಸದಸ್ಯರೊಡನೆ ಹಂಚುವ ಅವಕಾಶವಿಲ್ಲ. ಅಲ್ಲದೆ, ಯಾವುದೇ ಆರ್ಥಿಕ ಸ್ಥಿತಿಗತಿಯ ಸಂಬಂಧವಿಲ್ಲದೆ ಅವರಿಗೆ ವರ್ಷಕ್ಕೆ ₹5 ಲಕ್ಷದ ಉಚಿತ ಚಿಕಿತ್ಸಾ ವೆಚ್ಚ ಭರಿಸುವ ಸೌಲಭ್ಯ ಇದೆ.

ಈ ಯೋಜನೆಯಡಿ ಸೇರ್ಪಡೆಗೆ ಅವರ ಆಧಾರ್ ಕಾರ್ಡ್ ಮಾತ್ರ ಸಾಕು. ಇ-ಕೆವೈಸಿ ಪ್ರಕ್ರಿಯೆ ಮೂಲಕ ನೋಂದಾಯಿಸಿಕೊಂಡ ನಂತರ ಆನ್‌ಲೈನ್ ಮೂಲಕವೇ ಆಯುಷ್ಮಾನ್ ಕಾರ್ಡ್ ಪಡೆಯಬಹುದು. ಈ ಕಾರ್ಡ್ ಪಡೆದುಕೊಂಡವರು ದೇಶದಾದ್ಯಂತ ನೂರಾರು ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಪಡೆಯಬಹುದು.

ತಾವು ಕೃಷಿಕರಾಗಿ ಅಥವಾ ಚಿಕ್ಕ ವ್ಯಾಪಾರ ಮಾಡಿಕೊಂಡು ದಿನಚರಿ ಸಾಗಿಸುತ್ತಿದ್ದರೂ 70 ವರ್ಷ ದಾಟಿದ ನಾಗರಿಕರಿಗೆ ಈ ಯೋಜನೆಯಿಂದ ನಿಜವಾದ ಆರ್ಥಿಕ ಸಹಾಯ ಲಭಿಸುತ್ತದೆ.

ಗೌರಮ್ಮ, ಶಿವಮೊಗ್ಗ.

- **ಪ್ರಶ್ನೆ: ನಾನು ರಾಜ್ಯ ಸರ್ಕಾರಿ ನೌಕರಳಾಗಿದ್ದು, ಇನ್ನೂ ಎರಡು ವರ್ಷ ಸೇವಾವಧಿ ಇದೆ. ಸ್ವಂತ ಮನೆ ಖರೀದಿಸುವ ಉದ್ದೇಶ ಹೊಂದಿದ್ದೇನೆ. ನಾನೊಬ್ಬಳೇ ನಿಂತು ಮನೆ ಕಟ್ಟಿಸಲು ಸಾಧ್ಯವಾಗದ ಕಾರಣ ಕಟ್ಟಿರುವ ಮನೆಯನ್ನು ಸೇವಾವಧಿಯಲ್ಲಿ ಉಳಿಸಿರುವ ಆದಾಯದಿಂದ ಖರೀದಿಸಬೇಕೆಂದು ತೀರ್ಮಾನಿಸಿದ್ದೇನೆ. ದಾರಿಯಲ್ಲಿ ಕೆಲಸಕ್ಕೆ ಹೋಗುವಾಗ ಮನೆ ಮಾರಾಟಕ್ಕಿದೆ ಎಂಬ ಫಲಕಗಳನ್ನು ಗಮನಿಸಿರುತ್ತೇನೆ. ಕಷ್ಟಪಟ್ಟು ಉಳಿಸಿರುವ ಮೊತ್ತದಿಂದ ಸ್ವಂತ ಮನೆ ನನ್ನದಾಗ ಬೇಕೆಂಬುದು ನನ್ನ ಮಹಾದಾಸೆ. ಮಧ್ಯವರ್ತಿಗಳಿಂದಾಗಲಿ ಅಥವಾ ಯಾರಿಂದಾಗಲಿ ಹಣದ ದುರುಪಯೋಗವಾಗದೆ ಮನೆ ಖರೀದಿಸುವುದು ಹೇಗೆ? ಎಂಬ ಬಗ್ಗೆ ಮಾಹಿತಿ ನೀಡಲು ಕೋರಿಕೆ.**

ಉತ್ತರ: ಮಾಹಿತಿ ನೀಡುವ ಉದ್ದೇಶದಿಂದ ಮನೆ ಮಾರಾಟ ಮಾಡುವವರು ಅಥವಾ ಬ್ರೋಕರ್ ಮಂದಿ ಈ ರೀತಿಯ ಫಲಕ ಹಾಕಿರುತ್ತಾರೆ. ನೀವು ಇಂತಹ ಮಾಹಿತಿ ನೋಡಿದಾಗ ಮನೆ ಖರೀದಿಯ ವ್ಯವಹಾರ ನಡೆಸುವ ಮೊದಲು ಆರ್ಥಿಕ ಹಾಗೂ ಕಾನೂನು ರೀತ್ಯ ದಾಖಲೆಗಳ ಬಗ್ಗೆ ತಪಾಸಣೆ ಮಾಡುವುದು ಅನಿವಾರ್ಯ. ಇದಕ್ಕೆ ಮೊದಲ ಹಂತದಲ್ಲಿ ನೀವು ಕಾನೂನು ಸಲಹೆಯನ್ನು ಪಡೆಯಬೇಕಾದೀತು. ಈ ಅಗತ್ಯ ಕ್ರಮ ನಿಮ್ಮ ಖರೀದಿ ಮೌಲ್ಯ, ಪರಿಸರದ ಹೊಂದಾಣಿಕೆ ಇತ್ಯಾದಿ ಸಾಮಾನ್ಯ ಮುಂಜಾಗ್ರತೆಯ ಹೊರತಾಗಿ ಇರುವ ವಿಚಾರವಾಗಿದೆ.

ಬಹುತೇಕ ಸಂದರ್ಭದಲ್ಲಿ ನಗದು ವ್ಯವಹಾರದಲ್ಲೇ ಖರೀದಿ ಮೊತ್ತದ ಪಾವತಿಗೆ ಬೇಡಿಕೆ ಇಡುವ ಮಾರಾಟಗಾರರು ಇರುತ್ತಾರೆ. ಸಾಧ್ಯವಾದಷ್ಟು ಮಟ್ಟಿಗೆ ಅಂತಹ ವ್ಯವಹಾರವನ್ನು ತಿರಸ್ಕರಿಸಿ. ನೀವು ಪಾವತಿಗೆ ಒಪ್ಪಿರುವ ಮೌಲ್ಯ ನಿಮ್ಮ ಖರೀದಿ ಪತ್ರದಲ್ಲಿ ದಾಖಲಿಸುವುದು ಮತ್ತು ಅದರಂತೆ ಮುದ್ರಾಂಕ ಶುಲ್ಕ ಪಾವತಿಸುವುದು ಹೆಚ್ಚು ಸೂಕ್ತ.

ಖರೀದಿಗೂ ಮುನ್ನ ನೀವು ಕೊಂಡುಕೊಳ್ಳಲಿರುವ ಭೂ ಮಾಲೀಕರಿಂದ ಅಥವಾ ಮಾರಾಟಗಾರರಿಂದ ಸಂಬಂಧಪಟ್ಟ ಭೂಮಿಯ ದಾಖಲೆಗಳನ್ನು ನಿಮ್ಮ ವಿಶ್ವಸನೀಯ ವಕೀಲರನ್ನು ಕಂಡು ಅವರ ಮಾರ್ಗದರ್ಶನದಂತೆ ಕಾನೂನು ಸಲಹೆ ಪಡೆಯಿರಿ. ಭೂ ದಾಖಲೆಗಳ ಸತ್ಯಾಸತ್ಯತೆ, ಭೂ ಋಣರಾಹಿತ್ಯ, ಖಾತಾ ಮಾಹಿತಿ, ಕಟ್ಟಡ ಪರವಾನಗಿ, ನಕ್ಷೆ, ಕಟ್ಟಡದ ತೆರಿಗೆ ಹೀಗೆ ಇನ್ನೂ ಅನೇಕ ದಾಖಲೆಗಳನ್ನು ವಕೀಲರ ಅಗತ್ಯಕ್ಕೆ ತಕ್ಕಂತೆ ಪಡೆದು ಕಟ್ಟಡವನ್ನು ಕಾನೂನಿನ ಚೌಕಟ್ಟಿನೊಳಗೆ ಸಕ್ರಮವಾಗಿ ಕಟ್ಟಿರುವ ಬಗ್ಗೆ ಖಾತರಿ ಪಡಿಸಿಕೊಳ್ಳಿ.

ನಿಮ್ಮ ಉಳಿತಾಯದ ಮೊತ್ತದಿಂದಲೇ ಮನೆ ಖರೀದಿಸುವುದಿದ್ದರೆ ಯಾವುದೇ ತೊಂದರೆ ಇಲ್ಲ. ಆದರೆ, ನೀವು ಯಾವುದೇ ಬ್ಯಾಂಕ್‌ನ ಸಾಲಕ್ಕೆ ಮೊರೆ ಹೋಗುವುದಿದ್ದರೆ ಮೇಲೆ ತಿಳಿಸಿರುವ ದಾಖಲೆಗಳನ್ನು ಬ್ಯಾಂಕ್‌ಗೆ ನೀಡಿ ಅವರ ವಕೀಲರಿಂದ 'ಕಾನೂನು ಸಲಹೆ' ಪಡೆಯಬೇಕಾಗುತ್ತದೆ. ಜೊತೆಗೆ, 'ಕಟ್ಟಡದ ಮೌಲ್ಯಮಾಪನ' ಕೂಡ ಮಾಡಿಸಬೇಕಾಗುತ್ತದೆ. ಇದಕ್ಕಾಗಿ ಸಾಲ ನೀಡುವ ಬ್ಯಾಂಕ್‌ನಿಂದ ನಿಯುಕ್ತಿಗೊಂಡ ಎಂಜಿನಿಯರ್, ಕಟ್ಟಡ ಹಾಗೂ ಭೂ ಮೌಲ್ಯಮಾಪನ ವರದಿ ನೀಡಬೇಕಾಗುತ್ತದೆ. ಸಾಲ ಪಡೆಯುವುದಿದ್ದರೆ ನಿಮ್ಮ ಇತ್ತೀಚಿನ ಕೆಲವು ವರ್ಷಗಳ ತೆರಿಗೆ ಪಾವತಿಸಿರುವ ದಾಖಲೆ ಮತ್ತು ನೀವು ನಿವೃತ್ತಿ ಅಂಚಿನಲ್ಲಿರುವುದರಿಂದ ಭದ್ರತೆಗೆ ಜಂಟಿ ಸಾಲಗಾರರನ್ನು ಹೆಸರಿಸಿ ಸಾಲ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಸೇವಾ ಚಟುವಟಿಕೆ ಸದೃಢ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಯು ಏಪ್ರಿಲ್ ತಿಂಗಳಲ್ಲಿ ಸದೃಢಗೊಂಡಿದೆ ಎಂದು ಎಸ್ ಆ್ಯಂಡ್ ಪಿ ಮಾಸಿಕ ಸಮೀಕ್ಷೆ ವರದಿ ಮಂಗಳವಾರ ತಿಳಿಸಿದೆ.

ಮಾರ್ಚ್‌ನಲ್ಲಿ ಸೂಚ್ಯಂಕವು 58.5 ಇತ್ತು. ಏಪ್ರಿಲ್‌ನಲ್ಲಿ 58.7 ದಾಖಲಾಗಿದೆ. ಹೊಸ ಬೇಡಿಕೆಗಳ ಪ್ರಮಾಣ ಹೆಚ್ಚಿದೆ. ಇದು ದೇಶದ ಸೇವಾ ವಲಯಕ್ಕೆ ಉತ್ತೇಜನ ನೀಡಿದೆ. ಇದರಿಂದ ಸೂಚ್ಯಂಕವು ಏರಿಕೆ ಕಂಡಿದೆ ಎಂದು ತಿಳಿಸಿದೆ.

ಅಪಘಾತ: ನಗದುರಹಿತ ಚಿಕಿತ್ಸೆ ಸೌಲಭ್ಯ ಜಾರಿ

ನವದೆಹಲಿ (ಪಿಟಿಐ): ರಸ್ತೆ ಅಪಘಾತಗಳಲ್ಲಿ ಗಾಯಗೊಂಡವರಿಗೆ ₹1.50 ಲಕ್ಷದವರೆಗೆ ನಗದುರಹಿತ ಚಿಕಿತ್ಸೆ ನೀಡುವ ಯೋಜನೆಗೆ, ಕೇಂದ್ರ ಸರ್ಕಾರವು ಮಂಗಳವಾರ ಅಧಿಸೂಚನೆ ಹೊರಡಿಸಿದೆ.

ಕಳೆದ ವರ್ಷದ ಮಾರ್ಚ್ 14ರಂದು ಚಂಡೀಗಢದಲ್ಲಿ ಪ್ರಾಯೋಗಿಕವಾಗಿ ಈ ಯೋಜನೆಗೆ ಚಾಲನೆ ನೀಡಲಾಗಿತ್ತು. ನಂತರ ಆರು ರಾಜ್ಯಗಳಿಗೆ ವಿಸ್ತರಿಸಲಾಗಿತ್ತು. ಈಗ ದೇಶದಾದ್ಯಂತ ವಿಸ್ತರಣೆಗೊಂಡಿದೆ.

ಮೇ 5ರಿಂದಲೇ ರಸ್ತೆ ಅಪಘಾತದಲ್ಲಿ ಸಂತ್ರಸ್ತರಾದವರಿಗೆ ನಗದುರಹಿತ ಚಿಕಿತ್ಸಾ ಸೌಲಭ್ಯ ಅಧಿಕೃತವಾಗಿ ಜಾರಿಗೆ ಬಂದಿದೆ.

ಸರ್ಕಾರ ನಿಗದಿಪಡಿಸಿರುವ ಆಸ್ಪತ್ರೆಗಳಲ್ಲಿ ಅಪಘಾತ ಸಂಭವಿಸಿದ ದಿನದಿಂದ ಏಳು ದಿನಗಳವರೆಗೆ ಸಂತ್ರಸ್ತರಿಗೆ ಚಿಕಿತ್ಸಾ ಸೌಲಭ್ಯ ದೊರೆಯಲಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ತಿಳಿಸಿದೆ.

ಯೋಜನೆ ಜಾರಿಯ ವಿಳಂಬದ ಬಗ್ಗೆ ಇತ್ತೀಚೆಗೆ ಸುಪ್ರೀಂ ಕೋರ್ಟ್, ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತ್ತು.

ಅಪಘಾತದ ವೇಳೆ ಸಕಾಲದಲ್ಲಿ ಗಾಯಾಳುಗಳಿಗೆ ಚಿಕಿತ್ಸೆ ದೊರೆಯದಿದ್ದರೆ ಮೃತಪಡುವವರ ಸಂಖ್ಯೆ ಹೆಚ್ಚುತ್ತದೆ. ಇದನ್ನು ತಗ್ಗಿಸುವ ದೃಷ್ಟಿಯಿಂದ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಬ್ರಿಟನ್ನಿನ ಸ್ಕಾಚ್ ವಿಸ್ಕಿ, ಕಾರು ಅಗ್ಗ

ಲಂಡನ್ (ಪಿಟಿಐ): ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ) ಅಂತಿಮಗೊಂಡಿದೆ ಎಂದು ಭಾರತ ಮತ್ತು ಬ್ರಿಟನ್ ಮಂಗಳವಾರ ಹೇಳಿವೆ. ಈ ಒಪ್ಪಂದದ ಪರಿಣಾಮವಾಗಿ ಬ್ರಿಟನ್ನಿನ ಸ್ಕಾಚ್ ವಿಸ್ಕಿ ಮತ್ತು ಕಾರುಗಳು ಭಾರತದಲ್ಲಿ ಅಗ್ಗವಾಗಲಿವೆ. ಅಲ್ಲದೆ, ಬ್ರಿಟನ್ನಿನಲ್ಲಿ ಮಾರಾಟ ಆಗುವ ಭಾರತದ ಜವಳಿ ಮತ್ತು ಚರ್ಮದ ಉತ್ಪನ್ನಗಳ ಮೇಲಿನ ಸುಂಕ ಕಡಿಮೆ ಆಗಲಿದೆ.

ಎಫ್‌ಟಿಎ ಅಂತಿಮ ಆಗಿರುವುದಾಗಿ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಮತ್ತು ಭಾರತದ ಪ್ರಧಾನಿ ನರೇಂದ್ರ ಮೋದಿ ಪ್ರಕಟಿಸಿದ್ದಾರೆ. ಎರಡೂ ದೇಶಗಳ ನಡುವಿನ ಪ್ರಸ್ತಾವಿತ ದ್ವಿಪಕ್ಷೀಯ ಹೂಡಿಕೆ ಒಪ್ಪಂದ ಕುರಿತ ಮಾತುಕತೆಗಳು ಮುಂದುವರಿದಿವೆ.

ಒಪ್ಪಂದದ ಪ್ರಕಾರ ಭಾರತವು ಬ್ರಿಟನ್ನಿನ ವಿಸ್ಕಿ ಮತ್ತು ಜಿನ್ ಮೇಲಿನ ಸುಂಕವನ್ನು ಈಗಿರುವ ಶೇ 150ರ ಬದಲು ಶೇ 75ಕ್ಕೆ ತಗ್ಗಿಸಲಿದೆ. ಒಪ್ಪಂದದ ಹತ್ತನೆಯ ವರ್ಷದಲ್ಲಿ ಈ ಸುಂಕದ ಪ್ರಮಾಣವು ಶೇ 40ಕ್ಕೆ ಇಳಿಕೆ ಆಗಲಿದೆ. ಮೋಟಾರು ವಾಹನ ಉತ್ಪನ್ನಗಳ ಮೇಲಿನ ಸುಂಕವು ಈಗಿನ ಶೇ 100ರಷ್ಟರ ಬದಲು ಶೇ 10ಕ್ಕೆ ಇಳಿಕೆ ಆಗಲಿದೆ. ಆದರೆ ಇದಕ್ಕೆ ಕೋಟಾ ಮಿತಿ ಇರಲಿದೆ.

ಭಾರತದ ಶೇಕಡ 99ರಷ್ಟು ಉತ್ಪನ್ನ ವರ್ಗಗಳ ಮೇಲಿನ ತೆರಿಗೆಯು ಇಲ್ಲವಾಗಲಿದೆ. ಇದರಿಂದಾಗಿ ಭಾರತಕ್ಕೆ ಪ್ರಯೋಜನ ಆಗಲಿದೆ. ಎಫ್‌ಟಿಎ ಕಾರಣದಿಂದಾಗಿ ಎರಡೂ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರದ ಮೊತ್ತವು 2030ರ ವೇಳೆಗೆ ದುಪ್ಪಟ್ಟಾಗುವ ನಿರೀಕ್ಷೆ ಇದೆ.

ಸರ್ಕಾರದ ಮಟ್ಟದಲ್ಲಿನ ಅಂದಾಜಿನ ಪ್ರಕಾರ ಈ ಒಪ್ಪಂದದಿಂದಾಗಿ ಬ್ರಿಟನ್ನಿನ ಅರ್ಥ ವ್ಯವಸ್ಥೆಯ ಮೌಲ್ಯ 2040ರ ವೇಳೆಗೆ ವಾರ್ಷಿಕ 4.8 ಶತಕೋಟಿ ಜಿಬಿಪಿಯಷ್ಟು (ಗ್ರೇಟ್ ಬ್ರಿಟನ್ ಪೌಂಡ್) ಹೆಚ್ಚಲಿದೆ.

'ಭಾರತ ಮತ್ತು ಬ್ರಿಟನ್ ಮಹತ್ವಾಕಾಂಕ್ಷೆಯ ಹಾಗೂ ಇಬ್ಬರಿಗೂ ಅನುಕೂಲ ಆಗುವ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸಿವೆ. ಇದು ಐತಿಹಾಸಿಕ ಮೈಲಿಗಲ್ಲು...' ಎಂದು ಮೋದಿ ಅವರು ಎಕ್ಸ್ ಮೂಲಕ ತಿಳಿಸಿದ್ದಾರೆ. 'ಪ್ರಧಾನಿ ಸ್ಟಾರ್ಮರ್ ಅವರನ್ನು ಭಾರತಕ್ಕೆ ಸ್ವಾಗತಿಸುವುದನ್ನು ನಾನು ಎದುರುನೋಡುತ್ತಿದ್ದೇನೆ' ಎಂದು ಕೂಡ ಮೋದಿ ಹೇಳಿದ್ದಾರೆ.

ಐರೋಪ್ಯ ಒಕ್ಕೂಟದಿಂದ ಹೊರಬಂದ ನಂತರದಲ್ಲಿ ಬ್ರಿಟನ್ ಮಾಡಿಕೊಂಡಿರುವ ಅತಿದೊಡ್ಡ ಒಪ್ಪಂದ ಇದು ಎಂದು ಸ್ಟಾರ್ಮರ್ ಹೇಳಿದ್ದಾರೆ. ಒಪ್ಪಂದವು ಅನುಷ್ಠಾನಕ್ಕೆ ಬರುವ ಮೊದಲು ಇದಕ್ಕೆ ಬ್ರಿಟನ್ ಸಂಸತ್ತು ಅನುಮೋದನೆ ನೀಡಬೇಕಿದೆ.

ಮುಂಬೈ ಧಾರಣೆ

ಶೇಂಗಾ
06-05-2025

ಜಾವಾ 70/80(ಹೊಸ)	9500-9600
ಜಾವಾ 80/90(ಹೊಸ)	9000-9100
ದಪ್ಪ ಮಧ್ಯಪ್ರದೇಶ(ಹೊಸ)	7500-7600
ದಪ್ಪ ಗುಜರಾತ್(ಹೊಸ)	7800-7900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1320)
ಒಂದು ವಾರದ ಡೆಲಿವರಿ	13315 (1315)
ಪಾಮ್ ವಾರದ ಡೆಲಿವರಿ	1208 (1208)
ಸೂರ್ಯಕಾಂತಿ ಎಣ್ಣೆ ಕಚ್ಚಾ	1310 (1310)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹96,750 (94,750)
ಬೆಳ್ಳಿ ಕೆ.ಜಿ ₹95,900 (94,000)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ಅಡಿಕೆ ಧಾರಣೆ (₹ಗಳಲ್ಲಿ)

ಶಿವಮೊಗ್ಗ	
ಬೆಟ್ಟೆ	50109-59199
ಗೊರಬಲು	19229-33119
ರಾಶಿ	47399-56509
ಸರಕು	61129-98610
ಸಿದ್ದಾಪುರ	
ಬಿಳಿಗೋಟು	27089-33899
ಚಾಲಿ	35089-42099
ಕೋಕ	18699-24619
ಹಳೆಚಾಲಿ	39299-39299
ಕೆಂಪುಗೋಟು	21199-22619
ರಾಶಿ	43699-50399
ತಟ್ಟಿಬೆಟ್ಟೆ	29099-37699
ಶಿರಸಿ	
ಬೆಟ್ಟೆ	30096-44009
ಬಿಳಿಗೋಟು	17900-32608
ಚಾಲಿ	35208-43399
ಕೆಂಪುಗೋಟು	15656-23121
ರಾಶಿ	40909-49499
ಯಲ್ಲಾಪುರ	
ಅಪಿ	59009-65579
ಬಿಳಿಗೋಟು	14899-34801
ಚಾಲಿ	34819-43239
ಕೋಕ	6900-19699
ಕೆಂಪುಗೋಟು	15009-25969
ರಾಶಿ	40099-56499
ತಟ್ಟಿಬೆಟ್ಟೆ	28706-39399

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹28050
ಎಸಿ	₹16100
ಆರ್‌ಪಿ	₹22000
ಆರ್‌ಸಿ	₹12280


ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹192.50
ಆರ್‌ಎಸ್‌ಎಸ್-5	₹187.50
ಗುಡ್ ಲಾಟ್	₹177.50

ವಿದೇಶಿ ನಿರ್ಮಾಣದ ಚಿತ್ರಗಳ ಮೇಲೆ ಶೇ 100 ತೆರಿಗೆಗೆ ಚಿಂತನೆ –ಟ್ರಂಪ್



ನ್ಯೂಯಾರ್ಕ್ (ಎ.ಪಿ): ದೇಶದ ಹೊರಗೆ ನಿರ್ಮಾಣವಾಗುವ ಎಲ್ಲ ಚಲನಚಿತ್ರಗಳ ಮೇಲೆ ಹೊಸದಾಗಿ ಶೇ 100ರಷ್ಟು ಹೊಸ ಆಮದು ತೆರಿಗೆ ವಿಧಿಸಲು ಅಮೆರಿಕ ಚಿಂತನೆ ನಡೆಸಿದೆ.

'ವಿದೇಶಿ ನಿರ್ಮಾಣದ ಚಿತ್ರಗಳ ಮೇಲೆ ಆಮದು ತೆರಿಗೆ ವಿಧಿಸುವ ಪ್ರಕ್ರಿಯೆ ಆರಂಭಿಸಬೇಕು' ಎಂದು ವಾಣಿಜ್ಯ ಇಲಾಖೆಗೆ ಸೂಚಿಸಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಿಳಿಸಿದ್ದಾರೆ.

'ಅಮೆರಿಕದ ಚಿತ್ರ ನಿರ್ಮಾಣದ ಸಾಮರ್ಥ್ಯವನ್ನು ಇತರೆ ರಾಷ್ಟ್ರಗಳು ಕಸಿಯುತ್ತಿವೆ' ಎಂದೂ ಟ್ರಂಪ್ ಆರೋಪಿಸಿದ್ದಾರೆ.

ರಾಷ್ಟ್ರೀಯ ಭದ್ರತೆ ಕಾರಣ ಉಲ್ಲೇಖಿಸಿರುವ ಟ್ರಂಪ್ ಹೊಸದಾಗಿ ತೆರಿಗೆ ವಿಧಿಸುವ ಚಿಂತನೆಯನ್ನು ಸಮರ್ಥಿಸಿಕೊಂಡಿದ್ದಾರೆ. ಕೆಲವು ರಾಷ್ಟ್ರಗಳಲ್ಲಿ ಹೀಗೇ ಆಮದು ಸುಂಕ ವಿಧಿಸಲಾಗುತ್ತಿದೆ ಎಂದು ಹೇಳಿದ್ದಾರೆ.

'ಉದ್ದೇಶಿತ ಆಮದು ತೆರಿಗೆ ವಿಧಿಸುವ ಕುರಿತು ಚಿತ್ರೋದ್ಯಮದವರ ಜೊತೆಗೂ ಚರ್ಚೆ ನಡೆಸುತ್ತೇನೆ. ಆದರೆ, ಉದ್ದೇಶಿತ ತೆರಿಗೆಯು ಚಿತ್ರೋದ್ಯಮ, ವಿದೇಶಗಳಲ್ಲಿ ಚಿತ್ರ ನಿರ್ಮಾಣದ ಮೇಲೆ ಬೀರುವ ಪರಿಣಾಮಗಳೇನು' ಎಂಬುದು ಅಸ್ಪಷ್ಟವಾಗಿದೆ.

ಆರ್ಚರಿ ವಿಶ್ವಕಪ್: ಭಾರತ ಪಾರಮ್ಯ



ಅಭಿಷೇಕ್ ವರ್ಮಾ

ಶಾಂಘೈ (ಪಿಟಿಐ): ಭಾರತದ ಪುರುಷ ಮತ್ತು ಮಹಿಳಾ ತಂಡಗಳು ಇಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವಕಪ್ ಸ್ಟೇಜ್ 2ರ ಕಾಂಪೌಂಡ್ ವಿಭಾಗದ ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನ ಪಡೆದುಕೊಂಡವು.

ಮಂಗಳವಾರ ನಡೆದ ಪುರುಷರ ವೈಯಕ್ತಿಕ ರ‍್ಯಾಂಕಿಂಗ್ ಸುತ್ತಿನಲ್ಲಿ ಅನುಭವಿ ಅಭಿಷೇಕ್ ವರ್ಮಾ (714 ಅಂಕ) ಮತ್ತು ರಿಷಭ್ ಯಾದವ್ (713) ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದರು. ಅನುಭವಿ ಓಜಸ್ ದೇವತಾಳೆ (707) ಅಗ್ರ 10ರಲ್ಲಿ ಸ್ಥಾನ ಪಡೆದರು. ಇದರೊಂದಿಗೆ ಪುರುಷರ ತಂಡವು (2134) ರ‍್ಯಾಂಕಿಂಗ್‌ನಲ್ಲಿ ಮೊದಲ ಸ್ಥಾನದೊಂದಿಗೆ ಕ್ವಾರ್ಟರ್ ಫೈನಲ್‌ಗೆ ಮುನ್ನಡೆಯಿತು. ದಕ್ಷಿಣ ಕೊರಿಯಾ ತಂಡ (2132) ನಂತರದ ಸ್ಥಾನ ಪಡೆಯಿತು.

ಮಹಿಳಾ ವಿಭಾಗದಲ್ಲಿ ಮಧುರಾ ಧಮನ್ ಗಾಂವ್ಕರ್ 708 ಅಂಕಗಳೊಂದಿಗೆ (ಹಿಂದಿನ ಶ್ರೇಷ್ಠ 683) ವೃತ್ತಿಜೀವನದ ಅತ್ಯುತ್ತಮ ಸಾಧನೆ ಮಾಡಿದರು. ಅರ್ಹತಾ ಸುತ್ತಿನಲ್ಲಿ ಅವರು ಮೂರನೇ ಸ್ಥಾನ ಪಡೆದರು. ಅನುಭವಿ ಬಿಲ್ಗಾರ್ತಿ ಜ್ಯೋತಿ ಸುರೇಖಾ ವೆಣ್ಣಂ (705 ಅಂಕ) ಆರನೇ ಮತ್ತು ಯುವ ಬಿಲ್ಗಾರ್ತಿ ಚಕಿತಾ ತನಿಪರ್ತಿ (701) 11ನೇ ಸ್ಥಾನ ಪಡೆದರು. ಇದರೊಂದಿಗೆ ಭಾರತ ತಂಡ 2114 ಅಂಕಗಳೊಂದಿಗೆ ಅಗ್ರಸ್ಥಾನ ಪಡೆಯಿತು. ಮೆಕ್ಸಿಕೊ (2109) ಮತ್ತು ದಕ್ಷಿಣ ಕೊರಿಯಾ (2107) ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದವು.

ಭಾರತದ ಕಾಂಪೌಂಡ್ ಮಿಶ್ರ ತಂಡವು ಅರ್ಹತಾ ಸುತ್ತಿನಲ್ಲಿ ಮೊದಲ ಸ್ಥಾನ ಪಡೆದು ಈಗಾಗಲೇ ಪ್ರಿ ಕ್ವಾರ್ಟರ್ ಫೈನಲ್‌ಗೆ ನೇರ ಪ್ರವೇಶ ಪಡೆದಿವೆ. ಬುಧವಾರ ಕಾಂಪೌಂಡ್ ಎಲಿಮಿನೇಷನ್ ಸುತ್ತು ಆರಂಭವಾಗಲಿದೆ.

ರಾಷ್ಟ್ರೀಯ ಮುಕ್ತ ಚೆಸ್ ಟೂರ್ನಿ: ಕರ್ನಾಟಕದ ನಿರಂಜನ್ ರನ್ನರ್ ಅಪ್

ಶ್ಯಾಮ್ ಮುಕುಟಕ್ಕೆ 'ಕ್ಲಾಸಿಕಲ್' ಕಿರೀಟ

ಪ್ರಜಾವಾಣಿ ವಾರ್ತೆ

ಮಂಗಳೂರು: ಕೊನೆಯ ದಿನ ಪುಟಿದೆದ್ದ ಅಗ್ರ ಶ್ರೇಯಾಂಕದ ಆಟಗಾರ, ತಮಿಳುನಾಡಿನ ಶ್ಯಾಮ್ ಆರ್ ಮಂಗಳವಾರ ಮುಕ್ತಾಯಗೊಂಡ ರಾಷ್ಟ್ರೀಯ ರೇಟೆಡ್ ಮುಕ್ತ (ಕ್ಲಾಸಿಕಲ್) ಚೆಸ್ ಟೂರ್ನಿಯ ಪ್ರಶಸ್ತಿ ಮುಡಿಗೇರಿಸಿಕೊಂಡರು.

ದಕ್ಷಿಣ ಕನ್ನಡ ಜಿಲ್ಲಾ ಚೆಸ್ ಸಂಸ್ಥೆ ನಗರದ ಪುರಭವನದಲ್ಲಿ ಆಯೋಜಿಸಿದ್ದ ಟೂರ್ನಿಯ ಮೊದಲೆರಡು ದಿನ ಅಗ್ರ ಸ್ಥಾನದಲ್ಲಿದ್ದ ಶ್ಯಾಮ್ ಮೂರನೇ ದಿನವಾದ ಸೋಮವಾರ ಹಿನ್ನಡೆ ಕಂಡಿದ್ದರು. ದಕ್ಷಿಣ ಕನ್ನಡದ ಆರುಷಿ ಸೆವೆರಿನ್ ಹೆಲೆನ್ ಡಿಸಿಲ್ವ, ಲಕ್ಷಿತ್ ಬಿ.ಸಾಲಿಯಾನ್ ಮತ್ತು ರುದ್ರಾ ರಾಜೀವ ಅಗ್ರಸ್ಥಾನ ಹಂಚಿಕೊಂಡಿದ್ದರು. ಆದರೆ ಮಂಗಳವಾರ ಚೇತರಿಸಿಕೊಂಡ ಶ್ಯಾಮ್ ₹ 50 ಸಾವಿರ ಬಹುಮಾನ ಮೊತ್ತ ಮತ್ತು ಟ್ರೋಫಿ ತಮ್ಮದಾಗಿಸಿಕೊಂಡರು.

ಎಂಟು ಸುತ್ತುಗಳ ಅಂತ್ಯಕ್ಕೆ ಶ್ಯಾಮ್, ಕರ್ನಾಟಕದ ನಿರಂಜನ್ ವಾರಿಯರ್ ಮತ್ತು ಮಹಾರಾಷ್ಟ್ರದ ದರ್ಶ್ ಶೆಟ್ಟಿ ತಲಾ 7 ಪಾಯಿಂಟ್ ಕಲೆ ಹಾಕಿದರು. ಉತ್ತಮ ಟೈ ಬ್ರೇಕರ್ ಆಧಾರದಲ್ಲಿ ಶ್ಯಾಮ್ ಚಾಂಪಿಯನ್ ಪಟ್ಟ ಅಲಂಕರಿಸಿದರು. ನಿರಂಜನ್ ವಾರಿಯರ್ ರನ್ನರ್ ಅಪ್ ಆದರೆ, ದರ್ಶ್ ಶೆಟ್ಟಿ ಮೂರನೇ ಸ್ಥಾನ ಗಳಿಸಿದರು. ಇವರಿಬ್ಬರಿಗೆ ಕ್ರಮವಾಗಿ ₹ 35 ಸಾವಿರ ಮತ್ತು ₹ 25 ಸಾವಿರ ಬಹುಮಾನ ಮೊತ್ತ ಮತ್ತು ಟ್ರೋಫಿ ವಿತರಿಸಲಾಯಿತು.



ಚಾಂಪಿಯನ್ ಶ್ಯಾಮ್ ಆರ್ (ಮಧ್ಯದಲ್ಲಿರುವವರು), ರನ್ನರ್ ಅಪ್ ನಿರಂಜನ್ ವಾರಿಯರ್ (ಎಡಬದಿ) ಮತ್ತು ಮೂರನೇ ಸ್ಥಾನ ಗಳಿಸಿದ ದರ್ಶ್ ಶೆಟ್ಟಿ

ಲಕ್ಷಿತ್ ಬಿ.ಸಾಲಿಯಾನ್, ಕರ್ನಾಟಕದ ರವಿಗೋಪಾಲ್ ಹೆಗ್ಡೆ ಹಾಗೂ ಡಿಫೆನ್ಸ್ ಅಕೌಂಟ್ಸ್ ಸ್ಪೋರ್ಟ್ಸ್ ಕಂಟ್ರೋಲ್ ಬೋರ್ಡ್‌ನ ಪ್ರದೀಪ್ ತಿವಾರಿ ತಲಾ 6.5 ಪಾಯಿಂಟ್ ಗಳಿಸಿದರು. ಇವರಿಗೆ ಕ್ರಮವಾಗಿ 4, 5 ಮತ್ತು 6ನೇ ಸ್ಥಾನ ಲಭಿಸಿತು. ಆರುಷಿ ಸೆವೆರಿನ್ 6 ಪಾಯಿಂಟ್‌ಗಳೊಂದಿಗೆ 8ನೇ ಸ್ಥಾನ ಗಳಿಸಿದರೆ ರುದ್ರಾ ರಾಜೀವ್ 5.5 ಪಾಯಿಂಟ್‌ಗಳೊಂದಿಗೆ 14ನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು. ವಿವಿಧ ವಿಭಾಗಗಳಲ್ಲಿ ಒಟ್ಟು ₹ 6 ಲಕ್ಷ ಮೊತ್ತದ ಬಹುಮಾನ ವಿತರಿಸಲಾಯಿತು.

ರೋಚಕ ಕೊನೆಯ ಎರಡು ಸುತ್ತು: ಮಂಗಳವಾರ ನಡೆದ ಏಳು ಮತ್ತು ಎಂಟನೇ ಸುತ್ತುಗಳು ರೋಚಕ ಹೋರಾಟಗಳಿಗೆ ಸಾಕ್ಷಿಯಾದವು. ರುದ್ರ ರಾಜೀವ್ ವಿರುದ್ಧ ಶ್ಯಾಮ್ ಜಯ ಗಳಿಸಿ ಭರವಸೆ ಮೂಡಿಸಿದರು. ಕೊನೆಯ ಸುತ್ತಿನಲ್ಲಿ ಸ್ಥಳೀಯ ಆಟಗಾರ ರವೀಶ್ ಕೋಟೆ ಅವರನ್ನು ಮಣಿಸಿದ ಶ್ಯಾಮ್ 6 ಜಯ ಮತ್ತು 2 ಡ್ರಾದೊಂದಿಗೆ ಅಜೇಯರಾಗಿ ಉಳಿದು ಪ್ರಶಸ್ತಿಗೆ ಮುತ್ತಿಕ್ಕಿದರು.

ಹಿಮಾಂಶು ಮೌದ್ಗಿಲ್ ಎದುರು ಏಳನೇ ಸುತ್ತಿನಲ್ಲಿ ಜಯ ಗಳಿಸಿದ ನಿರಂಜನ್ ವಾರಿಯರ್ ಅಂತಿಮ ಸುತ್ತಿನಲ್ಲಿ ಅರುಷಿ ಹೆಲೆನ್‌ಗೆ ಸೋಲುಣಿಸಿ ಅಜೇಯ ಓಟದೊಂದಿಗೆ ದ್ವಿತೀಯ ಸ್ಥಾನ ಗಳಿಸಿದರು. ಏಳನೇ ಸುತ್ತಿನಲ್ಲಿ ಮುಖಾಮುಖಿಯಾದ ಆರುಷಿ ಹೆಲೆನ್ ಮತ್ತು ಲಕ್ಷಿತ್ ಸಾಲಿಯಾನ್ ಡ್ರಾ ಮಾಡಿಕೊಂಡರು. ಲಕ್ಷಿತ್ ಕೊನೆಯ ಸುತ್ತಿನಲ್ಲೂ ಡ್ರಾಗೆ ಸಮಾಧಾನಪಟ್ಟುಕೊಳ್ಳಬೇಕಾಯಿತು. ಅವರಿಗೆ ಭಾರಿ ಸವಾಲೊಡ್ಡಿದ ಕರ್ನಾಟಕದ ಅನೀಶ್ ಅಡಿಗ 12ನೇ ಸ್ಥಾನ ಗಳಿಸಿದರು.

ವಾಂಖೆಡೆಯಲ್ಲಿ ಮಳೆಯ ಆಟ: ಮುಂಬೈ ತಂಡದ ಗೆಲುವಿನ ಓಟಕ್ಕೆ ತಡೆ

ಗುಜರಾತ್‌ಗೆ ರೋಚಕ ಜಯ

ಮುಂಬೈ (ಪಿಟಿಐ): ತಿರುವುಗಳನ್ನು ಕಂಡ ರೋಚಕ ಐಪಿಎಲ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡ ಮಂಗಳವಾರ ಡಕ್ವರ್ಥ್ ಲೂಯಿಸ್ ನಿಯಮದ (ಡಿಎಲ್‌ಎಸ್) ಆಧಾರದಲ್ಲಿ ಮೂರು ವಿಕೆಟ್‌ಗಳಿಂದ ಮುಂಬೈ ಇಂಡಿಯನ್ಸ್ ತಂಡವನ್ನು ಸೋಲಿಸಿತು.

ಈ ಗೆಲುವಿನೊಂದಿಗೆ ಶುಭಮನ್ ಗಿಲ್ ಸಾರಥ್ಯದ ಟೈಟನ್ಸ್ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಹಿಂದಿಕ್ಕಿ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರುವ ಜೊತೆಗೆ ಪ್ಲೇ ಆಫ್‌ಗೆ ಹತ್ತಿರವಾಯಿತು. ಮತ್ತೊಂದೆಡೆ ಮುಂಬೈ ತಂಡದ ಸತತ ಆರು ಪಂದ್ಯಗಳ ಅಜೇಯ ಓಟಕ್ಕೆ ತಡೆಯೂ ಬಿತ್ತು.

ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 156 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಗುಜರಾತ್ ತಂಡವು ಒಂದು ಹಂತದಲ್ಲಿ ಉತ್ತಮ ಸ್ಥಿತಿಯಲ್ಲಿತ್ತು. ಆದರೆ, ಟ್ರೆಂಟ್ ಬೌಲ್ಟ್ (22ಕ್ಕೆ 2) ಮತ್ತು ಜಸ್‌ಪ್ರೀತ್ ಬೂಮ್ರಾ (19ಕ್ಕೆ 2) ದಾಳಿಗೆ ಸಿಲುಕಿ ಒತ್ತಡಕ್ಕೆ ಒಳಗಾಯಿತು. ಎರಡು ಬಾರಿ ಬಂದ ಮಳೆಯಿಂದಾಗಿ ಪಂದ್ಯದ ಫಲಿತಾಂಶಕ್ಕಾಗಿ ಡಿಎಲ್‌ಎಸ್ ಮೊರೆ ಹೋಗಬೇಕಾಯಿತು. ಅದರಂತೆ, ಗುಜರಾತ್ ತಂಡವು ಗೆಲುವಿಗೆ 147 ರನ್‌ಗಳ (19 ಓವರ್) ಪರಿಷ್ಕೃತ ಗುರಿ ಪಡೆಯಿತು.

ಕೊನೆಯ ಓವರ್‌ನಲ್ಲಿ 15 ರನ್ ಬೇಕಿದ್ದ ಗುಜರಾತ್‌ಗೆ ರಾಹುಲ್ ತೆವಾಟಿಯಾ (ಔಟಾಗದೇ 11) ಮತ್ತು ಜೆರಾಲ್ಡ್ ಕೊಟ್ಜಿಯ (12;6ಎ) ಆಪತ್ಬಾಂಧವರಾದರು. ದೀಪಕ್ ಚಾಹರ್ ಹಾಕಿದ ಓವರ್‌ನ ಐದನೇ ಎಸೆತದಲ್ಲಿ ಜೆರಾಲ್ಡ್ ಔಟಾದರೂ ನಂತರ ಅರ್ಷದ್ ಖಾನ್ ಗೆಲುವಿಗೆ ಬೇಕಿದ್ದ ಒಂಟಿ ರನ್ ಗಳಿಸಿ ಸಂಭ್ರಮಿಸಿದರು.

ಶುಭಮನ್ ಗಿಲ್ (43; 46ಎ) ಮತ್ತು ಜೋಸ್ ಬಟ್ಲರ್ (30;27ಎ) ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 72 (63ಎಸೆತ) ರನ್ ಸೇರಿಸಿದ್ದರು.



ಶುಭಮನ್ ಗಿಲ್ ಬ್ಯಾಟಿಂಗ್ ಎಎಫ್‌ಪಿ ಚಿತ್ರ

ನಂತರ ಶೆರ್ಫೇನ್ ರುದರ್‌ಫೋರ್ಡ್ ಬಿರುಸಿನ 28 (15) ರನ್ ಗಳಿಸಿದರು. ಹೀಗಾಗಿ ತಂಡವು 14 ಓವರ್‌ಗಳಲ್ಲಿ ಎರಡು ವಿಕೆಟ್‌ಗೆ 107 ರನ್ ಗಳಿಸಿ ಗೆಲುವಿನತ್ತ ಸಾಗಿತ್ತು. ನಂತರದಲ್ಲಿ ಮಳೆಯ ಆಟ ಆರಂಭವಾಯಿತು.

ಜಾಕ್ಸ್ ಅರ್ಧಶತಕ: ಇದಕ್ಕೂ ಟಾಸ್ ಸೋತ ಮುಂಬೈ ಬ್ಯಾಟಿಂಗ್‌ಗೆ ಇಳಿಯಿತು. ಖಾತೆ ತೆರೆಯುವ ಮೊದಲು ಮತ್ತು 29ರಲ್ಲಿದ್ದಾಗ ಜೀವದಾನ ಪಡೆದ ವಿಲ್ ಜಾಕ್ಸ್ 53, 35ಎ, 4x5, 6x3) ಈ ಆವೃತ್ತಿಯಲ್ಲಿ ಮೊದಲ ಅರ್ಧಶತಕ ಬಾರಿಸಿದರು. ಸೂರ್ಯಕುಮಾರ್ 24 ಎಸೆತಗಳಲ್ಲಿ 35 ರನ್ (4x5) ಗಳಿಸಿದರು. ಆದರೆ ನಾಯಕ ಹಾರ್ದಿಕ್ ಪಾಂಡ್ಯ (1), ತಿಲಕ್ ವರ್ಮಾ (7) ಸೇರಿದಂತೆ ಉಳಿದವರು ವಿಫಲರಾದರು.

ರೋಹಿತ್ ಶರ್ಮಾ (7) ಕೆಲಕಾಲ ಪರದಾಟದ ನಂತರ ಇನಿಂಗ್ಸ್‌ನ ನಾಲ್ಕನೇ ಓವರಿನಲ್ಲಿ ಅರ್ಷದ್ ಖಾನ್ ಬೌಲಿಂಗ್‌ನಲ್ಲಿ ಮಿಡ್ ಆಫ್‌ನಲ್ಲಿದ್ದ ಪ್ರಸಿದ್ಧಕೃಷ್ಣ ಅವರಿಗೆ ಕ್ಯಾಚಿತ್ತರು. ಈ ಹಂತದಲ್ಲಿ (26ಕ್ಕೆ2) ಜಾಕ್ಸ್ ಜೊತೆಗೂಡಿದ ಸೂರ್ಯಕುಮಾರ್ ಯಾದವ್ 71 ರನ್ ಸೇರಿಸಿದರು. ಸೂರ್ಯ, ಪ್ರಸಿದ್ಧ ಬೌಲಿಂಗ್‌ನಲ್ಲಿ ಎರಡು ನೇರ ಡ್ರೈವ್‌ಗಳನ್ನು ಮಾಡಿದರು.

ಸೂರ್ಯ ದೊಡ್ಡ ಹೊಡೆತಕ್ಕೆ ಹೋಗಿ ಲಾಂಗ್‌ಆಫ್‌ನಲ್ಲಿದ್ದ ಶಾರೂಕ್ ಖಾನ್ ಅವರಿಗೆ ಕ್ಯಾಚ್ ನೀಡಿದರು. ಬಿಗುವಾಗಿ ಬೌಲ್ ಮಾಡಿದ ರಶೀದ್ ಅವರು ಕೊನೆಗೂ ಜಾಕ್ಸ್ ಅವರ ವಿಕೆಟ್ ಪಡೆದರು. ಅವರು ಭರ್ಜರಿ ಹೊಡೆತದ ಯತ್ನದಲ್ಲಿ ಡೀಪ್ ಬ್ಯಾಕ್‌ವರ್ಡ್ ಸ್ಕ್ವೇರ್‌ನಲ್ಲಿ ಕ್ಯಾಚಿತ್ತರು. ಕಾರ್ಬಿನ್ ಬಾಷ್, ಕೊನೆಗಳಿಗೆಯಲ್ಲಿ 27 ರನ್ ಬಾರಿಸಿದ್ದರಿಂದ ಮುಂಬೈ 8 ವಿಕೆಟ್‌ಗೆ 155 ರನ್‌ಗಳ ಮೊತ್ತ ಗಳಿಸಿತ್ತು. ರಶೀದ್ ಖಾನ್ ಮತ್ತು ಸಾಯಿ ಕಿಶೋರ್ ಮಧ್ಯಮ ಹಂತದ ಓವರ್‌ಗಳಲ್ಲಿ ಮುಂಬೈಗೆ ಕಡಿವಾಣ ಹಾಕಿದರು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರುಗಳಲ್ಲಿ 8ಕ್ಕೆ 155 (ವಿಲ್ ಜಾಕ್ಸ್ 53, ಸೂರ್ಯಕುಮಾರ್ ಯಾದವ್ 35, ಕಾರ್ಬಿನ್ ಬಾಷ್ 27; ಸಿರಾಜ್ 29ಕ್ಕೆ1, ಅರ್ಷದ್ ಖಾನ್ 18ಕ್ಕೆ1, ಪ್ರಸಿದ್ಧ ಕೃಷ್ಣ 37ಕ್ಕೆ1, ಸಾಯಿ ಕಿಶೋರ್ 34ಕ್ಕೆ2, ರಶೀದ್ ಖಾನ್ 21ಕ್ಕೆ1, ಜೆರಾಲ್ಡ್ ಕೊಟ್ಜಿಯ 10ಕ್ಕೆ1) ಗುಜರಾತ್ ಟೈಟನ್ಸ್: ಶುಭಮನ್ ಗಿಲ್ 43, ಜೋಸ್ ಬಟ್ಲರ್ 30, ಶೆರ್ಫೇನ್ ರುದರ್‌ಫೋರ್ಡ್ 28; ಟ್ರೆಂಟ್ ಬೌಲ್ಟ್ 22ಕ್ಕೆ 2, ಜಸ್‌ಪ್ರೀತ್ ಬೂಮ್ರಾ 19ಕ್ಕೆ 2, ಅಶ್ವನಿ ಕುಮಾರ್ 28ಕ್ಕೆ 2). ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ 3 ವಿಕೆಟ್ ಜಯ (ಡಿಎಲ್‌ಎಸ್ ನಿಯಮದಡಿ). ಪಂದ್ಯದ ಆಟಗಾರ: ಶುಭಮನ್ ಗಿಲ್

ಈಡನ್‌ನಲ್ಲಿ ಧೋನಿಗೆ ಅಂತಿಮ ಪಂದ್ಯ?

ಕೋಲ್ಕತ್ತ (ಪಿಟಿಐ): ಮಹೇಂದ್ರ ಸಿಂಗ್ ಧೋನಿ ಅವರು ಪ್ರಸಿದ್ಧ ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ಕೊನೆಯ ಬಾರಿ ಆಡುವುದು ಬಹುತೇಕ ಖಚಿತವಾಗಿದೆ. ಅವರ ನೇತೃತ್ವದ ಚೆನ್ನೈ ಸೂಪರ್ ಕಿಂಗ್ಸ್ ತಂಡ ಬುಧವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಆಡಲಿದೆ.

ಆದರೆ ಈ ಮುಖಾಮುಖಿ ಪ್ಲೇ ಆಫ್ ದೃಷ್ಟಿಯಿಂದ ಅಜಿಂಕ್ಯ ರಹಾನೆ ಪಡೆಗೆ ಮಾಡು ಇಲ್ಲವೇ ಮಡಿ ಪಂದ್ಯವಾಗಿದೆ. ಐದು ಬಾರಿಯ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ಈಗಾಗಲೇ ಟೂರ್ನಿಯಿಂದ ಹೊರಬಿದ್ದಿದೆ. ಕೆಕೆಆರ್‌ಗೆ ಇದು ತವರು ಮೈದಾನ. ಆದರೆ ಭಾರತೀಯ ಕ್ರಿಕೆಟ್‌ನ ಹೆಗ್ಗುರುತಾದ ಈಡನ್‌ನಲ್ಲಿ ಧೋನಿ ಉಪಸ್ಥಿತಿ ಕ್ರೀಡಾಂಗಣಕ್ಕೆ ಸಿಎಸ್‌ಕೆಯ ಹಳದಿ ರಂಗು ಬಳಿಯುವ ಸಾಧ್ಯತೆ ದಟ್ಟವಾಗಿದೆ.

43 ವರ್ಷ ವಯಸ್ಸಿನ ಧೋನಿ ಅವರಿಗೆ ಈ ಊರಿನ ಜೊತೆ ಭಾವನಾತ್ಮಕ ನಂಟು ಇದೆ. ಕೋಲ್ಕತ್ತ ಅವರ ಪತ್ನಿಯ ತವರು. ಈ ಮಹಾನಗರದಲ್ಲೇ ಅವರು ಜೂನಿಯರ್, ಕ್ಲಬ್ ಕ್ರಿಕೆಟ್ ಆಡಿ ಬೆಳೆದವರು.

ಹೀಗಾಗಿ ಬುಧವಾರದ ಪಂದ್ಯ ಭಾವುಕ ಕ್ಷಣಗಳಿಗೆ ಸಾಕ್ಷಿಯಾಗಬಹುದು.

ಈಡನ್‌ನಲ್ಲಿ ಅವರು ಮೈಲಿಗಲ್ಲಿನ ಕ್ಷಣಗಳನ್ನೂ ಕಂಡಿದ್ದಾರೆ. ಮೊದಲ ಪ್ರಥಮ ದರ್ಜೆ ಶತಕ ಬಾರಿಸಿದ್ದು ಇಲ್ಲಿಯೇ. ಆರು ಟೆಸ್ಟ್ ಶತಕಗಳ ಪೈಕಿ ಎರಡನ್ನು ಇದೇ ಕ್ರೀಡಾಂಗಣದಲ್ಲಿ ಬಾರಿಸಿದ್ದಾರೆ.

ಮಹತ್ವದ ಪಂದ್ಯ: ಈ ಪಂದ್ಯ ಕೆಕೆಆರ್ ಪಾಲಿಗೆ ಮಹತ್ವದ್ದು. ಪ್ಲೇ ಆಫ್‌ನಲ್ಲಿ ಉಳಿಯ ಬೇಕಾದರೆ ಉಳಿದ ಮೂರೂ ಪಂದ್ಯ ಗಳನ್ನು ಗೆಲ್ಲಬೇಕಾದ ಅನಿವಾರ್ಯತೆ ಕೋಲ್ಕತ್ತದ ತಂಡಕ್ಕಿದೆ. ಈಗ 11 ಅಂಕ ಗಳಿಸಿರುವ ಕೋಲ್ಕತ್ತ ಈ ಮೂರೂ ಪಂದ್ಯ ಗೆದ್ದರೆ 17 ಅಂಕ ಗಳಿಸಿಬಲ್ಲದು. ಆಗಲೂ ಸಹ ನಿವ್ವಳ ರನ್ ದರ ಗಣನೆಗೆ ಬರಬಹುದು.



ಎಂ.ಎಸ್‌.ಧೋನಿ

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ಗುಜರಾತ್ ಟೈಟನ್ಸ್	11	8	3	16	0.793
ರಾಯಲ್ ಚಾಲೆಂಜರ್ಸ್ ಬೆಂಗಳೂರು	11	8	3	16	0.482
ಪಂಜಾಬ್ ಕಿಂಗ್ಸ್	11	7	3	15	0.376
ಮುಂಬೈ ಇಂಡಿಯನ್ಸ್	12	7	5	14	1.156
ಡೆಲ್ಲಿ ಕ್ಯಾಪಿಟಲ್ಸ್	11	6	4	13	0.362
ಕೋಲ್ಕತ್ತ ನೈಟ್ ರೈಡರ್ಸ್	11	5	5	11	0.249
ಲಖನೌ ಸೂಪರ್ ಜೈಂಟ್ಸ್	11	5	6	10	-0.469
ರಾಜಸ್ಥಾನ ರಾಯಲ್ಸ್	12	3	9	6	-0.718
ಸನ್‌ರೈಸರ್ಸ್ ಹೈದರಾಬಾದ್	11	3	7	7	-1.192
ಚೆನ್ನೈ ಸೂಪರ್ ಕಿಂಗ್ಸ್	11	2	9	4	-1.117

ಆರೇಂಜ್ ಕ್ಯಾಪ್
ಸೂರ್ಯಕುಮಾರ್ (ಎಂಐ) 510 ರನ್

ಪರ್ಪಲ್ ಕ್ಯಾಪ್
ಪ್ರಸಿದ್ಧ ಕೃಷ್ಣ (ಜಿಟಿ) 20 ವಿಕೆಟ್

ಕೊನೆಯ ಪಂದ್ಯವನ್ನು ಒಂದು ರನ್ನಿಂದ ಗೆದ್ದ ಕೋಲ್ಕತ್ತ ತಂಡವು ಸನ್‌ರೈಸರ್ಸ್ ಮತ್ತು ಆರ್‌ಸಿಬಿ ವಿರುದ್ಧ ಪಂದ್ಯಗಳನ್ನು ತವರಿನಿಂದಾಚೆ ಆಡಬೇಕಿದೆ. ರಸೆಲ್ ಮಿಂಚಿನ ಆಟ ಆಡಿರುವುದು ತಂಡಕ್ಕೆ ಬಲ ನೀಡಿದೆ. ಆದರೆ 'ದುಬಾರಿ ಆಟಗಾರ' ವೆಂಕಟೇಶ ಅಯ್ಯರ್ ಇನ್ನೂ ಮಿಂಚಿಲ್ಲ.

ಸಿಎಸ್‌ಕೆ ತಂಡ ಎದುರಾಳಿಗೆ ಸುಲಭ ತುತ್ತಾಗಲಾರದು. ಯುವ ಆಟಗಾರ ಆಯುಷ್ ಮ್ಹಾತ್ರೆ, ಆರ್‌ಸಿಬಿ ವಿರುದ್ಧ ಪಂದ್ಯದಲ್ಲಿ 48 ಎಸೆಗಳಲ್ಲಿ 94 ರನ್ ಚಚ್ಚಿ ಸ್ವಲ್ಪದರಲ್ಲಿ ಶತಕ ಕಳೆದುಕೊಂಡಿದ್ದರು. ಋತುರಾಜ್ ಗಾಯಕವಾಡ ಸ್ಥಾನಕ್ಕೆ ಬಂದಿರುವ 17 ವರ್ಷ ವಯಸ್ಸಿನ ಆಯುಷ್ ಭರವಸೆ ಮೂಡಿಸಿದ್ದಾರೆ. ಮುಂಬೈ ವಿರುದ್ಧ 15 ಎಸೆತಗಳಲ್ಲಿ 32 ರನ್ ಸಿಡಿಸಿದ್ದರು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಮತ್ತು ಜಿಯೊ ಹಾಟ್‌ಸ್ಟಾರ್ ಆ್ಯಪ್

ಮಹಿಳಾ ತ್ರಿಕೋನ ಸರಣಿ: ಇಂದು ಭಾರತಕ್ಕೆ ದಕ್ಷಿಣ ಆಫ್ರಿಕಾ ಸವಾಲು

ಕೊಲಂಬೊ (ಪಿಟಿಐ): ಭಾರತ ತಂಡ, ಬುಧವಾರ ನಡೆಯಲಿರುವ ಮಹಿಳಾ ತ್ರಿಕೋನ ಸರಣಿ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ. ಭಾನುವಾರ ಆತಿಥೇಯ ಲಂಕಾ ಕೈಲಿ ಅನುಭವಿಸಿದ ಸೋಲಿನಿಂದ ಪುಟಿದೆದ್ದು, ಫೈನಲ್ ತಲುಪುವ ಕಡೆ ಭಾರತ ಚಿತ್ತನೆಟ್ಟಿದೆ.

ಹರ್ಮನ್‌ಪ್ರೀತ್ ಕೌರ್ ಪಡೆಯ ಸತತ ಎಂಟು ಪಂದ್ಯಗಳ ಗೆಲುವಿನ ಸರಪಣಿ ಭಾನುವಾರ ಕಡಿದುಹೋಗಿತ್ತು. ಲಂಕಾ ತಂಡ ಏಳು ವರ್ಷಗಳಲ್ಲಿ ಮೊದಲ ಬಾರಿ ಭಾರತ ತಂಡವನ್ನು ಸೋಲಿಸಿತ್ತು.

ನಿವ್ವಳ ರನ್ ದರದ ಆಧಾರದಲ್ಲಿ ಉತ್ತಮ ಸ್ಥಿತಿಯಲ್ಲಿರುವ ಭಾರತ ಫೈನಲ್ ತಲುಪುವ ಸಾಧ್ಯತೆ ಹೆಚ್ಚಿದೆ. ಮೊದಲ ಎರಡು ಪಂದ್ಯಗಳನ್ನು ಗೆದ್ದುಕೊಂಡಿದ್ದ ಭಾರತ, ಬುಧವಾರದ ಪಂದ್ಯವನ್ನೂ ಗೆದ್ದು ಅರ್ಹವಾದ ರೀತಿ ಫೈನಲ್ ತಲುಪಲು ಯತ್ನ ನಡೆಸಲಿದೆ.

ಅಂಕಪಟ್ಟಿಯಲ್ಲಿ ಲಂಕಾ ಎರಡನೇ ಮತ್ತು ದಕ್ಷಿಣ ಆಫ್ರಿಕಾ ಮೂರನೇ ಸ್ಥಾನದಲ್ಲಿವೆ. ಆಫ್ರಿಕಾ ಒಂದು ಪಂದ್ಯ ಕಡಿಮೆ ಆಡಿದೆ.

ಭಾರತ ಬ್ಯಾಟಿಂಗ್ ವಿಭಾಗದಲ್ಲಿ ಉತ್ತಮವಾಗಿದೆ. ಆರಂಭ ಆಟಗಾರ್ತಿ



ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಸ್ಮೃತಿ ಮಂದಾನ

ಪ್ರತಿಕಾ ರಾವಲ್ ಎರಡು ಅರ್ಧ ಶತಕಗಳ ಸಹಿತ 163 ರನ್ ಗಳಿಸಿದ್ದಾರೆ. ಬೌಲಿಂಗ್‌ನಲ್ಲಿ ಸ್ನೇಹ ರಾಣಾ 4.25ರ ಇಕಾನಮಿಯಲ್ಲಿ 11 ವಿಕೆಟ್ ಗಳಿಸಿ ಪರಿಣಾಮಕಾರಿ ಎನಿಸಿದ್ದಾರೆ. ದಕ್ಷಿಣ ಆಫ್ರಿಕಾದ ವೇಗದ ಬೌಲರ್ ನದಿನ್ ಡಿ ಕ್ಲರ್ಕ್ (4.06) ಮಾತ್ರ ಅವರಿಗಿಂತ ಕಡಿಮೆ ಇಕಾನಮಿ ಹೊಂದಿದ್ದಾರೆ.

ಮೂರನೇ ಪಂದ್ಯದಲ್ಲಿ ಭಾರತದ ಬೌಲಿಂಗ್ ನಿರೀಕ್ಷಿತ ಮಟ್ಟದಲ್ಲಿರಲಿಲ್ಲ. ವೇಗದ ಬೌಲಿಂಗ್ ಆಲ್‌ರೌಂಡರ್ ಕಶ್ವಿ ಗೌತಮ್ ಐದು ಓವರುಗಳ ನಂತರ ಕುಂಟುತ್ತ ಹೊರನಡೆದಿದ್ದು ಚಿಂತೆ ಕಾರಣವಾಗಿದೆ.

ಉತ್ತಮವಾಗಿ ಆಡುವವರೆಗೆ ರೋಹಿತ್, ಕೊಹ್ಲಿ ತಂಡದಲ್ಲಿರಲಿ: ಕೋಚ್ ಗಂಭೀರ್

ನವದೆಹಲಿ (ಪಿಟಿಐ): 'ಉತ್ತಮ ಪ್ರದರ್ಶನ ನೀಡುವವರೆಗೆ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಭಾರತ ತಂಡದಲ್ಲಿ ಆಡಬಹುದು' ಎಂದು ಹೇಳಿರುವ ಹೆಡ್ ಕೋಚ್ ಗೌತಮ್ ಗಂಭೀರ್ ಅವರು, ಮುಂಬರುವ ಭಾರತ ತಂಡದ ಇಂಗ್ಲೆಂಡ್ ಟೆಸ್ಟ್ ಪ್ರವಾಸಕ್ಕೆ ಈ ಹಿರಿಯ ಬ್ಯಾಟರ್‌ಗಳನ್ನು ಆಯ್ಕೆ ಮಾಡುವ ವಿಚಾರದಲ್ಲಿ ತಮ್ಮದೇನೂ ಪಾತ್ರವಿಲ್ಲ ಎಂದಿದ್ದಾರೆ.



ಗಂಭೀರ್

'ಮುಖ್ಯ ತರಬೇತುದಾರನ ಕೆಲಸ ತಂಡದ ಆಯ್ಕೆ ಮಾಡುವುದಲ್ಲ. ಅದು ಆಯ್ಕೆಗಾರರ ಕೆಲಸ. ಪಂದ್ಯ ಆಡುವ 11ರ ತಂಡವನ್ನು ಕೋಚ್ ಅಂತಿಮಗೊಳಿಸುತ್ತಾರೆ. ನನಗಿಂತ ಮೊದಲು ಮುಖ್ಯ ತರಬೇತುದಾರರಾಗಿ ಕೆಲಸ ಮಾಡಿದವರು ಆಯ್ಕೆಗಾರರಾಗಿರಲಿಲ್ಲ. ಅವರಂತೆ ನಾನೂ ಆಯ್ಕೆಗಾರನಲ್ಲ' ಎಂದು ಗಂಭೀರ್ ಸ್ಪಷ್ಟಪಡಿಸಿದರು. ಅವರು ಮಾಧ್ಯಮ ಸಂಸ್ಥೆಯೊಂದು ಆಯೋಜಿಸಿದ್ದ ಸಮಾರಂಭದಲ್ಲಿ ಮಾತನಾಡಿದರು.

ಈ ಬಗ್ಗೆ ಮತ್ತಷ್ಟು ಕೆದಕಿದಾಗ, 'ಅವರು (ರೋಹಿತ್ ಮತ್ತು ಕೊಹ್ಲಿ) ಉತ್ತಮ ಪ್ರದರ್ಶನ ನೀಡುವವರರೆಗೆ ತಂಡದ ಭಾಗವಾಗಿರುತ್ತಾರೆ. ಯಾವಾಗ ಆರಂಭಿಸಬೇಕು ಮತ್ತು ಯಾವಾಗ ಅಂತ್ಯ ಹಾಡಬೇಕು ಎಂಬುದು ಅವರ ವೈಯಕ್ತಿಕ ನಿರ್ಧಾರ' ಎಂದು ಗಂಭೀರ್ ಹೇಳಿದರು.

'ಯಾವಾಗ ವಿದಾಯ ಹೇಳಬೇಕು ಎಂದು ಕೋಚ್ ಆಗಲಿ, ಆಯ್ಕೆಗಾರನಾಗಲಿ ಅಥವಾ ಬಿಸಿಸಿಐ ಆಗಲಿ ಹೇಳುವುದಿಲ್ಲ. ಉತ್ತಮವಾಗಿ ಆಡಿದರೆ 40 ವರ್ಷ ಮಾತ್ರವಲ್ಲ, 45 ವರ್ಷ ಆದರೂ ಆಡಬಹುದು. ತಡೆಯುವವರು ಯಾರು?' ಎಂದು ಕೇಳಿದರು. ಭಾರತ ತಂಡವು ಜೂನ್ 20ರಿಂದ ಐದು ಟೆಸ್ಟ್‌ಗಳ ಇಂಗ್ಲೆಡ್ ಪ್ರವಾಸ ಆರಂಭಿಸಲಿದೆ.

ಪಾಕ್ ಜೊತೆ ಪಂದ್ಯ ಬೇಡ: ಭಾರತ ತಂಡವು ಏಷ್ಯಾ ಕಪ್ ಮತ್ತು ಐಸಿಸಿ ಸ್ಪರ್ಧೆಗಳು ಒಳಗೊಂಡಂತೆ ಯಾವುದೇ ವೇದಿಕೆಯಲ್ಲಿ ಪಾಕಿಸ್ತಾನ ಜೊತೆ ಕ್ರಿಕೆಟ್ ಬಾಂಧವ್ಯವನ್ನು ಸ್ಥಗಿತಗೊಳಿಸಬೇಕು ಎಂದು ಗಂಭೀರ್ ಕರೆ ನೀಡಿದ್ದಾರೆ. ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಯ ಹಿನ್ನೆಲೆಯಲ್ಲಿ ಅವರು ಈ ಮಾತುಗಳನ್ನು ಆಡಿದ್ದಾರೆ.

ಬಾಷ್ ತಂಡಕ್ಕೆ ಭರ್ಜರಿ ಗೆಲುವು

ಬೆಂಗಳೂರು: ಸುದೀಪ್ ಮತ್ತು ಪ್ರತೀಕ್ ಅವರ ಆಟದ ಬಲದಿಂದ ಬಾಷ್ ತಂಡವು ಎಂ.ಸಿ.ಶ್ರೀನಿವಾಸ್ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಬಿ ಡಿವಿಷನ್ ಪುರುಷರ ಬ್ಯಾಸ್ಕೆಟ್‌ಬಾಲ್ ಲೀಗ್ ಪಂದ್ಯದಲ್ಲಿ ಮಂಗಳವಾರ ವೈಎಂಎಂಎ ತಂಡವನ್ನು 67–42 ಅಂಕಗಳಿಂದ ಮಣಿಸಿತು.

ನಗರದ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬಾಷ್ ತಂಡದ ಪರ ಸುದೀಪ್ (34 ಅಂಕ) ಮತ್ತು ಪ್ರತೀಕ್ (17 ಅಂಕ) ಗೆಲುವಿನಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು. ವೈಎಂಎಂಎ ತಂಡದ ಪರ ಆಗಸ್ಟಿನ್ (16 ಅಂಕ) ಗಮನ ಸೆಳೆದರು.

ಇನ್ನೊಂದು ಪಂದ್ಯದಲ್ಲಿ ಬೆಂಗಳೂರು ವ್ಯಾನ್‌ಗಾರ್ಡ್ಸ್ ತಂಡ 68– 56 ಅಂಕಗಳಿಂದ ದೇವಾಂಗ ಯೂನಿಯನ್ ತಂಡದ ವಿರುದ್ಧ ಜಯಿಸಿತು. ವ್ಯಾನ್‌ಗಾರ್ಡ್ಸ್ ತಂಡದ ಪರ ಅವಿನಾಶ್ (17) ಮತ್ತು ವರುಣ್ ಅಸ್ನಾನಿ (14) ಗೆಲುವಿಗೆ ನೆರವಾದರು.

ಎನ್‌ಸಿ ಕ್ಲಾಸಿಕ್ ಜಾವೆಲಿನ್ ಟಿಕೆಟ್ ದರ ಘೋಷಣೆ

ಬೆಂಗಳೂರು: ಇದೇ ತಿಂಗಳ 24ರಂದು ನಗರದ ಶ್ರೀಕಂಠೀರವ ಕ್ರಿಡಾಂಗಣ ದಲ್ಲಿ ನಡೆಯಲಿರುವ ನೀರಜ್ ಚೋಪ್ರಾ ಕ್ಲಾಸಿಕ್ ಜಾವೆಲಿನ್ ಸ್ಪರ್ಧೆಯ ಟಿಕೆಟ್ ದರಗಳನ್ನು ಸೋಮವಾರ ಪ್ರಕಟಿಸಲಾಗಿದೆ. ಟಿಕೆಟ್ ದರ ಕನಿಷ್ಠ ₹199 ರಿಂದ ಹಿಡಿದು 10,000ವರೆಗೆ ನಿಗದಿಯಾಗಿದೆ.



ನೀರಜ್

ಇದು ಭಾರತದಲ್ಲಿ ನಡೆಯುತ್ತಿರುವ ಮೊತ್ತಮೊದಲ ಅಂತರರಾಷ್ಟ್ರೀಯ ಮಟ್ಟದ ಜಾವೆಲಿನ್ ಸ್ಪರ್ಧೆಯಾಗಿದೆ. ಚೋಪ್ರಾ ಜೊತೆ ಜರ್ಮನಿಯ ಥಾಮಸ್ ರೋಹ್ಲರ್, ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್ ಮೊದಲಾದ ಖ್ಯಾತನಾಮ ಅಥ್ಲೀಟುಗಳು ಭಾಗವಹಿಸುತ್ತಿದ್ದಾರೆ.

ಸ್ಪರ್ಧೆಯನ್ನು ಸಮೀಪದಿಂದ ಕಣ್ತುಂಬಿಕೊಳ್ಳಲು ಐದು ಕಾರ್ಪೊರೇಟ್ ಬಾಕ್ಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಕ್ರೀಡಾಂಗಣದ ಉತ್ತರಭಾಗದ ಕೊನೆಯಲ್ಲಿ ಇದನ್ನು ನಿರ್ಮಿಸಲಾಗಿದೆ.ಇದರ ದರ ತಲಾ 45,000 ಎಂದು ನಿಗದಿಪಡಿಸಲಾಗಿದೆ. ಒಂದೊಂದು ಬಾಕ್ಸ್‌ನಲ್ಲಿ ತಲಾ 15 ಮಂದಿ ಕುಳಿತುಕೊಳ್ಳಬಹುದು. ಈ ಬಾಕ್ಸ್‌ನ ಒಂದು ಟಿಕೆಟ್‌ನಲ್ಲಿ 15 ಮಂದಿಗೆ ಪ್ರವೇಶ ಅವಕಾಶವಿದೆ.

ಥ್ರೋವರ್ ರನ್‌ಅಪ್ ಬಳಿ ವಿಶೇಷ ಸ್ಟ್ಯಾಂಡ್ ನಿರ್ಮಿಸಲಾಗಿದ್ದು, ಇದಕ್ಕೆ ₹10,000 ನಿಗದಿಪಡಿಸಲಾಗಿದೆ.ಥ್ರೊ ಮಾಡುವ ಸ್ಪರ್ಧಿಗಳ ಹಿಂಭಾಗದಲ್ಲಿರುವ ಸ್ಟ್ಯಾಂಡ್‌ಗೆ ₹3,000 ಟಿಕೆಟ್ ನಿಗದಿ ಮಾಡಲಾಗಿದೆ. ಟಿಕೆಟ್ ಖರೀದಿ ಮಾಡ ಬಯಸುವವರು ಈ ಲಿಂಕ್ ಬಳಸಿ ಕಾದಿರಿಸಲು ಅವಕಾಶವಿದೆ: https://link.district.in/ DSTRKT/ NeerajChopraClassicSocialPartner

ಫುಟ್‌ಬಾಲ್: ಕ್ವಾರ್ಟರ್ ಫೈನಲ್‌ಗೆ ಕರ್ನಾಟಕ ತಂಡ

ಬೆಂಗಳೂರು: ಸೈಖೋಮ್ ಬೋರಿಷ್ ಸಿಂಗ್ ಅವರ ಅಮೋಘ ಆಟದ ನೆರವಿನಿಂದ ಕರ್ನಾಟಕ ತಂಡವು ಸ್ವಾಮಿ ವಿವೇಕಾನಂದ (20 ವರ್ಷದೊಳಗಿನವರ) ರಾಷ್ಟ್ರೀಯ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಅಂಡಮಾನ್ ಮತ್ತು ನಿಕೋಬಾರ್ ತಂಡವನ್ನು 10–0 ಗೋಲುಗಳಿಂದ ಸದೆಬಡಿದು ಕ್ವಾರ್ಟರ್ ಫೈನಲ್‌ಗೆ ಮುನ್ನಡೆಯಿತು.

ಛತ್ತೀಸಗಢದ ನಾರಾಯಣಪುರದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಸೈಖೋಮ್ ಅವರು ಐದು ಗೋಲುಗಳನ್ನು (14ನೇ, 39ನೇ, 42ನೇ, 45 + 1ನೇ, 45 + 5ನೇ ನಿಮಿಷ) ಗಳಿಸಿದರು. ಉಳಿದ ಗೋಲುಗಳನ್ನು ಬಿ. ಅಬ್ರಹಾಂ (8ನೇ, 19ನೇ), ಪ್ರಜ್ವಲ್ ವಿ.ಗೌಡ (65ನೇ), ಪ್ರೇಮೋಶ್ ಟಿ (90 + 4ನೇ) ಬಾರಿಸಿದರು. ಎದುರಾಳಿ ತಂಡದ ಅಜೀಮ್ ತಾರಿಕ್ (54ನೇ) ಉಡುಗೊರೆ ಗೋಲು ನೀಡಿದರು.

ದೇಶಿ ಕ್ರಿಕೆಟ್ 'ವಿಶ್ವಕೋಶ' ಚನ್ನಗಿರಿ ಕೇಶವಮೂರ್ತಿ

• ಗಿರೀಶ ದೊಡ್ಡಮನಿ



ಬೆಂಗಳೂರು: 'ಜೀವನದಲ್ಲಿ ನನ್ನ ಸಾಧನೆ ಶೂನ್ಯ. ಸಾಧಿಸುವುದು ಬೇಕಾದಷ್ಟಿದೆ. ಇಲ್ಲಿಯವರೆಗೆ ಏನೂ ಸಾಧಿಸಿಲ್ಲ..'

ಕ್ರಿಕೆಟ್ ಅಂಕಿ ಅಂಶಗಳ ಲೋಕದ 'ದಿಗ್ಗಜ'ರೇ ಆಗಿದ್ದ ಚನ್ನಗಿರಿ ಕೇಶವ ಮೂರ್ತಿಯವರು ಆಗಾಗ ಹೇಳುತ್ತಿದ್ದ ಮಾತುಗಳಿವು. ಆದರೆ ಕ್ರಿಕೆಟ್ ಲೋಕದ ಅದರಲ್ಲೂ ದೇಶಿ ಕ್ರಿಕೆಟ್ ಸಂಬಂಧಿತ ಅಂಕಿ ಅಂಶಗಳ 'ವಿಶ್ವಕೋಶ'ವೇ ಅವರಾಗಿದ್ದರು. ಕಂಪ್ಯೂಟರ್ ತಂತ್ರಜ್ಞಾನವೇ ಇರದ ಕಾಲದಿಂದ ಇಂದಿನ ಕಾಲಘಟ್ಟದವರೆಗೂ ಪ್ರಸ್ತುತವಾಗಿ ಉಳಿದವರು ಕೇಶವ ಮೂರ್ತಿ. ಆಪ್ತ ವಲಯದಲ್ಲಿ ಸಿಕೆಎಂ ಎಂದೇ ಚಿರಪರಿಚಿತರಾಗಿದ್ದವರು.

ಮೃದುಭಾಷಿ, ಆದರೆ ನೇರನಿಷ್ಠುರ. ಸರಳ ಪೋಷಾಕುಧಾರಿಯಾಗಿದ್ದ ಅವರ ಹೆಗಲಿಗೆ ಜೋತುಬಿದ್ದಿರುತ್ತಿದ್ದ ಬಟ್ಟೆಯ ಚೀಲದಲ್ಲಿ ಸ್ವಾರಸ್ಯಕರ ಅಂಕಿ ಅಂಶಗಳ ಕಣಜವೇ ಇರುತ್ತಿತ್ತು. ಗೂಗಲ್ ಸರ್ಚ್ ಎಂಜಿನ್‌ಗೂ ಸಿಗದಂತಹ ರೋಚಕ ಅಂಶಗಳು ಅವರ ಬಳಿ ಇರುತ್ತಿದ್ದವು. ಸುಮಾರು 80 ವರ್ಷಗಳ ದೇಶಿ ಕ್ರಿಕೆಟ್ ಪರಂಪರೆಯ ಸಾಕ್ಷಿ ಪ್ರಜ್ಞೆಯಾಗಿದ್ದರು.

ಕ್ರಿಕೆಟಿಗರು ತಮ್ಮ ಆಟ ಮತ್ತು ಸಾಧನೆಗಳ ಮೂಲಕ ಜನರ ಅಭಿಮಾನ ಗಳಿಸುತ್ತಾರೆ. ಆದರೆ ಅಂತಹ ಕ್ರಿಕೆಟಿಗರ ಸಾಧನೆಗಳು ಅಂಕಿ ಅಂಶಗಳ ರೂಪದಲ್ಲಿ ಸದಾಕಾಲ ಉಳಿಯುವಂತೆ ದುಡಿದ ಮಹನೀಯರಲ್ಲಿ ಕೇಶವಮೂರ್ತಿ ಅಗ್ರಗಣ್ಯರು. ಅದರಲ್ಲೂ ಕಳೆದ ನಾಲ್ಕು ವರ್ಷಗಳಿಂದ ಸಿಕೆಎಂ ಅವರ ಆರೋಗ್ಯ ಸರಿಯಿರಲಿಲ್ಲ. ಉಸಿರಾಟದ ತೊಂದರೆ ಅವರನ್ನು ಗಾಸಿಗೊಳಿಸಿತ್ತು. ಆದರೆ ಅವರ ಕ್ರಿಕೆಟ್ ಪ್ರೀತಿ ಮಾತ್ರ ಎಳ್ಳಷ್ಟೂ ಕುಂಠಿತವಾಗಿರಲಿಲ್ಲ. ಪ್ರತಿದಿನವೂ ಕೃತಕ ಉಸಿರಾಟ ಯಂತ್ರದ ಮೂಲಕ ಅವರು ಉಸಿರಾಡಬೇಕಿತ್ತು. ಅಂತಹ ಪರಿಸ್ಥಿತಿಯಲ್ಲಿಯೂ ಕ್ರಿಕೆಟ್ ಅಂಕಿ ಅಂಶಗಳ ಹುಡುಕಾಟವನ್ನು ಬಿಟ್ಟಿರಲಿಲ್ಲ. ಕಳೆದ ರಣಜಿ ಋತುವಿನವರೆಗೂ ಅವರು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದರು.

ಚಿತ್ರದುರ್ಗದ ಬಾಗೂರಿನಲ್ಲಿ ಎಂ. ಕೃಷ್ಣಾಚಾರ್ ಮತ್ತು ರಾಧಾಬಾಯಿ ದಂಪತಿಯ ಮಗನಾಗಿ ಜನಿಸಿದವರು ಕೇಶವಮೂರ್ತಿ. ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ್ದರು. ನಂತರ ಬೆಂಗಳೂರು ಕಾಫಿ ಬೋರ್ಡ್‌ನಲ್ಲಿ ಸುಮಾರು 35 ವರ್ಷ ಕಾರ್ಯನಿರ್ವಹಿಸಿದ್ದರು. ತಮ್ಮ ವೃತ್ತಿಯ ಬದ್ಧತೆಗೆ ಚ್ಯುತಿ ಬರದಂತೆ ಪ್ರವೃತ್ತಿಯನ್ನು ಪೋಷಿಸಿಕೊಂಡು ಬೆಳೆದರು. ಅದರಲ್ಲೂ ಪ್ರಮುಖವಾಗಿ ಕ್ರಿಕೆಟ್ ಅಂಕಿ ಅಂಶ ಮತ್ತು ಸಾಹಿತ್ಯ ರಚನೆ ಅವರಿಗೆ ಹವ್ಯಾಸವಾಗಿದ್ದವು. ಅಲ್ಲದೇ ಕೀ ಬಂಚ್ (ಕೀಲಿಕೈ ಗುಚ್ಛಕ್ಕೆ ಬಳಸುವ ಬಂಚ್) ಸಂಗ್ರಹಣೆಯೂ ಅವರಿಗೆ ಅಚ್ಚುಮೆಚ್ಚಿನವಾಗಿದ್ದವು.

ಅವರ ಮನೆಯ ಮೊದಲ ಮಹಡಿಯಲ್ಲಿದ್ದ ಕೋಣೆಯ (ಗ್ರಂಥಾಲಯ) ತುಂಬ ಕ್ರಿಕೆಟ್ ಸಂಬಂಧಿತ ಪುಸ್ತಕಗಳು. ವಿದೇಶದಲ್ಲಿ ಪ್ರಕಟವಾದ ನಿಯತಕಾಲಿಕೆಗಳು, ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್, ಸಚಿನ್ ತೆಂಡೂಲ್ಕರ್, ಬಿ.ಎಸ್. ಚಂದ್ರಶೇಖರ್, ಯರ್ರಪಳ್ಳಿ ಪ್ರಸನ್ನ, ಬ್ರಿಜೇಶ್ ಪಟೇಲ್ ಮತ್ತಿತರ ದಿಗ್ಗಜ ಕ್ರಿಕೆಟಿಗರೊಂದಿಗಿನ ಭಾವಚಿತ್ರಗಳು ತುಂಬಿವೆ. ಅದರ ನಡುವೆ ವಾಮನ ಮೂರ್ತಿಯಂತೆ ನಿಂತು ರೋಚಕ ಅಂಕಿ ಅಂಶಗಳ ಕುರಿತು ಮಾತನಾಡುತ್ತಿದ್ದ ಸಿಕೆಎಂ ಅವರು ಮಾತ್ರ ಈಗ ಅಲ್ಲಿಲ್ಲ.

ಅಂಕಿಅಂಶ ತಜ್ಞ ಸಿಕೆಎಂ ಇನ್ನಿಲ್ಲ

ಕ್ರಿಕೆಟ್ ಅಂಕಿ ಅಂಶ ತಜ್ಞ ಚನ್ನಗಿರಿ ಕೇಶವಮೂರ್ತಿ (85) ಅವರು ಅನಾರೋಗ್ಯದಿಂದಾಗಿ ಮಂಗಳವಾರ ನಿಧನರಾದರು.

ಸಂಜೆ ಚಾಮರಾಜಪೇಟೆಯ ಮುಕ್ತಿಧಾಮದಲ್ಲಿ ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು. ಅವರಿಗೆ ಪತ್ನಿ, ಮಗ ಮತ್ತು ಮಗಳು ಇದ್ದಾರೆ.

ವಿಲ್ಲಿನ ರಹಸ್ಯ...

1963ರಲ್ಲಿ ಪತ್ತೇದಾರಿ ನಾಟಕ 'ವಿಲ್ಲಿನ ರಹಸ್ಯ' ಬರೆದಿದ್ದರು. ಅಲ್ಲಿಂದ ಅವರ ಸಾಹಿತ್ಯದ ಕೃಷಿ ಆರಂಭವಾಗಿತ್ತು. ಹಲವು ಪತ್ತೇದಾರಿ ಕಾದಂಬರಿಗಳು, ವಿಜ್ಞಾನ ಪುಸ್ತಕಗಳು, ಸಾಮಾಜಿಕ ಕಾದಂಬರಿ ಮತ್ತು ಕ್ರಿಕೆಟ್ ಪುಸ್ತಕಗಳನ್ನು ಬರೆದಿದ್ದಾರೆ.

'ಅವರು ತಮ್ಮ ಸಾವಿನಲ್ಲೂ ಸರಳತೆ ಮೆರೆದಿದ್ದಾರೆ. ತಾವು ನಿಧನರಾದಾಗ ಯಾವುದೇ ಆಡಂಬರ ಬೇಡ. ಸಾಧಾರಣ ಚಾಪೆಯ ಮೇಲೆ ತಮ್ಮ ಪಾರ್ಥಿವ ಶರೀರವನ್ನು ಮಲಗಿಸಬೇಕು. ಮನೆ ಮುಂದೆ ಶಾಮಿಯಾನ ಹಾಕಿಸಕೂಡದು. ಯಾರೂ ಹೂವು, ಹಾರ ಹಾಕಬಾರದು. ಹೆಚ್ಚು ಜನಜಂಗುಳಿ ಬೇಡ. ಯಾರ ಧನಸಹಾಯವೂ ಬೇಡ. ಯಾರಿಗೂ ತೊಂದರೆಯಾಗಬಾರದು ಎಂದು ಉಯಿಲು ಬರೆದಿದ್ದಾರೆ. ನಾವೂ ಅವರ ಇಚ್ಛೆಯಂತೆಯೇ ಎಲ್ಲ ವಿಧಿ ವಿಧಾನಗಳನ್ನು ನೆರವೇರಿಸಿದ್ದೇವೆ' ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.



